KARNATAKA
Kabya Kalanidhi Series,

No 6

ಮುದ್ದಣಕವಿ ವಿರಚಿತಂ

# ಶ್ರೀರಾಮಾಶ್ವಮೇಧಂ

ಎಸ್. ಜಿ. ನರಸಿಂಹಾಚಾರ್
ಲೈಬ್ರೇರಿಯನ್ ಗವರ್ನಮೆಂಟ್ ಓರಿಯಂಟಲ್ ಲೈಬ್ರರಿ ಮೈಸೂರ್,

ಮತ್ತು

ಮ. ಆ. ರಾಮಾನುಜೈಯಂಗಾರ್
ಅಸಿಸ್ಟೆಂಟ್ ಮಾಸ್ಟರ್ ವೆಸ್ಲಿಯನ್ ಮಿಷನ್ ಹೈಸ್ಕೂಲ್, ಮೈಸೂರು

ಮೈಸೂರ್:
ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿತವಾಯ್ತು.

1901.

*Registered according to Act XXV of 1867*

[ALL RIGHTS RESERVED.]

# ಶ್ರೀರಾಮಾಶ್ವಮೇಧಂ

## ಪ್ರಥಮಾಶ್ವಾಸಂ

### — ಕಥಾಮುಖಂ —

ಅಪ್ಪಾ ! ಕಾಲಪುರುಷಂಗೆ ಗುಣಮುಣಮಿಲ್ಲಂ ಗಡ ! ನಿಸ್ತೇಜಂ ಗಡ ! ಜಡಂ ಗಡ ! ಒಡಲೊಳ್ ಗುಡುಗುಟ್ಟುಗುಂ ಗಡ ! ಏನರಮನೆ ವಾಗಿಲಂ ಮುಗಿಲ್ದೆರೆಯಿಂ ಬಾಸಣಿಸಿರ್ಪರ್ ? ಆರ್ಗಂ ಪ್ರಗಲಾಣತಿ ಯಿಲ್ಲದಿರ್ಕುಂ ; ಮಡದಿ ಬಾನ್ನೀಱಿಯೊರ್ವಳ್ ಚಂಚಲದೃಷ್ಟಿಯಿನತ್ತಮಿತ್ತಂ ನೋಳ್ಪಳ್ ; ಮೂಲಿಗೆಮರ್ದಂ ಕೊಂಡುಯ್ವುಡಕ್ಕುಂ. ಸಿಡಿಲಾಳ್ ತಡೆಯುದೆಡೆಯ ನಡುವೆಟ್ಟುಗಳ್ಗೆ ಕಟ್ಟುಬ್ಬರದಿಂ ಬಂದೆಱಗುಗುಂ; ಕುತ್ತಮೇಂ ? ಸುಗ್ಗಿಯೊಳುಂಡುದಂ ಕಾರೊಳ್ ಕಾಱುವನಕ್ಕುಂ ; ಕಾಲಂ ಕಷ್ಟಂ ! ಕಷ್ಟಂ !!

ಎಲೆಲೆ ಸೋಗೆನವಿಲೆ ! ಏಂ ನಲಿವಯ್ ! ನಿನಗವಮಾತಂಗಮುನಿತ್ತು ಪಗೆಯೇಂ ? ಕಟ್ಟಾಸುರದ ಬೇಸಗೆಯೊಳೋಸರಿಸದೆ ಗಾಸಿಗೆಯ್ದುನೆನುತ್ತೆಯೆ ? ಛೀ ! ಛೀ ! ಪೆಱವರ ಕಿಡುದಸೆಯೊಳ್ ಕಡುಸಂತಸಕ್ಕೆಡೆಗುಡದಿರ್. ಪೋ ಪೋ ! ಸೊರ್ಕನುೞಿದು ನಿನ್ನಿರ್ಕೆಗೆ. ಏನೆನ್ನ ನುಡಿಯಂ ಕಡೆಗಣ್ಣಿ ಮತ್ತಂ ಮತ್ತಂ ಮುತ್ತ ಪೊೞ್ತುನಂತೆ ಮೆಯ್ವೆರ್ಚುವಯ್ ? ಇದರ್ಕಾಯೆ ನಿನಗಿಂತು ವಿಜಾತಿಯೊಳಮಘೋಗತಿಯೊದವಿದತ್ತು.

ಬಾಯ್ವಿಡದಿರೆಲೆ ಚಾದಗೆಯೆ ! ತಿರೆಯೊಳ್ ಪೆಱರ ಸಿರ್ಕೆನೊಳ್ ಮುಱುಕಮುಳ್ಳರೊಳ್ ನಿನ್ನನ್ನರೊಳರೆ ? ನಿರ್ನೆರಮುಟಿಲದಿರ್. ಆವೆ ಮೂದೊಡಮೇವರ್ ? ಕರ್ಮಪುರುಷಂಗೆ ಸೊರ್ಕುಂ ಸಿರ್ಕುಮೆಂದಿರ್ಕೆನ್ನಾತ್ತೆ! ಅತ್ತ ಪೋಗಲ್ವೇಳ್ಕುಮೆಂಬೆಯೇಂ ? '' ಗಗನಮುಖಂ ದುಷ್ಪ್ರವೇಶ್ಯಂ '' ಎಂದು ಡಂಗುರಮಿರ್ಕುಂ ; ಅದಱಿನೀಗಳ್ ಪೋಪುದು ಸದನಲ್ತು. ತನ್ನಾಣೆ ! ಕತಿಪಯದಿನಂಗಳೊಳೆ ಎಱೆಯುಂಗೆ ಕ್ಷೇಮಮಕ್ಕುಂ ದಿಟಮೆಂದು ಗ್ರಹಗತಿಯನಾರಯ್ದು ಜೋಯಿಸರೆಂದರ್. ಅದಱಿಂ ಪೆರ್ದೆಗಿಡದೆ ನಿನ್ನೆಡೆಗೆ ಪೋಗು. ಪಯಣಂ ಸೊಗಮಕ್ಕೆ !

ಬಗ್ಗಿಸೆಲೆ ಕೋಗಿಲೆ ! ಏನೀಮಾಮರದ ಸೆಳೆಗೊಂಬಿನೊಳ್ ಮೂಗುವಟ್ಟಿರ್ಪಯ್ ? ಕಣ್ಮಟಿಲ್ದು ಕೆಂಪಾದುವೇಕೆ ? ಏತರ್ಕೆ ಬೆರಗುವಡುವಯ್ ? ಅರೆನುಡಿಯೊಳೆಂಬುದೇಂ? ತಳಿರಿಲ್ಲವೆಂಬೆಯೆ ? ಅಲ್ತು ; ಕಾಲಪುರುಷಂ ಜಡಭರಿತನೆಂಬೆಯೆ ? ಅಂತದನಾರೊರೆದರ್ ? ಇಂತಿದನಱಿತುಂ ಸೋಂಬನಾಗಿರ್ಪುದೊಳ್ಳಿತೆ ? ಆರಯ್ವುದಾರಯ್ವುದೀಪರಿಯಂ. ನಡೆನಡೆ.

ಇತ್ತಲಿದೆಕೊಳ್ ತಾಮ್ರತುಂಡನೇನನೋ ಗೊಣಗುತಿರ್ಕುಂ, ಕೇಳ್ವೆಂ. ಪಂಡಿತಪಕ್ಕೀ ! ನಿನಗೀಪೆಸರನಾರಿಟ್ಟರ್? ಬಸಂತನೇಂ? ನೀಂ ಪಂಡಿತಂ ದಿಟಮಾದೊಡೆ ನೀಗುರ್ತ್ತಕ್ಕೆ ಮರ್ದನುಸಿರ್. ಏಂ ಮಾಂಬಟಿಂ, ನೇಱಿಲ್ ? ಮಾರ್ನುಡಿಯದೇತರ್ಕೆ ವಿಮುಖನಾದಯ್? ಸೊರ್ಕಿನುರ್ಕಿಂ ಬೀಗಿರ್ಪಯ್. ಇರ್ಕೆ : ಕೂರಿದರೊಳ್ ಕೂರದೆ ತಕ್ಕರೊಳ್ ತಗದೆ ನುಡಿಸಿದರೊಳ್ ನುಡಿಯದಿರ್ಪೀಕತದಿಂ ನಿನಗೆ ವನವಾಸಂ ಪ್ರಾಪ್ತಮಕ್ಕೆ ! ಲೋಗರ ಕೆಯ್ಗೆ ಸಿಲ್ಕಲೊಡಮೊಡನೆಯೆ ನಿನಗೆ ಬಂಧನಮಕ್ಕೆ ! ಅಂತು ಪಂಜರನೊಳಾನುಂ ಮಂಜರನೊಳಾನುಂ ಸಾವಕ್ಕೆ ! ಇದೆನ್ನ ಸಾಪಂ. ನಿನಗಮೀಪೊಳ್ಳುಬೀರಮನಿತ್ತ ಬಸಂತಂಗಂ ಧಿಕ್ಕಾರಂ !

ಈಗಡೆ ಉಱೀಗಂ ಸಗುಣನುಡಿಗುಂ. ಒಂದು, ಎರಟ್ಮೂಱು. ಭದ್ರಂ, ಶುಭಂ, ಮಂಗಳಂ. ಹೀ ಹೀ ! ನೋವು ಮಾಯ್ವುದು ; ಸಂದೆಯಮಣಮಿಲ್ಲಂ.

ವಾರಗೇಱಿಯೊಳೇಱುಂಜೌವನದ ನೀಱೆಯರ ಮೇಲುದಱ ಸೆಱಂಗನೋಸರಿಸಿ ಸಾರೆ ನಿಲ್ತು ತೋರಮೊಲೆಗಳಂ ಸೇರ್ದು ಪಿಡಿದೌಂಕಿ ಪಾಱುಂಬೊಜಗನಂತೆ ಮೀಱಿ ನಿಟ್ಟೋಟಂಗೊಂಡು ತೊಟ್ಟನೆ ಕಟ್ಟೆದಿರೊಳಿಟ್ಟಣಿಸಿ ಗಟ್ಟಿಮಗುೞ್ವ ಗಟ್ಟಿವಳ್ತಿಯರ ಪಟ್ಟುಡೆಯೊಳ್ ಕಟ್ಟುವಡೆದುಂ, ಕೆಯ್ಯುಡೆಯೊಳ್ ಮೆಯ್ಯುಡಿದುಂ, ಕಂದಿನೊಳ್ ಕಂದಿಯುಂ, ಅಸವೆಯೊಳಸಕಳಿದುಂ, ಸುಯ್ಯೊಳ್ ಸುಗಿದುಂ, ಸಿರಿಕಂಡದ ಕೋಟಿಕ್ಕಿಸಱಿಖೊಳ್ ಕಾಲ್ಸುಸಿದುಂ, ಪಾಱುಗೆಯ್ತಕ್ಕೆ ಬಂದಿವಟ್ಟುಮಂತುಮಿಂತುಂ ಮುಂತೆ ಸರಿದು ಮಾಲೆಗಾರ್ತಿಯರ ಮೇಲ್ಗೆಯ್ಗಳೊಳ್ ಸಾಲ್ಗೊಂಡು ನೇಲ್ವ ಮಾಲೆದೊಡಂಬೆಯುಂ ತೂಗಿ, ಲತಾಂಗಮಂ ತಾಗಿ, ಬೀಗಿ, ದಕ್ಷಿಣಾನಿಲನಂತಿರೆ ಪಶ್ಚಿಮಾನಿಲಂ ಮೆಯ್ದೋಱಲೊಡಂ—ಮೊಲ್ಲೆ ಮುಗು

ಳ್ತುದು ; ವನಮಲ್ಲಿಗೆ ಗಂಟೊಡೆದುದು ; ನಾಗವಲ್ಲಿ ಬೆಳ್ಸುೞಿವಿಟ್ಟುದು ; ಗಱಿವೂ ಗಱಿಗಟ್ಟಿದತ್ತು. ಆಗಳ್—

ಪಡುಗಡೆಯೊಳಿದೇಂ ಪೊಗೆ! ಕಡಲೊಡಲ ವಡಬಂ ಬಿಡದೆ ತೀಡುವ ಬಿಱುಗಾಳಿಯ ತೀಟದಿಂ ದಳ್ಳಿಸಲೊಡಮೊಡೆಗೊಂಡ ಬೆಟ್ಟುಗಳ್ ಕರಂ ಸೀಕರಿವೋಗೆ ಪುಟ್ಟಿತಕ್ಕುಂ. ಓ! ತಪ್ಪಿದೆಂ. ಅಲ್ತು, ಪೊಗೆಯಲ್ತು; ಎನಗಂ ಪುರ್ಚು ; ನೀರೊಳ್ ಕಿರ್ಚು ಚುರ್ಚುಗುಮೇ ? ಮತ್ತಮೇಂ? ಅಂದು ಸೆರಗಂ ಪಾರ್ದು ಕಡಲಂ ಮುಱಿಗೊಂಡ ಕರ್ವೆಟ್ಟುಗಳೀಗಳ್ ಪೂರ್ವವೈರಮುಂ ಬಗೆದು ಬರ್ದಿಲನಾಡಿಂಗೆ ದಾೞಿಡಲ್ಕೆ ದಂಡೆತ್ತಿ ಪೋಪುವಕ್ಕುಂ, ಎನೆ ಕರ್ಮುಗಿಲಾಗಸಮುಂ ಮುಸುಂಕೆ ಕಾಲನೆಂಬ ಕಾಳರಕ್ಕಸಂ ಪೊದೆದ ನೀಲಪಟದೊಂದು ಪಾಂಗಿನೊಳೊಪ್ಪಿದುದು ; ಗೆಂಟುಗೆಂಟಿನೊಳ್ ಪೊಳೆವ ಬಳ್ಳಿಮಿಂಚು ಬೀಸುವ ಕೆಯ್ಗೋಣ ಮೊಯ್ಗಿರಿಯಂತೆ ಕಣ್ಗೆಡ್ಡಮಾದುದು.

ಸಗ್ಗಿಗರಾಣ್ಮನ ಘನಕರಿಘಟೆಗಳ್ ಬೇಸಗೆಯ ಬೀಸರಕ್ಕೆ ಬಸವೞಿದು, ಬಾಯಾಱಿ, ಮುನ್ನೀರ ನೀರಂ ಕಂಡು, ಪಿಂಡುಗೊಂಡು ಬಂದು ನಿಂದು, ಮನಂ ದಣಿವನ್ನಮೋಲಾಡಿ, ಪೊಡೆ ಕೋಡುವನ್ನಂ ಬರೆ ಪೀರ್ದು, ಸೊರ್ಕಿ ಪೋಪೆಡೆಯೊಳ್ ಮೆಯ್ವಟ್ಟು, ಗೀಳಿಟ್ಟು, ಪೆಟ್ಟು ವೆರ್ಚಿ, ನಿಮಿರ್ದ ನಿಡುವಲ್ ಬೆಳಗೆ, ತುಂಬಿಕೆಯೊಳಿಂಬುಗೊಂಡ ತುಂಬು ನೀರಂ ಪೂತ್ಕರಿಸಿದಪುವೆಂಬಂತಿರೆ ಎಡೆವಿಡದೆ ಬಲ್ಸರಿ ಸುರಿಯೆ ಮೞೆಗಾಲಂ ಚೆಲ್ವಾಯ್ತು.

ಇಂತು ಮುಂಗಾರ್ ತಲೆದೋಱೆ ತಿರೆವೆಣ್ ಮುಗಿಲ್ನೊಂದಿಯೊಳ್ ಬಳ್ಕಿ ಪರಿವ ನೇಹದಿಂ ಬೆಳ್ಕಂಗೆಡೆವ ಸೊಗದಾಲಿನೀರೆನೆ ಪೊಚ್ಚಂ ಪೆರ್ಚಿ ಪರಿದುದು ; ಬಗೆಮಿಗೆ ಸೋಲ್ವುದುಮೊಂದುಗೂಡಲ್ಕೆಂದು ಬಂದು ನೋೞ್ಪೆಡೆಯೊಳ್ ಪಸದನಂಗೊಂಡಂತಿರೆ ಬಳ್ಳಿವೊದರ್ಮಡಲ್ತು ನೊಂಪೇಱಿದುದು ; ಮೇಣ್ ಪೊಸಸುಸಿಲೊಳ್ ಸಸಿದೆಟ್ಟು ನಿಮಿರ್ನವಿರೆನೆ ಪಸಲೆಯೆಸೆದುದು.

ಇದೆ! ಗುಡುಗುಡಿಪ ಮೊೞಗಂ ಕಡುಕಾಯ್ಪೇಱಿದ ಸಿಂಗದ ದನಿಗೆತ್ತು ಬಿಗುತೋರ್ಡಿ ಕರ್ಮಡುವಿನ ತಡಂಗುಂಡಿಯೊಳಡಂಗುವುವೆನೆ ಆಱಾಟಕೆಂದು ಯೂಥನಾಥಂ ಮುಂದಿರೆ, ಕಳಭಂ ಬೞಿವರೆ, ಪಿಡಿ

ಯೆಡೆಯೊಳಿರೆ ಒಡಗೂಡಿ ನಡೆದು ನೀರ್ದಾಣಮಂ ಪುಗುವಾನೆವಿಂಡಿನಿಂದೆಯುಂ ; ಪಚ್ಚನೆ ಬೆಳೆದ ಪಸಲೆಯ ಪಸುರ್ವುಲ್ಲಂ ಪಸಿವಡಂಗೆ ಮೇದು ಕೊರ್ಬಿ ಕೆಲೆದು ತಣ್ಮೞಿದು ಮುಂಗಾಲಿಂ ನೆಲನಂ ಬೆರಂಟುತುರ್ಚಿ ಪೆರ್ಮರಸಂ ಕಂಡು ಪಾಯ್ದು ಕೋಡಿಱಿದು ಬೞಲ್ದು, ಎರ್ಮೆಯೆಡೆಗೊಳೆ, ತಾನುಂ ಪಟ್ಟು ಮೆಲ್ಕುತ್ತುತಿರ್ಪ ಜವಹುರದ ಜಕ್ಕಂದೊೞಲಿಯಂ ಗೆಲೆವರ್ಪ ಕಾೞ್ಕೋಣವಳಗದಿಂದೆಯುಂ ; ಬೀಸುವಿಱಿಸಲಂ ಸೂಸುವ ಸೋನೆಯಂ ಸೈರಿಸದೆ ಪಕ್ಕೆಯೊಳೆ ಪಟ್ಟು, ಕಣಸಂ ಲಲ್ಲೆಗೆಯ್ದು, ಪಱಿವ ಕಾೞ್ಪುರದ ಕಳಕಳಮನಾಲಿಸುತಿರೆ-ಬಿಱುಸಿಡಿಲ ಬಿಱುಸರಮಂ ಕೇಳ್ದು ಕೊಡಕೆ ನಿಮಿರೆ ನವಿರ್ಗೊಕ್ಕರಿಸೆ ತಳರ್ನೋಟದಿಂ ನೋೞ್ಪ ಹರಿಣಸಂದೋಹದಿಂದೆಯುಂ; ಜಿಡಿಗೆ ಕಡುಸುಗಿದು ತಾಂ ಪೊಱಮಡದೆ ಕುಟುಂಕಂ ತರಲ್ಕೆಣೆಯನಸನಟ್ಟಿ ಕುಳಿರ್ವೆಲರ ಕೋಡಿಂಗೆ ನಡುಗುವ ಕಿಱುವಱಿಯನೆಱಂಕೆಯೊಳ್ ಪುದುಗಿ ಗೂಡಿನ ಮೊಗಸಾಡದೊಳಿರೆಯಿರೆ-ಬಳ್ಳಿವರಿವ ಮಿಂಚಂ ಕಂಡು ತಳ್ಳಂಕಂಗೊಂಡು ಕೀಱು ಮೆಯ್ಗರೆದು ಜೋಡಿಗನ ಬರವನೆ ಪಾರ್ಪ ಪೆಣ್ವಕ್ಕಿಗಳ ತಂಡದಿಂದೆಯುಂ ; ವನಾಂತರಂ ಮನೋಹರಮಾದುದು.

ಈತೆಱದೆ ಕಾಡುಂ ನಾಡುಂ ಮನೋಜ್ಞಮಾಗೆ ಸಂಪ್ರಾಪ್ತಮಾದ ವರ್ಷಾಕಾಲದೊಳೊಂದು ದೆವಸಂ ಬೈಗುಂಬೊೞ್ತಿನೊಳೆಂದಿನಂತಿರೋಲಗಂ ಪರಿಯೆ, ಕಬ್ಬಿಗರ ಬಲ್ಲಹಂ ಮುದ್ದಣನರಮನೆಯಿಂ ಪೊಱಮಟ್ಟು ನೆರೆವೀದಿವಿಡಿದು ಪೊರೆವೀಡಿಂಗೆಯ್ತರ್ಪುದುಮಾತನ ಮಡದಿ ಮನೋರಮೆ ದೂರದೆ ಕಂಡೆೞ್ದು ಇದಿರ್ವಂದು ಕಾಲ್ಗೆ ನೀರಂ ನೀಡಿ ಮತ್ತಂ ಕೆಯ್ವಿಡಿದೊಳಚೌಕಿಗೆಗುಯ್ದು ಮಣೆಯಿತ್ತು ಕುಳ್ಳಿರಿಸಿ ಒಡನೆಯೆ ತನಿವಣ್ಣಂ ತಿನಲಿತ್ತು ಕೆನೆವಾಲಂ ಕುಡಿಪೊಡಿತ್ತು ಉಪಚರಿಸುತಿರ್ದಳ್. ಈವುಪಚಾರದಿನಾತನ ಪಸಿವುಂ ಬೞಲ್ಕೆಯುಂ ಮುಡಿಯೆ ಕೆಳದಿ ನಱುದಂಬುಲಮಂ ಸವಿಯಲ್ಕೆಂದು ಮಡಿದೀಯುತುಮಿರೆ, ಇಂತು ಸುಖಸಲ್ಲಾಪಂಗೊಳುತಿರ್ದರ್. ಅದೆಂತೆನೆ :—

ಮನೋರಮೆ—(ಮೆಲ್ನುಡಿಯಿಂ) ನೋೞ್ಪುದೀಪಗಲ್ಗಳೆಂತೊ ಪಿರಿಯುವು. ಪಗಲುಮಿರುಳುಂ ಸುಱಿವ ಬಲ್ಸೋನೆಯ ಜಿನುಂಗಿಸತ್ತಣಿನೆನ್ನ ಬಗೆಯುಂ ಬೇಸತ್ತುದು. ಅಂತದಱಿನೇನಾನುಮೊಂದು ನಲ್ಗತೆಯಂ ಪೇೞ!

ಮುದ್ದಣಂ—ಪ್ರಾಣೇಶ್ವರಿ ! ತಡೆಯೇಂ ! ಇನಿತೊಂದು ಬಯಕೆ ತಲೆದೋಱೆ ಆವ ಗಹನಂ ? ಆದೊಡಮಾವ ಸಲ್ಗತೆಯುಂ ಪೇೞ್ವೆಂ ? ಏಂ ಭೋಜಪ್ರಬಂಧಂ? ವಿಕ್ರಮವಿಜಯುಂ, ಮಹಾವೀರಚರಿತಂ?

ಮನೋರಮೆ—ಇಸ್ಸಿ ! ಇವರೊಳೆನಗೆಚ್ಚರಿಲ್ಲಂ ; ಉಱದೊಡ ಮಱದೊಡಂ ಬಟ್ಟೆದೋಱುವ ರಸಭರಿತಂ ಚರಿತಮೈಸೆ.

ಮುದ್ದಣಂ—ನಿನಗಾವ ರಸದೊಳಿಷ್ಟಂ ? ಶೃಂಗಾರರಸದೊಳೆ ? ವೀರರಸದೊಳೆ ? ಹಾಸ್ಯರಸದೊಳೆ ?

ಮನೋರಮೆ—ಆವ ರಸದೊಳೆಂದೊಡೇಂ ? ನವರಸದೊಳಂ.

ಮುದ್ದಣಂ—ಅಂತಿರೆ ಮತ್ತಮಾಕತೆಯಾವುದು ?

ಮನೋರಮೆ—ರಾಮಾಯಣದೊಳೇನಾನುಮೊಂದು.

ಮುದ್ದಣಂ—ಅಂತೆಯೆ ಅಕ್ಕೆ. ಸೀತಾಸ್ವಯಂವರಮಂ ಪೇೞ್ವೆಂ.

ಮನೋರಮೆ—ಆಂ ಮುನ್ನಮೆ ಕೇಳ್ದಿರ್ಪೆನಲ್ತೆ !

ಮುದ್ದಣಂ—ಏಂ ಸೀತಾಪಹರಣಕಥನದೊಳ್ ಬಯಕೆಯೆ ?

ಮನೋರಮೆ—ಉಃ ! ಆನೊಲ್ಲೆಂ.

ಮುದ್ದಣಂ—ಮೇಣಾವ ನಲ್ಗತೆಯುಂ ಪೇೞ್ವೆನೋ.

ಮನೋರಮೆ—ಇಂತೇಕುಸಿರ್ವಯ್, ನಾಡೊಳೆನಿತ್ತೊ ರಾಮಾಯಣಂಗಳೊಳವು. ನೀಂ ಕೇಳ್ದುದಱೊಳೊಂದಂ ನಲ್ಮೆದೋಱೆ ಕಂಡು ಪೇೞ್ವುದು.

ಮುದ್ದಣಂ—ನೀನೆ ಒಂದನಾಯ್ದು ಕೊಳ್ವುದು.

ಮನೋರಮೆ—ಶ್ರೀರಾಮಂ ಅಶ್ವಮೇಧಮಂ ಕೆಯ್ಕೊಂಡನೆಂ ಬರಲ್ತೆ ; ಆಕತೆಯೆ ಅಕ್ಕುಂ.

ಮುದ್ದಣಂ—ಈಗಳಱಿತೆಂ ; ಶೇಷರಾಮಾಯಣಮಂ ಪೇೞ್ವುದೆಂ ಬೆಯೆ ?

ಮನೋರಮೆ—ಅಪ್ಪುದಪ್ಪುದು. ಆದೊಡೆ ಮುನ್ನಮಾರಾರ್ಗಿದ ನೊರೆದರ್ ?

ಮುದ್ದಣಂ—ಮುನ್ನಂ ಶೇಷಂ ವಾತ್ಸ್ಯಾಯನಂಗೆ ಪೇೞ್ದನದನೆ ನಿನಗೆ ಬಿತ್ತರಿಪೆಂ. ಆದೊಡೆ ಬಲ್ಗತೆ ಕಣಾ ! ಒಂದೆರಡಿಕ್ಷಿವಸಕ್ಕೆ ಮುಡಿಯದು.

ಮನೋರಮೆ—ಇರ್ಕೆ. ಒರೊಂದು ದೆವಸಮಿನಿಸಿನಿಸಂ ಪೇೞ್ವೊಡೇಂ ?

ಮುದ್ದಣಂ—ಅಕ್ಕುಂ. ಆವ ಧಾಟಿಯೊಳ್ ಪೇೞ್ವೆಂ ; ಪದ್ಯದೊಳ್ ಪೇೞ್ವೆನೊ ? ಗದ್ಯದೊಳ್ ಪೇೞ್ವೆನೊ ?

ಮನೋರಮೆ—ಪದ್ಯಂ ವಧ್ಯಂ ; ಗದ್ಯಂ ಹೃದ್ಯಂ. ಹೃದ್ಯಮಪ್ಪ ಗದ್ಯದೊಳೆ ಪೇೞ್ವುದು.

ಮುದ್ದಣಂ—(ನಸುನಗೆಯಿಂ) ಅದಂತಿರ್ಕೆ. ಅದಱೊಳ್ ಇಂತಪ್ಪ ನಲ್ಗತೆಯಂ ಬಿತ್ತರಿಸಿದೊಡೆ ಅರಮನೆಯೊಳ್ ರನ್ನಗಡಗಮಂ ಪೊನ್ನ ಕಂಠಿಕೆಯುಂ ಮೆಚ್ಚನೀವರ್. ನೀನೀವುದೇಂ ?

ಮನೋರಮೆ—ಪೆಱತೇಂ ? ಎನ್ನನೆ ನಾನೀವೆಂ.

ಮುದ್ದಣಂ—ಬಲ್ಗಡುಸುಗಾರ್ತಿಯೈಸೆ ! ಅಱಿಯಾ ಮುನ್ನಮೆ ನಿನ್ನ ತಾಯ್ತಂದೆವಿರೆನಗಿತ್ತರೆಂಬುದಂ ?

ಮನೋರಮೆ—ಇದೇತಱ ನುಡಿ ! ಪೋಕೆ. ಆಂ ಪರಾಧೀನೆ ಗಡ ! ಪುರಾಣಮನೋದಿದಿಂಬೞಿಯುಮಲ್ತೆ ದಕ್ಷಿಣೆಯನೀವುದು. ಅರಮನೆಯವರುಂ ಕಬ್ಬಮಂ ಕಂಡಲ್ತೆ ಕಚ್ಚಱಿಯನಿತ್ತರ್. ಆನುಂ ಕತೆಯುಂ ಕೇಳ್ದು ಸೊಗಸಾಗೆ ಬಲ್ಲಂತೆ ಸಮ್ಮಾನಿಸುವೆಂ.

ಮುದ್ದಣಂ—ಒಳ್ಳಿತೊಳ್ಳಿತು ! ಕತೆಯನಾಲಿಸಿ ಲಾಲಿಸಿ ಬೞಿಕ್ಕಮೀಯೆನೆಂದೊಡೆ ಬಿಡೆಂ ನೋೞ್ಪೆಂ.

ಮನೋರಮೆ—ಆನುಂ ನೋೞ್ಪೆಂ ಕತೆಯ ಪುರುಳೆಂತಿರ್ಕುಮೆಂದು.

ಮುದ್ದಣಂ—ಆದೊಡಾಲಿಸು. ಸ್ವಸ್ತಿ ಶ್ರೀಮತ್ಸುರಾಸುರೇಂದ್ರ ನರೇಂದ್ರಮುನೀಂದ್ರಫಣೀಂದ್ರ ಮಣಿಮಕುಟತಟಘಟಿತ—

ಮನೋರಮೆ—ಓಓ ! ತಡೆ ! ತಡೆ ! ವಸುಧೆಗೊಡೆಯನಪ್ಪ ರಾಮಚಂದ್ರನ ಕತೆಯಂ ಪೇೞ್ವೆನೆ ಬಸದಿಗೊಡೆಯರಪ್ಪ ಸುರೇಂದ್ರರ ಚರಿತೆಯಂ ಪೇೞ್ವುದೇಂ ? ಸಾಲ್ಗುಂ ಸಾಲ್ಗುಂ. ಇಂತೆರ್ದೆಗೊಳ್ವ ಕತೆಗೆಂತುಡುಗೊಱೆಯಂ ಗೆಯ್ವೆನೋ !

ಮುದ್ದಣಂ—ನಲ್ನುಡಿಯುದು ರಮಣಿ ! ಕಚಂಗಳಾಣೆ ! ಅಲ್ತು, ಬಸದಿಯಿಂದ್ರರ ಕತೆಯುಲ್ತು ; ರಾಮಚಂದ್ರನ ಕತೆಯನೆ ಪೊಗೞ್ದು

ಪೇಟ್ವುದಿದು ಸಕ್ಕದದೊಂದು ಚೆಲ್ವು.

ಮನೋರಮೆ— ಲೇಸು, ಲೇಸು ! ನೀರಿಱಿಯದ ಗಂಟಲೊಳ್ ಕಡುಬಂ ತುಱುಕಿದಂತಾಯ್ತು; ಕನ್ನಡದ ಸೊಗಸನಱಿಯಲಾರ್ತನಿಲ್ಲನಗೆ ಸಕ್ಕದದ ಸೊಗಸಂ ಪೇಟ್ವುದು ಗಡ !

ಮುದ್ದಣಂ— ಅಪ್ಪೊಡಿನ್ನೆಂತೊ ಒರೆವೆಂ ?

ಮನೋರಮೆ— ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರುಳೊಂದೆ ಪೇಟ್ವುದು. ಕನ್ನಡಂ ಕತ್ತುರಿಯಲ್ತೆ.

ಮುದ್ದಣಂ—ಅಪ್ಪುದಪ್ಪುದು. ಆದೊಡಂ ಸಕ್ಕದವೊಂದೆ, ರನ್ನ ವಣಿಯುಂ ಪೊನ್ನಿಂ ಬಿಗಿದಂತೆಸೆಗುಂ; ಅದಱಿಂ ಕರ್ಪೂಣಿಸರದೊಳ್ ಚೆಂಬವಳಮುಂ ಕೋದಂತಿರೆ, ರಸವೊಸರೆ, ಲಕ್ಕಣಂ ಮಿಕ್ಕಿರೆ, ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ, ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ.

ಎಂಬಲ್ಲಿಗೆ
ಮುದ್ದಣಂ ಪೇಟ್ದ ಶ್ರೀರಾಮಾಶ್ವಮೇಧದೊಳ್ ಕಥಾಮುಖಮೆಂಬ
ಪ್ರಥಮಾಶ್ವಾಸಂ ಸಂಪೂರ್ಣಂ.

---

## ದ್ವಿತೀಯಾಶ್ವಾಸಂ

### — ಅಗಸ್ತ್ಯಾಗಮನಂ —

ಕೇಳಿಲೆ ಬಾಲೆ ! ಬಾಲೇಂದುಫಾಲೆ ! ಈ ಪೊಡವಿಯೊಳ್ ಚೈತನ್ಯರಾಯುಂ ಮಾಯಾದೇವಿಯುಂ ಮದುವೆನಿಂದ ಪದದೊಳ್ ಪೇರುಕ್ಕೆವದಟ್ಟಿಗೆಂದು ಬೊಮ್ಮನೆತ್ತಿದ ಬಾಂದಟಿಱಿಯು ಪೊಂಗಾವೆನೆ, ಎಳೆವೆಣ್ಣ ಪೊರ್ಕುಟಿಲಗೊಂಡೆಯುಂತಿರೆ ಪೊಂಬೆಟ್ಟಂ ಪೊಂಬಸಿಱಂಗಿಂಬುವಸದಿಯು ಮಲರ್ವೊಡೆಯಂಗೆ ನಡೆದಾಣಮುಮರೆವೆಣ್ಮೆಯ್ಯಂಗೆ ನೆರೆವನೆಯುಂ ದೆಸೆಯಾಣ್ಮರ್ಗೆ ಪೊಸವೀಡುಂ ಬೋಟಿಱಿಯರ್ಗೆ ಮೇಳದೆತೆಯುಮೆನಿಸಿ ಕಣ್ಗೊಳಿಕುಂ. ಇಂತು ಕರಮೆ**ರ್ದೆ**ಗೊಳ್ವ ಸೊನ್ನೆವೆಟ್ಟಂಗೆ ತೆಂಕಲ್ಗೆ

ಭೂರಮೆಯ ಸೀಮಂತರತ್ನಂಬೋಲ್ ರಂಜಿಪ ಅಯೋಧ್ಯಾನಗರದೊಳ್ ನೇಸಜ ಬೞಿಯ ಪಲಂಬರರಸರರಸುಗೆಯ್ಯುತಿರ್ದರ್. ಇವರೊಳ್ ತುತ್ತತುದಿಗಬ್ಧಿಗಬ್ಜಂ, ಪೊಡವಿಗೆ ಮಂಗಳಂ, ಬಾಂಗೆ ಭಾನು ಪುಟ್ಟಿದಂತಿರೆ [ದಶರಥಂ] ಪುಟ್ಟಿ, ಪಱಿ ಪೊರ್ದದ ಬೞಿಯುಜಿಂ ಕಳೆಗುಂದದ ತೋಳ್ಸಿರಂ ತನ್ನೊಳಾಗೆ ಪಱಿನುಡಿಯಂ ಬೞಿಸಂದು ಪಲವುಂ ಪಗಲ್ ತಿರೆಯಂ ಪೊರೆಯುತೆ ಬೞಿಯಂ ಯಶಶ್ಶೇಷನಪ್ಪಿನಂ ; ಆತಂಗೆ ನೆರೆನಾಂತ ನಾಲ್ಕುಮುಪಾಯದಂತೆ ನಾಲ್ಕುಂ ಪುರುಷಾರ್ಥದಂತೆ ಮೆಯ್ಗೊಂಡು ಪುಟ್ಟಿದ ನಾಲ್ವರ್ ಕುವರರೊಳ್ ಪಿರಿಯಂ ರಾಮಂಗೆ ಪಟ್ಟಾಭಿಷೇಕಮಾಯ್ತು.

ತಾಳ್ಮೆಯೊಳ್ ತಿರೆಯಂತಿರೆ, ಜಾಣ್ಮೆಯೊಳ್ ಗುರುವಿಂಗೊರೆ, ಭೋಗದೊಳ್ ಸುರೇಂದ್ರಂ, ತ್ಯಾಗದೊಳ್ ನರೇಂದ್ರಂ, ಬೀರದೊಳ್ ಭೈರವಂ, ಸಾರದೊಳಗಾರವಂ, ಬೆಂಗದಿರನ ಕಾಯ್ಪು, ತಣ್ಗದಿರನ ತಣ್ಪು, ಸಿಂಗದ ಚಲಂ, ಮಾತಂಗದ ಬಲಂ, ಸಿಡಿಲ ಪೊಡರ್ಪು, ಕಡಲ ಗುಣ್ಪು, ಪಡಿಗೊಳೆ ದಶರಥಕುಮಾರಂ ರಾಜ್ಯಮನಾಳುತಿರ್ದಂ.

ಆತನಾಳ್ವ ನಾಡು ಕೈಲಾಸಮಲ್ಲದೊಡಂ ಸರ್ವಮಂಗಳಾಶ್ರಯಂ ; ವೈಕುಂಠಮಲ್ಲದೊಡಂ ಲಕ್ಷ್ಮೀಮನೋಹರಂ ; ಸತ್ಯಲೋಕಮಲ್ಲದೊಡಂ ಸರಸ್ವತೀವಿಲಾಸಾಸ್ಪದಂ. ನಾಡಿಗರೊಳೆಲ್ಲರುಂ ಭೋಗಿಗಳ್ ಕುಟಿಲಗಾಮಿಗಳಲ್ತು ; ಜೈವಾತೃಕರ್ ದೋಷಾಕರರಲ್ತು ; ಪುರಸ್ಕೃತರಭಿಪನ್ನರಲ್ತು. ಅಂತುಮಲ್ಲದೆಯುಂ ಅೞಿಗಬ್ಬಂ ಬೆಳ್ಳುಕ್ಕರಿಗರೊಳ್, ಪಱಿಗಜ್ಜಂ ಪಟ್ಟಸಾಲಿಗರೊಳ್, ಇೞಿನೇಹಂ ತಾಣದೀವಿಗೆಯೊಳ್, ಕೀೞ್ಗಯ್ಮೆ ಕಮ್ಮರಿರೊಳ್, ದುರ್ಮತಿ ವತ್ಸರದೊಳ್, ಸುತ್ರೇಂ, ಅತಿಪಾತಂ ಮಧುಪಾನವ್ಯಸನದೊಳ್, ಮಧುಪಾನವ್ಯಸನಮಾಜಿಡಿಯೊಳ್, ಆಜಿಡಿ ಪಾದರಿಯೊಳ್, ಪಾದರಿ ಬನದೊಳಲ್ಲದಿಲ್ಲಂ. ಮನೋಹರೆ ! ಮನೋರಮೆ ! ಇರ್ಚ್ಛಾಸಿರ ನಾಲಗೆಯಿರ್ದುಮೀರಾಮರಾಜ್ಯಮಂ ಸೇಸಂ ಬಣ್ಣಿಸಲಾರ್ತನಿಲ್ಲಂ ; ಇಂತಿರೆ ಗಾಂಪಂ ಕಾಲುರಿಚನೆನಗೊಳವೆ ?

ನೋಡ ! ನಾಡ ಬೞಿವಿಡಿದು ಪುಣ್ಯವಾಹಿನಿಯೆನೆ ಒಟ್ಟುವ ಸರಯೂನದಿಯಂ ; ತಾಂ ಕಿನ್ನೆಲೆಯೊಳಿರ್ದುಂ ಲೋಗರ್ಗೆ ಮೇಲಂ ಬಯಸುವಳಲಾ ! ಗಂಭೀರೆಯಾಗಿರ್ದೊಡಂ ನಿರ್ಮಳೆಯಾಗಿರ್ಪನಮಂತ

ರಂಗಂ ಪೆಱರ್ಗೆ ಕಾಣಲ್ಕಕ್ಕುಂ ; ನಲ್ವೆಂಡಿರಂತಿರೆ ಮಂದಗಾಮಿನಿ ಗಡ ! ತಪ್ಪೇಂ, ನಿಕ್ಕುವಂ ಪೆಣ್ಣೆ ಇವಳ್. ಸರಸಕಮಲಮೆ ಮೊಗಂ ; ಮೀನೆ ಕಣ್ ; ಪಾವಸೆ ಬಿಡುಮುಡಿ ; ಪೊೞಿವಕ್ಕಿ ಬಲ್ಮೊಲೆ ; ಸುೞಿ ಪೊಕ್ಕುೞ್ ; ಮಳಲೊಟ್ಟಿಲ್ ಪೊಱವಾಱ್ ; ಕಾಲ್ ಕಾಲ್. ಏಂ ತಡೆತಡೆದು ಪೋಪಳ್ ; ಕಳಕಳನಾದಂಗೆಯ್ವಳ್ ? ಓ ! ತಾಯ್ಮನೆಯಿನಾಣ್ಮನೆಡೆಗೆ ಪೋಪಳಕ್ಕುಂ.

ನೋೞ್ಪುದು, ನೋೞ್ಪುದಿತ್ತಲ್ ಪೊಚ್ಚದೊತ್ತಿನೊಳ್ ಪೆರ್ಚಿ ಬೆಳೆದ ತೋಂಟಂಗಳೆಡೆಯುಂ. ಪರೋಪಕಾರಾರ್ಥಂ ಫಲಂಗಳಂ ಪೊತ್ತು ಫಲಭಾರದಿಂ ಬಾಗಿ ಕೆಯ್ಕೊಳ್ವುದೆಂದೆಮಗೀಯಲ್ ನೀಡುಂ ನೀಡಿ ನಿಲ್ತಂತಿರ್ಪುವು ಮರಂಗಳ್. ಎಳನಾೞಿಗಳೆಮ್ಮಂ ಕೆಯ್ಯೆಡೆಯಿಂ ಬೀಸಿ ಕರೆದಪುವು. ಇಂತೇಂ ರಸನಾೞಿಯ ಪೆರ್ಗೊನೆಗೆ ಕೀೞ್ಮೊಗಮಾಯ್ತು ? ದುಮ್ಮಾನಂ ಗಡ ! ಪೆತ್ತಬ್ಬೆಗೆ ತಮ್ಮತ್ತಣಿಸೞಿನಾಯ್ತೆಂದು ನಾಣ್ಚಿ ತಲೆವಾಗಿರ್ಕುಮಕ್ಕುಂ.

ಇದೆಕೊಳ್ ! ಕಾಲ್ಗೆ ನೀರೆಂದು ಪೊಂಗಳಸದೊಳ್ ಪನಿನೀರಂ ತುಂಬಿ ಏಱುಮೆತ್ತಿ ಪಿಡಿದು ಇನ್ನೆಬರಂ ನೀರೆಱೆದು ಪೊರೆದ ಮೇಘರಾಜನ ಬರವನೆ ಪಾರ್ವ ಚೆಂದೆಂಗುಗಳ ಪಂತಿಗಳ್. ಪಚ್ಚೆಯ ಚೆಂಬವಳದ ಲಂಬಣದಿಂ ಸಿಂಗರಿಸಿ ಸೋಗೆವೀಲಿಯುಂ ಬಿಗಿದು ಬಸಂತಂ ನಟ್ಟ ಕಾಪನ ಗೆಲ್ಲಗಂಬಮೆನೆ ಕಾಯ್ಗೊನೆಪಣ್ಗೊನೆಯಿಂ ಕಣ್ಗೆಡ್ಡಮಾಗಿರ್ಕುಂ ಕೌಂಗುದೋಂಟಂ. ಕಿತ್ತೀಳೆ ಪೇರೀಳೆ ದಾಳಿಂಬಂ ಬಕ್ಕೆಪಲಸು ಪನೆಮರಂಗಳ್ ಎಡೆಯೆಡೆಯೊಳ್ ಮನೋಹರಮಾಗಿರ್ಕುಂ.

ಪೂದೋಂಟದ ನೋಟಮೆಮಗೆ ಮನೋಜ್ಞಂ. ಬಂದುಗೆಯೊಳ್ ಚೆಂಬಣ್ಣಂ, ಗಱಿವೂವಿನೊಳ್ ಪೊಂಬಣ್ಣಂ, ಮಲ್ಲಿಗೆಯೊಳ್ ಬೆಳ್ಪು, ನೀಲಗಂಧಿಯೊಳ್ ಕರ್ಪು ; ಇಂತೋರೊಂದು ಪೂಗಳೊಳೋರೊಂದು ಬಗೆಯ ಬಣ್ಣಮಂ ನೇರ್ಪಡಿಸಿದ ಗಾಂಪನಾವಂ ?

ಇದೆ ! ಬಂಡುಣಲೆಂದು ತಂಡತಂಡದಿಂ ಮುಂಡಳಿಸಿ ಮುಯ್ಯೇರಡಿಗಳ್ ಬಂದೆಱಗುಗುಂ. ಉದಿರ್ದ ಪೂವುಡಿ ಬನರಾಣಿಯ ಮೊಗನಾಡದ ಪಳಿಕಿನ ಪೊಸಂತಿಲೊಳ್ ಬರೆದ ರಂಗವಲ್ಲಿಯೆನೆ ರಂಜಿಕುಂ.

ಓ ! ಓ ! ಬನಗಾಳಿ ! ಇದೇನೀತೆಱದೂೞಿಗಂ ! ಇದಿರ್ಗೊಂಡು

ಕರೆದುಯ್ಯಲ್ಕೇಂ ಬಂದಯ್ ? ಆಮೆ ಬರ್ಪೆವಲ್ತೆ ; ಸಾಲ್ಗುಂ ಸಾಲ್ಗುವಿಾ ಯುಪಚಾರಂ ; ಬಂದರೆಂದು ಪೇೞರಸಂಗೆ.

ಇದೆಕೊಳಿದೆಕೊಳ್ ! ಪೊಂಗದಿರಿನೆನೆ ಪೊಂಗದಿರಿಂ ಕಣ್ಗೊಳಿಪ ಕೆಯ್ಗೊಲನತ್ತಣಿಂ ಪಕ್ಕಿಸೋವ ಕಕ್ಕಸಜವ್ವನೆಯರ ಮೆಲ್ಲುಲಿ ಕೇಳಿವರ್ಪುದು. ಕೆಯ್ವಾಳಿಯ ಕಿಱುದನಿ ಮೆಲ್ಲುಲಿಗೆ ಪಾಸಟಿ ; ಕಣ್ಗೊಗರ್ ನಗೆ ಮೊಗದ ಬೆಳಗಿಂಗೆ ನೆರಂ ; ಕಬರೀಭರಕೆ ಕೊರಲ್ಗೊಂಕೆ, ಬಟ್ಟಬಲ್ಮೊಲೆಯ ತಿಣ್ಪಿಂಗೆ ನಡು ಬಳ್ಕೆ, ಗುರುನಿತಂಬದ ಬಿಣ್ಪಿಂಗೆ ಕಾಲ್ತಡಂಗಟ್ಟಿ ಎತ್ತಂ ಪರಿದು ಸೋವರ್.

ನಡೆ ! ಪೋಪಂ. ಓ ! ಇದೆ ಇದೆ ! ಕಾಣಿಸಿಕೊಳ್ವುದಱವಟಿಗೆ. ಅಱಮೆ ಪೆಣ್ಬಾರಿಜನಾಂತು ನೀರಂ ಸುರಿವುದೆನೆ ಕಿಱುಜವ್ವನದ ಬಾಲೆಯರ್ ನೀರನೆಱೆವರ್. ಕಡೆಗಣ್ಗೊಗರ ಕುಡುನೋಟದಿಂ ನೋಡಿ, ಪೆಱ ಮೊಗದ ನಗೆಜೊನ್ನಮುಂ ಕೂಡಿ, ಸುಯ್ಯೆಲರ ನಱುಗಂಪನೂಡಿ, ತಣ್ಣೀರಂ ಬಿದುಗಲ್ಗಂದಲೊಳೊಸರ್ವ ಪನಿನೀರೆನೆ ನೀರಡಿಸಿದರ್ಗೆಱೆದಪರ್. ನಡುವಗಲ ಬಿಸಿಲ ಜಳಕೆ ಬಾಡಿರ್ಪಿನಂ ಬಟ್ಟೆಗರುಂ ನೆಟ್ಟನೆ ಕಟ್ಟೆಯ ಕಟ್ಟೆದಿರ ಪೊಸಜಗಲಿಯೊಳಿರ್ದು ತಣ್ಣೆಲರ್ಗೆ ಮೆಯ್ಯೊಡ್ಡಿ ಕಂಪೊಱದ ನೀರ ನೀಂಟಿ ತನುಮನಂಗಳ ಬಟಲ್ಕೆಯನಿಂತು ನೀಗುವರ್.

ಈಗಳಿತ್ತಲ್ ಕೇರಿಗಳಂ ನೋೞ್ಪುದು.

ಮನೋರಮೆ—ರಮಣ ! ಇದೇಂ ನೋೞ್ಪುದು ನೋೞ್ಪುದೆಂದು ಪೊೞಱಯುಂ ಬೆಳೆಯನಾವುದಂ ಬಣ್ಣಿಸಲ್ ಪೋಪಯ್ ! ಮೇಣಾಂ ತೋಱುಪುದೆತ್ತಣಿನಿದಂ ?

ಮುದ್ದಣಂ—ಎನ್ನರಸಿ ! ಪೆಱತಾವುದುಮಲ್ತು ; ಅಯೋಧ್ಯಾ ನಗರದ ಬಣ್ಣನೆಯ್ತಪ್ಪೆ !

ಮನೋರಮೆ—ಆಗಳೆ ಪೇೞ್ದಿಯಲ್ತೆ ತನ್ನಿಂ ಮುಡಿಯದೆಂದು.

ಮುದ್ದಣಂ—ಅಪ್ಪುದಪ್ಪುದು ! ತಪ್ಪೇಂ ?

ಮನೋರಮೆ—ಅಂತಾದೊಡೇಂ ಕನಸೊ ? ನನಸೊ ?

ಮುದ್ದಣಂ—ಇದೇತಱ ನುಡಿ ರಮಣಿ !

ಮನೋರಮೆ—ಅಲ್ಲದೊಡೀಗಳೆ ಎನಗೊರ್ಮೆ ನೆಲನಂ ಮತ್ತೊರ್ಮೆ ಪೊಲನಂ ತೋಱಿ ಬಣ್ಣಿಪುದೇಂ ?

ಮುದ್ದಣಂ—ಅಲ್ತಲ್ತು ; ಈ ಬಣ್ಣನೆಯನಾಂ ಪೇೞ್ದುದುಮಲ್ತು ನೀಂ ಕೇಳ್ದುದುಮಲ್ತು.

ಮನೋರಮೆ—ಎನ್ನೊಡೆಯ ! ಸಂದೆಯಮಿನ್ನುಂ ಪೋದುದಿಲ್ಲಂ.

ಮುದ್ದಣಂ—ಆದೊಡಾಲಿಸು ! ಶ್ರೀರಾಮಚಂದ್ರಮನಂತರಸುಗೆಯ್ಯುತ್ತಿರಲೊಡಮೊರ್ವ ದರ್ಶನಾರ್ಥಮಗಸ್ತ್ಯಂ ನಿಜಶಿಷ್ಯಂ ಬೆರಸಯೋಧ್ಯೆಗೆಯ್ತರ್ಪ ಪದನೊಳ್ ಬಣ್ಣಿಸಿ ಪೇೞ್ದ ನುಡಿಗಳಿವು. ಅದನೆ ಕಂಡುಗಮುಂ ಬಳ್ಳಿದೊಳಳಿದೆನ್ನೈಸೆ !

ಮನೋರಮೆ—ಒಹೋ ! ಈಗಳಱಿತೆಂ. ಮುಂತೇಂ, ಮುಂತೇಂ ?

ಮುದ್ದಣಂ—ಪ್ರಿಯೆ ! ಈಪರಿಯೊಳೋರೊಂದೆಡೆಯುಂ ಶಿಷ್ಯಂಗೆ ತೋಱಿಸುತುಂ ಕುಂಭೋದ್ಭವಂ ಶ್ರೀರಾಮನೋಲಗಕೆ ಬರುತುಮಿರ್ದಂ.

ಎಂಬಲ್ಲಿಗೆ ಶ್ರೀರಾಮಾಶ್ವಮೇಧದೊಳ್
ಅಗಸ್ತ್ಯಾಗಮನಮೆಂಬ ದ್ವಿತೀಯಾಶ್ವಾಸಂ ಸಂಪೂರ್ಣಂ.

---

## ತೃತೀಯಾಶ್ವಾಸಂ

## — ಯಜ್ಞೋಪದೇಶಂ —

ಲೋಗರಱಿವಿನ ಕೊಱತೆಯುಂ ನೀಡುಮೊಣಿಸದೆ ತಗದ ಕಜ್ಜಮನೊಡರ್ಚುತೆ ಕಟ್ಟಕಡೆಯೊಳ್ ಬಱಿಮುಱುಕದಿಂ ಮನದೆ ಕುದಿವರ್ ಪಲಂಬರೊಳರ್. ತಿಟ್ಟವಿಟ್ಟ ಸಾಪೆಯೊನೆ ಮೂಗುವಟ್ಟಿರ್ಪರ್. ಈತಂಗಳ್ಗುಪಚಾರಂ ಪ್ರೇತೋಪಚಾರಂ ; ಕೂಟಂ ಕಾಲಕೂಟಂ ; ನುಡಿ ಬಡಿ; ನೋಟಂ ಕಾಟಂ. ಇಂತಿದೊಂದವತೆ. ಮುನಿಯೇನೆಂಗುಂ ನೋೞ್ಪಂ. ರಮಣಿ ! ತಪ್ಪಿದೆಂ ತಪ್ಪಿದೆಂ ; ಆವುದನೋ ಪೇೞಲ್ತೊಡಂಗಿದೆನೇನುಮನೋ ಉಸಿರ್ದೆಂ, ಕೇಳ್ವುದು ಕೇಳ್ವುದು.

ಇಂತೀಮಾೞ್ಕೆಯೊಳ್ ವೈತ್ರಾವರುಣಿ ಶಿಷ್ಯಂಗೂಡಿ ಬರುತುಮಿರ್ಪುದಂ ಕಟ್ಟಿದಿರೊಳ್ಕಂಡು ಪಡಿಯಱಂ ಚೆಚ್ಚರವೆಟ್ಟು ಬಂದೋಲಗದ ಚಾವಡಿಗೆನಸುಂ ದೂರದೊಳ್ ನಿಲ್ತು ತಲೆನಾಗುತೆ ನೀಡುಂಗೆಯ್ಗಳೊಳಿಂತು ಬಿನ್ನಯಿಸಿದಂ:— ಜೀಯ ! ಪೊಱನಾಗಿಲೊಳ್ ಮುನಿಯೊರ್ವಂ ಬಟುವೆರಸು ಬಂದಿರ್ಕುಂ ; ಆನುಮವನುಮಡಿಯಾಣತಿಯಂ ಪಾರ್ವೆವು.

ಒಡನೆಯೆ '' ತಡೆಯೇಂ ! ಪುಗಿಸಲ್ವೇಡಾ ? '' ಎನುತೆ ಸಾವಂತ ಮನ್ನೆಯರಂ ಬೞಿಯಟ್ಟಿ, ಅಣುಗದಮ್ಮನಂ ಲಕ್ಷ್ಮಣನಂ ತಕ್ಕಂತಿರೆ ಕರೆದು ತರ್ಪುದೆಂದು ಕಳಿಪಿದಂ.

ಆಗಳ್ ಸೌಮಿತ್ರಿ ಮುಂತಪ್ಪರ್ ಬಂದು ಮುನಿಗೆಱಗಿ ಕೆಯ್ಯಿತ್ತು ಕರೆದುಯ್ವುದುಂ ; ಬರ್ಪುದಂ ಕಂಡು ಗದ್ದುಗೆಯಿನಿೞಿದು ನಾಲಡಿಯೊಳ್ ಮುನಿಯನಿದಿರ್ಗೊಂಡು ಪೊಡೆವಟ್ಟು ಭದ್ರಾಸನದೊಳ್ಕುಳ್ಳಿರಿಸಿ ಅರ್ಘ್ಯ ಪಾದ್ಯಂಗಳಿಂ ಪೂಜಿಸಿ ಮಧುಪರ್ಕಮಂ ಸಮರ್ಪಿಸಿ ಕುಶಲಮಂ ಬೆಸಗೊಂಡುಪಚರಿಸುತಿರ್ದಂ.

ಅಂತವರಿರ್ವರುಂ ಸುಖಸಲ್ಲಾಪಂಗೊಳುತಿರಲ್ಕೆ ಅಗಸ್ತ್ಯಂ ರಾಮಚಂದ್ರಮನ ಮುಖಮನಿನಿದೂರಂ ನಿಟ್ಟಿಸಿ ಬೞಿಯಂ,—ರಾಯ! ಎಮ್ಮೀ ಮಾನಸರ ಮನೋವಿಕಾರಮುಮನಿಂಗಿತಮುಮಂ ನುಡಿಯಿಂ ನಡೆಯಿಂ ಗೆಯ್ಮೆಯಿಂ ಮೊಗದ ಮಾರ್ಪಾಟದಿಂ ಅಱಿಯಲಕ್ಕುಮೆಂದು ಬಲ್ಲರ ಬಗೆ. ಈಗಳೀಮೊಗಸಿರಿಗೆ ಕಂದುಂ ಮೆಲ್ನುಡಿಗೆ ಕುಂದುಂ ನಸುಂ ತಲೆದೋಱುದುತಿರೆ ತೋರ್ಕುಂ. ಆಂ ತಪ್ಪೆನಲ್ತೆ! ಅದಱಿನೆಂತೋ ಬಗೆಯೊಳೇನಾನುಮೊಂದು ಬೇವಸಮಿರ್ಕುಮೆಂದಱಿವೆಂ. ಅಂತು ನರರ್ಗೆ ಮೊದಲೊಳಿಂತು ಚಿಂತೆಯೊದವಿದೊಡಂ ಮಾಂಜಿಸಲ್ಕೆಂದು ಪೊಸನುಡಿಯ ಬಿನ್ನಣಮುಂ ಪುಸಿನಗೆಯ ಸನ್ನಣಮುಂ ತೋರ್ಪಡಿಸುತುಮುದಂ ಮಱೆಗೆಯ್ವುದುಂಟು. ಲೆಪ್ಪದ ಬೊಂಬೆಯನೆಱಕಂಬೊಯ್ದೊಪ್ಪಂಬೂಸಿದ ಪುತ್ತೞಿಯುಂ ಬೇಱಾಗಿ ತೋಱುಗುಮಲ್ತೆ. ಇಂತಿದಱಿನುಂ ಜಾಣರ್ಗವಕಾಶಂ. ಮತ್ತಮುಳ್ಳಲರ್ದ ಕೆಸರ್ಮಲ್ಲಿಗೆ ತಾಯ್ವೇರ್ ತಳದಿಂ ಮುಱಿಯೆ ಮೇಲ್ಗೆ ಸೊಗಯಿಕುಮೆ ?—ಎಂದಂ.

ಅದರ್ಕಾರಾಘವಂ—ಮುನಿಕುಲಲಲಾಮ! ಅಂತುಟಪ್ಪುದು ನುಡಿಸಾಜಂ. ಸಂಸಾರಬಂಧನದಿಂ ಬಿಗಿವಡೆದೀಬಗೆಯೇಗಳುಂ ಚಿಂತಾಪರಂ

ಪರೆಯಿಂ ಪೊದೆದಿರ್ಕುಂ ; ಒರ್ವಂ ಅಮರ್ಚುಗುಂ, ಮತ್ತಮೊರ್ವಂ ಸಡಿಲ್ಚುಗುವೈಸೆ, ಎನುತೆ ಪಡಿನುಡಿದಂ.

ಆಗಳ್ ಲೋಪಾಮುದ್ರಾಪತಿ—ಆಃ! ರಾಘವ! ಸೊಲ್ಲಿದು ನಿನಗಲ್ತು, ಲೋಗರ್ಗೆ. ಸಾಕ್ಷಾನ್ನಾರಾಯಣಂ ತಿರೆಯ ತಿಣ್ಣಮಂ ತವಿಸಲ್ಕೆಂದು ಪುಟ್ಟಿದಂಗೆ ಚಿಂತೆ ಗಡ! ಗಾಳಿ ಬೆಮರ್ತಂದು ನೇಸಱ್ ಕಂಗಳನಾದಂದು ಅಮರ್ದು ನಂಜಾದಂದು ನಿನಗೆ ಬಾಗುಳ್. ಆನೊಂದಂ ಕೇಳ್ದೊಡೆ ನೀನೊಂದಂ ಪೇೞ್ದಿಯ್. ಆರನೊ ಉದ್ಧರಿಸಲ್ಕೆಂದಕ್ಕುಮೀಯೆಣಿಕೆ, ಮುಖದ ಭಂಗಿ. ಅಂತದಱೊಳಂ ಲೋಕಸಮ್ಮತದಿಂ ಪೇೞ್ದೊಡಂ ನೀನೊಂದೆ ಬೆಳ್ಗೊಡೆಯೊಳಾಳ್ವ ರಾಯ್ಯಂ ; ಸಾಮಂತರಾಜರ್ ವಶವರ್ತಿಗಳ್ ; ಆಗಳುಂ ಕಾಣ್ಕೆಯನೀಗುಂ ಸಾಸಿರ್ವರ್ ; ಪೊನ್ನೊಡೆಯನ ಭಂಡಾರದತ್ತಣಿಂ ಮಿಗಿಲೈಸಿರಿ ; ಪೊಡವಿ ಬಯಕೆವಟ್ಟಿಲ್ ; ಮಾರಿಯ ಕೋಱೆವಲ್ಲಂ ಮುಱಿವ, ಭೈರವನ ನಿಡುಜಡೆಯಂ ಪಿಡಿವ, ಕಾಳರಕ್ಕಸಿಯ ಕೂರ್ವಾಳಂ ಸೆಳೆವ ಪಡೆವಳರೊಳರ್ ; ಗುರುಕವಿಗಳಿಂ ಬಳಕೆವೆತ್ತ ಸಚಿವರುಂಟು ; ಬೞಿಯೋಜಂ ವಸಿಷ್ಠಂ ; ಸಿಂಗನ ಸಿಂಗಮಂ ಮೊಲನೆಱಂಕೆಯಂ ಮಣಲ ನೆಯ್ಯಂ ತಂದೀವ ಸೋದರರ್ ಬೞಿಯೊಳಿರ್ಪರ್ ; ನಂಟರೆಲ್ಲರುಂ ನೇಹಿಗರ್ ; ನಾಡಿಗರ್ ನುಡಿಯೊಳ್ ನಡೆವರ್ ; ಐನಾಯ್ಪುಲಿಯೆನೆ ನಗರರಕ್ಷಕನಿರ್ಕುಂ ; ಎಂತುಂ ಕಟ್ಟಾಣತಿ ಜವದಂಡೆ. ಅಂತುಮಲ್ಲದೆಯುಂ, ಲೋಕಕಂಟಕರೆನಿಸಿ ಭೂಭಾರಕ್ಕೆಂದು ಪುಟ್ಟಿದ ರಾವಣಕುಂಭಕರ್ಣಾದಿ ದುಷ್ಟರಾಕ್ಷಸರಂ ಸಮೂಲಂ ತತ್ತಱದಱಿದುದಱಿಂ ಮೂಜಗಮುಂ ಸೊಗಂಬಾೞ್ವುದು. ಮೇಣೇತಱ ಚಿಂತೆ? ಕೆಯ್ವಲ್ಯಸುಂದರೀವದನಾರವಿಂದಮಕರಂದಪಾನಲೋಲುಪ್ತಿಗಿದು ಪೊೞ್ತಲ್ತೆ!—ಎಂದುಸಿರ್ದಂ.

ಬೞಿಕಂ ರಾಘವಂ—ಸ್ವಾಮಿ! ನರರ ಬಿಜ್ಜೋದರರ ಸುರರ ಮುನಿವರರ ಮನದೞಲುರಿ ಪಿರಿದಾಗೆ ಆಯುಂ ಬಱಿದಾಗೆ ಶ್ರೀಯುಂ ಕೆಯ್ವಿಡೆ ತಂತಮ್ಮ ದುಷ್ಕೃತಂಗಳ ಫಲಂಗಳತ್ತಣಿನಾರಕ್ಕಸರ್ ಪೊಂದಿದರಲ್ಲ, ಮೊನೆಯೊಳಾತಂಗಳಂ ಗೆಲ್ವ ಕೊಲ್ವ ಬಲ್ಮೆ ತನಗೆತ್ತಣ್ತು? ಆದೊಡಮಂತಿರ್ದ ರಾವಣಕುಂಭಕರ್ಣರೆಂದೊಡಾರವರ್? ಪುಟ್ಟೇತರ್ಕೆ? ಎಂತು? ಇಂತಿದಂ ಕೂರ್ಮೆಯಿಂ ಪೇೞಲಕ್ಕುಂ—ಎನೆ;

ಜಿತನಾತಾಪಿ ತಾಂ ಮಂದಹಾಸದಿಂ—ರಘುಕುಲಪಯೋಧಿರಾಕಾಸುಧಾಕರ! ಈ ಕುಲಕೀಸದ್ಗುಣಕೀಸೌಜನ್ಯಕೀನುಡಿ ತಗುಗುಂ. ಪೊಂಬಚ್ಚಮುಂ ಪಣ್ಣಿ ಬಣ್ಣಮುಂ ಕೇಳ್ದಯ್? ಪೋ! ಎನಗಱಿವು, ನಿನಗೆ ಬಿನದಂ, ಕೇಳಾಅೞಿರಕ್ಕಸರ ಪುಟ್ಟಂ—ಎನುತುಂ ಪೇೞಲಾರಂಭಿಸಿದಂ :—

ಮುನ್ನಮೊರ್ಮೆ ಸನಕಸನಂದನಾದಿದೇವರ್ಷಿಗಳ್ ವಿಷ್ಣುವಂ ಪೂಜಿಸಲ್ಕೆಂದು ವೈಕುಂಠಕ್ಕೆಯ್ತಂದು ಒಲಗಮುಂ ಪುಗುತರ್ಪಂದು ಬಾಗಿಲೊಳ್ ಜಯವಿಜಯರೆನಿಪ ಪಡಿಯಱರ್ ತಡೆದರ್. ಮೂಗುದುದಿಯೊಳಲ್ತೆ ಮುನಿಸು ಮುನಿಗಳ್ಗೆ! ಒಡನೆಯೆ ಕೋಪದಿಂ ಪೊಡವಿಯೊಳ್ ರಕ್ಕಸರಾಗಿ ಪುಟ್ಟಿಮೆಂದು ಕಾವಲರಂ ಬಯ್ದು ಪೋಪುದುಂ; ಮನದೆ ತಲ್ಲೞಂಗೊಂಡು ನಾಥನೆಡೆಗೆ ಪರಿತಂದು ಗೆಯ್ದು ಗೆಯ್ಮೆಯುಂ ಬಯ್ದು ಬಯ್ಗುಳಂ ಬಿನ್ನವಿಸಿದರ್. ನಾರಾಯಣನಿಂತಿದಂ ಪರಿಭಾವಿಸಿ ದ್ವಾರಪಾಲಕರ್ಗೆ—ನಿಗ್ರಹಾನುಗ್ರಹಸಮರ್ಥರ್ ವಲಂ ಮುನಿಗಳ್. ತೊದಳಾಗದವರ ನುಡಿ. ಆದೊಡಂ ನಿಮ್ಮ ನಿಸಿತೊಂದಂ ಕೇಳ್ವೆಂ. ಎನ್ನ ನೇಹಿಗರೆನಿಸುತ್ತೇೞುಂ ಮೆಯ್ಯಿನಿಳೆಯೊಳ್ಬಾೞ್ದು ಬೞಿಯಮುನ್ನಂ ಬೞಿಸಾರ್ವುದೊಂದು; ಪಗೆದು ಮೂಱುಂ ಮೆಯ್ಯುಂ ಸಮೆದು ಮೇಣೆನ್ನಂ ಕಾಣ್ಬುದು ಪೆಱತೊಂದು; ಇವಱಿಕೂರಾವುದು ಮನಕ್ಕೇಱುವುದದಂ ಪೇೞಿಮೆನೆ; ಮಣಿದು ಜಯವಿಜಯರ್—ಜೀಯ! ಏೞುಂ ಜನ್ಮದೊಳನಿವಿರಿದುಂ ಕಾಲಮಗಲ್ವುದಾಗದು, ಪಗೆಗಳೆನಿಸಿಯುಮೆಂತಾನುಂ ಮೂಱುಂ ಜನ್ಮಮುಂ ಕೞಿದು ಮತ್ತಂ ನಿನ್ನಂ ನಾರ್ಪುದೆ ಲೇಸು, ಎನುತೆ ಬೇಡಿಕೊಂಡರ್. ಅದರ್ಕೆ ಸಿರಿಯರಸಂ—ತಥಾಸ್ತು, ಎಂದು ಕಳಿಪಿದಂ. ಕೇಳಯ್! ಆರುಷಿಶಾಪದ ದೂಸಱಿಂ ಆ ಜಯವಿಜಯರ್ ಮಱುವುಟ್ಟಂ ದೈತ್ಯರೆನಿಸುತೆ ಹಿರಣ್ಯಾಕ್ಷಹಿರಣ್ಯಕಶಿಪುವೆಸರಿಂ ಜನಿಸಿ ಹರಿಯೊಳ್ ವೈರದಿನೞಿದರ್. ಈಗಳವರ್ಗೆರಡನೆಯ ಜನ್ಮಂ. ಅದೆಂತೆನೆ :—ಬ್ರಹ್ಮಂಗೆ ಪೌಲಸ್ತ್ಯನೆನಿಪ ಮಾನಸಪುತ್ರನೊರ್ವನುಂಟು; ಆತನಿಂ ವಿಶ್ರವಸ್ಸು ಪುಟ್ಟಿದಂ; ಆತಂಗೆ ಮಂದಾಕಿನೀ ಕೈಕಸೆಯರೆನುತಿರ್ವರ್ ಪೆಂಡಿರೊಳರ್. ಪಿರಿಯಳ್ಗೆ ಧನದಂ ಕಿಱಿಯಳ್ಗೆ ರಾವಣ ಕುಂಭಕರ್ಣ ವಿಭೀಷಣ ಶೂರ್ಪನಖೆಯರುದ್ಭವಿಸಿದರ್. ಇಂತು ಬ್ರಹ್ಮ

ನಿಸಿ ಬಳಗಮಿೞಿದತ್ತೆನುತೆ ಮೇಲಿಂ ಮೇಲುಸಿರ್ದಂ.

ಬಾಲೆ! ಕೊಡನ ಕುವರನಿಂತು ಪೇೞ್ವುದುಂ ರಾಮಂಗೆ ದುಗುಡಮಿಮ್ಮಡಿಯಾದುದು; ಮೊಗಂ ಕಳೆಗೆಟ್ಟುದು; ಮೆಯ್ ಕಾವುಗೊಂಡುದು; ಕಿವಿಗೆ ಕಿವುಡುಂ ಕಣ್ಗೆ ಕುರಡುಮೆರಡುಂ ಹರಡಿಕೊಂಡುದು. ಈ ತೆಱನೊಳ್ ಮೂರ್ಛೆಗೆ ಸಂದ ರಾಮನೆಂತಾನುಂ ಬೇಗದಿಂ ಸೋದರರ ಶೈತ್ಯೋಪಚಾರದತ್ತಣಿಂ ತೆಪ್ಪತ್ತನಾಗೆ, ಮುನಿಪಂ ನಿರ್ವಿಣ್ಣನಾಗಿ ನೋೞ್ಪುದುಂ, ಬೆಮರ್ತ ಮೆಯ್ಯಿಂ ಮತ್ತಂ ಮತ್ತಂ ಬಿಸುಸುಯ್ದು ರಾಘವಂ ಮುನಿಗೆಂದಂ :—

ಆಃ! ನಿಕ್ಕುವಂ. ಪೊಲ್ಲದ ಕಜ್ಜಮುಂ ಪಣ್ಣಿದೆನ್ನೈಸೆ! ಲೋಕದೊಳೆನ್ನಂ ಕೂೞನೆನರೆ? ಱುಕ್ಕಟಮಾದುದೀಬೞಿಯೋೞ್ಗೆ. ಪೆಣ್ಣವಧದಿಂ ಪಾತಕದಿನಿತೊಂದು ತಿಣ್ಣಮುಂ ಪೊಱುವಡೆಂದೇಂ ಬಿದಿಮಾಡಿದನೇ! ಅಕ್ಕಟಾ! ಬ್ರಹ್ಮದ್ರೋಹಿಯಾದೆನಲಾ! ಪೋ! ಪಾೞ್ಗಿಯ್ಮೆಯುೞಲಿಂ ತುೞು. ಇಂದೀಗಳ್ ಪೞಿಗೆ ಕಾರಣಂ, ಪೊಂದಿದಾಗಳ್ ನರಕಕಾರಣಂ. ಏವೆಂ! ಮುಂತೇಂ ಬಟ್ಟೆ! ಆವ ಜನ್ಮಮಾವ ಹೋಮಮಾವ ಜಪಮಾವ ತಪಮೀದೋಷರಾಶಿಯಿನೇೞಿಲಾಟಿಪೆನಗೆ ಕೆಯ್ಯೀಗುಂ ಮುನಿಪೇೞಾ!

ಇಂತು ಮರ್ತ್ಯರಂತಿರುಮ್ಮಳದಿನುಬ್ಬಸಂಬಡುವ ರಾಜಪರಮೇಶ್ವರಂಗೆ ಬೆಳ್ನಗೆಯೊಳ್ ಬಿಂಜದೋಜನೋಜೆಯಿಂ—ಲೇಸು ಲೇಸೆಲೆ ಸೀತಾರಮಣ! ಈ ಕವಡುನಟನೆಯನಾರ್ಗೆ ತೋಱುಪಯ್! ಬ್ರಹ್ಮಹತ್ಯಂ ಗಡ! ದೋಷಂ ಗಡ! ಮೊದಲೊಳೊಮ್ಮಡಿಯುಮ್ಮದನೀಗಳಿಮ್ಮಡಿಗೆಯ್ದಂತಿರಾಡುವಯ್! ಇಂತಿದಂ ಕಾಣುತೆ ನೋಯಲ್ ಆಮುಂ ಭ್ರಾಂತರಲ್ತು. ಏಂ ಕೇಳ್ದಱಿಯೆವೆ ದಾನವರುಪಟಳಕೆ ಬಣ್ಣಂಗುಂದಿ ಬಾರ್ತೆಗೆಟ್ಟು ದೂಱಿದ ಬರ್ದಿಲರ್ಗೆ ನಾರಾಯಣಂ—ಸೈರಿಪುದು, ಸೈರಿಪುದು, ಪಂತಿದೇರಂಗೆ ರಾಮವೆಸರಿಂ ಪುಟ್ಟುವನ್ನಮೊಂದು ಸಯ್ತಿಟ್ಟು ಮರಳ್ಚಿದ ತೆಱನಂ? ಆ ಆದಿನಾರಾಯಣನಿಂತು ಮೆಯ್ವೆತ್ತು ಪುಟ್ಟಿ, ನೆವದಿಂ ಜಾನಕಿಯುಂ ಪೋಗೊಳಸಿ, ದಾನವರೊಳ್ ಪಗೆಗಟ್ಟಿ, ಕೋತಿವಡೆಯುಂ ನೆರೆಪಿ, ಕಡಲಂ ಕಟ್ಟಿ, ಕಾದಿ ಬಂಡಣದೊಳಸಿಬರಂ ಸೈಮಿನಿಗಟ್ಟಿದುದಂ ಜನಮೆ ಎಂಗುಂ. ದೆಸೆಮುಟ್ಟೆ ಪರ್ಬಿದುದು ಜಸಂ.

ಇಂತಿರೆ ಏನುಮಂ ಮಱುನುಡಿಯಲಾರ್ತನಿಲ್ಲಂ, ಎನುತೆ ಪಡಿನುಡಿದಂ.

ಅದರ್ಕೆ ಶ್ರೀರಾಘವಂ—ಮಾಂಜದುಸಿರ್ವೊಡಿದು ಬಲ್ಲರ್ಗೆ ನುಡಿ. ಎಗ್ಗರೆನರೆ ಲೋಗರಾಡರೆ ಮಡದಿಗೆಂದು ಬ್ರಹ್ಮಘಾತಂಗೆಯ್ದನೆಂದು? ಇಂತಿದಂ ಬಗೆಯಲ್ವೇಡಾ!— ಎಂಬುದುಂ;

ಮುನಿಪಂ—ಎಗ್ಗರೆಂಗೆ! ಲೋಗರಾಡುಗೆ! ಬಱಿದೂಱಂ ತಡೆಯಲಾವಂ ಸಾಲ್ವಂ! ಹರಂಗಮಂತಿರೆ ಪೞಿಗುಂ. ಪೋಕೆ! ಅಂತವಱೊಳಂ ಪಾತಕಂ ಜ್ಞಾತಮಜ್ಞಾತಮೆಂದಿರ್ವಗೆಯಕ್ಕುಂ. ಜ್ಞಾತಮಾದೊಡೆ ದೋಷಂ; ಅಜ್ಞಾತಮಾದೊಡೆ ಕಿಱಿದಱನೇನಾನುಮೊಂದು ಪ್ರಾಯಶ್ಚಿತ್ತಂ, ಎನೆ.

ಮತ್ತಂ ರಘುಪುಂಗವಂ—ಇಂತಿದು ತಗದು. ಕಿಚ್ಚನಱಿತೊಡಮಱಿಯದೊಡಂ ಕಿಚ್ಚು ಸುಡದೆ! ಇದಱನೆನ್ನಿನಱಿಯದಾದೞಿಗೆಯ್ಮೆಗಂತೊಂದು ಪರಿಹಾರಮಂ ತೋಱುತೆನ್ನನುಮಂ ಲೋಗರುಮನುದ್ಧರಿಸಲ್ವೇೞ್ಕುಮೆಂದು ಕಾಲ್ಗೆಱಗಿದಂ.

ಇಂತೆಱಗಿದ ರಘುಪುಂಗವನಂ ಮುನಿಪುಂಗವಂ ಕೂರ್ಮೆಯಿನೆತ್ತಿ ತೞ್ಕೈಸಿ—ಇನಿತೊಂದುಬ್ಬೆಗಮೆಡೆಗೊಂಡಿರೆ ತೊಡರ್ಕೇಂ? ಬೆದಕಲುಂಟೆ! ಕೆಯ್ಕೊಳ್ವುದಶ್ವಮೇಧಮಂ. ನಿನ್ನಯ ಪಿರಿಯರಿಂತು ಬೇಳ್ದು ಬೆಳ್ಪಸದಿಂ ದೆಸೆವೆಂಡಿರ್ಗೆ ಪಸದನಂಗೆಯ್ದುಂ ಬರ್ದಿಲವೆಣ್ಗಳಂ ತೊೞ್ತುಗೊಂಡರ್. ಇಂತೀಸಪ್ತತಂತುವಿಂ ಪಂಚಪಾತಕಂಗಳು ಮೊರ್ವೊದಲೊಳೆ ಪಡಲಿಡುಗುಂ; ಕ್ಷಾಮಡಾಮರಂಗಳುಂ ಬೇರುಡಿದು ಪಾೞಿಪ್ಪೋಕುಂ ಪೊೞಲೊಳ್; ನಿನ್ನ ಬಗೆಯ ಸಂದೆಗಮುಂ ಪೆಡಂಮೆಟ್ಟುಗುಂ; ಲೋಗರ್ಗೆ ಕಲ್ಯಾಣಮುಮೊಡರ್ಗುಂ; ಅದಱಿಂದೆ ನಿನ್ನಿಷ್ಟಾರ್ಥಮುಂ ನೆರೆಯಕುಮೆಂದು ಬೋಧಿಸಿದಂ.

ಆಗಳ್ ರಾಘವಂ—ಅಕ್ಕುಮಾನುಂ ತಗೆಬಗೆಯೊಳೊಪ್ಪುವೆಂ. ಆದೊಡಂ ಜನ್ನಕ್ಕೆ ಪೇೞ್ದ ಕುದುರೆಯ ಲಕ್ಕಣಮಾವುದೊ? ವಿಧಿಯೆಂತುಟೊ? ಮೇಣೆಮ್ಮಂದಿಗರ್ಗೆ ಸಾಧ್ಯಮೊ? ಇವಱೊಳ್ಮನಮೆಣಿಕೆಗೊಳ್ವುದು, ಎಂಬುದುಂ;

ಮುನಿ ತಾಂ—ನಿಮಗಲ್ಲ ಮೇಣಾರ್ಗೆ ಸಾಧ್ಯಂ? ನೆರೆರಾಯರ ನೆರಂ, ಪಡಿಬಲದ ಬಲಂ, ಗುರುಪಿರಿಯರೊಲ್ಮೆ, ಐಸಿರಿಯ ಪೆರ್ಮೆ,

ಬಂಧುಗಳ ನಲ್ಮೆ ಪೆಱರ್ಗಾರ್ಗೊಳವು ? ಇವಱೊಳ್ ಸಂಕೆವೇಡಂ. ಕುದುರೆಯೊಳೇಂ? ಮೆಯ್ಯೊಳ್ ಬೆಳ್ಪು, ಮೊಗದೊಳ್ ಕೆಂಕಂ, ಕೊಡಂಕೆಯೊಳ್ ಕರ್ಪು, ಬಾಲದೊಳ್ ಪೊಂಬಣ್ಣಮೊಪ್ಪಿರೆ ಮೆಯ್ಗಣ್ಣಿನ ಕುದುರೆಯೊಂದಂ ಪೋಲ್ಪುದೈಸೆ. ನಿನಗೇಂ ಧೊಡ್ಡಿತಯ್ ! ವಿಧಿಯಿಂತುಟು. ಬೇಸಗೆಯ ಹುಣ್ಣಮೆಯೊಳಂತಪ್ಪ ಹಯಮನರ್ಚಿಸಿ ಹಣೆಯೊಳ್ ಬಱುವಿರುದಂ ತನ್ನಗ್ಗಳಿಕೆಯುಂ ಬರೆದೋಲೆಯುಂ ಬಿಗಿದು ನಾಡೊಳೊರ್ಕಾಲಂ ಯಥೇಷ್ಟಂ ತೊಱಲಲ್ಕೆ ಬಿಡುವುದು ; ಎಂತೆಂತು ಕುದುರೆಯು ಬಟ್ಟೆಯುಂತಂತು ಬೆಂಬತ್ತುವುದು ಕಾಪಿನ ಭಟರ್ ; ಬಲ್ಪುಳ್ಳರ್ ಕಟ್ಟಿದೊಡೆ ಮೊನೆಯೊಳ್ ಮಾರ್ಕೊಳ್ವುದುಂ, ಸೋಲ್ತು ಕಪ್ಪಮನಿತ್ತೊಡೆ ಕೆಯ್ಕೊಳ್ವುದುಂ, ಕಾವಲರ್ಗೆ ನೆಱಿಗುಂ ; ಎನ್ನೆವರಮಶ್ವಮಿಳೆಯೊಳ್ ಸಂಚರಿಕುಮನ್ನೆವರಂ ಯಜಮಾನಂ ಮೃಗಶೃಂಗಧರಂ ನವನೀತವಿಲಿಪ್ತ ಸುಗಾತ್ರಂ ಬ್ರಹ್ಮಚರ್ಯವ್ರತಮನಪ್ಪುಕೆಯ್ದು, ನಮೆವ ದೀನಾಂಧಬಧಿರರಂ ದಾನಧರ್ಮಂಗಳಿಂ ಪಾಲಿಸುತುಂ, ಬ್ರಾಹ್ಮಣರಂ ಭೋಜನದಿಂ ಸಂತುಷ್ಟಿಗೊಳಿಸುತುಂ, ಕಾಣಲ್ಕೆಂದು ಬರ್ಪ ಪುರದ ಮನ್ನೆಯರಂ ಮನ್ನಿಸುತುಂ, ಐದೆಯರನೆಯ್ದೆ ಪೂಜಿಸುತುಂ, ಕಾಲಮಂ ಸಮೆಯಲಕ್ಕುಂ; ಕಡೆಯೊಳ್ ಯಥಾವಿಧಿ ಯಜ್ಞಪರಿಸಮಾಪ್ತಿಯುಂ ಗೆಯ್ದು ಬತಮನುಱುವುದೈಸೆ. ಇಂತೀಜನ್ನಮುಂ ಬೇಳ್ದು ಲೋಕಮುಂ ಕಾಯುಯ್ ; ಮೇಣ್ ನಿನಗಕ್ಕೆಮ ಸರ್ವಂ ಮಂಗಳಂ !

ಎಂಬಲ್ಲಿಗೆ ಶ್ರೀ ರಾಮಾಶ್ವಮೇಧದೊಳ್
ಯಜ್ಞೋಪದೇಶಂ ಎಂಬ ತೃತೀಯಾಶ್ವಾಸಂ ಸಂಪೂರ್ಣಂ

---

## ಚತುರ್ಥಾಶ್ವಾಸಂ

## — ಗರ್ಭಧಾರಣಂ —

ಪೆಣ್ಮಣಿ ಕೇಳ ! ಈವುಪದೇಶಂ ರಾಮಂಗಮೊಡಂಬಟ್ಟುದು ; ವಸಿಷ್ಠಂಗಂ ಸರಿವಟ್ಟುದು ; ಸೋದರರ್ಗಂ ಮನಂಗೊಂಡುದು. ಒಡನೆಯೆ ಸರಯೂತೀರದೊಳ್ ಮುನಿ ತೋಱಿದೆಡೆಯನಾಯ್ದು ಪುರೋ

ಧೋನುಮತದಿಂ ನಾಲ್ಕಾವುದದಳತೆಯೊಳ್ ಯಾಗಶಾಲೆಯಂ ನೇರ್ಪಡಿಸಿ ಕಂಬೆಯಂ ಬಲಿದು, ಹಂದರವೆತ್ತಿ, ಕೊಟ್ಟಾರವಮಂ ಸಮೆದು, ವೇದಿಯಂ ಸಮಕಟ್ಟಿ, ತಕ್ಕೆಡೆಯೊಳ್ ಕೊಂಡಮಂ ಪಣ್ಣಿ ಯಜ್ಞೀಯಂಗಳಂ ನೆರೆಯಿಸುತಿರ್ದರ್.

ಆಗಡೆ ವಶಿಷ್ಠಶಿಷ್ಯರ್ ಪೋಗಿ ಮುನಿಸಂದೋಹಮಂ ಕರೆವುದುಂ ; ಶ್ರೀರಾಮಚಂದ್ರದರ್ಶನಲಾಲಸರ್ ನಾರದ ಪರ್ವತ ಕಪಿಲ ಯಾಜ್ಞ್ಯವಲ್ಕ್ಯ ಸಂವರ್ತಾದಿಋಷಿಗಳ್ ನಿಜಾಶ್ರಮಂಗಳಿಂ ತಳರ್ದು ತಳ್ವದೆ ಕೋಸಲೆಗೆ ನಡೆತಂದು ರಾಯಂಗೆ ಕಾಣಿಸಿಕೊಂಡರ್.

ಇಂತು ಬಿಜಯಂಗೆಯ್ದ ಮುನಿವರ್ಗಮನರ್ಘ್ಯಪಾದ್ಯಾಸನಾದ್ಯುಪಚಾರಂಗಳಿಂ ಮನ್ನಿಸಿ ತಪೋವೃದ್ಧಿಯಂ ಕೇಳ್ದು ಗೋಪ್ರದಾನಾದಿದಾನಂಗಳಿಂ ಸತ್ಕರಿಸಿದಂ. ಮತ್ತಂ ಹರ್ಷಚಿತ್ತರಾದಾತಪಸಿಗಳುಂ ವರ್ಣಾಶ್ರಮಧರ್ಮಂಗಳಂ ರಾಘವಂಗೆ ನಿರವಿಸುತುಮಿರ್ದರ್. ಆ ಪ್ರಸ್ತಾವದೊಳ್—

ಮಾಮರನೆಳದಳಿರ ರಸಮಂ ಪಿಟಿದು ಕಳಕಂಠನ ಕಂಠನಾಳಕ್ಕೆಯಿೞಿದುಬ್ಬಸಮಂ ಕಳೆದು ಕಲನಾದಮಂ ಪೆರ್ಚಿಸಿಯುಂ, ಅರನೇಱಲ ದೋರೆವಣ್ಣಂ ತೇದು ನಕ್ಕಿಸುತರಗಿಳಿಯ ನಾಲಗೆಯಂ ತೆಳ್ಪನಾಗಿಸಿ ತೊದಳ್ನುಡಿಯಂ ತಿರ್ದಿಯುಂ, ಪುಷ್ಪಧೂಳಿಯಂ ಲೆಪ್ಪಂಬಱದಿರ್ಮುತ್ತಿಯ ಸುರಯಿಯ ಪೊಸಬಂಡಸೊಡಲ್ಗಿತ್ತು ಮಱದುಂಬಿಗಳ್ಗೆ ಸಂಪಗೆಯತ್ತಣಿನೊದವಿದ ಶಿರೋಭ್ರಮಣಮನಱಯಿಸಿಯುಂ, ಬಸಂತಂ ಬೆಜ್ಜನೆನೆ ಮೆಯ್ದೋಱಲೊಡಂ ; ಅಂದು ಕೋಡುಕೋಡಿಂದೋಡಿ ಮಲಯಮಂ ಮಱಗೊಂಡ ಪವನನೀಗಳತ್ತಣಿಂ ಪೊಱಮಟ್ಟು ಮೆಲ್ಲಮೆಲ್ಲ ನೆಡೆಯೆಡೆಯ ಬನಬನಮಂ ಪುಗುತಂದು ಹೊಂಚಿ ಮುಂಚಿ ಕೆಳೆಯಂಗೆ ನೆರವಾದನೆನೆ ದಕ್ಷಿಣಾನಿಲಂ ಮಂದಂ ಮಂದಂ ವಹಿಸುತ್ತಿರ್ಕುಂ ; ಫಲವೃಕ್ಷಂಗಳೆಲ್ಲಂ ಕಾಯ್ಕುಸುರ್ಗಾಯ್ ಪಣ್ ದೋರೆವಣ್ ತನಿವಣ್ಗಳಿಂ ದೆಸೆಯೆಯುಂ, ಗಿಡುಗಳೆಲ್ಲಂ ತಳಿರ್ಚೆಂದಳಿರೆಳದಳಿರೆಲೆ ಬೆಳ್ಳೆಲೆ ಪಸುರೆಲೆ ಪಣ್ಣೆಲೆಗಳಿಂ ರಂಜಿಸೆಯುಂ, ಪೂವಳ್ಳಿಗಳ್ ನನೆ ಕೊನೆ ಮುಗುಳರೆಮುಗುಳ್ ಬಿರಿಮುಗುಳುಳ್ಳಲರ್ದ ಪೊಸಮಲರ್ಗಳಿಂದೆ ಸೊಗಯಿಸೆಯುಂ, ಮನೋಹರಮಾಯ್ತು ಪೊಸಸುಗ್ಗಿ ; ಬಿರಯಿಗಳೆರ್ದೆವಡಿ ಬಿಜ್ಜನೆ ಬಿರಿಯೆ,

ಘಟವಿತಾನಕ್ಕೆ ಪೊಸಬೇಟದ ಸೊಂಪು ನೆರೆಯೆ, ಕುಲಟಾಂಗನೆಯರ್ಗೆ ಜವ್ವನದೇೞ್ಗೆ ಮೆಱೆಯೆ, ಕಾವನೆತ್ತಂ ಮೆಯ್ವೋಱದೆ ಸಂಚರಿಸಲ್ತೊಡಂಗಿದಂ ; ರಾಘವನ ಪ್ರತಾಪದಂತಿರೆ ನೇಸಱ ಕಾಯ್ಪುಂ ಪೆರ್ಚಿದುದು ; ಪುರಲಕ್ಷ್ಮಿಯೊಡನೆ ವನಲಕ್ಷ್ಮಿಯು ಕೆಳೆತನಂ ಪಿರಿದಾಯ್ತು.

ಇಂತು ಬಸಂತಂಗೆ ನಡುಜವ್ವನಂ ಬರೆವರೆ ಕಾಣುತೆ ವಸಿಷ್ಠಂ ರಾಘವಂಗೆ—ಇದೀಗಳ್ ಸಮಯಂ ಯಜ್ಞೀಯಾಶ್ವಮಂ ಪೂಜಿಸಲ್ಕೆ, ದಿಗ್ದೇಶಂಗಳಿಂ ಕಪ್ಪಕಾಣ್ಕೆಗಳಂ ತರಲ್ಕೆ, ನೆರೆದ ವಿಪ್ರಸಂದೋಹಮಂ ದಾನಂಗಳಿಂ ಸಮ್ಮಾನಿಸಲ್ಕೆ. ಅಂತಱಿಂ ನೀಂ ಪೊನ್ನಸೀತೆವೆರಸು ವ್ರತಮನಪ್ಪುಕೆಯ್ವುದೆಂದೆಚ್ಚಱಿಸಿದಂ.

ಮನೋರಮೆ—ರಮಣ ! ಇಂತಿದೇಂ ಪೊನ್ನ ಸೀತೆಯೆಂಬಯ್ ? ರನ್ನ ಸೀತೆಯೆತ್ತವೋದಳ್ ? ಜನಕಂ ಜನಕಂ ಕರೆದುಯ್ದಿರ್ದನೇಂ ? ಅಂತಿರೆಯುಂ ಮಗುೞ್ದುಂ ಕರೆಯಿಸಿ ಕೊಳ್ವುದಲ್ತೆ ನೋಂಪಿಗೆ.

ಮುದ್ದಣಂ—ಓ ! ಮಱತೆನೀಯಿರವಂ ಪೇೞಲ್ಕೆ. ಸಂದೆಯಂ ಸಾಜಂ. ಕೇಳ ! ರಾಘವಂ ರಾವಣಕುಂಭಕರ್ಣಾದ್ಯರಂ ಮಱುವುಟ್ಟಿಂ ಬರ್ಪುದೆಂದಟ್ಟಿ ದೇವರ್ಕಳ ಬಂದಿಯಂ ಬಿಡಿಸಿ ಲಂಕಾಧಿಪತ್ಯಮಂ ಶರಣಂಗೊಪ್ಪಿಸಿ ತಾಂ ಸೀತಾಸಮೇತಂ ಅಯೋಧ್ಯೆಯೊಳರಸುಗೆಯ್ಯುತಿರ್ದನೆಂಬುದನಾಗಳೆ ಕೇಳ್ದಿರ್ಪೆಯಲ್ತೆ ! ಇಂತು ಸಾಸಿರಗಾಲಂ ಕೞಿದೊಡಮಿವರೊಳ್ ಸಂತಾನಂ ಪುಟ್ಟುತಿಲ್ಲಂ. ಎನಿತ್ತೆಸಿರಿಯಿರ್ದೊಡಂ ಮಕ್ಕಳಿಲ್ಲದನ ಬಾೞ್ಕೆಯದೊಂದು ಬಾೞ್ಕೆಯೆ ! ನಿಡುಮರನಂತಿರ್ದೊಡದೊಂದಿರವೆ ! ನೀರೊಳಿರ್ದುಂ ಮೀಂಗಳ್ ಕಾಡೊಳಿರ್ದುಂ ಮಿಗಂಗಳ್ ಬಾನೊಳಿರ್ದುಂ ಖಗಂಗಳ್ ಮಱಿಗಳನಾರಯ್ಯುತುಂ ಸೊಗಂ ಬಾೞ್ವವೆನೆ, ನಾಡೊಳ್ ಪುಟ್ಟಿಯುಂ ಮಾನವನೆನಿಸಿಯುಂ ಮಕ್ಕಳಂ ಪೆಱದವಂ ಪಾಪಿಯಲ್ತೆ ! ಪೆಱಂಗಿರ್ಕುಮೆ ಪೇೞ್ವೊಡಿನಿತೊಂದುಮ್ಮಳಂ ? ಪುತ್ರಹೀನರ್ಗೆ ಬದ್ಧಮಿರ್ಕುಂ. ಇವರೊಳಂ ಪುರುಷರತ್ತಣಿಂ ಸ್ತ್ರೀಯರ್ಗಧಿಕಮೀದುಗುಡಂ. ದಿನದೂೞಿಗಂಗಳಂತದಂ ಮಱೆಗೆಯ್ವೆಡೆಯೊಳ್ ನೆರೆವಂಡಿರ ಸುಖಗೋಷ್ಠಿಗಳ್ ನಾರಿಯರೊಳ್ ಮೊದಲಿಕ್ಕುಗುಂ.

ಸೀತೆಯೊರ್ವೆ ಕನ್ನೆವಾಡದ ನೆಲೆವನೆಯ ಮೊಗಸಾಲೆಯೊಳ್ ತೂಗುಂಮಂಚಮನೇಱಿ ಚಲ್ಲದಿಂ ಕುಳ್ಳಿರ್ದು ತಾನುಂ ನಲ್ಗೆಳದಿ ಚಂದ್ರ

ಮಾತಿಯುಂ ಸಲ್ಲಾಪಂಗೊಳುತಿರೆಯಿರೆ; ಕಟ್ಟೆದಿರೊಳೊಂದು ಚಟಕೆ ನೀಡದೊಳಿರ್ದುಂ ಕಿಱುಮಱಿಯುಂ ಕುಟುಂಕಿತ್ತೆಱಂಕೆಯೊಳ್ ಪುದುಗಿಸಿಯುಂ, ಕೊಕ್ಕಿಂ ಮೆಲ್ದುಪ್ಪುೞನೊಸೆದು ನೆಸೆದುಂ ಲಲ್ಲೆಗೆಯ್ವುದಂ ನಟ್ಟಾಲಿಯೊಳಭೀಕ್ಷಿಸಿ ಮಕ್ಕಳ ಬಯಕೆಯಿಂ ಜಾನಕಿ ಸಖಿಗಿಂತೆಂದಳ್ :—ಮಿತ್ರೆ ನೋಡೆ! ನೋಡೆ! ನೀಡುಂ ನೀಡದ ಪಕ್ಕಿಯುಮೆನ್ನಂ ಬಂಜೆಯೆನುತೇಡಿಸುತಿರೆನ್ನಿದಿರೊಳ್ ಪಿಳ್ಳೆಯುಂ ಮುದ್ದುಗೆಯ್ಗುಂ. ಇಂತಿರ್ಪಿನಮಿನ್ನೊಲ್ಲೆನೀಯೆಡೆಯಂ. ಎತ್ತಾನುಂ ಪೆಱತೊಂದೆಡೆಗೆ ಪೋಪಂ. ಅಲಸುವೆನೀನೋಟಕ್ಕೆ. ಒ! ಈ ಪಕ್ಕಿಯನೊಂದನೆ ಪಗೆವೆನೇತರ್ಕೆಯೋ ನಿರ್ನೆರಂ! ಎನ್ನನ್ನರ್ಗೆ ಲೋಕಮೆ ಪಗೆ! ಪಲನಾತಿನೇನಕ್ಕುಂ? ನಿಕ್ಕುವಂ ಮಕ್ಕಳಂ ಪಡೆದೋವಲ್ಕಾಂ ನೋಂತೆನಿಲ್ಲಕ್ಕುಂ. ಎಳವರೆಯದೊಳ್ ನಲ್ಗೂಸಂ ಪೆತ್ತು ಬಾಲ ಕೇಳಿಯುಂ ಕಣ್ದಣಿಯೆ ಕಂಡು ಸಂಸಾರದ ಸಾರಮಿದೆನುತೆ ಸಂತಸಂಬಡುವ ಪೆಣ್ಗಳೆ ಧನ್ಯೆಯರಲ್ತೆ! ''ಬಂದಳಿವಳಿವಳ್! ಬಂಜೆ! ಕಂದನಂ ಪಿಡಿಯಲ್ಕೀಯದಿರ್! ಬಡವಕ್ಕುಂ; ಕಿಟ್ಟವಿಡದಿರ್! ಕಂದಿ ಬಸವೞಿಗುಂ; ನೋಡವಿಡದಿರ್! ಕಣ್ ಕೊಂಕುಗುಂ; ನುಡಿಯಿಸಲಿಡೆಗುಡದಿರ್! ನುಡಿಯೊಗ್ಗುಗುಂ.'' ಎಂಬ ನಾಡ ಪೆಣ್ಗಳ ಬಿಱುನುಡಿಗೆ ತಡೆದುಂ ಬಾಳ್ವ ವಂಧ್ಯೆಯರೆ ಜೀವನ್ಮೃತೆಯರ್ ವಲಂ. ಸಖೀ! ಮಾಂಜದುಸಿರ್; ಕುಲಮಂ ವರ್ಧಿಪ ಕಂದನಂ ಪಡೆದು ತೊರೆದ ಮೊಲೆಯೂಡಿ ತೊಟ್ಟಿಲೊಳಿಟ್ಟು ಪಾಡಿ ತೂಗಿ ಕೂಸು ನಿದ್ದೆವೋಪುದುಂ ತಾನುಮರೆಗೞಿಗೆ ಕೆಲದೊಳ್ ಮಂಡಿಸಿ ಬಾಲಲೀಲೆಯಂ ನೆನೆನೆನೆದು ಮತ್ತಂ ಕುವರನೆಚ್ಚತ್ತನಾಗೆ ಪಿಡಿದೆತ್ತಿ ಮುಂಡಾಡಿಯುಂ ಮುದ್ದಿಸಿಯುಂ ತೊದಳ್ನುಡಿಯೊಳ್ ನುಡಿಸಿಯುಂ ಕಿಱುನಗೆಯೊಳ್ ನಗಿಸಿಯುಂ ಪೊಸಬಿನದದಿನಾಡಿಸಿಯುಂ ಮನದ ಬೇಸಱಂ ಕಳೆವೊಂದು ಸೈಪೆನ್ನೊಳೆಂದಿಂಗಾದಪುದೋ! ಅಂತು ಮಲ್ಲದೆಯುಂ :—ಅಬ್ಬೆ! ಪಿಡಿ ನಡೆದಪೆನೆನುತುಮೆರಟ್ಮೂಱಡಿಯಿಡುತೆ ಪೊಂಗಿ ತಾಯ ನಿಡುದೋಳಂ ತಾಂಗಿ ಮೆಲ್ಲನೊತ್ತಿನೊಳಂಕಮನೇಱಿ ನುಣ್ಗಲ್ಲಮಂ ಪಿಡಿದಲುಗಿಸಿ ಈಗಳ್ ನಡೆಗಲ್ತೆನೆನುತೆ ಕೇಳಿಪ ಕಂದನೆಂದಿಂಗೆ ಪುಟ್ಟುವನೋ! ಆಡುತಾಡುತೆ ನೆವಮಿಲ್ಲದೆ ನಗುತೆ ಪರಿದು ತಾಯ್ತಂದೆವಿರ್ ಮುಂತಿರೆ ಬೆನ್ನನೆನಾರ್ದಯ್ಯನ ಕಣ್ಗಳಂ ಕಿಱುಗೆಯ್ಗಳಿಂ ಮುಚ್ಚುತಾನಾರೆಂದು ಕೇಳ್ವ,

ಮಾತೆಯ ಮೇಲುದದ ಸೆಱಂಗಿನೊಳ್ ತಲೆಯಂ ಬಯ್ತು ಆಂ ಗುಮ್ಮಂ
ಬಂಗುವೆನಲ್ಲದೊಡೆ ತನಿವಣ್ಣನೀಯೆಮೆನಗೆನುತುಂ ಕಾಡುವ, ಪೆಱ
ರೊರ್ವರ್ ತಂದೆಯ ಪಿಂದೆಸೆಯೊಳಡಂಗಿ ತಾನೆಲ್ಲಿರ್ಪೆನೆನುತಬ್ಬೆಯುಂ
ಕೇಳ್ವ, ಮತ್ತಮುದೊರ್ವರ್ ಕೈಪಿಡಿಯುಂ ಲೀಲೆಯಿಂ ದಿಟ್ಟಿಸಿ ಮಾರ್ಪೊಳೆವ
ಮುದ್ದುಮೊಗಮಂ ಪಡಿಗೂಸುಗೆತ್ತು ತನಗೆ ತಂದೀವುದೆಂದು ಚಲದಿಂ
ಮಱುಗುವ, ಮಗುೞ್ಚೊರ್ವರ್ ತಾಯ್ ಪೊಯ್ದಳೆಂದು ತಾತಂಗೆ
ತೋಱಿಪ, ತಾತನಬ್ಬರಿಸೆ ತಾಯೊಳ್ ದೂಱುವ, ನಿರ್ನೆರಂ ಜಱುಚುವ
ಪಱುಚಾಡಿ ಬೞಲ್ವ, ಬೞಲ್ದು ಮಱುಗುವ, ಮಱುಗಿ ಪರಿತಂದು
ಅಬ್ಬೆಯ ಕಾಲಂ ಬಿಗಿವಿಡಿವ, ಬಿಗಿವಿಡಿದು ಬೆಣ್ಣೆಯನೀವುದೆಂದು ಮುಂ
ಸೆಱಗಂ ಸೆಳೆವ, ಇಂತು ತನುಮನಮನಪ್ಪುಕೆಯ್ವ ದಿವ್ಯಸುಂದರವಿಗ್ರಹಂ
ಕುಮಾರನೆನಗಪ್ಪನೆಂದಿಂಗೋ ಸಖೀ !

ಮುದ್ದಣಂ —ಪ್ರಾಣೇಶ್ವರೀ ! ಇಂತು ತನಗೆ ಮಕ್ಕಳ್ ಪುಟ್ಟುತಿ
ರ್ಪಿಂದೊಂದು ಪಂಬಲ್ ಪಿರಿದಾಗೆ, ಗೞಿಗೆಗೞಿಗೆಗೆ ಬಾಡಿ ಬೆಂಡಾಗಿ,
ಮತ್ತಂ ಕಂಡರಿಸಿದ ಬೆಳ್ಮರನೊಂದು ಪಾವೆಗೆನಗೇಕೆಸಿಂಗರಮೆನಗೇತರ್ಕೆ
ಭೋಜನಮೆನುತಿವಂ ಬೇಸಱಿನುೞಿದು ಆರೊಳಮೇನುಮನಾಡದೆ
ನೋಡದೆ ಸಜ್ಜೆವನೆಗಾಗಿ ಪೋಪುದುಂ ; ಚಂದ್ರಮತಿಯುಂ ನಲ್ವಾತಿನುಪ
ಚರಿಸುತು ಮಾರಯ್ಯುತುಂ ಬೞಿವೋದಳ್.

ದೇವಿಯರಿನಿತೊಂದಿರವನೀಕ್ಷಿಸಿ ತೊಟ್ಟನೆ ದೂತಿಯೊರ್ವಳ್
ಬಳರ್ದು ತೞಮೞಂಗೊಂಡೋಲಗಂ ಪರೆಯೆ, ಸಚಿವಂಬೆರಸು ಮಂತ
ಣಂಗೊಳ್ವ ರಾಯನೆಡೆಗೆಯ್ತಂದು—ಜೀಯ ! ಏನೆಂದಱಿಯೆನಕ್ಕನಿಂದು
ಪೆಟ್ಟುಬ್ಬೆಗದೊಳಿರ್ಕುಂ ; ಎನ್ನೊಳೆಂದಳಿಲ್ಲ. ನೆಟ್ಟನೆ ಸಜ್ಜೆವನೆಗೆ ಪೋ
ಪುದುಂ, ಚಂದ್ರಮತಿ ತಾನುಂ ಬಳ್ಳುಗುಡದಿಂ ಬೆಂಗೊಂಡೆಯ್ದಿದಳ್.
ನೀವರೆ ದೇವಿಯರಿರವನಱಿಯಲಕ್ಕುಮೆಂದು ಬಿನ್ನವಿಸೆ.

ಶ್ರೀರಾಮಚಂದ್ರಮಂ ದಿಮ್ಮನೆೞ್ದು ದಿಗ್ಭ್ರಮೆಯಿಂ ಕಣ್ಗೆಟ್ಟು
ಚಿಂತಾಪರವಶತೆಯಿಂ ನಡೆಗಂಬಂ ಬರ್ಪುದೆನೆ ಬಂದು ಪೆಂಡವಾಸಮಂ
ಪುಗುತಂದು ರಾಣಿಯುಂ ಪತ್ತೆಸಾರ್ದು ಇದಿರೇೞ್ವಳಂ ಮಾಣಿಸಿ ತಾನು
ಮರ್ಧಾಸನಂಗೊಂಡಿಂತು ಬೆಸಗೊಂಡಂ :—

ದೇವೀ ! ಕಡಲ ಶುಕ್ತಿಯಿಂ ಜಗುೞ್ದ ನುಣ್ಮುತ್ತುಗಳನುಂಡ

ಮೀಂಗಳೀಗಳುಗುಬ್ಬುವಿಂತೆನೆ ನಿನ್ನೀಕಡೆಗಣ್ಗಳೊಳಿರ್ಕಡೆಯೊಳಂ ಪರಂ ಪರೆಯಿಂ ಪನಿಪನಿತು ಸುರಿವಶ್ರುಧಾರೆಯಿರವಿದೇಂ ಪೇೞ! ಅಂತು ಸುರಿದುಂ ಅಂಜನವಿಮಿಶ್ರಿತಾಶ್ರುಧಾರೆಯಿದು ತೆಳ್ಗದಂಪಿನೊಳ್ ರನ್ನಗನ್ನಡಿಗೆ ಜೀವರೇಖೆಯೆನೆ ಬರೆದ ನೀಲರೇಖೆಯ ಪಾಂಗಿನೊಳೊಪ್ಪಿಯುಮೆನ್ನೆರ್ದೆಗೊಂದು ಕೃಷ್ಣಶಲಾಕೆಯೆಂಬೊಲ್ ಪರಿಣಮಿಕುಮಿಂತೇಂ ಕಾಂತೆ! ಇಂದುಮುಖೀ! ಇಂದೀಸಿರಿಮೊಗಂ ಪಗಲ್ಗಂಡ ಪೆಱೆಯಂತಿರೆಕಳೆಗುಂದಿದತ್ತೇಕೆ? ಮತ್ತಂ ಮತ್ತಗಜಕುಂಭಮಂಡಲಕ್ಕೆ ದೊರೆವರ್ಪೀ ಸುದೃಢಪೀನಪಯೋಧರಂಗಳ್ಗೀ ತೆಱನ ಕಂಪನಮೇತರ್ಕಾಯ್ತು? ನಿನ್ನೀ ಪೆಱೆನೊಸಲೊಳಿಟ್ಟ ಮೃಗಮದತಿಲಕಮುಡೆಡೆಗಿಡುವಿನಂ ಮೃಗಲಾಂಛನಮೆನಲ್ಕೆಸೆದುಮೆನ್ನ ಮನಕ್ಕೊಂದು ಲಾಂಛನಮನಾಗಿಪುದಿದೇತಱ ಪರಿ ರಮಣಿ? ಅಂತುಮಲ್ಲದೆಯುಂ ನಿನ್ನೀಕಪೋಲದೊಳ್ ಬರೆದ ಮಕರಿಕಾಚಿತ್ರಪತ್ರಮಿದು ಬಗೆಗೆಟ್ಟರ್ಪಿನಮೆನಗಂ ಬಗೆಗಿಡುವುದಿನಿತೊಂದುಮ್ಮಳಮೇಂ! ನಿನ್ನೀಪದಕಮಳಮೊಂದಿನಂತಿರೆ ಪೊೞ್ತಡೆಯ ನೇಸಱಿಳೆಗಿನ ಪುಂಡರೀಕದಂತಲತೆಗೆಯ ಸಿಂಗರಮನೊಂದಿರ್ಕುಮಿಲ್ಲಮಿದೇಂ? ನುಡಿಯ! ನುಯ್ ಎಲರ್ಗೆ ಕಂಪುದೋಱದಿದೇಕೆ? ಗುಬ್ಬಿಗಂಕಣಮೇಕೆಯೊ ಕೆಲದೊಳೊತ್ತಿರ್ಕುಂ, ಕಟಿಲೊಳೇಂ ಪಗೆ? ಅಂಬರಂ ಮಲಿನಮಿದೇಂ? ಸೀತೆ! ನಿನಗೀತೆಱದ ದುಗುಡಂ ತಲೆದೋಱಿತೆಂತು? ಎನ್ನಿಂ ಪುಟ್ಟಿತ್ತೊ, ನಿನ್ನ ಪರಿಜನರಂತೇಂ ಪೊಲ್ಲದ ಕಜ್ಜಮಂ ತಗುಳ್ಚಿಲ್ಲಾಡುದೊ? ಮೆಯ್ಯೊಳ್ ಸಲ್ಲದ ಬೇನೆಯುದಾಗಿರೆ ತನ್ನಿಂ ತಾನೆ ಮನಕ್ಕೆ ಬೇವಸಮಾಯ್ತೇ?† ಅತ್ತೆವಿರೇಂ ಬಯ್ದರೆ? ಎನ್ನೊತ್ತಿನ ಸಹಜಾತರಂತುಟಣಕಿಸೆ ನಿನಗಾದತ್ತೆ ವಿಷಾದಂ? ದೂಸಱ ದೆತ್ತಣಿನಾಯ್ತುರಸಿ ನಿನಗೆ ಸರಸಿರುಹಾಕ್ಷೀ!

---

† ಕವಿಯು ತನ್ನ ಈ ಗ್ರಂಥವು ಪದ್ಯಗಂಧಿಯ ಗದ್ಯ ಗ್ರಂಥವೆಂಬ ಭಾವವನ್ನು ತೋರಿಸಲು ಪೂರ್ಣಪದ್ಯಗಳನ್ನೂ, ಪದ್ಯಭಾಗಗಳನ್ನೂ ಇದು ಹೃದ್ಯವಾದ ಗದ್ಯವಾದುದರಿಂದ, ಗದ್ಯವಾಗಿಯೇ ಅನೇಕಕಡೆ ಬರೆದಿದ್ದಾನೆ. ಅವನ್ನು † ಈ ಗುರಿತಿನಿಂದ ಮೊದಲುಮಾಡಿ ತೋರಿಸಿದೆ. ಮೇಲಿನದು ಕಂದಪದ್ಯ.

ಇಂತು ನಲ್ಲಳ ಕಟಾಕ್ಷದತ್ತಣಿಂ ಬಸಿವ ಕವೋಷ್ಣಬಾಷ್ಪವಾರಿಯಂ ತನ್ನುತ್ತರಿಗೆಯ ಕಿಱುಸೆಱಂಗಿನಿಂ ತೊಡೆದುಂ, ನಿಟಿಲತಟದೊಳುಯ್ಯಲಾಡುವ ಮುಂಗುರುಳನುಗುರ್ಗೊನೆಯಿಂ ತಿರ್ದಿಯುಂ, ಕೆಲಕ್ಕೊಂದಿದೆಕ್ಕಸರಮಂ ಸೈತು ನೇವರಿಸಿಯುಂ, ಅರೆವೆಱಗಲ್ಲಮನಲುಗಿಯುಂ ಮೆಲ್ನುಡಿಯಿನಾರಯ್ವ ಜೀವಿತೇಶನ ನುಡಿಗೆ ಪಡಿನುಡಿಗುಟ್ಟಿಯುಂ, ನುಡಿಯದಿರೆಯುಮಾಱದೆ ಕಾಂತೆ ಕೆಲನ ಕೆಳದಿಯುಂ ಮಾಲಿಪಂದವಳ್ —ಜೀಯ ! ಮಱವೊಕ್ಕರ್ಗೆ ಸೊಗಮನೀವ ಕಲ್ಪಾಂಘ್ರಿಪನಂತಿರೆ ನೀಂ ಬೞಿಯೊಳಿರೆ ದೇವಿಯರ್ಗೆ ಪೆಱತಾವುದುಂ ಮನಕೆ ನೋವಲ್ತು ; ಮಕ್ಕಳಂ ಪೆತ್ತೋವ ಸೈಪುತನ್ನೊಳಿನ್ನು ಸಾಯ್ತಿಲ್ಲಮೆಂಬೊಂದುಬ್ಬೆಗಮೆಂದಾನಱಿವೆಂ. ಪೆಣ್ಗಳ್ಗಿದು ಸಾಜಮೆ, ಎಂದಳ್.

ಮುದ್ದಣಂ — ಬಾಲೆ ! ಚಂದ್ರಮತಿಯಿಂತೆಂಬುದುಂ ರಘುಪ್ರವರನುಂ ಮನಮಱುಗಿ ಇನಿಸುಂ ಪೊೞ್ತು ಜಾನಿಸಿ ಬಗೆಯಱಿತು ಮತ್ತಂ ನಿಜಕಾಂತೆಗೆ—ರಮಣೀ ! ನಿರ್ನೆರಂ ಮಱುಗಲೇನಕ್ಕುಂ ? ಇಂತಿವೆಲ್ಲಂ ವಿಧಿವಶಮಲ್ತೆ ! ದೈವಮೊಂದು ಕಣ್ದೆಱೆಯೆ ಗುರುಜನಮನುಗ್ರಹಿಸೆ ಪಿರಿಯರ್ ಪರಸೆ ದೊಡ್ಡಿತೇಂ ? ಇದರ್ಕೆಮ್ಮಯ್ಯನೆ ಪ್ರಮಾಣಂ. ಅಂತದಱಿಂದೆಮನಂ ನಿಶ್ಚಿಂತಮಪ್ಪಂತು ನೀಂ ಭಕ್ತಿಯಿಂ ಕುಲದೈವಮನರ್ಚಿಸುತುಂ ಗುರುಜನಂಗಳಂ ಪೂಜಿಸುತುಂ ಪಿರಿಯರಂ ಸಂಭಾವಿಸುತುಂ ಗೋಬ್ರಾಹ್ಮಣರಂ ಸೇವಿಸುತುಮಿರೆ ಎಮ್ಮೊಳೆಲ್ಲರುಮನುಗ್ರಹಿಸೆ ಸಂತಾನಮಕ್ಕುಮೆಂದಱಿವೆಂ. ಆನುಂ ವ್ರತಹೋಮಾದಿಗಳಿಂ ದೇವರ್ಕಳಂ ಮೆಚ್ಚಿಸುತುಂ ಸಗ್ಗಿಗರೊಡನಾಡಿಗನಪ್ಪಂತೆಯುಂ ಸೂರ್ಯಾನ್ವಯಮೆನ್ನೊಳ್ ತಡೆವುದೆಂಬ ಲೋಗರೊಂದಪವಾದಂ ಪೊರ್ದದಂತೆಯುಂ ನೋೞ್ಪೆನೆಂದು ಕಾಂತೆಯಂ ಸಂತವಿಟ್ಟು ತೞ್ಕಯ್ಸಿ ಕೞುಪಿ ತಾನೋಲಗಕ್ಕೆ ಬಿಜಯಂಗೆಯ್ದಂ.

ಮನೋರಮೆ ! ವಿಸ್ತಾರಂ ಸಾಲ್ಗುಂ. ಇಂತು ಕೆಲವಾನುಂ ದಿನಂಗಳ್ ಕೞಿಯೆ ಲೋಕಪದ್ಧತಿಯನೊಳಕೊಂಡು ಸೀತೆಗೆ ನೀರ್ ನಿಂದು ದಿನಕ್ರಮದಿಂ [ಬಸಿಱ್] ಬಳೆಯೆ, ತ್ರಿವಳಿಗಳೞಿಯೆ, ಮೊಗಂ ತೆಱಂಬೊಳೆಯೆ, ಚೂಚುಕಂ ಕರ್ಪಂ ತಳೆಯೆ, ನಡು ಬಡತನದೊಂದಪವಾದಮನುೞಿಯೆ, ನುಡಿ ಬೇಸಱಂ ಬೆರೆಯೆ, ನಡೆಗಲಸು ನೆರೆಯೆ,

ನಿಡುಬಾಸೆ ನೇರಂ ಮೆಱೆಯಿಸೆ, ನೋಟದ ಗಾಡಿ ತಳ್ತು, ಮನಕೆ ಪುದು ವಯಕೆ ಪುದುಂಗೊಳೆ, ಸೀತೆ ಬಸಿಱಾಯಾದಳ್.

ಎಂಬಲ್ಲಿಗೆ ಶ್ರೀರಾಮಾಶ್ವಮೇಧದೊಳ್
ಗರ್ಭಧಾರಣಮೆಂಬ ತುರೀಯಾಶ್ವಾಸಂ ಸಂಪೂರ್ಣಂ.

---

## ಪಂಚಮಾಶ್ವಾಸಂ

### — ಸೀತಾಪರಿತ್ಯಾಗಂ —

ಮುದ್ದಣಂ—ಪ್ರಾಣನಾಯಿಕೆ! ಇಂತು ಭೂಜಾತೆ ಗರ್ಭಿಣಿಯಾದಳಾಗೆ, ನಾಡೆ ನಾಡೆ ಸಂತಸಗಡಲೊಳೋಲಾಡುತಿರ್ದುದು; ಬಂಧುಜನಂಗಳ ಸಮ್ಮೋದಮುಂ ಪರಿಜನಂಗಳುಕ್ಕಿವದೇಳ್ಗೆಯುಂ ಪಿರಿದಾಯ್ತು; ಎತ್ತಲುಮೊಸಗೆವಱೆ ಮೊಱಗಿದತ್ತು; ಭೂಸುರರ್ ದಾನದಕ್ಷಿಣೆಗಳಿಂ ತಣಿದರ್; ನೆರೆದ ದೀನಾಂಧಬಧಿರಕುಬ್ಜವರ್ಗಂ ಸ್ವರ್ಗಸುಖಾನುಭವದೊಳಿರ್ದತ್ತು.

ಆವೇಳೆಯೊಳೊರ್ಮೆ ಶ್ರೀರಘುಪ್ರವರಂ ಕಾಂತೆವೆರಸು ಕಟ್ಟೆಱಕದ ಸಲ್ಲಾಪದಿಂ ಬಯ್ಗಿನೊಳ್ ರಾಣಿವಾಸದ ಮೊಗಸಾಲೆಯೊಳಿರೆ ಸೀತೆ ಕಾಂತಂಗೆ—ನಾಥ! ಬಲ್ಲೆಯೆ ಸಜ್ ಕಣಾ! ಆವುದುಮನೊಳಕೊಂಡಿತಿಲ್ಲೆನ್ನ ಮನಂ, ಆದಱಿಂ ವನದೊಳಾಶ್ರಮಂಗಳ ಋಷಿಪತ್ನಿಯರಂ ಕಂಡು ಸುಖಸಲ್ಲಾಪಂಗೊಂಡವರೊಡನಾಟದಿನಾನುಂ ಕಿಱಿದುಂ ದಿನಮಿರ್ದು ಮರಲ್ದು ಬರಲಕ್ಕುಮೆಂದು ಬಯಸುವೆನೆನೆ; ರಾಯಂ—ಅಂತೆಯೆ ಅಕ್ಕೆ! ಆದೊಡೆ ಒರ್ವಳೆ ಪೋಪುದಲ್ತು; ಕೂಡಿ ಪೋಗೆ ಲಕ್ಷ್ಮಣನಂ ಪೇಳ್ದಟ್ಟುವೆನೆಂದು ಮಾರ್ನುಡಿದಂ.

ಆಗಳ್ ಸಪ್ತಾಶ್ವಂ ನಿಚ್ಚವಯಣದೊಳ್ ಬಲ್ಬಳಲ್ದಶ್ವಸಪ್ತಕಮಂ ಕಡಲೊಳ್ ಮಯ್ಗರ್ಚಿ ನೀರ್ಗುಡಿಸಲ್ಕೆಂದು ಸಾರಥಿಯ ನೇರ್ಪಡಿಸಿ ತಾಂತೇರಿನಿಱಿದನೆನೆ ಪಡುವೆಟ್ಟನೆಡೆಯೊಳ್ ಮೆಲ್ಲನೆ ಮಯ್ಗರೆಯಲೊಡಂ;

ಲೋಕಯಾತ್ರೆಗೆಯ್ದು ಮಸೆಯಂ ಪುಗುತರ್ಪಿನಿಯಂಗೆ ಚರಮದಿ ಕ್ಕಾಂತೆ ರನ್ನವಟ್ಟಲೊಳ್ ಪಿಂಗದೆತ್ತಿದಾರತಿಯ ಕೆಂಬೆಳಗೆನೆ ಸಂಧ್ಯಾ ರಾಗಮೆತ್ತಂ ಪರಿಯೆ ; ಬಲ್ಲಾಲಂಬಿಡಿದು ನೀನೆ ಗತಿಯೆಂದು ನನ್ನಿಯಿಂ ನಂಬಿದಳಂ ಮಱೆದು ಸವತಿಯೊಂದು ಪಿಸುಣ್ಗೆ ಎಱೆಯಂ ಮಾಱು ವ್ಪೋದನೆಂಬೊಂದುಬ್ಬೆಗದಿಂ ಕೊರಗಿದಳೆನೆ ಪದ್ಮಿನಿ ನಾಡೆ ಬಾಡೆ; ಬೇಡ ಗಡಾ ! ಮುನಿಸು ನಿನಗಿನಿಯನೊಳಕ್ಕಟಾ ! ಬೇಟದ ಸೂಡಿಂ ಬಾಡಿ ಬಸಂಗೆಟ್ಟುದನಿಂದು ನಿಂದು ಕಾಂತಂಗೞಿಪಿ ಬೞಿಯಟ್ಟು ವೆವನಿತೊಂದು ಪೊಟ್ಟು ಸಯ್ತುರ್ಪುದೆಂದು ಸಂತಯಿಸಿ ದೂದುವೋಪ ಮೆನೆ ಮುಯಿಯ್ಯೆರಡಿಗಳೋಡೆ ; ಪಗಲ್ ಜಗುಳ್ದುದು. ಪಕ್ಕಿಗಳೋ ರೊಂದೆಡೆಯ ಮೇಪಿಂ ತಣಿದುಂ ದಿನಾವಸಾನದೊಳಾಗಳಾಗಳ್ ಕಂಡ ಬಿನದಮನೊಳಗೊಳಗೆ ತಮ್ಮ ಬಳಗಕ್ಕೆ ತಿಳಿಪಿ ಸಲ್ಲಪಿಸುತೆ ಪೋಪುವೆನೆ ಮಂದಸ್ವರಂಬೆರೆಯೆ ಕುವಿದು ನಿಜಾಶ್ರಯಂಗಳಂ ಸಾರ್ದುವು. ಮತ್ತಂ ವಿಪ್ರರ್ ಎತ್ತಿದ ಸೇರೆಗೆಯ್ಯೊಳ್ ಸಂಧ್ಯಾಮಂಡಪಮನಲಂಕರಿಸೆಯುಂ, ವೈಹಾಳಿಯನುೞಿದು ಬಾಹುಜನಿವಹಂ ಬೀಡಂ ಪುಗುತರೆಯುಂ, ಬೇರ ದವಸರದಿಂ ಮೆಯ್ದೆಗೆದು ಬಣಂಜಿಗರ ನೆರವಿ ತಮತಮಗೆ ಪೊಸಪರದಿನೆ ಣಿಕೆಯೊಳಿರೆಯುಂ, ಬವಸಿನೊಂದು ಕಜ್ಜಮುಂ ತವಿಸಿ ಬೇಸರ್ಗೆ ಕುಡಿ ಯಱ್ ಕಡುಸುಮ್ಮಾನದಿನೊಂದೆಡೆಯೊಳ್ ನೆರೆದು ಶ್ರೀರಾಮಲೀಲಾವಿ ನೋದಮಂ ಪಾಡುತಿರೆಯುಂ, ಬಾಲಕರ್ ಆಟಪಾಟಂಗಳಂ ಮಱೆದು ತಾಯ್ವಿರೊತ್ತಂ ಪತ್ತಿರೆಯುಂ, ಮುಚ್ಚಂಜೆ ಸೊಗಯಿಸಿದುದು.

ಅನಿತಱೊಳ್ ನೀಲಿಯ ಕಡುವಣ್ಣದೊಳಟ್ಟಿದ ಪಂದಿಯ ತೊವ ಲಂ ಮುಸುಂಕಿಟ್ಟು ಮೆಯ್ವೋಱದೆ ಲೋಕಮಂ ನುಂಗಲ್ಬಂದು ಬಂದ ಮಂದೇಹರಾಕ್ಷಸನೆನೆ ಕತ್ತಲೆಯೆತ್ತಂ ಪರ್ಬಿದುದು. ಇದು ನಾಡಿದು ಕಾಡಿದು ನೆರೆಯಿದು ಕೆಱೆಯಿದು ನೆಲನಿದು ಪೊಲನಿದು ಬೆಟ್ಟದು ತಿಟ್ಟದು ನರನಿದು ಮರನಿದು ದರಿಯಿದೋವರಿಯಿದೆಂದು ಬಗೆಯಲ್ಬಾರದಾಯ್ತು. ಆ ಸಮಯದೊಳ್ ಪಗೆಯ ಸುೞಿವನಱಿವೊಡೆಂದು ಬಿಸುಗೆಯ್ಯನಟ್ಟಿದ ಬೇಹುಕಾಱರ ಸೋವೆನಲಾಗಸದೊಳೆಡೆಯೆಡೆಯೊಳಱಿಲುಂ, ಭೂಮುಖ ದ ಮನೆಮನೆಯೊಳ್ ಸೊಡರುಮೆಸೆದುವು ; ದೇಗುಲದ ಭೇರಿ ಮೊೞಗೆ, ಸಂಕಿನೊಂದು ನಿಡುಸರಂ ಪೆರ್ಚೆ, ಡಕ್ಕೆಯ ಜೇಗಟೆಯ ಬಿಱುಸರಂ

ಬಿಱುಸಾಗೆ, ರಜನೀಮುಖಮೆಡ್ಡಮಾದುದು.

ಇಂತಿರೆ ಅತ್ತಲರಸುಗೆಯ್ಮೆಯು ಕಜ್ಜದುಜ್ಜುಗಂಬಿಡಿದು ನಾಡಿಗರಿ
ರವನಾರಯ್ವೊಡೆಂದು ರಾಯನಟ್ಟಿದ ಬೇಹಿನವರ್ ಮಱೆರೂಪಿಂ ಬೀದಿ
ಗಳೊಳ್ ಬರೆವರೆ—ಸೊಗಮಿಂಬಾಗೆ ತಂತಮ್ಮ ಕೆಳೆಯರಂ ಕಾಣು
ತೊಂದರೆಗೞಿಗೆ ಸಲ್ಲೀಲೆಯಿಂ ನಲ್ವಾತುಗುಟ್ಟಲ್ಕೆಂದು ನೆರೆವನೆಯಿಂ
ಪೋಪ ಬರ್ಪ ಜವ್ವನಿಗರ ನಡೆನಿಱಿಗೆಯಿನಿಡಿಕಿಱಿದ ಪಂತಿಯಿಂ ; ವೇದ
ವೇದಾಂತ ಪರರೊಚ್ಚತಮೊಡಗೂಡಿ ಚರ್ಚೆಯಿಂ ಪರತತ್ತ್ವಮನಱಿಕೆ
ಗೆಯ್ವ ಜಾಣರೊಂದು ನೆರವಿಯಿಂ ; ಕೊರಲ ನುಣ್ದನಿ ಬೀಣೆಯಿಂಚರಂ
ಪುರಿಗೊಳೆ, ಮರ್ದಳೆಯ ತಾಳದ ಲಯಂ ಜತಿಗುಡೆ, ತಾನದೋಜೆಯೊಳ್
ತಾರಮಂದ್ರವಿಭೇದದಿಂ, ಜೇಂಗೊಡಮಂ ಮುಸುಱಿ ಮೊರೆವ ಮಱಿ
ದುಂಬಿಗಳ ಗಾನದಂತೆ, ಮಧುಮಾಸದೊಳ್ ಕೆಯ್ವಂದ ಮಾಮರನೆಳ
ದಳಿರಂ ಮನಂಬುಗೆ ಸವಿದು ಕೊರ್ವಿ ಕುಕಿಲ್ವ ಗಂಡುಗೋಗಿಲೆಯ ಮಂಜು
ಳಸ್ವರದಂತೆ, ಆರಕ್ತಮಾದ ನೇಱಿಲಂ ಕೊಕ್ಕಿಂ ಕರ್ದುಂಕಿ ಚಂಚೂ
ಪುಟಮನೂಱಿ ಅರೆಗಣ್ಮುಚ್ಚಿ ಪಕ್ಷಯುಗ್ಮಂ ಸಂಚಳಿಸೆ ಮಧುರಾಸವಮಂ
ಸೀಯೆನೆ ಬರೆ ಪೀರ್ದು ತಣಿದುಂ ಸೊರ್ಕಿಂ ಗೞಿಪುವರಗಿಳಿಯ ಬಿಡು
ನುಡಿಯ ಭಂಗಿಯಂತೆ, ಕರ್ಣರಸಾಯನಮಾಗೆ ಶ್ರೀರಾಮನಂ ಪಾಡಿ
ಪೊಗೞ್ವ ಗಾಯಕಸಂದೋಹದಿಂ ; ಬಗೆಯೆಂತಂತು ಪಾಡು, ಪಾಡೆಂ
ತಂತು ಹಾವಂ, ಹಾವಮೆಂತಂತು ಭಾವಂ, ಪುದುಂಗೊಳೆ ನವರಸೋ
ದಯಕೆ ಪಡಿವೆತ್ತಾಡುವ ನಟ್ಟುವಿಗರ ಕೂಟದಿಂ ; ಜಾರಚೋರರತ್ತಣಿಂ
ಭೀತಿಯಣಂ ನಾಡೊಳಿಲ್ಲನೆ ಬಾಗಿಲಂ ಪಡಿದೆಱೆದು ಬೊಂಬಾಳಂಗಳ
ನುರಿಯಿಸಿ ತಾಂ ನಿದ್ದೆವೋದ ಸಜ್ಜನರ ಸಜ್ಜುಗೊಂಡ ಬೀಡುಗಳ ಸಾಲ್ಗಳಿಂ ;
ಅನಾಥರುಂಡಿಲ್ಲದೊಡೆ ಬರ್ಪುದು, ತಂಗೂೞಲ್ತು, ಕದನ್ನಮಲ್ತು,
ಪೂರಣಗಡುಬುಂಟು, ಒಗರಮುಂಟು, ಅಳಿಯುಂಟು, ಈಗಳೆ ಇಕ್ಕು
ವೆಂ, ತಳ್ವದಿರಿಮೆಂದು ತಲೆವಾಗಿಲೊಳ್ ನಿಂದು ಕರೆವ ಮುತ್ತೈದೆಯರ
ತಂಡದಿಂ ; ಕೇರಿಗಳ್ ಸೊಗಯಿಸೆ—ನಾಡಂ ಸುತ್ತಿ ಕಂಡುದನಱಿಪ
ಲ್ಕೆಂದು ಸೋದರರಿಂ ಬಳಸಿ ಬಣ್ಣದ ಚೌಕಿಗೆಯೊಳಿರ್ಪ ರಾಯನಂ
ಕಂಡು ದೂರದಿಂ ತಲೆವಾಗೆ ; ರಾಘವನಾತಂಗಳ್ಗೆ—ನಾಡೊಳ್ ಲೋಗ
ರ್ಗೆ ಸೊಗಕೆ ಕುಂದಿಲ್ಲಮಲ್ತೆ, ಆಜ್ಞೆಗೆ ಭಂಗಮಿರದಲೆ ! ರಾಯನಂ ನಿಂದಿ

ಸರಲೆ ! ಇಂದಿನ ವಾರ್ತೆಯೇಂ ? ಪೇೞೆಂದಂ. ಆಗಳ್ ಬೇಹುಕಾಱರ್— ಜೀಯ ! ಮೂಜಗಮಂ ಕಾವ ನೀಂ ನೆರೆಯಿರ್ದುಂ ತಿರೆಯಂ ಪೊರೆವಂದು ಲೋಗರ್ಗೆ ಸೊಗಕ್ಕೆ ಕುಂದೆ ! ವಿಶ್ವಮೆಲ್ಲಂ ನಿನ್ನಾಣತಿಯೊೞಿರ್ಪಿನಂ ಪುೞುವಾನಸರ್ ದೂಱಲಾರ್ಪರೆ ! ನಾಮಮೊಂದು ದೇಹಿಗಳ್ಗೆ ತಾರಕಮಂತ್ರಮಾಗಿರ್ಪಿನಂ ಪೞಿಯಲುಂಟೆ ! ಮೇಣಾಂ ಮುಮ್ಮೆಯ್ಯ ದುಷ್ಕೃತಿಗಳ್ ನಿಗುಂಬಿಸೆ ಬಾೞ್ಕೆಯೊಂದು ತಗದೆ, ಮಿೞ್ತು ಪೊೞ್ತಂ ಪಾರೆ ಪಾಪರ್ ದೇವರಂ ತೆಗೞಿಸಲೊಡಮೇನಕ್ಕುಂ ? ಚೋರಂ ಚಂದ್ರಮನಂ, ಸೋಂಬಂ ಪಗಲಂ, ಪಾಷಂಡಿ ವೇದಂಗಳಂ ಪೞಿವಂತಿರಕ್ಕುಮೆಂಬುದುಂ ; ಆಳ್ದಂ ಮತ್ತಮಾಚರರ್ಗೆ—ಮಾಂಜದುಸಿರಿಂ, ಬನ್ನಣೆಯ ನುಡಿಜಾಣ್ಮೆಗವಸರಮಲ್ತು, ಕಂಡುದಂ ಪೇೞ್ವುದೆನೆ ; ಒರ್ವನೊರ್ವನ ಮೊಗಮನವಲೋಕಿಸುತೆ ಮೋನಮಿರ್ದರ್. ಇಂತಿರೆ ಮತ್ತಂ ಮತ್ತಂ ರಾಯನೇನಾನುಮೊಂದು ಪೊಸವಾರ್ತೆಯಿರ್ಕುಮೆಂದು ಚಾರರ ಮೊಗದ ಭಂಗಿಯಿನಱಿತು—ಎನ್ನಾಣೆ ! ಅಯ್ಯನಾಣೆ ! ಪೇೞಿಂ, ಮನ್ನಿಪೆಂ ; ಅಲ್ಲದೊಡೆ ನಿಮ್ಮಂ ಶೂಲದ ತುತ್ತತುದಿಯೊಳ್ ಕಾಣ್ಬಿರೆಂದು ಪುರ್ವಿನ ಜರ್ವಿಂ ಗದಱೆ ; ಅವರೊಳೊರ್ವಂ ಕಂಪಿತಕಾಯಂ ಪಾದಾವನತ ಶಿರನಿಂತು ಬಿನ್ನವಿಸಿದಂ:—ಕಾವಂ ನೀಂ ಮೆಯ್ವೆತ್ತಿರೆ ಪೆಱಱಲುಂಟೆ ? ಮೇಣ್ ನನ್ನಿಯನಾಣ್ಮನೊಳ್ ಬಯ್ತಡಲೊಡಮೆಮಗಾವ ಬಟ್ಟೆ ? ಗಾವಿಲಂ ಕಱುಂಬಿ ಪೇೞ್ದೊಂದು ನಿಷ್ಠುರೋಕ್ತಿಯಂ ದೇವರ್ಗೆ ನಿವೇದಿಸುವುದನುಚಿತಮೆಂದು ಮಾಣ್ದೆವೈಸೆ ! ಬಲ್ಲರ ಬಲ್ಲಹಂ ಕಾವೊಡಿಂತಿದು—ನಡುಗೇರಿಯೊಳೊರ್ವನಸಗಂ ಪೆಂಡತಿ ಮುಳಿಸಿಂ ಪೇೞದೆ ತವರ್ಮನೆಗೆ ಪೋಪುದುಂ ಕಳ್ದುವಂದಳ್ಗೆ ಬುದ್ಧಿವೇೞ್ದು ತಾಯ್ತಂದೆವಿರ್ ಬೞಿವಂದಳಿಯಂಗೊಪ್ಪಿಸಲೆಂದು ಕೋಪಮಂ ತಿಳಿಪಲೊಡಂ, " ಅಗಲ್ದ ಮಡದಿಯಂ ರಘುಜನಂತಿರೆ ಕೊಂಡಾಳೆಂ ಬಾೞೆಂ " ಎಂದು ಬಿಱುನುಡಿದಂ. ಕರ್ಣಕಠೋರಮಾಗೆ ಕೊಡಂಕೆಗಳಂ ಮುಚ್ಚುತಲ್ಲಿಂ ತಳರ್ದೆವು. ಇಂತಿದೊಂದು ವಾರ್ತೆಯಲ್ಲದಾವುದುಮಂ ಕೇಳ್ದದಿಲ್ಲೆಂದು ಮುಗುೞ್ದುಱಗೆ ರಾಯನವರಂ ಕೆಯ್ಸನ್ನೆಯಿಂ ಕಳಿಪಿದಂ.

ಗರತಿ ! ಮುಂಗಾರ ಮೊೞಗಿನತ್ತಣಿಂ ಪೊಡೆಗಿಡುವೆಳಕೞಲೆಯೆನೆ ಮಂಡಲೇಶ್ವರಂ ರಜಕನೊಂದು ಪರುಷೋಕ್ತಿಗೆ ಮನಗೆಟ್ಟುಂ ಮರವಟ್ಟುಂ

ವಿಚಾರಪರಂ ಮತ್ತಂ ನೀಡುಮೆಣಿಕೆಯೊಳ್ ನಿಟ್ಟುಸಿರ ಕಟ್ಟುಬ್ಬಸದಿಂ ತನಗೆ ತಾಂ—ಹಾ! ಹಾ ! ಪೊಂಜುಱಿಗೆಯೆಂದೇ ಎರ್ದೆಗೊತ್ತಿದೆಂ, ಇಂತು ಕರುಳಂ ಕೊಱೆಗುಮೆಂದಱಿತೆನಿಲ್ಲಕ್ಕಟಾ ! ಪಾವನೆಯೆಂದೇ ಒಪ್ಪುಗೊಂಡೆನದಱಿನೀವಿಲಗವೊಂದಕ್ಕೆ ತಲೆಮಟ್ಟೆಂ. ಆಃ ! ರಜಕನೆನ್ನನೇಳಿಸಿದನಿಲ್ಲಮಾದಮೆಬ್ಬಿಱಿಸಿದಂ. ಸಾಜಂ. ಆಗಳ್ ರಕ್ಕಸನ ಬಂದಿಯೊಳ್ ಬಾಳ್ದಳಂ ಮಗುಳ್ದುಮಾನಾಳ್ವೊಡಕ್ಕುಮೆ ? ಮಾತೇಂ, ಸೀತೆ ಮನ್ಮನಃಪ್ರೀತೆಯೆಂದೊಡಂಬಟ್ಟೆಂ, ಇಂದು ಲೋಗರ ಮಾತಿಂಗೆ ಕೆಯ್ಗುಡುವೆನೆಂದೆಣಿಸದಾದೆಂ. ಇನ್ನೇವೆಂ ? ಕೆಯ್ವೊಲನೊಳ್ ಬೆಳೆದ ಕುಱುಂಬುಲ್ಲಂ ಕಿಱ್ತು ಬಿಸುಡುವಂತಿರೆ ಸೀತೆಯುಮಂ ಬಿಡುವೆಂ ಎಂದೇ ಬಗೆದು ಬೞಿಯುಂ ಸೋದರರೊಳ್ ಲಕ್ಷ್ಮಣಂಗೆ—ಕೇಳ್ದಯ್ ತಮ್ಮ ! ಎಮ್ಮೀಬೞಿಗಡರ್ದ ಪೞಿವಂ ! ಮುನ್ನಂ ಲಂಕೆಯೊಳ್ ನೀನೆ ಪೇೞ್ದಿಯಲ್ತೆ ಸೀತೆ ಪೂತೆ, ಅವಳಂ ಕೆಯ್ಕೊಳ್ವುದೆಂದು. ಈಗಳೇನಾಯ್ತು ! ಎನೆ ; ಮಱುಮಾತಿನೊಳ್ ಭರತಂ—ಸೌಮಿತ್ರಿ ಪೇೞ್ವುದೇಂ ! ಎಮ್ಮಯ್ಯಂ ಪೇೞನೆ ? ಅಗ್ನಿ ಪೇೞನೆ ? ದೇವರ್ಕಳ್ ಪೇೞರೆ ? ಭೂದೇವಿ ತಾಂ ಪೇೞಳೆ ? ಧೂರ್ತನೊರ್ವಂ ಪೇೞ್ದ ನಾಣ್ನುಡಿಯ ನೆವಂ ಬಿಡಿದು ದೇವಿಯರೊಳ್ ಕುಂದನೆಣಿಸಲ್ಬಾರದೆಂದು ಕೆಯ್ಮುಗಿದಂ. ಅದರ್ಕಗ್ರಜಂ—ತಮ್ಮ ! ಕೆಮ್ಮನಿರ್ ; ನೀನಱಿಯೆಯ್. ಧರ್ಮಮಂತುಟು. ಅಪವಾದಂ ಪೊರ್ದಿದಿಂಬೞಿಯುಂ ದೂಷಿತೆಯಾದೀಮಡದಿಯುಂ ಬಿಟ್ಟಲ್ಲದೆ ಮಾಣೆನೆಂಬುದುಂ; ಭರತಂ ಕಿವಿಗಳಂ ಮುಡಿಕೆಗೆಯ್ಯೆ ; ಶತ್ರುಹಂ—ಅಣ್ಣಯ್ಯ ! ದೇವಿ ಸಾಕ್ಷಾಲ್ಲಕ್ಷ್ಮೀದೇವಿಯೆಂಬುದಂ ನೀನಱಿಯೆಯು? ಇಂತಿರೆಯುಂ ಸಪ್ಪಿನ ಬಿತ್ತಂ ನನ್ನಿಗಾಗರಮುಂ ಸೊಗದ ಬೀಡಂ ಸಿರಿಯ ನೆಲೆಯುಂ ಸಿಂಗರದ ಕಣಿಯುಂ ನಿನ್ನೀಕೊಂಡಾಟದ ರಮಣಿಯುಂ ಅರೆಮೆಯ್ಯುಂ ಬಿಡುವುದೆಂ ಬರೇ ! ಕಿಱುಗೂಸಂ ನಿನ್ನ ಕೆಯ್ಯೊಳೀವಂದು ಜನಕನೇನೆಂದಂ, ಅಗ್ನಿ ಸಾಕ್ಷಿಯೊಳ್ ನೀನೆ ಏನೆಂದಯ್! ಹಾ! ರಾಘವಾ ! ಪಾವಕಪಾವನೆಯುಂ ತೊಱೆಯಲ್ಕೆಂತು ಮನಂದಂದಯ್ ? ದೇವ ಕರುಣಾಕರನೆಂಬ ಬಿರುದಿಂಗಿದು ತಗುಗುಮೆ ! ನಿನ್ನೀಜಸಕೆ ನಿನ್ನೀಪೆರ್ಮೆಗೆ ನಿನ್ನೀಬೀರಕಿಂತಿದು ಪಾಡೇ ! ಸೀತೆಯುಮೞಿದುಂ ಸತ್ಯದೇವತೆಗಿನ್ನೆಡೆಯಾವುದು ? ಭೂಮಾತೆಯೆಂತು ಪೊತ್ತಿರ್ಪಳ್ ! ಅಕ್ಕಟಾ ! ನರಿಯೂೞಿಡೆ ಸುರಲೋಕಂ

ಪಾೞ್ಪೋಕುಮೆ ! ನಾಯ್ ಬಗುಳೆ ರಾವುತಂ ಕೀಱುಗುಮೆ ! ಪಂದಿಯೊಂದು ಡುಱುಕೆಂದೊಡೆ ಸಿಂಗಮುಂಡಲೆವುದೆ ! ಕೂೞಂ ಕೊಱಚಾಡೆ ನೀನೊಂದಾಡುವುದೇ ! ಎನ್ನಾಣೆ, ಮಾತೆಯಾಣೆ, ಸೀತೆ ನೀತಿಗೆಟ್ಟಳಲ್ಲಂ. ಕಾವುದು ಕಾವುದೆಂದು ಕೆಯ್ಯೊಡ್ಡಿ ಬೇಡುವುದುಂ ; ಮತ್ತಂ ರಾಘವಂ ಸೋದರರ್ಗೆ—ಬಲ್ಲೆಂ ಬಲ್ಲೆನವಳಯೋನಿಜೆಯೆಂಬುದಂ ಪಾವನೆಯೆಂಬುದಂ ಪುಣ್ಯಶ್ಲೋಕೆಯೆಂಬುದಂ. ಆದೊಡಮಾಗಳೆನ್ನಳವಲ್ತು ; ತೆಗೞ್ಗೆ ಮಾಱುವೋದೆಂ. ಜನರಿಂತು ಜಱೋಡಿಸೆ ಪುದುವಾೞ್ವೆನೆಂತೊ ! ಅದಱನೆನ್ನಂ ನಿರ್ನಿಮಿತ್ತದಿಂ ತಡೆಯದೆ ಯಥೇಷ್ಟಂ ಪೋಗಿಮೆಂದುಂ ಮಾಣೆ ನಿರ್ಮೋಕನಿರ್ಮುಕ್ತನಿರ್ಮಲನಪ್ಪ ಫಣಿಯೆಂತಂತೀಸೀತೆಯುಂ ತೊಱೆದೇ ಸೊಗಂಬಾೞ್ವನಿದು ಸಿದ್ಧಮೆಂದು ದುಗುಡದೊಂದು ಕಾಯ್ಪಂ ಜಡಿದು ನುಡಿವಗ್ರಜನಂ ಕಂಡುಂ ಕಾಣದೆ ಹಾಹಾರಾವಂಗೆಯ್ಯುತೆ ಭರತ ಶತ್ರುಘ್ನರ್ ಪಿಂಜರಿದರ್.

ಆಗಳ್ ರಾವಣಾರಿ ಬಾಗುೞೊಂದು ಬಿಗುರ್ಪಿಂ ತಲೆ ತಿಣ್ಣಮಾಗೆ ಕೆಕ್ಕೆಯುಂ ಕರತಲದೊಳೂಱಿಯುಂ ಕರತಲಮುಸಿದು ಬಳ್ಕಿ ಅಂಕದೊಳಿಟ್ಟುಮಂಕಂ ಕದಕ್ಕದಿಸೆ ನೆಲನೊಳ್ ಧರಿಸಿಯುಂ ನೆಲಂ ನೆಲೆದಪ್ಪೆ ತಾನೆ ತಲೆಮುಟ್ಟುಂ ಕಂಬನಿಗಱೆಯುತೆ ಕೆಲದೊಳ್ ಕೆಯ್ಗಟ್ಟನಿಂದ ಲಕ್ಷ್ಮಣನಂ ಕರೆದು—ಅಣುಗದಮ್ಮ ! ಇತ್ತಲ್ ಬಾರಯ್ ! ಅಂದಂದಿಂಗಮೆನ್ನಾಣತಿಯಂ ಮೀಱಿದೆಯಿಲ್ಲಂ ಬಲ್ಲೆಂ ; ಈಗಳ್ ಪೆಱೆಗೆ ಕಱೆಯೆಂತಂತೆಮಿಮ್ಮಬೞಿಗೆ ಪೞಿಯೊದವಿದತ್ತೀಜಾನಕಿಯ ದೂಸಱಿನಾಕೆಯುಂ ಕಾನನಕ್ಕುಯ್ದು ತೊಱೆದು ಬಾರಾ ! ಎಂದಂ. ಅದರ್ಕೆ ಸೌಮಿತ್ರಿ—ಜೀಯ ! ಅಣ್ಣನಾಜ್ಞೆಯಂ ಮೀಱಿ ನಡೆಯೆ ಕುಂಭೀಪಾಕಂ, ನಿರ್ದುಷ್ಟೆಯಾದೀಅತ್ತಿಗೆಯನಱಿದುಂ ನಟ್ಟಡವಿಗುಯ್ದು ಬಿಡೆ ರೌರವಂ. ಎನ್ನೊಡೆಯ ! ಅದಱೊಳಂ ತುಂಬಿದ ಬಸಿಱಿಯಲ್ತೆ ! ಎಂತಯ್ ಕೊಂಡುಯ್ದು ಪಾಪಿ ಕೆಯ್ವಲ್ಯಲಕ್ಷ್ಮಿಯುಂ ಬಿಡುವಂತಿರೆ, ನಿರ್ಘೃಣನಾಂ ಭಾಗ್ಯಲಕ್ಷ್ಮಿಯುಂ ಬಿಡುವೆಂ, ಎಂಬುದುಂ ; ಮತ್ತಂ ಮತ್ತಂ ರಾಘವಂ ಚಲಮುಂ ಪಿಡಿದು—ಬಾಲ ! ಇಂತುಸಿರಲಾಗದಯ್ ಮೀಸಂ ದೋಸಮಿಲ್ಲಂ, ಮಾರ್ನುಡಿಯದಿರ್, ಪೋ ಪೋಗೆಂದುಸಿರ್ದಂ. ಇಂತಾಗೆ ಲಕ್ಷ್ಮಣಂ ಬೀರದ ಮೆಯ್ಗೊಂಡು ಮನಂ ದಿಟ್ಟಗೆಯ್ದು ಅಗ್ರ

ಜಾತಂಗೆ—ಎಲೆ ಅಣ್ಣ ! ಇದೆಕೊಳ್ ಚಂಡಾಲಂ ಸಿದ್ಧಮಿರ್ಪೆಂ. ಅಡಿಯಾಣೆ ! ಆಣತಿಯೆಂತಂತು ನಡೆವೆಂ. ಮುನ್ನಂ ಭಾರ್ಗವಂ ತಂದೆಯುನನ್ನಿಗೆ ಮಾತೆ ರೇಣುಕೆಯಂ ಕೊಲ್ಲನೆ ! ಅಂತಿರಾಂ ನೀನಯ್ಯಂಗೆ ಪಡಿಯಾಗಿರೆ ಮಾತೆ ಸೀತೆಯಂ ಕೊಲ್ವೆನೊ ಮೇಣ್ ಕಾಡೊಳ್ ಸಿಂಗದಿಕ್ಕೆಯೊಳ್ ಬಿಸುಟಪ್ಪೆನೊ ಪೇೞಿ, ಎನೆ, ರಾಘವಂ— ತಾನೆ ಸೀತೆ ದೋಹದದಿನಡವಿಯ ರಿಸಿವೆಣ್ಗಳಂ ಕಾಣಲ್ಕೆಂದು ಬಯಸಿದಳಂತದಱಿನೀನೆವದಿನಡವಿಯೊಳುೞಿದೆ ಬಾರೆಂದಾಡಿದಂ. ಲಕ್ಷ್ಮಣಂ—ದೊಡ್ಡಿತೇಂ, ಅಂತೆಯೆಸಗುವೆಂ ; ಸಂದೆಯ ಮಣಂ ಬೇಡವೆಂದು ದಿಮ್ಮನೆಟ್ಟಿ ನಡೆದಂ.

ಆವೇಳೆಯೊಳ್ ರಾಮರಾಜ್ಯದೊಳಿಂತನುಚಿತಮಾಗಿ ಅಱಂಗೆಟ್ಟುದೆಂದು ಬೆದಱಿ ತಾರೆಗಳ್ ದೆಸೆಗೆಟ್ಟುವು ; ಚಂದ್ರಮಂ ಕಳೆಗೆಟ್ಟಂ ; ಜಂಪತಿವಕ್ಕಿ ಕಂಗೆಟ್ಟುವು ; ಕೋವಳೆ ಬಣ್ಣಂಗೆಟ್ಟಳ್ ; ಕಮಲಿನಿ ಬಾಯ್ವಿಟ್ಟಳ್ ; ತುಂಬಿ ಮೊಱೆಯಿಟ್ಟುದು. ಇಂತಿದೇನನ್ನೆಯದ ಗಲಬೆ ? ಇದಱಡಿಯುೞಿಯಲ್ವೇೞ್ಕುಮೆಂದು ಮೆಯ್ವೋಱದೆ ತಡೆತಡೆದುಂ ಕುಳಿರ್ಗಾಳಿ ಸುೞಿಯಲ್ತೊಡಂಗೆ, ಪಕ್ಕಿಗಳ್ ಗಜಬಜಿಸೆ, ತಾನೆ ಭಾಸ್ಕರಂ ಬೇಗಸುಪ್ಪವಡಿಸಿ ಮೂಡುವೆಟ್ಟಿನ ಕೋಡುಗಲ್ಲನೇಱಿ ನಿಟ್ಟಿಸುತಿರ್ದಂ.

ಇಂತು ತಳತಳನೆ ನೇಸಱ್ ಮೂಡೆ ಸೌಮಿತ್ರಿ ಮಾತೆಯಂ ಪೊಡೆಮಟ್ಟಂ ಪೊಱಮಟ್ಟು ಸರಯೂತೀರಮಂ ಸಾರ್ದು ಜಳಕಂಗೆಯ್ದು ಕಾಲ್ಯಮನಾಗಿಸಿ ಸೂರ್ಯಂಗೆರಡರ್ಘ್ಯಮಂ ಕುಡುವೆನೆಂದು ಅಂಜಲಿಯನೆತ್ತಿ ಅಶ್ರುಪೂರಿತವಿಲೋಚನಂ ಜಿತಸುಲೋಚನಾವಲ್ಲಭಂ ವಿಶ್ವಲೋಚನಂಗೆ— ಎಲಯ್ ಆರ್ಯ ಸೂರ್ಯನಾರಾಯಣ ! ಎಂತೊ ತೊಳಚಿದೋಂಟದೊಳ್ ತುಱುಚೆ ಪುಟ್ಟುವಂತಿರೆ ನಿನ್ನೀಬೞಿಯೊಳ್ ಜಾೞಿನೆ ಪಂಚಮನಾಂ ಪುಟ್ಟಿದೆಂ. ಕೊಡಲಿಯ ಕಾವೆಂಬೊಲಾಯ್ತು ಪುಟ್ಟು. ಅಗ್ರಜಂಗಾಂ ಬೞಿಯನಿರ್ಪಿನಂ ರಾಯದವಸಿಯ ಕುವರಿಯಂ ಭೂಸುತೆಯನಯೋನಿಜೆಯಂ ಮಂಗಳಸ್ವರೂಪೆಯಂ ಸೀತೆಯನಣ್ಣನಾಣತಿಯಿಂ ಕಾಡೊಳ್ ಬಿಸುಡಲ್ಕೆ ಬದ್ಧನಾದೆಂ. ಅದಱಿನಿದೆ ಪೋಪೆಂ. ನೀಂ ಜಗಚ್ಚಕ್ಷುನಾಗೆ ಕುಂದುಕೊಱತೆಯಂ ಕಡೆಗೊತ್ತುತೆನ್ನನುದ್ಧರಿಸಯ್, ಎಂದು ಕೆಯ್ಮುಗಿದು ನಡೆದಂ.

ಅಂತು ಲಕ್ಷ್ಮಣಂ ನಡೆತಂದು, ಪೊಂದೇರನಣಿಗೆಯ್ದು , ದಿವ್ಯಾ

ಶ್ವಂಗಳಂ ಪೂಡಿ, ಸಾಗೆಯುಂ ಕಯ್ಯೊೞೀಟ್ಟು, ತಾನಡರದೊಯ್ಯನೆ ದೇವಿಯರ ಕನ್ನೆಮಾಡದ ಕಟ್ಟೆದಿರೊಳಿರಿಸಿ, ಮೊಗವಾಡದ ಬಾಗಿಲೊಳ್ ನಿಂದಾದಂ ಕಲ್ಮನನಾಗಿ—ಮಾತೆ! ಇದೆ ಇದೆ ಬಣ್ಣದೇರ್, ವನಕುಯ್ವೊಡೆಂದೆ ರಾಘವನಟ್ಟಿದಂ, ತಳ್ವದೆ ಪೊಱಮಡಿಮೆಂದಂ.

ವನಕ್ಕೆಯ್ದಿ ಪುಣ್ಯಾಶ್ರಮಂಗಳಂ ಮೇಣೊರ್ಮೆಯುಂ ಕಂಡು ಪಾವನೆಯಪ್ಪೆನೆಂದು ಬಗೆದ ಪಂಬಲ್ ಬೆಟ್ಟಿತಾಗೆ ಸೀತೆಗೆ ಕಣ್ಣೊಳಿ ಬೆಳಗಪ್ಪುದುಂ, ಪೊಱನಾಗಿಲೊಳ್ ಪೆಸರ್ವಿಡಿದು ಕರೆವ ದನಿಯಿಂ ಲಕ್ಷ್ಮಣನೆಂದಱಿತು, ಪಡಿದೆಱೆದು ಪೊಱವಂದು, ಅರೆಮೊಗದೊಳಿರ್ಪ ಸೌಮಿತ್ರಿಗೆ—ಏನಯ್ ಮೈದುನ, ಜೀವಿತೇಶನೆನ್ನೊಂದು ಬಿನ್ನಪಮಂ ತೂಱದೆ ನಲ್ಮೆ ಮಿಗೆ ಪೊರೆದನೆ! ನಿನ್ನಂ ಪೇೞ್ದಟ್ಟಿದನೆ! ಕರುಣಾಕರ ನಲ್ತೆ! ದೀನೆಯುಂ ನಲ್ಲನಲ್ಲದೆ ಮೇಣಾವಂ ಕಾವಂ? ಆಳ್ದನಡಿದಾವರೆಗಳಾವಗಂ ಸೊಗಮಿರ್ಕೆ! ಆದೊಡಿನಿತೊಂದು ಬೇಗದಿಂ ಪೊೞ್ತಡೆಯೊಳೇಂ ತೇರಂ ತಂದಯ್? ಪಗಲಿನ್ನುಂ ಮೊವೊರ್ಱುಂ ಮೀಱತಿಲ್ಲಂ. ಆನತ್ತೆವಿರ್ಗೆಱಗಿ ಪರಕೆಗೊಂಡೆನಿಲ್ಲ! ಮಾಳವಿಯರಂ ಬೆಸಗೊಂಡೆನಿಲ್ಲ! ಚಂದ್ರಮತಿಗೆ ಪೆೞ್ದೆನಿಲ್ಲ! ಏಗೆಯ್ವೆನೆನುತೆ ವಿಚಾರದಿಂ—ಅಪ್ಪುದಪ್ಪುದು ನಿಡುವಯಣಂ ಇರ್ಕೆ ರಾಘವಂ ಪೇೞ್ವಂ ಅಲ್ಲದೊಡೆ ತಾಂತಮಗೆ ನೆಲೆಗೆಯ್ವರ್. ಎಂತುಂ ಕಿಱಿದುಂ ದಿನಕ್ಕೆ ಮರಳ್ದು ಬರ್ಪವಲ್ತೆ! ಆಗಳ್. ಋಷಿಪತ್ನಿಯರೆಂಬ ನಲ್ಗತೆಯುಂ ಮೇಣುಂ ವನದೊಳ್ ಕಂಡ ಪೊಸ ಬಿನದಮುಂ ಬಂದಱಿಪೆ ಸಂತಸಮಿರ್ಮಡಿಕುಂ. ಆಯ್ತಾಯ್ತು! ಪೋಪಂ ಪೋಪಮೆಂದು ಆನಂದಾಶ್ರುವಿಲುಳಿತ ಕಮಲವಿಲೋಚನೆ ಚಂದ್ರಮುಖಿ ಮುನಿಕಾಂತಾದರ್ಶನೋತ್ಕಂಠೆ ಪುಳಕಿತಸರ್ವಾಂಗಿ ಇಂತಾತುರದೊಳಿರ್ದಳ್.

ಎನ್ನ ರನ್ನಗೆಯ್ಪಿಡಿ! ಕವಡನಱಿಯದ ಬಾಲೆ ಮೆಯ್ವೆರ್ಚಿನ ನಲ್ಲನೊಲ್ಮೆ ತನ್ನೊಳಿಂತು ನನ್ನಿಯೆಂದೇ [ಬಗೆದು] ಸೊಗವಯಣದ ಬಯಕೆಯಿಂ ಬೀಗಿ ನುಡಿಯೆ ಕೇಳ್ದು ಮನಮಱುಗದವರಾರೊ? ಪಾಲ್ಗಡಲೊಳಮರ್ದು ಪುಟ್ಟಿದುದಂ ನೆನೆದಳಲ್ಲದೆ ನಂಜುರ್ಕಿದುದನೇಗೆಯ್ದುಂ ಬಗೆಯುದಾದಳ್. ಆಃ! ಭಾಗ್ಯಲಕ್ಷ್ಮಿ! ನಿನಗಮೀವಿಧಿಯಾಯ್ತೆ! ಕೂೞ್ಮೃಗಂಗಳೊಳೊಡಂಬಾೞ್ವೊಂದು ಬವಣೆ ನೇರ್ಪಟ್ಟುದೇ!

ಆಗಳೂರ್ಮಿಳೆಯರಸಂ ಜಾನಕಿಗೆ—ಮಾತೆ ! ವನಕೆ ಪೋಪೆನೆಂದು ಕಾಂತನನೇತರ್ಕೆ ಬೇಡಿದೌ ! ಏಂ ಸೊಗಮಂ ಕಾಣ್ಬುದುಂಟು ! ಮುನ್ನುಂಡುದು ಸಾಲದೆ ! ವಿಪಿನಂ ಕ್ರೂರವ್ಯಾಳವೃಕಸೂಕರಚಮೂರುಕಂಠೀರವನಿಷೇವಿತಮಲ್ಲಾ ! ಈಬಗೆಗೇವೇಟ್ಬಿನೊ ! ಎಂಬುದುಂ ; ಸೀತೆ—ಏನಯ್ ಲಕ್ಷ್ಮಣ ಇಂತೇಕುಸಿರ್ವಯ್ ? ವನಮಂ ಕಾಣೆನೆ ? ದುಷ್ಟಮೃಗಂಗಳೆಮಗೇಂ ಗೆಯ್ಗುಂ? ಬೇಂಟೆಗೆ ಪೋದಪೆವೆ ? ಋುಷ್ಯಾಶ್ರಮಕ್ಕೆ ಪೋಪರ್ಗೆ ಮೃಗಂಗಳ ಗೊಡವೆಯೇಕೆ ? ಮುನಿಪತ್ನಿಯರ್ ವನದೊಳಿರರೆ ? ಎಂತೆಂತೊ ಕಾಂತನಂ ಕಾಡಿ ಬೇಡಿ ಅನುಗೊಂಡೆಸಿದಂ ತಡೆವುದಂದಮೆ ಕಂದ ! ಶ್ರೀರಘುಕುಲವಾರ್ಧಿಪೂರ್ಣಶಶಾಂಕನೊಲ್ಮೆ ಎನ್ನೊಳಿರೆ ಬನ್ನಮಾವುದುಮೊಂದದಯ್, ನಿಕ್ಕುವಂ ತಳ್ವದೆ ಪೋಪಂ, ಇತ್ತಲ್ ರಥಮಂ ಕೂಡಿನಾರಾ ! ಎನುತುಸಿರ್ದಳ್. ಇಂತಾಗೆ ದೇವಿಯರ್ ಬಯಸುವಂತಿರೆ ಪಯಣಂ ಲೇಸಕ್ಕೆ ಎನುತೆ ಮನದೊಳ್ ಭಾಸ್ಕರನಂ ಬೇಡಿ ಮತ್ತಂ ಪ್ರಕಾಶದೊಳ್—ಇದೆ ರಥಂ ಸಿದ್ಧಮಡರಿಮೆನೆ ; ಅಕ್ಕೆ ಎಂದೊಂದು ಮೂಱಡಿ ನಡೆದು ಸಸಂಭ್ರಮಂ ಲಕ್ಷ್ಮಣಂಗೆ—ಓ ಓ ! ಇರಿರ್ ; ಬಂದೆಂ ಪುಣ್ಯತಪೋವನಮಂ ಕಾಣ್ಬೊಂದಾತುರಂ ಪಿರಿದಾಗೆ ಮುನಿಕಾಮಿನಿಯರ್ಗೆಂದು ಕಟ್ಟಿದ ಬಾಯನಂಗಳಂ ಮಱತೆನಲಾ ! ತಂದಪೆನೆನುತೊಳಪೊಕ್ಕಳ್.

ಅಂತು ದೇವಿ ಪುಗುವುದುಂ, ಲಕ್ಷ್ಮಣಂ ಮುಂತಿರ್ಪ ತೇರಂ ದಿಟ್ಟಿಸಿ—ಎಲೆ ಪೊಂದೇರೆ ! ನೀನುಮೆನ್ನಂತಿರೆ ಮುಮ್ಮೊಯ್ಯೊಳೇಂ ದುಷ್ಕೃತಿಯಂ ಕಟ್ಟಿದೆಯೊ ? ಸೂಳಯ್ಪು ಕಾಳೆಗವಜಱಿಗಳ್ ಮುಂತಿರೆ, ಕಿಳಿರ್ವ ತುರಗದೞಂ ಪಿಂತೆ ವರೆ, ನಡೆವ ಕಾಲಾಳ್ಪಡೆ ಕೆಲಬಲನೊಳಿರೆ, ಚಂಡಭಂಡನಕೆಂದರಿರಾಜರೊಳೆತ್ತಿ ನಡೆವ ಗಂಡುಗಲಿಯಂ ಕುಳ್ಳಿರಿಸಿ ಕೊಂಡುಯ್ವ ಸಯ್ಪುಳ್ಳಂಗೆ ನಿನಗಿಂದು ಪೆಣ್ಣಂ ಪೆಣ್ಗೊಲೆಗೆಂತಂತು ವನಕೆ ಕೊಂಡುಯ್ವುದಾಯ್ತೀ ! ಮಿಳಿರ್ವ ಕೇತನಮಿಾಗಳೆತ್ತ ಪೋದುದೊ ? ಪಾಪೆಯೇನಾಯ್ತೋ ? ಆಃ ! ನಿನ್ನೀಭಾಗ್ಯಮೆ ! ತುರಂಗಮಂಗಳಿರ ! ನೀಮುಮೇನಂ ಸಂಚಿಸಿದಿರಯ್ ? ಇನ್ನೆ ಬರಂ ರಾಯನ ಹಯಶಾಲೆಯೊಳ್ ಬಳೆದುಂ ಬಾಳ್ದುಮಿಾಮುತ್ತದಿನಂಗಳೊಳಿಂತೊಂದು ಯೋಗಂ ದೊರೆಕೊಂಡುದೆ ! ಎಂದಾಡಿ ಮತ್ತಂ ಬಿಸುಸುಯ್ದು ರಥಹಯಂಗಳ್ಗೆ—

ಓ! ಕೊಲೆಗನಾನಿರೆ ನಿರ್ನೆರಂ ನಿಮ್ಮನೇನೆಂದು ಪೞುವೆನೊ? ತೇರೆ! ನೀನೀಕಡೆವೊೞ್ತಿಗಂ ಭೂಮಿಯಂತಿರೆ ಭೂಸುತೆಯಂ ಪೊಱುವೆ ಗಡ! ತುರಗಂಗಳೇ! ನೀವುಂ ಧನ್ಯರ್; ಸೀತಾಕಟಾಕ್ಷವೀಕ್ಷಣಪರಿಪೂತ ಗಾತ್ರರಪ್ಪಿರಲ್ತೆ! ಅಱಗುಲಿಯೆನಾನೊರ್ವನೆ ದೇವಿಯರನೇವೊೞ್ತುಂ ಸೇವಿಸಿಯುಮಿಂದೀಗಳ್ ಪುಲಿಕರಡಿಸಿಂಗಂಗಳ ಬಾಯೊಳ್ ತೂಂತಲಿಂಪೆ ಕೊಂಡುಯ್ವಪೆಂ. ಅಕ್ಕಟಾ! ಅಬ್ಬೆ ಎನ್ನನೇನೆಂದು ಪೆತ್ತಳೊ! ಮೇಣ ಯ್ಯನೇನೆಂದು ಸಾಕಿದನೊ! ಮುನ್ನಮೆಳವರೆಯದೊಳೀರೇೞ್ಗಾಲಂ ವನಂ ಬೊಕ್ಕು ನಿದ್ರಾಹಾರಂಗಳನುೞಿದು ಶ್ರೀರಾಮಚಂದ್ರಮನಂ ತ್ರಿಕರಣ ಶುದ್ಧಿಯಿಂ ಸೇವಿಸಿಯುಂ ಪಡೆದ ಸೈಪಿನೇೞ್ಗಿಗಿನಿತೊಂದು ಫಲಮಾಯ್ತೇ! ಹರಹರಾ! ಎನುತೆ ಚಿಂತಿಸುತಿರ್ದಂ. ಅನ್ನೆಗಂ—

[ಸೀತೆ] ತಾನೆ ಐರದಾಳಿಯ ಬಿಚ್ಚೋಲೆಯ ಚಂದನದ ಕುಂಕುಮದ ಕರ್ಮಣಿಯ ಕಸ್ತೂರಿಯ ಕರ್ಪೂರದ ಕಮ್ಮೆಣ್ಣೆಯ ಕಾವಿಗಪ್ಪಡದ ಕರಂಡಮಂ ಕೆಯ್ಯೊಳ್ಕೊಂಡು ಅಂತಃಪುರದಿಂ ಪೊಱಮಟ್ಟು ಪೊಱನಾಗಲ್ಗೆ ಬಂದು—ತಳ್ವದಿರ್ ಪೋಪಂ ಪೋಪಮೆಂದು ಮೈದುನಂಗೆ ಕೇಳಿಸಿದಳ್. ಆಗಳ್ ಜಿತಾತಿಕಾಯಂ ಕಾಯದೊಂದು ಕಾಯ್ಪುಂ ಒಡಲಿನೊಂದು ಸೂಡುಂ ಸೀತಾಂಗನಾವದನಶೀತಾಂಶುದರ್ಶನದತ್ತಣಿಂ ತಿಳಿದು ಮಾರ್ಪಟ್ಟುದೋ ಎನೆ ದೃಢಚಿತ್ತನಾಗಿ ಚೆಕ್ಕನೆ ಕೆಲನನಿೞಿದು, ಪೂಡಿದ ರಥಮಂ ನೂಂಕಿ ಸಜ್ಜುಗೆಯ್ದು ಕೆಯ್ಯ ಕರಂಡಮಂ ತಾಂ ಕೊಂಡಿಟ್ಟು, ದೇವಿಯರಂ ರಥಮನಲಂಕರಿಪುದೆಂಬುದುಮಂತೆಯೆ ಸಂಭ್ರಮದ ನಾಟ್ಯದಿಂ ತೇರನೇಱಿದಳ್. ಇಂತು ಜಾನಕಿ ರಥದೊಳ್ ಕುಳ್ಳಿರಲೊಡಂ ಲಕ್ಷ್ಮಣಂ ಬಗೆಯೊಳೆ ಕುಲದೈವಮಂ ಭಾವಿಸಿ, ಗುರುಜನಮಂ ನೆನೆದು, ತ್ರಿವಿಕ್ರಮಮೂರ್ತಿಯಂ ಸ್ಮರಿಸಿ, ಧರೆಯನೆನೆ ರಥಮಂ ಬಲವಂದು, ಹಯಂಗಳಂ ಬೋಳಯ್ಸಿ, ತಾನುಮಡರ್ದು, ಎಡಗೆಯ್ಯೊಳ್ ವಾಗೆಯಂ ಸಡಿಲ್ವಿಡಿದು, ಬಲಗೆಯ್ಯ ಕಸೆಗೋಲನಲುಗಿ ಚಪ್ಪರಿಸಿ ಜಡಿದಂ.

ಸಾಧ್ವೀ! ನಳ ನಳಕೂಬರ ಮಾತಲಿಗಳಂ ಸಾಟಿಗೆಯ್ಯದ ಸಾರಥಿಗೆಯ್ಮೆಯೊಂದು ಜಾಣ್ಮೆಯಿಂ ಸೂಟಿಯಿಂ ನೂಂಕೆ ಪಾಱಿ ನಾಡಿಂ ನಾಡಿಂಗೆ ಧೀಂಕಿಟ್ಟುವೋ ಎನೆ ಪವನಜವಮಂ ಮುಂಚಿ ವಾಜಿಗಳೋಟಂಗೊಂಡುವು. ತಿಜ್ಜನೆ ಸುತ್ತುವ ಪಾಱುಂಬಳೆಯ ಗಱಗಱಮುಂ, ಬಿಜ್ಜನೆ

ತೂಱಿ ಬೀಸುವ ಪ್ರತಿಕೂಲಪವನನೊಂದು ಭುಗುಭುಗಿಲುಂ,
ದಿಮ್ಮನೆ ಕುದಿವ ಕುದುರೆಗಳ ಖುರಪುಟದ ಪಟಪಟಮುಂ, ದೇವಿಯುರಂ
ಬಿಡುವುದಾಗದನ್ನೆಯಮಕ್ಕುಮೆಂದು ಕೂಡಿ ಮಱುಕದ ಮೊಱೆಯಿಂ
ಬೇಟ್ಪುವೆನೆ ರಾಘವಾನುಜನ ಕಿವಿಗೆ ಕಠೋರಮಾಯ್ತು. ಪತಾಕೆ
ಯೊಂದು ರಾಘವನೂಣೆಯುಮಂ ಕಾಣೆನೆಂದು ವಿಮುಖಮಾದುದು;
ಕೆಲಬಲನ ಸ್ಥಾವರಜಂಗಮಂಗಳ್ ಕಂಡುಂ ಕಾಣದಂತಿರೆ ಕಣ್ಮಱೆ
ಯಾದುವು.

ಇಂತು ರಥಂ ಪೋಗೆಪೋಗೆ- ನೋಟದಳತೆಯೊಳ್, ಹರಿಯುಂ
ಗುಟದ ತುತ್ತತುದಿಯೊಳ್ ಪುಟ್ಟಿಯುಂ ಬಾನ್ನವಿರನ ತಲೆಯನಡರ್ದುಂ
ಪಾರ್ವತಿಗೆ ಸವತಿಯಾಗಿಯುಂ ಪೊಂಬಸಿಱನ ಗುಂಡಿಗೆಯಂ ಪೊಕ್ಕು
ಪೊಱಮಟ್ಟುಂ ಧರೆಗಿೞಿದು ಬಂದು ಲೋಕಪಾವನೆಯೆನಿಸುತೋರಂದದೆ
ಪಾತಾಲದತ್ತಣ್ಗೆ ಪೋದ ತ್ರಿಪಥಗೆ ಕಾಣಿಸಿಕೊಂಡಳ್. ಇಂತೊಪ್ಪುವ
ಭಾಗೀರಥಿಗಿರ್ಮಯ್ಯೊಳಂ ಸಾರ್ಥಕಮೆನಿಸಿ ಕೌಂಗಿನ ದಾಳಿಂಬದ
ಚೆಂದೆಂಗಿನ ಸುೞಿನಾೞೆತಾೞೆಯೀಳೆಯ ಕಿಱುನಾರಂಗದ ಕೞಿವೆಯ
ಪೊಸತೋಂಟಂಗಳ್ ಕಣ್ಗೆಡ್ಡಮಾಗಿ ಸಾಲ್ಗೊಂಡೆಸೆಗುಂ. ಅಲ್ಲಿಗಲ್ಲಿಗೆ
ಪಣ್ತೊಂಗಲಿಂಬಿಡಿದ ಮುದ್ದಿಗೆಯ ಕಾವಣಮುಂ, ಕಂಪುಗುವ ಬಿರಿ
ಮುಗುಳಿನೊಪ್ಪುವ ಕಾಡುಮಲ್ಲಿಗೆಯ ಬಳ್ಳಿನಾಡಮುಂ, ರಾಜಿಸೆ ನೀರ್ದಾ
ಣದೊತ್ತಿನೊಳ್ ಪಚ್ಚನೆ ಬೆಳೆದ ಹರಿತಶಾಡ್ವಲಮುಂ, ಸುತ್ತುಂ ನೀಳ್ದ
ಪೊೞೆದುಂಗೆಯ ಜೊಂಪಮುಂ ವಿರಾಜಿಸೆ, ಮುಗಿಲನಿಱುಂಕುವ ಪೆರ್ಮ
ರಂಗಳ್ ಪಂತಿವಿಡಿದೊಪ್ಪಿರೆ ನದೀಪ್ರದೇಶಂ ಚೆಲ್ವಾಯ್ತು.

ಅನಿತಱೊಳ್ ಕಣ್ಣಳತೆಯ ಪೊಚ್ಚಂ ಕೆಯ್ಯಳತೆಯೊಳಾಗೆ ರಥದಿ
ನಿೞಿದಿರ್ವರುಂ ದರ್ಶನಸ್ತುತಿಗೆಯ್ದು ಮತ್ತಂ ದಾಂಟಲ್ಕೆಂದು ಅಂಬಿಗ
ರೊಡನೆ ಪಾಱನೇಱಿದರ್. ಆಗಳ್ ತನ್ನಂ ಮನ್ನಿಪೊಂದು ನೆವದಿಂ ಬಂದ
ಳೆಂಬ ಸಂತಸದಿಂ ಲೋಕಪಾವನೆಯೊರ್ಮೆ ಬೞಿಯೊಳ್ ಸುೞಿಸುೞಿದು
ಮೊರ್ಮೆ ಹೈಮಕಂಕಣದಿನೊಪ್ಪುವ ತೆರೆಗೆಯ್ಗಳಿನಪ್ಪಲ್ಕೆಂದು ಮೇಲ್ವಾ
ಯ್ದುಮೊರ್ಮೆ ಬೆಳ್ನಗೆಯೊಳ್ ನಕ್ಕುಮೊರ್ಮೆ ಮೆಯ್ವೆರ್ಚಿ ನಲಿನಲಿದು
ಮೊರ್ಮೆ ಮೆಲ್ನುಡಿಯಿಂ ಸ್ವಾಗತಮಂ ಕೇಳ್ದಂ ದೇವಿಯನುಪಚರಿಸುವ
ಳೆಂಬಂತಿರೆ ಬೞಿವೞಿಯೊಳ್ ಸುೞಿಯಿಂ ಸಿಡಿವ ಸೀರ್ಪನಿಯಿಂ ಕಿಱು

ದೆರೆಯಿಂ ನೊರೆಯಿನುಬ್ಬರದ ನೆರೆಯಿಂ ಕಳಕಳದೊಂದು ಮೊಱೆಯಿಂ ಗಂಗೆ ಕಂಗೊಳಿಸಲೊಡಂ ; ಸೀತೆ ಮನದೆ—ನೀನೆ ಗತಿಯೆಂದು ನಂಬಿ ವರ್ಪ ಸಜ್ಜನರ್ಗೆರ್ದೆಯೊಳಿಂಬೀವ, ಮೆಯ್ಯೊರ್ಬಿನ ಬಿಂಕದಿಂ ದುಡುಕಿ ಮೇಲ್ವಾಯ್ವ ದುರ್ಜನರನೆರ್ದೆಮೆಟ್ಟುವ ನಿನ್ನ ಪೆರ್ಮೆ ಪೆಱಗೊರ್ಳವೆ ! ಮುಟ್ಟಿ ಸೇವಿಪರ ಪಂಕಮನೊರ್ಮೊದಲೊಳೆ ಪಾೞ್ಗಡಿಸುತುಂ, ಶಶ್ವಜ್ಜೀವನಮನೀವ ಕಾವ, ಜೀವಕೋಟಿಯನೊಡಲೊಳ್ ಬಯ್ತಿಟ್ಟು ವಿಶ್ವರೂಪಿಣಿಯೆನೆ ಮೆಱೆವ, ನೆಲೆಗಾಣದ ನಿನ್ನೀರ್ಮೆಯುಂ ಬಣ್ಣಿಸಲಾವಂ ಸಾಲ್ವನೆಂದು ಗುಣಸ್ತವನಂಗೆಯ್ದಳ್. ಸೌಮಿತ್ರಿಯುಂ ತನ್ನ ಮುತ್ತಮುತ್ತ ಪಿರಿಯರನುದ್ಧರಿಸಿದ ಭಾಗೀರಥಿಯಂ ಬಲ್ಲಂತೆ ಪೊಗೞ್ದಂ.

ಅನ್ನೆಗಂ ಪಾಱೋಡಂ ಕರೆಮುಟ್ಟೆ ಬರೆ ನಾವಿಕರ್ಗೆ ತರಣಪಣ್ಯಮನಿತ್ತು ಮನ್ನಿಸಿ ಇರ್ವರುಮನುಕೂಲದೆಡೆಯ ಪುಳಿನದೊಳಿೞಿದರ್. ಆಸಮಯದೊಳ್ ನಡುವಗಲ ಭಾಸ್ಕರಂ ಸಿಡುಪಯಣದೊಂದು ಬೞಲ್ಕೆ ಕಡಿದಾಗೆ ಬಾಯಾಱಿ ತನ್ನ ಕರಂಗಳಿಂ ಗಂಗಾಜಲಮಂ ಮೊಗೆದೀಂಟಲ್ಕೆಂದು ತೇರಿನಿೞಿದು ಬಾನ ನಡುವೆ ನಿಂದನೆನೆ ನಿಶ್ಚಲಂ ಪೊಳೆಯುತಿರ್ದಂ. ತೊಳಗಿ ಬೆಳಗುವ ರವಿಯ ಕಿರಣಂಗಳಿತ್ತಂ ಪೊೞೆಯ ಜಲದೊಳ್ ಮಾರ್ಪೊಳೆಯಲೊಡಂ ಪಾಲ್ದೊಱೆಯೆನೆ ಗಂಗೆ ಪ್ರವಹಿಸುತಿರ್ಕುಂ. ನೇಸಱ ಕಾಯ್ಪಿನ ಸೂಡಿಂ ಬೆಂದು ಕುಂದಿ ನಂದಿ ಕಾಲ್ಗೆಟ್ಟು ಪವನನಾಗಳ್ ಬೆಚ್ಚನೆ ಬೀಸುತಿರ್ದಂ. ಗಂಗೆಯ ತಡಿಯೊಳಿರ್ಕೆಲನೊಳಂ ಬಿಸಿಲ ಜಳಕ್ಕೆ ಸೀರಡಸಿ [ಹರಿಣಗಣಂ] ಬಂದು ನಿಂದು ಮುಂಗಾಲಂ ನೀರೊಳೂಱಿ ಪಿಂಗಾಲಂ ನೆಲದೆ ಪಿಂತಿಟ್ಟು ಮುಸುಂಡಂ ನೀಡಿ ಕಣ್ಮುಚ್ಚಿ ನೀರಂ ಕುಡಿದು ತಣಿದು ಮರಲ್ದುವು. ಮರೆಗೊಣಸುಗಳೋರೊಂದೆಡೆಯ ತಣ್ಣೆೞಲೊಳ್ ಗಾಳಿಗೆ ಮೆಯ್ಯೊಡ್ಡುತೊಱಗಿ ಕೊಡಂಕೆಯಾಡೆ ಫೇನಮುತ್ಕಟಮಾಗೆ ಅರೆಯೆಟ್ಟಿಱಕೊಳೆ ಮೆಲ್ಕಾಡುತಿರ್ದುವು. ಸೋಗೆನವಿಲ್ಗಳ್ ನಾಟ್ಯರಂಗದತ್ತಣಿಂ ಬೀಡುಗೊಂಡುವು. ಖಗಂಗಳ್ ನಿಡುಮರಂಗಳ ತೊಱಲ್ಗೊಂಬನಡರ್ದು ಮೋನಮಿರ್ದುವು. ನೀರ್ವಕ್ಕಿಗಳ್ ಜಳಕೇಳಿಗೆ ಮೊಗಸಿದುವು. ಇಂತು ಮಧ್ಯಾಹ್ನಕಾಲಮಪ್ಪುದುಮವರ್ ಚೆನ್ನಸುಗೆಯ ನೆೞಲಡಿಯ ನುಣ್ಮೞಲೊಟ್ಟಿಲೊಳ್ ಕೆಂದಳಿರಿಂ ನಲ್ವಾಸುಗೆಯ್ದು ಕ್ಷಣಂ ಕುಳ್ಳಿರ್ದು ಮೇಣ್ ತೀರ್ಥದೊಳ್

ಮಿಂದರ್. ಅಂತು ಮಿಂದು ಸೀತೆ ತನ್ನ ಕಿಱುವೆರಲ ಶ್ರೀರಾಮಮುದ್ರಿಕೆಯಂ ಕೆಯ್ಕೊಳ್ ಕೊಂಡು ಗಂಗಾಜಲದಿನಭಿಷೇಕಂಗೆಯ್ದು ಲಕ್ಷ್ಮಣಂ ತಿಱಿತಂದ ಪುಷ್ಪದಿನಲಂಕರಿಸಿ ತನಿವಣ್ಗಳಂ ಸಮರ್ಪಿಸಿ ತೀರ್ಥಪ್ರಸಾದ ನೈವೇದ್ಯಂಗಳಂ ಮಯ್ದುನಂಗವಿತ್ತು ತಾನುಂ ಕೆಯ್ಕೊಂಡಳ್. ಲಕ್ಷ್ಮಣನುಂ ಗಂಗಾಜಲಸ್ನಾನಪರಿಪೂತಕಳೇಬರಂ ದೇವಿಯಂ ಮೂಱುಂ ಸೂಟ್ ಬಲವಂದು ಮಣಿದು ಇತ್ತುದಂ ಮಹಾಪ್ರಸಾದಮೆಂದು ಭಕ್ತಿಯಿಂ ಸ್ವೀಕರಿಸಿದಂ. ಅಂತಿರೆ ಬಿಸಿಲ್ ತಣಿಯೆ, ತಂಗಾಳಿ ಮೆಯ್ದೀಱೆ, ವಿಹಗಂಗಳ್ ನೇರದಿಂ ಪಾಡೆ, ಮಾರ್ತಂಡಂ ಪಶ್ಚಿಮಾಭಿಮುಖನಾಗೆ, ಸೀತಾಲಕ್ಷ್ಮಣರುತ್ತರಾಭಿಮುಖರಾಗಿ ಪೋಱಮಟ್ಟರ್.

ಇಂತು ನಡೆನಡೆದು ಬಲ್ದಾರಂಬೋಗಿ ನಟ್ಟಡವಿಯಂ ಪೊಕ್ಕು ಕಟ್ಟಕಡೆಯೊಳಣ್ಣನ ಕಟ್ಟಾಣತಿಯನೊರೆದು ಲಕ್ಷ್ಮಣಂ ಭೂಮಿಜೆಯನುೞಿಸಿ ಪೋದಂ.

ಎಂಬಲ್ಲಿಗೆ ಶ್ರೀರಾಮಾಶ್ವಮೇಧದೊಳ್
ಸೀತಾಪರಿತ್ಯಾಗಮೆಂಬ ಪಂಚಮಾಶ್ವಾಸಂ ಸಂಪೂರ್ಣಂ

---

## ಷಷ್ಠಾಶ್ವಾಸಂ

## — ವಾಲ್ಮೀಕಿದರ್ಶನಂ —

ಮನೋರಮೆ—(ಕಂಬನಿಗಱೆದು) ಆಃ! ಎನ್ನೊಡೆಯ! ನೀನುಮೆಂತು ಕಲ್ಮನನಾದಯ್ ಒರ್ತಡವೆಯೆ ದೇವಿಯಂ ಕಾರಡವಿಯೊಳು ೞಿದು ಲಕ್ಷ್ಮಣಂ ಪೋದನೆಂಬೊಡೆ. ಮಯ್ದುನಂಗಮಾದೊಡಮೆಂತು ಮನಮಾದುದೋ! ಮೇಣೆಂತು ದೇವಿಯರ್ಗೆ ಕಾವಲಿರದೆ ಪೋದನೋ! ತೊಱೆದು ಪೋಪನ್ನಂ ಸೀತೆಯೇನೆಂದು ಮಱುಗಿದಳೋ! ಅಕ್ಕಟಾ! ಪೆಣ್ಗಳೊಂದು [ಬಾೞ್ತೆ] ಬಾೞ್ತೆಯೆ!

ಮುದ್ದಣಂ—(ತಾನುಂ ಸುರಿವಶ್ರುಜಲಮಂ ಕಿಱುವೆರಲಿಂ ಮಿಡಿದು) ಪ್ರಾಣೇಶ್ವರೀ! ಈ ಇರವನೇನೆಂದು ಪೇೞ್ವೆನೊ? ಅೞಲ್ ಕೊರಲನೌಂಕುಗುಂ. ಮುಂಗತೆಯನಾನುಂ ಪೇೞ್ವೆಂ.

ಮನೋ—ಪೆಣ್ಣೊಡಲಲ್ತೆ! ಎಂತು ಸೈರಿಪೆಂ. ಸೀತೆ ಏನಾದಳ್, ಪೇೞಿ.

ಮುದ್ದ—(ನೀಡುಂ ಸುಯ್ದು) ಆಯ್ತು, ಕೇಳ್. ಅಂತು ಗಂಗೆಯಂ ಸ್ತುತಿಸಿ ಮುಂತೆ ಸೀತೆಯುಂ ಪಿಂತೆ ಸೌಮಿತ್ರಿಯುಮಾಗೆ ಪಯಣಂಬೋದರ್. ಸೀತೆಗೆ ವೈಖಾನಸರ ಮುತ್ತಯ್ದೆಯರನೇವೊೞ್ತಿಂಗೆ ಕಾಣ್ಬೆನೋ ಎಂಬೊಂದು ತವಕದಿಂ ನಡೆ ಮುಂಚಿದುದು ; ಲಕ್ಷ್ಮಣಂಗೆ ಅಣ್ಣನಾಣತಿಯನೆಂತೊರೆವೆನೋ ಮೇಣೆಂತು ದೇವಿಯಂ ತೊಱೆವೆನೋ ಎಂಬೊಂದು ದುಗುಡದಿಂ ಪಿಂಚಿದುದು. ಆಃ! ಚಂದ್ರಶಾಲೆಯೊಳೊರ್ಮೆಯುಂ ಶತಪಥಂಬೋಗೆ ಬಸವೞಿವ ಗರ್ಭಿಣಿ ಇಂದು ಬಿಸಿಲ ಬೇಗೆಗೆ ಕಾಪಥದೊಳಮಾಯಸಂದೋಱದೆ ಉಲ್ಲಸದಿಂ ನಡೆದು ಪೋಪಳೆಂದೊಡೆ ತವಕಮೆಂತಪ್ಪರುಮಂ ಮಾಱುಗೊಂಡಲ್ಲದೇಂ ಪೋಕುಂ! ಇಂತು ಮುಂಬರಿದು ಪೋಗೆವೋಗೆ ಸೀತೆ ಪಿಂದುೞಿದುೞಿದು ಬರ್ಪ ಮೈದುನಂಗೆ—ಏಂ ಕಂದ! ನಡೆಯೊಳ್ ಪಿಂದಾದಯ್? ಪಥದೊಳ್ ಕಲ್ಮುಳ್ಗಳಣಮಿಲ್ಲಂ. ಇಂತಿರೆ ಪೆಣ್ಣಾಂ ಸಾಗಿವರೆ ನೀಂ ಗಂಡುಗಲಿ ನಡೆಯಲಾಱೆಯೆನೆ, ನಾಣಲೇ! ಪಿಂಚದಿರ್ ಬಾರೆನುತೆ ಬೞಿವರ್ಪನ್ನಂ ಪಯಣಂಮಾಣ್ದು ನೆರೆವರೆ ಪಂತಿಗೊಂಡು ನಡೆಯುತಿರ್ದಳ್. ಮತ್ತಂ ಪೊೞ್ತುಪೊೞ್ತಿಂಗೆ ರಾಘವಾನುಜಂಗೆ ಕೆಲಬಲನ ವನಂಗಳಂ ತೋಱಿ ಅಂದಿನ ದಂಡಕೆಗೊರೆಯಾಗದೆಂದು ತೂಗಿ ಬಣ್ಣಿಪಳ್. ಎಂತಾನುಂ ಮೊದಲ್ ನುಡಿನುಡಿಗೊಂದು ಬೞಿಯುಮೆಡೆಯೆಡೆಗೊಂದು ಕಡೆಯೊಳ್ ಕಡೆಕಡೆಗೊಂದು ಹುಂಕಾರಮೆ ಲಕ್ಷ್ಮಣನ ಪಡಿನುಡಿಯಾಯ್ತು. ಅಂತಪ್ಪುದುಂ ಲಕ್ಷ್ಮಣನ ಮೊಗಮಂ ದಿಟ್ಟಿಸುತೆ ತಾಂ ಬೞಲ್ದಿರ್ಪನನೀತನುಮಾಯಸದಿಂ ಬೇಸತ್ತನೆಂದಱಿತು ಕೆಮ್ಮನೆ ಮೆಲ್ನಡೆಯಿಂ ಪೋದಳ್. ಲಕ್ಷ್ಮಣನುಂ ಬೆನ್ನನೆ ಬಿನ್ನನೆ ನಡೆದಂ. ಈ ಮಾೞ್ಕೆಯಿಂ ಕಡುದೂರಂ ನಡೆದು ಘೋರಾರಣ್ಯಮನೊಂದಂ ಪೊಕ್ಕರ್. ಮುನ್ನಮೆ ನಡೆನಡೆದು ಬೞಲ್ದು ಬಿಸಿಲ ಜಳಕ್ಕೆ ಬಾಡಿ ಬಸವೞಿದ ಬಾಲೆ ಈಗಳ್ ಕಂಗೆಟ್ಟಳೆ**ರ್ದೆ**ಗುಂದಿದಳ್ ಬಾಯ್ವಿಟ್ಟಳ್. ಹಾ! ಈ ಪೞುವನೇನೆಂದು ಪೇೞ್ವೆನೋ! ನೇಸಱ ಕದಿರ್ಗೆ ಇಂಬಿರದೆ ಕೞ್ತಲೆಗೆ ಬೀಡೆನಿಸಿರೆ ಒಂದೆಡೆಯಿಂ ಸಿಂಗಗರ್ಜನೆಯುಮೊಂದೆಡೆಯಿಂ ಪೆರ್ಬುಲಿಯ ಮೊಱೆಯುಮೊಂದೆಡೆ

ಯಿಂ ಗಜದ ಬೃಂಹಿತಮುಂ ಕೇಳಿಸೆ ಭೀಕರಮಾಗಿರ್ಪುದು ; ಕರಡಿಗಳ್ ದಾರಿಯೊಳಡ್ಡಂಗಟ್ಟಿ ಮೇಲ್ವಾಯ್ವುವು ; ಪೆರ್ವಾವುಗಳಿತ್ತಂ ಬುಸುಗುಟ್ಟುತ್ತೆ ಪರಿವುವು.

ಆಪೊೞ್ತಿಂಗೆ ಭೂಮಿಜೆ ದೆಸೆಗೆಟ್ಟು ತಿಟ್ಟನೇಱಿ ಬೆಟ್ಟನಿೞಿದು ಕಣಿಯಂ ಕೞಿದು ಅಗೞ್ತೆಯುಂ ದಾಂಟಿ, ದರಿಯುಂ ಸಾರ್ದು ಮರನಂ ಪಾಯ್ದು ಕಲ್ಲನೆಡವಿ ಮುಳ್ಳಂ ತಡವಿ ಕಣ್ಗಾಣದುಳ್ಕಿ ಬಳ್ಕಿ ನಡೆನಡೆದು ಕಾಲೊಡೆದು ನೆತ್ತರ್ ಬಸಿಯೆ ಮೆಯ್ಗುಂದಿ ಧರೆಗೆ ಹಮ್ಮಯಿಸೆ ಸೌಮಿತ್ರಿ ಮುಂದುಗಾಣದೆ ದೇವಿಯನುಪಚರಿಸುತಿರ್ದಂ. ಆಗಳ್ ಕಿಱಿದಾನುಂ ಬೇಗದಿಂ ಮುಚ್ಚೆದಿೞಿದು ದುಃಖಾರ್ತೆಯಾಗಿ ಮೈದುನಂಗೆ—ಓ ಲಕ್ಷ್ಮಣಾ ! ನಡೆಯಲಾಱೆನಯ್. ನೋಡು ನೋಡಯ್ ಕಲ್ಲೆಡಹಿ ಮುಳ್ನಾಂಟಿ ಕಾಲಿಂ ಬಸಿವ ನೆತ್ತರಂ. ಬಸಿಱನೊಂದು ಬೇನೆಯಿಂ ನೊಂದೆನಕ್ಕಟಾ ! ಮೈದುನಾ ! ಎತ್ತಲುಂ ಮೊಱೆವ ಸಿಂಹಶಾರ್ದೂಲ ಭಲ್ಲೂಕವೃಕಸೂಕರಾದಿದುಷ್ಟಮೃಗಂಗಳ ನಿಷ್ಠುರಧ್ವನಿಗೆ ಅಳ್ಕುವೆನಯ್ ! ಹಾ ! ಕಂದಾ ! ದುರ್ಘಟಮಾದೀ ಕಾರಡವಿಯೊಳ್ ಋಷಿಗಳ ಪುಣ್ಯಾಶ್ರಮಮುಂಟೇ ! ನಿಕ್ಕುವಂ ನೀಂ ಬಟ್ಟೆದಪ್ಪಿದಯ್. ಹಾ ! ಹಾ !! ಪಸಿದ ಪುಲಿಯ ಬಾಯ್ಗಿಂದು ತುತ್ತಾದೆನಲಾ ! ಹಾ ರಾಘವಾ ! ಹಾ ಪ್ರಾಣನಾಯಕಾ ! ಕೆಟ್ಟೆನೆಲಯ್. ಹಾ ಕರುಣಾಕರಾ ! ನೀನೆ ಪುಣ್ಯಮೂರ್ತಿಯಿರೆ ಪುಣ್ಯಾಶ್ರಮಂ ಪೆಱತುಂಟೇ ! ಕಮಲಮನುೞಿದುಂ ಮಧುಭ್ರಾಂತಿಯಿಂ ಕಿಂಶುಕಕ್ಕೆಱಗುವ ಭ್ರಮರನಂತಿರೆ ನಿರ್ನೆರಂ ಕಾಡೊಳಾದೆಂ. ನಿನ್ನಡಿದಾವರೆಯನುೞಿದು ಬಂದೊಡಿಂತೆನಗೀವಿಧಿಯಾಯ್ತೆ ! ಹಾ ! ಶ್ರೀರಾಮಚಂದ್ರಮಾ ! ಮುಂತೇನಯ್ ತನಗೆ ಬಟ್ಟೆ ! ಎಂದು ಬಾಯಾಱೆ ಮಱುಗಿದಳ್.

ಮೋಹನಾಂಗೀ ! ಇಂತು ಪ್ರಲಪಿಸುವ ರಾಘವನರ್ಧಾಂಗಿಯಿರವಂ ಕಂಡು ಲಕ್ಷ್ಮಣದೇವನ ಬಗೆಯೊಳೇನಕ್ಕುಂ ಬಗೆಯ. ಒಂದೆಡೆಯೊಳಗ್ರಭವನ ಕಟ್ಟಾಣತಿ ; ಒಂದೆಡೆಗೆ ಸೀತೆಯತ್ತಣ ಮಱುಕಂ. ಏವಂ ! ದೇವಿಗೆ ನೀನಂಜದಿರೆಂಬೊಡುಂಟೆ ! ಪುರಕೆ ಮರಳ್ಚುವೆನೆಂಬೊಡುಂಟೆ ! ತಾನೆ ಕಾವಲಿರ್ಪೆನೆಂಬೊಡುಂಟೆ ! ಆಃ ! ತಲೆವೋಕನೊಂದು ಮಾಟಮೋ ! ಅಂತಾಗೆ ರಾಘವಾವರಜಂ ಶಶ್ವದ್ಗಳದಶ್ರುಧಾರಾ

ಸಿಕ್ತಕಪೋಲಂ ಕಂಪಿತಕಾಯಂ ಸೀತೆಯ ಪದದೆಡೆಯೊಳ್ ಮೆಯ್ಯಿಕ್ಕಿ— ದೇವಿಯರೆನ್ನಂ ಕಂದನೆಂದು ಸಂಬೋಧಿಸದಿರಿಂ. ಪಗೆವನೆಂದೇ ಬಗೆಯಿಂ. ಇನ್ನೆವರಮುಣ್ಣನಾಣತಿಯಂ ನಿಮ್ಮೊಳೆಂದೆನಿಲ್ಲ. ನಾಡೊಳಾವನೊ ಮಡಿವಳನೊರ್ವನಭದ್ರಮಾಗೆ ದೇವಿಯರೊಳ್ ಕುಂದಿಟ್ಟು ದೇವರಂ ಚುನ್ನನಾಡಿದಂ ಗಡ! ಅಂತೀದೂಸಱಿನಗ್ರಭವಂ ನಿಮ್ಮಂ ವಿಪಿನದೊಳಿಱಿಪಿ ಬರ್ಪುದೆಂದೆನ್ನಂ ಪೇೞ್ದಂ. ಇದಕೊಳ್ಳಿಂ ಸ್ವಾಮಿಕಾರ್ಯ ಧುರಂಧರಂ ಅಗ್ರಜನ್ಮಾಜ್ಞಾನುವರ್ತಿ ವೀರಾಗ್ರಗಣ್ಯಂ ಕೃತಕೃತ್ಯಂ ನಚ್ಚಿನ ಮೈದುನನೆಂ ಲಕ್ಷ್ಮಣನೆಂ ಈ ಒಸಗೆಯಂ ಪೇೞಲ್ಕೆಂದು [ಬಂದು] ಬೆನ್ನಿಕ್ಕಿ ಪೊೞಲ್ಗೆ ಪೋದಪೆಂ, ಎಂದಂ.

ಸುಂದರೀ! ಅತಿಕಾಯವೈರಿಯುಸಿರ್ದ ಸೊಲ್ಲನಾಲಿಸೆ ಬೇರದ ಹರವಸಂ ತೋಱುಗುಂ. ಅತ್ತಿಗೆಯೀವೊಂದವಸ್ಥೆಗೆ ಪೞಯಿಸನೆ, ಬೇಯನೆ, ನೋಯನೆ! ಜಗದೆ ದುಃಖದೊಳೆ ಪೞಂಗಿದರ್ಗೆ ಮೇಣಾಂ ಮೇಣ್ ದುಃಖಮೊದವೆ ಬೇರದ ರೋಸಕ್ಕೆಡೆವರ್ಕುಂ. ಇಂತು ಲಕ್ಷ್ಮಣಾಂ ಪಾಷಾಣಕಠಿನಹೃದಯನಾದನ್ನೆಸೆ! ಎಂತುಂ ಕುಱು ಪೋದುದೇ? ಮನದೊಳೆ ಮಮ್ಮಲ ಮಱುಗಿದಂ, ನೊಂದಂ, ಬೆಂದಂ.

ಲಕ್ಷ್ಮಣನಂತಿರ್ಕೆ. ಸೀತೆಯಿರವನೇನೆಂಬೆನೊ? ಹಾ! ಹಾ! (ಕಂಬನಿಯಿಡುವಂ.) ಮುಂಗಾರ ಸಿಡಿಲ ಮೊೞಗಂ ಕೇಳ್ದು ಸುರುಂಟು ವಣಂಬೆಯು ತಿಟ್ಟದಂತೆ ನೆಟ್ಟನೆ ಬೀಸುವ ಬಿಱುಗಾಳಿಯು ಪೊಯ್ಲಿಂಗರೆ ಮುಱಿದು ಬಾಡುವ ಕಪ್ಪುರನಾೞಿಯಂತೆ ಒರ್ಮೊದಲೊಳೆ ದೇವರ ನಾಡಿದ ಪರುಷತರವಾಕ್ಯಮಾರ್ಗಣಂ ಕರ್ಣಕೋಟರಮಂ ನಾಂಟೆ ಮೆಯ್ಗಂದಿ ದುಃಖಾವೇಶದಿಂ ನಿಶ್ಚೇಷ್ಟಿತೆಯಾಗಿ ಮೇಣೊರ್ಮೆ ಹಂಮುದಂ ಬೋದಳ್. ಅನಿತಱೊಳೆ ಲಕ್ಷ್ಮಣಂ ನೆರೆಯೊಳೊಟ್ಟುವರ್ಬಿಯ ನೀರಂ ಸೆಟ್ಟೆಲೆಯೊಳ್ ತಂದು ದೇವಿಯೊಳ್ ತನ್ನೊಂದು ಕಡೆವೊಟ್ಟಿನ ಸೇವೆಯೆಂದು ಪಾದಕಮಲಮಂ ತೊಳೆದು ಕಣ್ಗೆ ಸುರಿದು ಕೆಯ್ಗೆ ತೊಡೆದು ದೊನ್ನೆಯಂ ಪತ್ರಪುಷ್ಪಮೆನೆ ಬೈತಲೆಯೊಳ್ ಶೇಖರಿಸಿದಂ.

ಈ ಶೈತ್ಯೋಪಚಾರಸಪರ್ಯೆಗೆ ಪ್ರಸನ್ನೆಯಾದಳೆನೆ ಕಣ್ದೆಱೆದು ಕೆಯ್ಯಲುಗಿ ಕಾಲ್ಮಗುೞ್ಚಿ ಸುಯ್ಲಾಡಿದಳ್. ಇಂತು ಮೆಯ್ಯಱಿತು ಅಳವುಗೞಿದ ಮನದೞಲಿಂ—ಹಾ! ಹಾ! ಕಂದ, ಲಕ್ಷ್ಮಣಾ! ಇಂತುಮೆ

ನ್ನೊಂದು ಬಾೞ್ಕೆಯುಸಕೞಿದುದೇ ! ಮಾವು ಬೇವಾಯ್ತೇ ! ಕರ್ಪೂರ ಕಯ್ಪೆಯಾಯ್ತೇ ! ತೆಂಗಾಯ್ ಸಿಂಗಾಯಾಯ್ತೇ ! ಬಂಡೊಸರ್ವ ನೆಯ್ದಿಲ್ ಸೆಂಡುಮಲ್ಲಿಗೆಯಾಯ್ತೇ ! ಇಂದಿಗೆ ಕೂರ್ಮೆಗಡಲ್ ಬಱಿತುದೇ ! ಹುಣ್ಣಿಮೆಯ ತಿಂಗಳಂ ರಾಹು ಕಣ್ಣವೆ ಮುಚ್ಚಿ ನುಂಗಿದುದೇ ! ಧರ್ಮಂ ಕರ್ಮಡುವೊಕ್ಕುದೇ ! ನೀತಿ ಬಾರ್ತೆಗೆಟ್ಟುದೇ ! ನನ್ನಿ ಬೆನ್ನಿತ್ತುದೇ ! ಹಾ ಕಂದ ! ಅನಾಥೆಯಾದೆನ್ಯೆ. ಹಾ ! ಹಾ ! ಮಜ್ಜೀವಿತೇಶನಿಂದೆನ್ನಂ ಕಾರಡವಿಯೊಳ್ ಬಿಟ್ಟು ಬಾರೆಂದನೇ ! ಎನ್ನೊಡೆಯಂ ತೊಱೆದನೇ ! ಕೂಟನೊಂದು ಪಿಸುಣ್ಗೆ ನಿರಪರಾಧಿನಿಯನೆನ್ನಂ ಬಲಿದೆತ್ತನೇ ! ರಾಮಚಂದ್ರಮನಿಂದೆನ್ನಂ ಕೆಯ್ಬಿಟ್ಟನೇ ! ಹಾಹಾ ! ಪ್ರಾಣನಾಥ ನಿನ್ನೆನ್ನಂ ಮುಟ್ಟನೇ ! ಅಕ್ಕಟಾ ! ಬಾೞ್ಗೆಲೆಯಾದೆನಲಾ ! ಹಾ ಕರುಣಾಕರಾ ! ಇನ್ನೆನಗೆ ಗತಿಯಾರ್ಗೆ ? ಹಾ ನಲ್ಲ ! ಮುಂತೆನಗೆ ಬಟ್ಟೆಯಾವುದ್ಯೆ ? ಹಾ ಕಾಂತ ! ಆವಗಂ ನೀನೆ ಗತಿಯೆಂದು ನಂಬಿ ಸೇರ್ದಳಂ ಇಂತೊರ್ಮೊದಲೊಳೆ ತ್ಯಜಿಸಲ್ಕೆಂತು ಮನದಂದಯ್ ? ಎನ್ನೊಳಾವುದೂಣೆಯುಮಂ ಕಂಡಯ್ ? ಊರೊಳ್ ಮಾರಿಯೆಂದು ಮನೆವೋಱಿಯುಂ ಮಾಱುಗುಡುವರೇ ! ಪಾಲ್ಪೊೞ್ತುದೆಂದಾವಂ ಪೊಯ್ವರೇ ? ನಿರ್ವ್ಯಾಜಮುಸಗನೊರ್ವಂ ತೆಗಟ್ಟೆನೆಂದಬಲೆಯನಿಂತು ಕಾರಡವಿಯೊಳ್ ಬಿಡುವರೆ ! ಹಾ ! ಮನೋವಲ್ಲಭ ! ಆಂ ನಿನ್ನರ್ಧಾಂಗಿಯಲ್ತೆ ! ಪಟ್ಟದರಸಿಯಲ್ತೆ ! ಎನ್ನನುೞಿದೆಂತರೆಮೊಯ್ಯೊಳಿರ್ಪಯ್ ! ಎಂತು ಪಟ್ಟವಣೆಯನೇಱುವಯ್ ! ಹಾ ರಾಘವಾ ! ನಿನ್ನಡಿಗಳಾಣೆ, ಎನ್ನೊಳ್ ಕೊಱತೆಯಿರೆ ಮನ್ನಿಸಿ ಕಾವುದಯ್; ಕೆಯ್ಮುಗಿದು ಬೇಡುವೆಂ, ಬೇಡುವೆನೆಂದು ಪಲುಂಬಿದಳ್.

ಮತ್ತಮೆಱೆಯನಂ ನೆನೆದು—ಹಾ ! ರಮಣ ! ಅಂದೆಳಮೆಯ್ಯೊಳೆನ್ನ ಮದುವೆಗೆಂದು ನೆರೆದ ರಾಯರ ಸೊರ್ಕಂ ಮುಱಿವಂತಿರೆ ಬಂದು ಹರನ ಬಿಲ್ಮುಱಿದ ನಿನ್ನ ಬೀರಮುಮಂ, ನಿನ್ನ ಘನಶ್ಯಾಮಲಕೋಮಲಗಾತ್ರಮುಮಂ, ನಿನ್ನ ಸೊಬಗುಗುವ ಮುಖಕಮಲಮುಮಂ, ನಿನ್ನ ಸೊಗಸುದೋಱುವ ಸವಿನುಡಿಯ ಜಾಣ್ಮೆಯುಮಂ, ನಿನ್ನ ನಡೆವ ಬಿಂಕದ ಗಾಡಿಯುಮಂ, ನಿನ್ನ ಕರ್ಣಾಂತವಿಶ್ರಾಂತಸರಳಸುಲೋಚನದರೆನೋಟದ ನೋಟಮುಮಂ, ಆನಿನ್ನ ಕಿಱುನಗೆಯ ಬಗೆಯುಮಂ ಕಂಡು ಸೋಲ್ತು

ಮೆಚ್ಚಿದೆನಲ್ತೆ ! ಅಂದಿಂದಿಂಗಮೆರವಿಲ್ಲದ ಕಡುಗೆಡೆಗಿಂದು ನೆರಮಿಲ್ಲದ ಬಿಡುಗಡೆಯಾಯ್ತೇ ! ಆಃ ! ಚೆನ್ನ ! ಆಗಳೆ ವನವಾಸಮುಂ ಪೋಪಂದು ಅರೆಗಳಿಗೆಯಾನುಂ ನಿನ್ನಂ ಬಿಟ್ಟಿರಲಾಱೆನೆಂದು ಬೆಂಬತ್ತಿದೆನಲೆ. ಈಗಳೆಂತೈ ಚಮೂರುಪಂಚಾಸ್ಯ ಭಲ್ಲೂಕ ವೃಕ ಸೂಕರಭೀಕರಮಾದೀ ನಟ್ಟಡವಿಯೊಳೊರ್ವಳೆ ನಿನ್ನಗಲ್ದು ಯಾವಜ್ಜೀವಮುಮಿರ್ಪೆಂ? ಹಾ ! ಕರುಣಾಕರಾ ! ಮುನ್ನಂ ವಿಪಿನದೊಳ್ ನಿಚ್ಚವಯಣಂಬೋಪಂದು ಆನೆನಸುಂ ಬೞಲ್ದಿರೆ ಬಲ್ಪೞಲ್ದಳೆಂದು ಪತ್ತೆಸಾರ್ದು ಕೆಯ್ವಿಡಿದು ಕರ್ನೆೞಲ್ಗೆಯ್ದು ತೊಡೆಯೊಳ್ ಕುಳ್ಳಿರಿಸಿ ಮೆಯ್ದಡವಿ ತನ್ನ ಚೇಲಾಂಚಲದಿಂ ಬೆಮರ್ತೆನ್ನೀಮೊಗಮಂ ಪೂಸಿ ಬೀಸಿಯುಂ, ಬಾಯಾಱೆ ನೆಟ್ಟನೆ ತಿಳಿಗೊಳನ ಪನಿನೀರಂ ಕಮಲದೆಲೆಯೊಳ್ ತಂದಿತ್ತುಂ, ನಿಡುವಯಣಕ್ಕೆ ಬೇಸಱಲೊಡಂ ಬಿನದಮಂ ತೋಱಿ ನಗುವಂತು ಮಾಡಿಯುಂ, ಕಲ್ಲೆಡಹೆ ನೊಂದಳೆಂದು ಮಱುಗಿಯುಂ, ನಿಲೆ ನಿಂದುಂ, ಪೋಗೆ ಪೋಗಿಯುಂ, ನಗೆ ನಕ್ಕುಂ, ಉಪಚರಿಸಿದ ನೀನೀಗಳ್ ಎಂತು ಕಲ್ಮನನಾಗಿ ಮಾಲತಿಯಂ ಮೆಕ್ಕೆಯಿಂ ಸಿಂಗರಿಸಿದಯ್ ! ಹಾ ! ರಾಮಚಂದ್ರಮ ! ದುಷ್ಟರಾಕ್ಷಸನಂದು ಪುಸಿದವಸಿ ಎನ್ನಂ ಕಳ್ದುಯ್ಯಲೊಡಂ ಬಿಡಲಾಱದ ಮೋಹದಿಂ ಮಱುಗಿ ಕೊರಗಿ ಪುಡುಕಿವಂದು ತುಬ್ಬಱಿತು ಪಿರಿದಾಯಸದಿಂ ಕಡಲ್ಗಣೆಗಟ್ಟಂ ಕಟ್ಟಿ ರಕ್ಕಸರೊಳ್ ಕಾದಿ ಮೊನೆಯೊಳ್ ಗೆಲ್ದು ಎನ್ನಂ ವನಕಟ್ಟುವೊಡೆಂದೇಂ ಮರಲ್ಚಿದಯ್? ಹಾ ! ಕಾಂತ, ನಿನ್ನಂ ಮಗುೞ್ದಿನ್ನೆಂದಿಂಗೆ ಕಾಂಬೆನೋ! ಎಂದಿಂಗೆ ನಿನ್ನ ಸವಿನುಡಿಯನಾಲಿಪೆನೊ ! ಇನ್ನೆಂದಿಂಗೊಡಗೂಡುವೆನೊ! ಹಾ ! ಹಾ ! ಆಬಿನ್ನಣದ ಆಬೆಡಂಗಿನ ಆಸೊಗಸಿನ ಆಗಾಡಿಯ ಆಸಿಂಗರದ ಆನಟನೆಯ ಆಅಂದದ ಆಹಾವದ ಆಭಾವದ ಆನೋಟದ ಆಬೇಟದ ಆಕೂಟದ ಸುಗ್ಗಿಯನೆಂತು ಮಱೆವೆನೋ !† ಹಾ! ರಾಮಾ! ಎಂದು ಸೀತೆ ಬಾಯುೞಿದೞ್ತಳ್.

ಇಂತು ಬಣ್ಣಿಸಿ ಬಣ್ಣಿಸಿ ಮಱುಮಱುಗಿ ಬಿನ್ನನಿರ್ದು ಮತ್ತಂ ಲಕ್ಷ್ಮಣನೊಳ್—ಕುಱುಂಬನ ಕುತ್ತಕ್ಕೆ ಕುಱಿಯ ಪಿತ್ತಮೆ ಮದ್ದಾಯ್ತು! ನೀಮನಿಬರ್ ಮೈದುನರಿರ್ದುಮೆನಗೀಪಾಡುಗೆಯ್ದರೇ ! ಅಣ್ಣಂಗೆ ನಯಂಬೇೞಿರೇ ! ತುಂಬಿದ ಬಸಿಱಿಯಲೇ ! ಎಂತೈ ಒಡಲ್ವಿಡಿದಿರ್ಪೆಂ ! ಅತ್ತೆವಿರಿಂತಿದಕೊರ್ಪಿದರೆ? ನಚ್ಚಿನ ಬಂಟಂ ಹನೂಮಂತಂ ಕೆಮ್ಮ

ನಿರ್ದನೆ ? ಸುಮಂತ್ರಾದ್ಯರ್ಗೆ ಮನಕ್ಕೆ ಬಂದುದೆ ? ವೃದ್ಧಂ ಜಾಂಬವಂ ತಡೆಯದಾದನೆ ? ಹಾ ! ಹಾ ! ಪೆಣ್ಣೆನ್ನೊಂದು ಬಾೞ್ಕೆ ಬಾೞ್ಕೆಯೆ ? ಎಂದು, ಬೞಿಯುಂ ತನಗೆ ತಾಂ ತಿಳಿದು—ಆಃ ! ನಿಮ್ಮನ್ನರನೇಕೆ ನಿಷ್ಕಾರಣಂ ದೂಱುವೆನೊ ? ಏತರ್ಕೆ ಬಾಯಾಱಿ ಮಱುಗುವೆನೋ ? ಇಂತಿರ್ದೇಂ ಕಾನನರೋದನಮಾಗದೆ ? ಪೂರ್ವಜನ್ಮದೊಳಾವ ದಂಪತಿಗಳೊಳ್ ಭೇದಮಿಕ್ಕಿದೆನೋ ! ಆವ ಹದಿಬದೆಯುಂ ಪೞಿದೆನೋ ! ಬೊಮ್ಮನೆನ್ನ ಪಣೆಯೊಳ್ ಬರೆದುದಿಂತುಟೈಸೆ ! ಇಂತು ರಾಘವನೆನ್ನನುೞಿದೊಡಮಾನೆಂತುಮಾತನಡಿಯುಂ ಬಿಡೆಂ. ಆತನೆ ಎನಗೆ ಗುರುವಾತನೆ ನಾಥಂ ಆತನೆ ಜೀವನಾತನೆ ಬಾಂಧವಂ. ರಾಘವನ ಶಾಸನಂ ನಾಡಂ ಸಮಂತು ಕಾಡಂ ಕೊಱತೆಯಿಲ್ಲದಾಳ್ಗುಮಲ್ತೆ. ಆನೊರ್ವಳ್ ಪೆಱಳೆ ? ಎನ್ನ ಪೂರ್ವಸಂಚಿತದಿನೀಬಟ್ಟೆಯಾದುದಲ್ಲ ಆತನೇಗೆಯ್ಗುಂ ; ಕರುಣಾಸಾಗರನಲ್ತೆ ! ನಂಬಿದರಂ ಕಾವನೆಂಬ ಬಿರುದುಳ್ಳನಲ್ತೆ ! ಆತನಡಿಯೊಲ್ಮೆಯೊಂದಿರಲ್ಕೆ ! ಎಂದು ಮತ್ತಂ ಕಣ್ಬನಿದುಂಬಿದಳ್.

ಇಂತಾಡಿದ ಜಾನಕಿಯ ಮಾತಂ ಕೇಳ್ದು ಲಕ್ಷ್ಮಣನುಂ ಮಱುಗುತೆ ಕೇೞ್ಮೊಗನಾಗಿ ನಿಂದಿರ್ಪುದುಂ ; ಸೀತೆ ಮೇಣ್ ಸೌಮಿತ್ರಿಗೆ—ಕಂದಾ ! ಏತರ್ಕೆ ನಿಂದಿರ್ಪಯ್ ? ತಳ್ವಿದನೆಂದು ನಿನ್ನೊಳಗ್ರಜಂ ಕೋಪಿಸನೆ ? ಅಣ್ಣನಾಜ್ಞೆ ಸಂದುದಲಾ ! ಪೋಗು ಪೋಗಯ್, ಎನುತೆ ಪೇೞ್ದಳ್. ಆಗಳ್ ತನ್ನಂ ತಾಂ ಪೞಿದು ದೇವಿಗೆ—ಆವನಗಲ್ದೆಳಗಱುವಿನಂತಿರೆನ್ನೊಂದಿರವಾಯ್ತೇ ! ಅಣ್ಣನಾಣತಿಯೆಂಬೊಂದು ನೇಣ್ ಗೋಣಂ ಬಿಗಿದೀೞ್ಗುಂ. ಆಗಳೆ ಬಲ್ಬಗೆಯೊಳ್ ಬೇಡಿದೆಂ. ದೇವರ ಚಿತ್ತಕ್ಕೆ ಬಾರದಾಯ್ತು ! ಎನ್ನ ಬಿನ್ನಪಂ ಪಾಪೆಯಂ ತುೞಿಲ್ಗೆಯ್ದಂತಿರೆ ಪೊೞ್ಳಱದಾಯ್ತು. ದೇವಿ ! ಎನ್ನೊಂದು ಮುನ್ನೊಡಲ ಅೞಿಗೆಯ್ಮೆಯ ಬೆಸುಗೆಯಿನೀಗಳೀಪಾತಕಕ್ಕೆ ಕೆಯ್ನೀಡುವೊಡಾದಮಾದೆಂ. ಅಂತಿರೆ ಗೋರಿಟ್ಟ ಸಯ್ಪಂ ದುರ್ವಿಷಯಂಗಳ್ಗೆ ಸೂಱೆಗೊಟ್ಟು ನಿರಯದ ಬಾಗಿಲ್ಗಾಪಿಗೆಂದು ದಕ್ಷಿಣಾಭಿಮುಖನಾಗಿ ಪೋಪನಂತೆವೋಲ್ ಪುಣ್ಯರೂಪಿಣಿಯಂ ಕಾಡಿಗೊತ್ತೆಯಿಟ್ಟು ಪಾೞ್ಪೋದ ನಾಡಿಂಗೆ ಮರಲ್ವಿರ್ಪೆಂ. ಮಾತೇ ! ಇಂತಿರ್ಪನಂ ನಿರ್ಘೃಣನಂ ಕುಲಘಾತುಕನಂ ದುಷ್ಟನನುದ್ಧರಿಸೌ, ಎಂದು ಸೀತೆಯ ಕಾಲೊಳ್ ಕೆಡೆದಂ.

ಇಂತಡಿಗೆಱಗಿದ ಮೈದುನನಂ ಸಂತಮಿಟ್ಟು—ಏೞೇೞ್ ಕಂದ, ಕೆಯ್ವಿಡಿದ ನಲ್ಲನೇ ಮುನಿವೆಡೆಯೊಳಾರೇನೆಂಗುಂ. ನಿನ್ನೊಳೇನಪರಾಧಂ? ಪೆಣ್ಣೆನಿಸಿ ಪುಟ್ಟಿದೆನ್ನಯ ದೋಷಂ. ಪೊೞ್ತೞಿದುದಲ್ತೆ. ಪೋಗಯ್. ನಿನ್ನೊಳ್ ಪೆಱತೇನೆಂಬೆನೊ? ನಿನ್ನಂ ನಿನ್ನಣ್ಣಂ ಕೇಳ್ದೊಡೆ, ನಿನ್ನಾಣತಿಗಬಲೆ ಮಱುಗಿದಳಿಲ್ಲ; ಮಾರ್ನುಡಿದಳಿಲ್ಲ; ಮುನಿಸಾಂತಳಿಲ್ಲ; ಬೆರ್ಚಿದಳಿಲ್ಲ; ಕೊಟ್ಕುದಿಗೊಂಡಳಿಲ್ಲ; ದೂಱಿದಳಿಲ್ಲ; ನೀನೆ ಗತಿಯೆಂದು ನಿನ್ನಡಿಯಂ ನೆನೆಯುತೆ ಕಡೆವೊೞ್ತುಂ ಪಾರುತಿರ್ಪಳೆಂದು ಬಿನ್ನಯಿಸಯ್. ಅತ್ತೆವಿರ್ಗೆ—ನಿಮ್ಮ ಪರಕೆಗೊಂಡು ಬಾರದಿರ್ಪಿನಮೆನಗೀವಿಧಿ ಒಂದುಗೂಡಿದುದು. ಈಗಳ್ ನುಡಿಯಿಂದಮೆ ಮಣಿದು ಕ್ಷಮೆಯಂ ಬೇಡುವೆನೆಂದೆನ್ನ ನುಡಿಯೊಳೆ ಪೇೞಿಯ್. ಊರ್ಮಿಳಾದ್ಯರಂ—ನಿಮ್ಮೊಳ್ ನಿಧಾನಿಸದೆ ಬಂದೊಂದೂಣೆಯುಮಂ ಮನ್ನಿಸಿ ತನ್ನನೆಂದೆಂದುಂ ಮಱೆಯದಿರ್ಪುದೆಂದು ಕೇಳ್ದಳೆಂದು ಪೇೞಿಯ್. ಮೇಣಯ್ಯಂ ಬೞುವೞಿಯಿತ್ತ ನಲ್ದೊಡವುಗಳೊಳ್ ಎಕ್ಕಸರಂ ಶ್ರುತಿಕೀರ್ತಿಗೆ ದುಕ್ಕಂಡದ ಪಿಂಡುಗಂಕಣಂ ಮಾಳವಿಗಾಱಕ್ಕಸರಂ ನಿನ್ನರಸಿಗೆ; ಮಿಕ್ಕಿರೆಯುಂ ದಾಸಿಯರ್ಗೆ ನೀಂ ಪಚ್ಚುಗುಡಯ್. ಅಂತುಮಲ್ಲದೆಯುಂ, ಎನ್ನ ಬಲ್ಗಾಲದ ನಚ್ಚಿನ ನಲ್ಗೆಳದಿ ಚಂದ್ರಮತಿಗಾ ಎನ್ನ ಚಂದಿರಗಾವಿಸೀರೆಯುಂ ಬಣ್ಣಗುಪ್ಪಸಮಂ ಹಬ್ಬದ ನಿಚ್ಚವಚ್ಚಮನೆಲ್ಲಮಂ ಮೆಚ್ಚನಿತ್ತು ಆಂ ಮುನ್ನಂ ಬಾಸೆಯಿತ್ತ ಪೂರ್ಣಪಾತ್ರಮೆಂದೆ ಮಱುಗದಂತಿರೆ ಪೇೞಿಯ್. ನಿನಗೆನ್ನೊಳ್ ದಯೆಯಿರ್ಕುಮಪ್ಪೊಡೆ ಲೋಗರನುವಿಂಗೊಂಡು ದಮ್ಮಾಣೆಯನೇರ್ಪಡಿಸಯ್. ಮೇಣ್ ಮುನಿಸತಿಯರ್ಗೆಂದು ತಂದು ರಥದೊಳುೞಿವಿಟ್ಟ ಬಾಯಿನಮನೊರ್ವ ಮುತ್ತಯ್ದೆ ಪಾರ್ವತಿಗೆ ಕುಡಿಸಯ್. ಆ ಎನ್ನ ಪೂಜೆಯ ಕವಿಲೆದುಱುವಂ ಆಎನ್ನ ಮುದ್ದಿನೆಳಗಱುವಂ ಬಡನಾಗದಂತು [ನೋೞ್ಪುದೆಂದು ಪೇೞ್ದು] ನಿನ್ನಬ್ಬೆಗೆ ಕೆಯ್ವರ್ತಿಸಯ್. ಇನಿತೊಂದೆನ್ನೀಕಡೆಗಾಲದೆ ಪುಟ್ಟಿದ ಬಯಕೆಯಂ ಸಲಿಸ. ನಿನಗೆ ಮೇಲಕ್ಕೆ! ಮೇಣ್ ಪಯಣಂ ಸೊಗಮಕ್ಕೆ! ಎಮ್ಮೆಲ್ಲರ್ಗೆ ಶ್ರೀರಾಮನಡಿದಾವರೆಯೊಲ್ಮೆಯೊಂದು ವಜ್ರಪಂಜರಮಕ್ಕೆ! ಪೋಗಯ್, ಎಂದು ಪರಸಿ ಲಕ್ಷ್ಮಣಂಗೆ ಪಯಣಕ್ಕಾಣತಿಗೊಟ್ಟಳ್.

ಆಗಳ್ ಸೌಮಿತ್ರಿ ದೋಲಾಯಮಾನಮಾನಸನಾಗಿ ದೇವಿಯರಂ

ಬಲವಂದು ಕೆಯ್ಮುಗಿದು ದೆಸೆವಳರ್ಗೆ—ಈಕೆ ನಿಮಿಕುಲದೆ ಪುಟ್ಟಿದ ರಾಜಯೋಗಿಯಪ್ಪ ಜನಕನಣುಗುಗುವರಿ, ರಕ್ಕಸರ ಬಳಗಮಂ ಸದೆದು ದೆಸೆವಲಿಗೊಟ್ಟು ನಿಮ್ಮಂ ಪೊರೆದ ಶ್ರೀರಘುರಾಮನ ಪಟ್ಟದ ರಾಣಿ. ಎಮ್ಮಣ್ಣನಾಣತಿಗಿವಳಂ ವನದೊಳಿರಿಸಿ ಪೋಪೆಂ. ಪೂರ್ಣಗರ್ಭಿಣಿ. ನೀಮೆಲ್ಲರ್ ಕಾವಲಿರ್ದು ಕಾಯಿಮೆಂದು; ಭಾಸ್ಕರಂಗೆ—ಎಲೆ ಆದಿತ್ಯ! ನಿನ್ನ ಕುಲವಧುವಿವಳ್ ನಿನ್ನ ಬಳಿವಳ್ಳಿ ಮಡಲ್ವಿಡಿವಳ್ ತಾಯ್ವೇರ್. ಅಂತದಱಿಂ ಇವಳೊಳ್ ದಿಟ್ಟಿಯಿರ್ಕೆ! ಎಂದು; ವನದೇವಿಗೆ—ಎಲೆ ಶಾಕಂಭರಿ! ಇದೆಕೊಳ್ ಭಾಗ್ಯಲಕ್ಷ್ಮಿ ನಿನ್ನ ಕೆಳತನಕ್ಕೆಳಸಿ ಬಂದಿರ್ಪಳದುಕಾರಣಂ ನೀನುಮಿವಳುಮೊಡಗೆಳದಿಯರಾಗಿ ಸಂತಮಿರಿಮೆಂದು ಕೇಳಿಸಿ, ಅಗಲ್ದು ಪೋಪನೆಂಬೊಂದು ಬೇಸಱಿಂ ಖಿನ್ನೆಯಾಗಿ ತನ್ನನೆ ನೋಟ್ಪ ದೇವಿಯಿರವಂ ನೆನೆನೆನೆದು ಗಾಳಿಗೆ ಮಾಱುಡ್ಡಿ ಪೋಪ ಪತಾಕೆಯ ಕೌಸುಂಭಾಂಬರದಂತಿರೆ ಮನಂ ಪಿಂದುಳಿಯೆ ನಡೆವಟ್ಟೆಯೆನೆ ಪಲವುಂ ಪಂಬಲೊಂದು ದಂದುಗಂ ಬೆಟ್ಟಿತಾಗೆ ಬೀಳ್ಕೊಂಡಂ.

ಮುದ್ದಣಂ—ಅತ್ತಲಯೋಧ್ಯಾನಗರಿಯೊಳ್ ಜನ್ನಗುದುರೆಯಂ—

ಮನೋರಮೆ—ಸುಡು ಸುಡು ನಿನ್ನ ಜನ್ನಗುದುರೆಯಂ! ಆಕತೆಗೀಗಳೆ ಪೊಳ್ತೇ? ಆಃ! ಸೀತೆಯೇನಾದಳೆಂತಿರ್ದಳೆಂದು ಪೇಳೆಯ್?

ಮುದ್ದಣಂ—ಬಾಲೇ ಆಯ್ತಾಯ್ತು. ಅಂತು ಲಕ್ಷ್ಮಣಂ ಬೆನ್ನಿತ್ತು ಪೋಪುದುಮಾದೆಸೆಯನೆ ನೋಡಿ ನೋಡಿ ದುಃಖಂ ಮಿಱುಕೊಂಡೋರಗೆಯ ತನ್ನೊಂದುಃ ಬವಣೆಗೆ [ಮೆಳ್ಪಟ್ಟು] ಚಿಂತಿಸಿ ತನ್ನೊಳ್ ತಾಂ—ಆಃ! ನಿಮಿಕುಲಕಂ ಚಲಕಂ ಗಂಡನೆನೆ ಪೆಸರ್ವಡೆದು ಪಟುನುಡಿವೆಂಡಿರ ಬೈತಲೆವಣಿಗೆ ಬೆಲೆಗಟ್ಟಿ ಬ್ರಹ್ಮರ್ಷಿಗಳ್ಗಂ ತತ್ತ್ವಮಂ ಬೋಧಿಪೊಂದು ಜಾಣ್ಮೆಯಿನೇಳ್ಗೆವೆತ್ತ ಜನಕರಾಜಂಗೆ ಮುದ್ದುಮಗಳೆನಿಸಿಯುಮುಖಂಡಮಂಡಲೇಶ್ವರರ್ ಮಱುಗೊಂಡು ಪುದುವಾಳ್ವಿನಂ ತನ್ನ ಜಸದೆಸಕದಿಂ ನೆಗಳ್ತೆವಡೆದ ಸಾರ್ವಭೌಮರಾಘವನಂ ಕೆಯ್ಪಿಡಿದು ಪಟ್ಟದರಸಿಯಾಗಿಯುಮಂತವುರದ ಸಱುಮಿಂಡಿಯರಿನೋಲಯ್ಸಿಯುಂ ಬಾಳ್ವನಗೀಗಳಿಂತೊಂದು ವಿಧಿ ಬಗೆದುದೇ! ಹಾ! ಆ ಎನ್ನರಸನ ಅಂಗಸಂಗಮಿನ್ನೀ ಕಾಲಕುಂಟೇ! ಅಯ್ಯೋ! ಆಐಸಿರಿಯಾಪಟ್ಟಮಂಚದಾಅಂಚೆದುಪ್ಪುಳಾ

ನಲ್ವಾಸಿನಾಪಟ್ಟೆಕೌಳುಡೆಯಾಪುಷ್ಪದಾಗಂಧದಾಸಿರಿಯ ಸುಖಾನುಭವಮನಿನ್ನೆಂತು ಮಱೆತಿರ್ಪೆನೋ ? ಆಃ ! ಆಃ !! ಇಂದ್ರಚಾಪದ ಪಾಂಗಿನಿಂ ಪಲವಗೆವಣ್ಣದಿಂ ರಂಜಿಪ ಆ ಎನ್ನಪೂದೋಂಟದ ಸೊಬಗೇ ! ಆ ಎನ್ನ ನೀರಾಟದ ತಿಳಿಗೊಳನೊಂದು ಸೊಗಸೇ ! ಹಾ ! ಎನ್ನ ಮುದ್ದಂಚೆ ! ಆಗಳುಮೆನ್ನ ಮಂಜೀರದ ಮಂಜುನಾದಂ ಕೇಳಿಸೆ ಪಿಂದೆಸೆಯೊಳೆ ಕೇಂಕರಿಸುತೆ ಬೞಿವಪ ನೀನಿಂದಾರಂ ಬೞಿಸಾರ್ವೆಯ್ ? ಹಾ ! ಎನ್ನ ಪಂಜರದ ಸಾರಿಗೆಯೋ ! ಪಾಲನೆಱೆವಳಾವಳೋ ? ಪಣ್ಣೀವಳಾವಳೊ ? ನುಡಿಸುವಳಾವಳೊ ? ಹಾ ! ಹಾ ! ಕಾಲದೊಂದು ಗತಿಯೋ ! ಓ ! ಏತಱ ಮಾತೊ ? ನಿಮಗೇಂ ಸೊಗಗೇಡೊ ? ಒರ್ವಳ್ ಪೋಗೆ ಪೆಱಳೊರ್ವಳಿರ್ಕುಂ. ಆನೊರ್ವಳೆ ಬಡವೆ ಬಱುವೆಯಾದೆಂ. ಉಃ ! ಪೋಕೆ ! ಪೞುವೞಿಲಿನೇಂ ? ಇವು ಭೋಗಂಗಳ್ ನಶ್ವರಂಗಳಲ್ತೆ ! ಆನೆ ರಾಯುಗುವರಿಯಾಗಿ ಪುಟ್ಟೆನೆ ? ಕಾಡಂ ಪೊಕ್ಕು ರಕ್ಕಸರ ಬಂದಿಗೊಳಗಾಗೆನೆ ? ದೇವಿಯಾಗೆನೆ? ಈಗಣೀಬವಣೆಗೆ ಬಾರೆನೆ? ಸಾಜಂ, ಸುಖದುಃಖಂಗಳ್ ಪಗಲಿರುಳಂತೆವೋಲ್ ಲೋಕದೊಳ್ ಪರಿವರ್ತಿಸಿರ್ಕುಂ. ಇವಱೊಳೆನಗಕ್ಕಱು ಪೋಯ್ತು. ಶ್ರೀರಾಮನೊಲ್ಮೆಯೊಂದೆ ಶಾಶ್ವತಂ. ಆತನ ನಾಮಸ್ಮರಣೆಯೆ ಎನಗೆ ಬಟ್ಟೆ. ಹೇ ಕಲ್ಯಾಣರೂಪ ! ನೀನೆನ್ನಂ ಕೆಯ್ಬಿಡದಿರಯ್. ಹೇ ಜಗದೊಡೆಯ ! ದೆಸೆಗೆಟ್ಟೆನ್ನಂ ಮಱೆಯದಿರಯ್. ಹೇ ಕರುಣಾಕರ ! ಪೆಣ್ಣೆನ್ನೊಳ್ ಕರುಣೆಯಿರಲಯ್. ರಾಮಾ ! ರಾಮಾ !! ರಾಮಾ !!! ಎಂದು, ಧ್ಯಾನದೊಳಿರ್ದಳ್.

ಆಪೊೞ್ತಿಂಗೆ ವೇದಪುರುಷನೇ ಮುದುಪಿನೊಂದು ಪರಿಜಿಂ ಮೆಯ್ಗೊಂಡು ನಡೆತಂದನೋ ಎನೆ—ಮೂಡಿವರ್ಪ ನೇಸಱ ಪಸುಳೆವಿಸಿಲ ಬೆಳ್ಗಿಂಪಿನ ಪೊಸಪೊಗರಿಂ ಕಣ್ಗೊಳ್ವ ಪೂರ್ವಾದ್ರಿಕೂಟಮೆಂಬಂತಿರೆ ಮುಂದಲೆಯೊಳರೆಗೆಂಪಿನ ಬೆಳ್ವೆಳಗಿಡಿದ ಜಡೆಮುಡಿ ವಿರಾಜಿಸೆ, ಮಾಗೆಯ ಬೆಳ್ಮುಗಿಲಾಗಸದಂತಿರೆ ಭಸಿತೋದ್ಧೂಳಿತಲಸಿತಲಲಾಟಂ ಕಣ್ಗೊಳಿಸೆ, ಇನ್ನೀತನಸಿದಿರ್ಚಿ ಕೆಯ್ಮಾಡೆನೆಂದು ಆಣೆಯಿಟ್ಟು ಕಾವನರೆಮುರಿದ ಕರ್ವುವಿಲ್ಲೆಂಬಂತಿರೆ ಶಿಥಿಲಮಾಗಿ ಜೋಲ್ವ ಪುರ್ವಸೆಯೆ, ಜ್ಞಾನದೃಷ್ಟಿಯ ನೆರ[ಮೋ ನೆರಂ] ಪೊಱನೋಟಮೇವುದೆಂದು ಮುರಿದು ನೋೞ್ಪನೆನೆ ತುಱುಗೆವೆಯುರೆದೆಱೆದ ಕಣ್ಣೊಚ್ಚತಮಾಗೆ, ತನ್ನಚ್ಚಿಯ ಮುರಿನೋಟದ

ವಿಶ್ರಾಂತಿಯೆಡೆಯಿದೆನೆ ನೀಳ್ದ ನಾಸಾಪುಟಂ ರಂಜಿಸೆ, ಭಾರತಿಯ ಪದ್ಮಪೀಠಂಬೋಲ್ ಮುಖಕಮಲಮೊಪ್ಪಿರೆ, ಗೊರವನ ಬೆಳ್ಗೊರಲೊಳಮರ್ದ ಹಾಲಾಹಲದ ಕರ್ವೆಳಗುದುಱುಗಲ ಮಾಟ್ಕೆಯಿಂ ಶಂಖಧವಳಕಂಠದೊಳ್ ಪತ್ತುವಿಡಿದೇಕಮುಖೀರುದ್ರಾಕ್ಷವೊಂದು ತೇಜಂಬೊಳೆಯೆ, ಜೋಗಗೆಳೆಯರೆಣ್ಬರೇೞುವರ್ಪನ್ನಮುೞಿವಗೆಗಳಿಟ್ಟುವೋದ ನಿಚ್ಚಣಿಗೆಯೆಂಬಂತಿರಿರ್ಬದಿಯೊಳಮೆಲ್ವಗ್ಗಳ ಸಾಲ್ಗಳ್ ತೋಱೆ, ಸಡಿಲ್ದ ಮಾಯೆದಾವಿನ ಪಲವುಂ ಪುರಿಗಳೆಂಬಂತೆವೋಲ್ ಸೆರೆಗಳೆತ್ತಂ ಮಡಲ್ತಿರೆ, ನಡುವಿನೊಳುಟ್ಟ ವಲ್ಕಲಂ ತೊವಲುಡೆಯನ ಕೃತ್ತಿವಾಸಂಬೋಲ್ ಮನೋಜ್ಞಮಾಗಿರೆ—ವಾಲ್ಮೀಕಿ ತಾನಾಬಟ್ಟೆಯೊಳೆ ಬರುತುಮಿರ್ದಂ.

ಇಂತು ಬರುವರುತೆ ಕಟ್ಟೆದಿರೊಳ್ ಅರೆವೆಱೆಗಲ್ಲಮುಂ ಕರಪಲ್ಲವದೊಳೂಱಿ ಮುಂಬಗಲ ಪೆಱೆಯಂತೆ ಕಳೆಗೆಟ್ಟುಂ, ತನ್ನೊಂದು ಕಣ್ಬೊಗರ್ ಕಾಳಿಂದಿಯ ಕರ್ಮಡುವಿನೊಳೋಲಾಡುವ ಬಾಳೆಮೀನ ಪಾಂಗಿನಿಂ ಪೊಳೆಯುತಿರೆ ಎತ್ತಂ ನೋಟ್ಪ ಪೆಣ್ಣೊರ್ವಳಿರೆ ಕಂಡಚ್ಚರಿವಟ್ಟಾರವಳೆಂದಱಿವೊಡೆಂದು ಮುಟ್ಟೆಯಿಸಿ ಬಂದು—ಆರೌ ? ವನದೇವಿಯಂತಿರೀವನದೊಳೊರ್ವಳೆ ಇರ್ಪುದೇಂ ? ಎಂದು ಬೆಸಗೊಂಡಂ. ಆನುಡಿಗೆ ಸೀತೆ ಮನದೊಂದು ಭಯದಿಂ ಗಟ್ಟಿನೆಟ್ಟು ಪಿಂಜರಿದು ಮುನ್ನಿನೊಂದು ಬನ್ನಮಂ ನೆನೆದು ರಕ್ಕಸರ ಮಾಯೆಯೆಂದೇ ಬಗೆದು—ಎನ್ನಾಣೆ ! ರಾಯನಾಣೆ ! ಪತ್ತೆಸಾರದಿರ್ ಸಾರದಿರ್, ಎಂದು ಕಿಸುಗಣ್ಚಿ ಮರನಂ ಮಱೆವೋದಳ್.

ಇಂತಪ್ಪುದುಮಾಪುತ್ತಿನ ಪುತ್ರಂ ಆವಳೊ ಬಾಲೆ ತಳ್ಳಂಕಂಗೊಂಡಳೆಂದು ಮಱುಮಾತಿನೊಳ್—ಬಾಲೆ ! ಆಂ ಅನ್ಯರಲ್ತು ; ತಪಸಿಗಳ್. ಕಾಡೆ ನಾಡಾಗೆ ಈಯೆಡೆಯ ಆಶ್ರಮದೊಳೆ ಇರ್ಪೆವು. ಅಂಜದಿರೌ ! ನೀನಾರ್ಗೆ ? ಪೆಸರೇನೆಂದು ಪೇೞೌ, ಎಂದು ಕೇಳ್ದಂ.

ಇದರ್ಕೆ ಸೀತೆ—ರಾವಣಂಬೋಲ್ ಪುಸಿದವಸಿಗಳ್ ಪಲಂಬರೊಳರ್ ; ಸವಿನುಡಿಯಿಂ ಬೋಸರಿಸಿ ಮಾಯೆಗೆಯ್ವರ್. ನಿಮ್ಮಂದಿಗರೊಳೇಂ ಮಾತೊ ? ಶ್ರೀರಾಮನಾಣೆ ! ಸನಿಯಂ ಬಾರದಿರ್ ಎಂದು ಮಾರ್ನುಡಿವುದುಂ ; ಮುನಿಪಂ ರಾಮನಾಮಮಂ ಕೇಳ್ದು ಸಂದೆಗದಿಂ ತಾನುಂ—ದೇವೀ, ರಾಮನಾಣೆ ! ತನ್ನಾಣೆ ! ಆಂ ಕವಡುದವಸಿಯಲ್ತು,

ವಾಲ್ಮೀಕಿ ಕಣಾ ! ಬೞಿವೋಕಂ ; ನಿರ್ಜನಪ್ರದೇಶದೊಳಿರ್ಪೀಬಾಲೆ ನಿನ್ನ ನಱಿವೊಡೆಂದೆ ನುಡಿಯಿಸಿದೆಂ, ಪೆಱತೆಣಿಸದಿರೆಂದು ಪ್ರಾರ್ಥಿಸಿದಂ.

ಆಗಳ್ ಭೂಸುತೆಗೆ ಮನದ ಭಯದ ಕವಲ್ ಪತ್ತುವಿಡೆ, ಸಂದೆಯಮೆನಸುಂ ಪೆಡಂಮೆಟ್ಟೆ, ದಿಟದ ನಂಬುಗೆಯಿಂಬುಗೊಳೆ—ಅಂತಪ್ಪೊಡೆ ನೀಂ ಮಾನ್ಯಂ. ನಿನಗೆಱಗುವೆಂ. ತಂದೆ, ಎನ್ನಿರವನೇನೆಂಬೆನೋ ? ಜನಕರಾಜಂಗೆ ಮಗಳಾಗಿ ದಶರಥಂಗೆ ಸೊಸೆಯಾಗಿ ಶ್ರೀರಾಮಂಗೆ ಪಟ್ಟದರಸಿಯಾಗಿ ಬಾೞ್ದೆನ್ನ **ಬರ್ದುಂ**ಕು ಈಗಳ್ ವನದೊಳಾಯ್ತ್ತು ! ರಕ್ಕಸನೊಳ್ ಬಂದಿವಾೞ್ದೆನ್ನನೊಪ್ಪುಗೊಂಡೆನೆಂಬೊಂದು ಲೋಕಾಪವಾದದ ದೂಸಱಿಂ ಶ್ರೀರಘುಜನೆನ್ನನಡವಿಯೊಳ್ ಬಿಸುಟ್ಪುದೆಂದು ಲಕ್ಷ್ಮಣಂಗೆ ಬೆಸನಿತ್ತು ಕಳಿಪಿದನ್ನೈ ! ಅಂತು ಲಕ್ಷ್ಮಣ ನೀಗಳೆ ಉೞಿದು ಪೋಪಿನಂ ಕಾಡಿಂಗೆ ಕೋಳುವೋದೆನೆಂಬೊಂದು ಭೀತಿಯಿಂ ಬೆದಱಿ ಬೆಬ್ಬಳವೋಗಿ ಬನಗಟ್ಟಲೆಗೆ ಕಱಂಗಿದೀಮರಂಗಳಿಱುಂಬಿನೊಳ್ ದೆಸೆಗೆಟ್ಟು ವನಪಿಶಾಚದಂತಿರೆ ಇದೆಕೊಳ್ ಮಱುಗುತಿರ್ದಪೆಂ. ಎನ್ನೀಅೞಿಮೆಯ್ಯುಂ ಬಾವಿದಾವುಗಳ್ಗೊಪ್ಪಿಸಿ ಎನ್ನಿನಿಯನಂ ಮಗುೞ್ದುಂ ಕಾಣಲಕ್ಕುಮೆಂದೊಡೇವೆನ್ನೈ! ಅಱುದಿಂಗಳ ಗರ್ಭಿಣಿಯಪ್ಪಿನಂ ಆತ್ಮಹತ್ಯಭ್ರೂಣಹತ್ಯದೋಷಂಗಳೊರ್ಮೊದಲೊಳೆ ಬಂದೊದವುಗುಮೆಂದೆ ಮಾಣ್ದೆಂ. ಹಾ ! ಎಂದು, ಆತನ ಪಾದಕಾನತೆಯಾದಳ್.

ಇಂತೆಱಗಿದಳಂ ಕಂಡು ಮುನಿಪಂ—ಅಂತಾಗದೌ ! ನಿಕ್ಕುವಂ ನೀಂ ಮಕ್ಕಳಂ ಪಡೆವುದುಂಟು. ಮಱುಗದಿರ್. ಎಡೆಯೊಳೆ ಎಮ್ಮಾಶ್ರಮಂ. ಜೋಗವಟ್ಟಿಗೆಯಾಣೆ ! ರಾಘವನಾಣೆ ! ಮಗಳೆಂದೆ ನಿನ್ನಂ ಸಲಪುವೆಂ. ಏೞೌ, ಎಂದು ಸಂತಯಿಸಿ ಭಾಗ್ಯಲಕ್ಷ್ಮಿಯಂ ಕೊಂಡುಯ್ವ ದೀನನಂತಿರೆ ಸಂತಸದಿಂ ತನ್ನಾಶ್ರಮದತ್ತಣ್ಗೆ ಕರೆದುಯ್ದಂ.

ಇಂತು ಸೀತೆ ಕಿಱಿದಾನುಂ ದೂರಂಬೋಗೆ- ತನ್ನ ಕೂಡುವಳಗದ ನಿಚ್ಚ ದಂದುಗದೊಂದು ಮಿಡುಗಿಂ ನಂಜುಂಡ ಬಾನ್ನವಿರಂ ಗಜಮುಖನ ಬಿರಿವೊಡೆಯ ಪಾವಂ, ಅಱುಮೊಗನ ತೇರ ಸೋಗೆಯಂ, ಪಾರ್ವತಿಯ ಸಿಂಗಮುಂ, ತನ್ನ ಬಸವನಂ ಇನ್ನಾನುಂ ಪಗೆಯಂ ಮಱೆತು ಸಂತಂ ಪುದುನಾಟ್ಪುದೆಂದು ಬುದ್ಧಿವೇೞಲೊಡಮದುವೆ ವಿರಾಗಮಂ ಪುಟ್ಟಿಸೆ ಪ್ರಪಂಚದೊಳ್ ತಮಗೇತಱ ಸುಖಮೆಂದು ತಾಮೊಂದುಗೂಡಿ

ತಪಶ್ಚರ್ಯೆಕ್ಕೆಂದು ವನಂಬೊಕ್ಕು ನಿರ್ವೈರದಿನಿರ್ಪುವೆನೆ- ಒಂದೆಡೆಯೊಳ್ ಬಯ್ಗಿನ ಕಿಱುಮುಗಿಲೊಡ್ಡಂ ಕಂಡುಲ್ಲಸದಿಂ ಪೊಂಗಿ ಇಡಿಕಿಱಿದ ಪೀಲಿಗಳಂ ಬಿದಿರ್ಚಿಯುಮಣಿಗಟ್ಟಿ ಕೇಗಿ ತನ್ನೊಂದಾಡಂಬರದಿಂ ಮಯೂರಂ ತಾಂಡವಕ್ಕಾರಂಭಿಸಲೊಡಂ ತಾನುಂ ವಾಲ್ಮೀಕಿಯೆನೆ ಪುತ್ತ್ರನೊಂದು ವ್ಯಾಳಂ ಪೊಱಮಟ್ಟು ತೀಡುವ ತೆಂಬೆಲರ್ಗೆ ಮೆಯ್ಯೊಡ್ಡಿ ಪಱಿದು ರಂಗಂಬೊಕ್ಕು ನೆರೆಯೊಳೆ ಮಂಡಲಾಸನಂಬಲಿದು ಕುಳ್ಳಿರ್ದು ನಾಟ್ಯಂ ಮನಂಗೊಂಡುದೆನೆ ಪೆಡೆಯೆತ್ತಿ ತಲೆಯೊಲೆದು ಸಭ್ಯಂಬೋಲ್ ನಿಟ್ಟಿಸುತಿರೆಯುಂ, ಕೆಲವಾನುಂ ಕಾಲದಿಂ ಸಮಾಧಿಸ್ಥನಿರ್ಪುದುಂ ಪೊಱಗೆ ಬಳೆದ ಬಂಬಲ್ವಡೆಯೆನೆ ಮತ್ತಮೊಂದೆಡೆಯೊಳ್ ಗೋಣ್ಣವಿರ್ ಮುಮ್ಮಡಂಬರಂ ಮುಸುಂಕಿರೆ ಪಟ್ಟೊಂದು ಪುತ್ತ್ರ ಸಿಂಗಕ್ಕೆ ತನ್ನ ಕೇಸರಮೆ ಜಾಲಮಾಗಿ ಪರಿಣಮಿಸೆ, ಕಾಲ್ ಸಿರ್ಕಿನೊಳಾಗೆ, ಮಗುೞ್ದುಂ ಮಗುೞ್ದುಮೇೞಲಾಟಿಸಿಯುಮಾಱದಿರೆ ಪೊರಳ್ದೊರಲ್ವುದಂ ಬಱಿಯೊಳೆ ಕಡವೆ ಕೇಳ್ದು ನೆಟ್ಟನಾಎಡೆಗೆ ಬಂದು ತನ್ನೆರಡುಂ ಶೃಂಗದಿಂ ಸಿರ್ಕುಂಗೊಂದಲಂ ಬಿಡಿಸುತಿರೆಯುಂ, ಇಂತಿದು ಪುಣ್ಯಾಶ್ರಮದ ಮೈಮೆಯೆಂದು ಬಗೆದಂದು ಸಂತಸಂದಾಳ್ದರ್. ಅಂತು ಮುಂತೆ ಮುಂತೆ ಬರುವರ್ಪುದುಂ—

ಎಮ್ಮಂದಿಗರೆಂತಂತು ಪಸುಗೆಗೊಂಡುಂ ಪಡಿಯನೆ ಚರುಚಾರುಗಂಧಮುಂ ಕವರ್ನೆಂಬೊಂದು ಪುರುಡಿಂ ಜನ್ನಗೊಂಡದ ಬೇಳುರಿ ಚಟಚಟಿಸಿ ಕಿಡಿಕಿಡಿವೋಪುದುಂ, ಕಿಸಿಸಿಂ ಕಿಚ್ಚಂ ತಳ್ತೊಯ್ದುಂ ಧೂಮಧ್ವಜಮುಂ ಮುರಿದುಮೀಬಗೆಯಿಂ ಮುನಿಗೆ ದೂಱಲ್ಕೆಂದಿದಿರ್ವಂದನೆನೆ ಚರುಪುರೋಡಾಶಂಗಳ ನಱುಗಂಪುವೊರೆದ ಪಾವನಪವನಂ ತೀಡೆ ಆಗಳೆ ಹವಿರ್ಭಾಗಮುಂ ಕೈಯ್ಕೊಳಲ್ಕೆಂದು ತಪೋವನಕಿೞಿದು ಬಂದಿಂದಿರನ ಮುಗಿಲ್ತೇರೆನೆ ಹೋಮಧೂಮಂ ನಾಲಾಳೇಱಿನೊಳ್ ಚೆದಱಿ ತಳ್ತಿರೆ, ಮುಂದೆಸೆಯೊಳ್ ಗೋರಂಟೆಯ ಮರುಗದ ದವನದ ಪಸುರ್ದೆನೆಯ ಅಜ್ಜಿಗೆಯ ಜಾದಿಯ ಮುಡಿವಾಳದ ಮಡಿಯ ಎಡೆಯೆಡೆಯ ಸಂಪಗೆಯ ಸುರಯಿಯ ಬಕುಳದ ಸಿರಸದಸುಗೆಯ ಮರಂಗಳನಪ್ಪು ಕೆಯ್ದು ಕಾಡುಮಲ್ಲಿಗೆಯ ಮೊಲ್ಲೆಯ ಸೀಲಗಂಧಿಯ ಬಳ್ಳಿಗಳೆಡೆಯಸಿಡಿಕಿಱಿದ ಬಂದುಗೆಯ ಪಾದರಿಯ ಪಡ್ಡಳಿಯ ಗಿಡುಗಳ ಪಂತಿಗಳ್ ತೋಂಟದೊಳ್ ಪೂವೆಂದುಂ ಮುಡಿಯುದೆಸೆವ, ಪಣ್ ಎಂದುಂ ಬೀಯದ

ಫಲವೃಕ್ಷಂಗಳಿತ್ತಂ ತುಱುಗಿ ಬೆಳೆದಿರೆ ಭ್ರಮದ್ಭ್ರಮರನಿನದಮೊಂದುಂ ಕಿವಿಗಿನಿದಂ ಕಱೆಯೆ, ಋಷ್ಯಾಶ್ರಮೋಪವನಂ ಸೀತೆಗೆ ಕಣ್ಗೆವಂದತ್ತು.

ಅಂತುಮಲ್ಲದೆಯುಂ ಮಟ್ಟಿಯ ಮುಟ್ಟುಗದರಳಿಯ ಸಮುದೆಗಳ ನಳತೆಯೊಳ್ ಕೊಯ್ದುಪರ್ಣನಾರಿಂ ತಲೆವೊಱೆಗಟ್ಟಿ ತರ್ಪ ವಟುಗಳಿಂದೆಯುಂ, ಬೆಲ್ಲವತ್ತದ ಬದರಿಯ ಪಚ್ಚೆಲೆಯನೊಟ್ಟಿ ಗಱಿಕೆಯ ತೊಳಚಿಯ ದಾಂಗುಡಿಯುಂ ಚಿವುಂಟಿ ಬಾೞವಟ್ಟೆಯೊಳ್ ಮೂಡಿ ತರ್ಪ ಬಾಲವಟುಗಳಿಂದೆಯುಂ, ಕುಂದದ ಪಾರಿಜಾತದ ಮಂದಾರದ ಪಾಟಳಿಯ ಬಿರಿಮುಗುಳಂ ತಿಱಿತರ್ಪ ಮುನಿಕನ್ಯೆಯರಿಂದೆಯುಂ ಪುಣ್ಯಾಶ್ರಮಂ ಮನೋಹರಮಾಯ್ತು.

ಮತ್ತಮಲ್ಲಿ ಉಟಜಾಂಗಣದೊಳೊಂದೆಡೆಯೊಳ್ ಸಂಜೆಯ ಶುದ್ಧಿಗೆಂದು ಪೊಡೆಯೊತ್ತೆ ಬಾಲಂ ನಿಮಿರೆ ಲಂಡಮನುಚರ್ಪಾಕಳಿಂ, ಆಕಳ ಗೋಮಯಮಂ ಕಲಂಕಲ್ಕೆಂದು ತಮ್ಮ ಕರಪುಷ್ಕರದಿಂ ನೀರಂ ತಂದು ತುಱುಂಕುವ ಮಱಿಯಾನೆಗಳಿಂ, ಮಱಿಯಾನೆಗಳ್ ಕಲಂಕಿದೆಡೆಯಂ ತುದಿವಾಲದಿಂ ಬಱಿವ ಚಮರೀಮೃಗಂಗಳಿಂ, ಚಮರೀಮೃಗಂಗಳ ಸಾರಣೆಯೊತ್ತುಗೊಂಡು ನೆಲನ ತಣ್ಣಸಾಱೆ ತಮ್ಮ ಮೊಗದ ನರೆ ನವಿರನುದುರ್ತೆ ಪೋಪ ಗಂಡುಗರಡಿಗಳಿಂ, ಕರಡಿಗಳ್ ಸಜ್ಜುಗೆಯ್ದು ನೆಲನೊಳ್ ರಂಗವಲ್ಲಿಯಂ ಬರೆವ ಕರ್ಗೋಡಗಂಗಳಿಂ, ಮತ್ತಮದೊಂದೆಡೆಯೊಳ್ ಎಕ್ಕಲನಗುಬ್ಬು ಗೋಱಿಟ್ಟ ಗೆಱಸಿಂ, ಸಿಂಗನಾಯ್ದು ಪರೆಪಿದುದಿರ್ವಣ್ಣಿಂ, ಮೇಣೊಂದೆಡೆಯೊಳ್ ಶೌಚದ ಸ್ನಾನದ ವೇದಪಾರಾಯಣದ ಸಂಧ್ಯೋಪಾಸ್ತಿಯ ಜಪದ ತಪದ ಸಂಕೀರ್ತನೆಯ ಉಪದೇಶದ ಯೋಗಾಭ್ಯಾಸದ ಪುರಾಣಶ್ರವಣದ ಋಷಿವರ್ಗದಿಂ ಸೊಗಯಿಸಿದುದು.

ಇಂತೊಪ್ಪುವಾಶ್ರಮಮಂ ಕಂಡು ಸಂತಸಮಾಗೆ ವಾಲ್ಮೀಕಿವೆರಸು ಸೀತೆ ಸಂಜೆಯೊಳ್ ಸಂಧ್ಯಾದೇವಿಯಂತಿರೆ ಮುನಿ ತೋಱಿದೆಲೆವನೆಯಂ ಆಶ್ರಮವಾಸಿಗಳ್ ಪೊಗೞೆ ದೇವರ್ಕಳ್ ಕೊಂಡಾಡೆ ಬಂದು ಪ್ರವೇಶಿಸಿ ಮುನಿಯ ಪಾಲನೆಯೊಳ್ ಸೊಗದಿನಿರ್ದಳ್.

ಎಂಬಲ್ಲಿಗೆ ಶ್ರೀರಾಮಾಶ್ವಮೇಧದೊಳ್
ವಾಲ್ಮೀಕಿದರ್ಶನಮೆಂಬ ಷಷ್ಠಾಶ್ವಾಸಂ ಸಂಪೂರ್ಣಂ.

---

## ಸಪ್ತಮಾಶ್ವಾಸಂ.

## — ವಿಜಯಪ್ರಯಾಣಂ —

ಮುದ್ದ—ಎನ್ನ ಕೊಂಡಾಟದ ಬಾಳ್ವಣಮೆ! ಇಂತು ಭೂಜಾತೆ ಪ್ರಾಚೇತಸನೊಲ್ಮೆಗಾಸಿಂ ಪುಣ್ಯಾಶ್ರಮದೊಳಿರ್ಪಿನಮಿತ್ತಲ್ ಸಾಕೇತ ನಗರದೊಳ್ ಸೀತಾರಾಮಂ ತನ್ನ ಬಿರ್ದಿನ......

ಮನೋ—ನಲ್ಲ! ಏಮಾತೋ? ಸೀತೆಯನಂತುೞಿದುಮೇತಱ ಸೀತಾರಾಮಂ. ಪೋ! ಮಾಣ್! ಅವಂಗಿನ್ನೆತ್ತಣ ಸೀತೆ? ಅಪ್ಪೊಡಿನ್ನಾಕಲ್ಲೆರ್ದೆಯಂ ರಾಮನೊ ಭೀಮನೊ? ಏಂ?

ಮುದ್ದ—ಎನ್ನ ಕೆಯ್ಗಳಸಮೆ! ಇಂತುಮೆಂಬರೆ! ಶ್ರೀರಾಮಂ ಕಲ್ಲೆರ್ದೆಯನೆ! ಆಃ! ಬೞಿಕ್ಕಮಾತನ ಪ್ರಳಾಪಮಂ ನೀಂ ಕೇಳ್ದುದಿಲ್ಲಂ.

ಮನೋ—ಏಂ ತಾನೆ ತಲೆವೊಯ್ದುಂ ಮಱುಗಿದನೆ?

ಮುದ್ದ—ರಾಮಂ ತಲೆವೊಯ್ದನೇಂ? ತಾಂ ಯಶೋಧನನಪ್ಪಿನಂ ಲೋಕಾಪವಾದಭೀತಿಗಡವಿಗಟ್ಟಿದನಲ್ಲದರಸಿಯೊಳೇಂ ಪಗೆಯೆ?

ಮನೋ—ಪಗೆಯೇಂ, ನಗೆಯೇಂ? ಬಡವೆಯೊರ್ವಳ್ ಕಾಡಿಂಗಾದಳ್ಳೈಸೆ?

ಮುದ್ದ--ಇಂತಿದನೆ ನೆನೆನೆನೆದೞುಂಬಂ ಪಲುಂಬಿದಂ.

ಮನೋ—ಏಂ ತನಗೆ ಪೆಱರ್ ಪೆಂಡಿರಿಲ್ಲೆಂದೆಯೆ?

ಮುದ್ದಣಂ—ಪರಿಹಾಸಂ ಸಾಲ್ಗುಂ ಕೇಳ್. ಏಗಳ್ ಲಕ್ಷ್ಮಣಂ ಸೀತೆಯಂ ಕೊಂಡುಯ್ದನೆಂಬ ವಾರ್ತೆ ಕೇಳಿಸಿದುದಾಗಳೆ ಪಶ್ಚಾತ್ತಾಪದಿಂ ರಾಘವನ ಮನವೊಳಗೊಳಗೆ ಬೆಂದು ಬೇಗುದಿಯೊಳಿರ್ದತ್ತು; ಮೋಣೆಂದು ವನದೊಳಿೞಿಪಿ ಬಂದೆನೆಂದನಂದೆ ಒರ್ಮೆಯೆ ಉರ್ಕಿದುದು. ಮಾತೇಂ?

ರಾಘವನಿಂತೊಂದು ದುಗುಡದಿಂ ತನ್ನೊಳೆ ತಾಂ— ಆಃ! ಬಿದಿಯೇ! ಎನ್ನೊಳಮಿಂತು ಮಾಡುವರೇ? ಎನ್ನ ಬಾೞ್ಕೆಯಿಂತು ನಂದಿದುದಲೇ! ಏಂ ಮಾಡೆಯೊ! ಸೊಗಂಬಾಳ್ವರೊಳ್ ಮಿೞ್ತುವಂ ಸಂಚುಗೆಯ್ದುಂ, ಪುದುವಾಳ್ವರೊಳ್ ಪಗೆಯಂ ದೂದಟ್ಟಿಯುಂ, ತಾಂ ಪಿಡಿದಿರ್ಪರೊಳ್ ಕಾವನಂ ಕಾವಲ್ಮಾಡಿಯುಂ ನೋಟಮಾಟಂಗಳ್ಗೆ ತೋಱದನಲ್ತೆ!

ಓ ! ನಿನ್ನನೇಂ ಬಯ್ವೆಂ ? ನೀನುಮೆನ್ನಂತಿರೆ ನಾಣ್ನುಡಿಯೊಳ್ ನೊಂದಿ ದೈಸೆ ! ಹಾ ! ಲೋಕಾಪವಾದದೊಂದೇಟ್ಟಿರದ ಬಲ್ಮೆಯೋ ! ಎಂತಪ್ಪರುವಂ ಬಿಟ್ಟಿರಯೋ ! ನಿನ್ನೀದೂಸಱಿಂ ಮದುವೆನಿಂದ ಮಡದಿಯುಂ ಬಿಟ್ಟಪುರ್ದಾಯ್ತು. ನಿಷ್ಕಳಂಕೆಯೆಂದಱಿಯೆನೆ ? ಪಾವನೆಯೆಂದಱಿಯೆನೆ ? ಹಾ ! ಹಾ ! ಸೀತೆ ! ಎನ್ನಂ ಕೈಪ್ಪಿಡಿವಿನಂ ನಿನಗೊದವಿದ ಭಾಗ್ಯಮೋ ! ಎನ್ನನೆ ವರಿಪೆನೆಂದಾವ ದೈವಮುಂ ಮುಂ ನೋಂತೆಯೊ ! ಅಕ್ಕಟಾ ! ಕೈಪ್ಪಿಡಿದಿನ್ನೆಬರಮೊಂದು ದಿನಮಾದೊಡಂ ಸೊಗಮಂ ಕಂಡುದುಂಟೇ ! ಎಳವೆ ವನಸಂಚಾರದೊಳಾಯ್ತು ; ಬಳವಿ ರಕ್ಕಸರ ಬಂದಿಯೊಳಾಯ್ತು ; ಕೆಟಿವೆ ಪುಲಿಕರಡಿಗಳಿನಗುರ್ವಿಸಿದ ಕಾರಡವಿಯೊಳಾಯ್ತಲೇ ! ಅಯ್ಯೋ ! ಅಬ್ಬೆಯಿಲ್ಲದ ಪೆಣ್ಮಗಳನೊರ್ವಳಂ ಕಾಡಿಗೊತ್ತೆಗೀವೊಡೆಂದೇಂ ಮದುವೆನಿಂದೆನೇ ! ಆಃ ! ಚೆನ್ನೇ ! ನಿನ್ನಾಪಾತಿವ್ರತ್ಯಮನಾಸೌಜನ್ಯಮನಾವಿನಯಮನೆಂತೊ ಮಱೆವೆಂ ! ಮುನ್ನಮಯ್ಯನ ನನ್ನಿಗೆ ವಿಪಿನಕ್ಕೆ ತೆರಳ್ವನ್ನಮಾಂ ಪೊಱಮಟ್ಟೆನೆಂದು ಕೇಳ್ದುಮಗಲ್ದಿರಲಾಱದೊಂದು ಮೋಹದಿಂ ಬೆಂಬತ್ತಿದ ನಿನ್ನಂ ತಕ್ಕುವರ್ಗೆಗೆಟ್ಟುಂ ಪೇಱದೆಯುಮಾನೆ ಪಱಿವಿಂಗಟ್ಟಿದೆನೇ ! ಕಿಱುನಗೆಯ ಮೋಡಿಯೊಳೊರ್ಮೆ ತಾಂ ಬಱಿಲ್ದುಂ—ನಲ್ಲ ! ಬಱಿಲ್ದೆಯು ! ಕುಳ್ಳಿರ ಎಂದು ಪಾಸಱೆಯುಂ ತೋಱಿ ತಾನುಮೊತ್ತಿನೊಳ್ ಮಂಡಿಸಿ, ನೆವದ ಬಣ್ಣನೆಯೊಳ್ ನುಡಿಯಿಸಿ, ಕೂಡೆವೋದಂದಿನ ಪಯಣದ ದಿನಂಗಳನಿನ್ನುಂ ಮಱೆತೆನಿಲ್ಲಕ್ಕಟಾ ! ಮಗುಱ್ದೊರ್ಮೆ ನಗರಂಬೊಕ್ಕು ತಾಂ ಪಟ್ಟದರಸಿಯಾದೆನೆಂಬೊಂದು ಸಂತಸದಿಂ ತನ್ನೋರಗೆಯ ಕೆಳದಿಯರ್ಗೆ ತೊತ್ತಿರ್ಗೆ ಮೆಚ್ಚನಿತ್ತುದೇಂ ಠಿಕ್ಕೆಕೊಂಪೆ ! ತನ್ನಬಾವದ ನಲ್ಮೆಯೊಲ್ಮೆಯ ನುಡಿಯೊಳರನೆಂಡಿರ ಪೆರ್ಮೆಯ ಸೊರ್ಕಿನ ಕೊರ್ವಿನ ಬಿಂಕಮುಂಟೇ ! ಆಃ ! ಸಿಗ್ಗಾಳಿ ! ಆಗಳುಂ ಸುಶೀಲದಿನೆನೆ ಬಾಗಿ ನಡೆವ, ಕಜ್ಜವಿರೆ ನುಡಿಗೊಂದು ನುಡಿವ, ನೆವದಿಂ ನಗುವ, ಪುಸಿಮುನಿಸಿಂ ಮುನಿವ, ತಿಳಿಪೆ ತಿಳಿವ, ನಿನ್ನ ರತಿರಹಸ್ಯಮನಿನ್ನೆಂತು ಮಱೆವೆನೋ ! ಬಲ್ಗಾಲದಿಂ ತನಗೆ ಮಕ್ಕಳಾದುದಿಲ್ಲೆಂದು ಮೆಯ್ಯಂ ತವಿಸಿ ನೋಂಪಿಯುಂ ನೋಂತಳ್ಗಿದಾ ! ಎಂತೆಂತೊ ದೈವಮನುಗ್ರಹಿಸಲೊಡಮೀ ಪೊಟ್ಟೆಂಗೀಗತಿಯುಮಾಯ್ತು. ಅಕ್ಕಟಕ್ಕಟಾ ! ಆಗರ್ಭಿಣಿಯೆಂತು ಪ್ರಸವವೇದನೆಯಂ ಸೈರಿಪಳೊ ! ಇನಿಯಂ ಕೈವಿಟ್ಟನೆಂಬೊಂದು ದುಗು

ಡವೊಂದು ; ವನವಾಸದ ಬವಣೆಯೆರಡು ; ಕಾಟ್ಮೃಗಂಗಳತ್ತಣಿಂ ಭಯಂ ಮೂಱು ; ಬಱುವೆಯೆಂಬೊಂದು ಬೇಸಸಂ ನಾಲ್ಕು ; ಬಸಿಱ ಬೇನೆಯೈದು ; ಅಯ್ಯೋ ! ಈ ಉಮ್ಮಳಿಕ್ಕೆಂತಸುವಿಡಿದಿರ್ದಳೋ ! ಹಾಹಾ ! ಲಕ್ಷ್ಮಣಂ ಕಾಡೊಳಿಟ್ಟುಪಿ ಮರಳ್ವನ್ನಮೇನೆಂದಳೋ ! ಎನಿತ್ತ ಟಲ್ದಳೋ ! ಎಂತು ಸುಮ್ಮನಾದಳೋ ! ಮೇಣುಂ ತಾಂ ಬೆನ್ನನೆ ಬರ್ಪೆ ನೆಂದಳೋ ! ಎನ್ನಂ ಬಯ್ದಳೋ ! ಈಗಳೇನಾದಳೋ ! ಹರಹರಾ ! ಆತನೊಳಮಿಾತೆ ಜನನೇನೆಂದು ಕೇಳ್ವೆನೊ! ಎನಗಾವ ಮೊಗಮೊ ! ಸುಡು ಸೀತೆಯಿಲ್ಲದೀನಾಡಂ ! ಹಾ ! ನಾಯಿಕೇ ! ಹಾ ! ರನ್ನೆ ! ಆವಿರ್ವ ರುಂ ಕಾಡೊಳಾದೆವಲ್ತೆ ! ಎಮಗಾವುದು ಬಟ್ಟೆ ! ರಾಜ್ಯದಿನೇಂ ? ಐಸಿರಿಯಿನೇಂ ? ಇಂತಿವು ಪೆಱವರೊಡಮೆಯಲ್ತೆ ! ಈಗಳಾನುಂ ಪೆಱರ್ಗೆ ಮಾಱುವೋದೆಂ ; ಇನ್ನೆನಗೆ ಸಂತಸಮಾವುದೊ ! ಸೊಗಮಾವುದೊ ! ಕೆಳೆತನಮಾವುದೊ ! ಬಾೞ್ತೆಯಾವುದೊ ! ಹಾ ! ಹಾ ! ಜಾನಕೀ ! ಎಂದು ಪಲವಗೆಯೊಳ್ ಬಣ್ಣಿಸಿ ಬಣ್ಣಿಸಿ ಮಱುಗಿದಂ. ಅನಿಗಾಲ ವಿಾವಿಯೋಗದುಃಖಮಂ ನೆನೆನೆನೆದು ಪೞಯಿಸುತಿರ್ದಂ.

ಇಂತಿದು ಕಣಾ ! ಸೋದರರಂ ಸೊಮ್ಮುಗಿಡಿಸಿದುದು, ಅಗ ಸ್ತ್ಯನಂ ನೆಲೆದಪ್ಪಿಸಿದುದು ; ಸಾಜಮಲೇ ಪತಿಪತ್ನಿಗಳೊಳ್ ವಿಯೋಗ ದುಃಖಂ ! ರನ್ನೆ ! ಆನೊರ್ಮೆಯುಂ ನಿನ್ನನುೞದು ಬಾೞೆಂ. ಅಂತ ದಱನೆಮ್ಮೊಳಾವಗಂ ಪುದುವಾೞ್ಕೆಯುಂ ದೀರ್ಘಾಯುಷ್ಯಮುಂ ಶಿವಂ ನೆಲೆ ಗೆಯ್ಗೆ ! ಸ್ವಸ್ತಿ !

ಮನೋರಮೆ ! ಮುಂಗತೆಯುಂ ಕೇಳ. ಅಂತು ಕುಂಭಸಂಭ ವನ ಬೆಸನಂಪಿಡಿದು ಅಶ್ವಮೇಧಮಂ ಕೆಯ್ಕೊಂಡ ರಾಘವಂ ಸ್ವರ್ಣಸೀತಾ ಸಮೇತಂ ದೀಕ್ಷೆನಿಂದಂ. ಅಗಸ್ತ್ಯಂ ಬ್ರಹ್ಮನಿರ್ದಂ. ವಸಿಷ್ಠನಾಚಾ ರ್ಯನಾದಂ. ಮೇಣ್ ಋಷಿಗಳ್ ಅಧ್ವರ್ಯೂದ್ಗಾತೃಹೋತಾರರುಂ ಋತ್ವಿಜರುಂ ಸಾಮಾಜಿಕರುಮಾಗೆಸೆದರ್. ಅನ್ನೆಗಮಾಚಾರ್ಯಂ ಶುಭಮುಹೂರ್ತದೊಳ್ ಸಿಂಗರದ ಚೆನ್ನ ಜನ್ನಗುದುರೆಯುಂ ಪೇೞ್ದಂತು ಪೂಜಿಸಿ ಬೞಯಗ್ಗಳಿಕೆಯ ಬಿರುದೋದಂ ಬರೆದೋಲೆಯುಂ ಪಣೆಗೆ ಬಿಗಿದು, " ನಿರಾಕುಳಂ ಚಪ್ಪನ್ನ ದೇಶಂಗಳಂ ಸಂಚರಿಸುತುಂ ಕಪ್ಪಕಾಣ್ಕೆ ಗಳಂ ಕೊಡಿತರ್ಪುದು " ಎಂದು ಶಿರದೊಳ್ ಮಂತ್ರಾಕ್ಷತೆಯನಿಟ್ಟುಂ

ಬಿಟ್ಟಂ. ಆಗಳ್ ಯಜಮಾನಂ—ಈಪೊೞ್ತು ಪೋದೊಱೆದು. ಯಜ್ಞೀಯಾಶ್ವದ ಬೆಂಬೞಿವೋಗಿ ನೆರಂಗೂಡುವ ನಾಡೆಱೆಯರ ಕೊಟ್ಟಜವು ನೊಟ್ಟೈಯಿಸಿಯುಂ, ಬಲ್ಪಿಂ ತಡೆವರೊಳ್ ಪೊಣರ್ಕೆಯಿಂ ಮರಲ್ಚಿಯುಂ, ಗೆಲ್ದವೆಣ್ಗೆ ಜಸದ ಪೊಸಜೊಲ್ಲೆಯುಮಂ ಸೂಡಿ ಕೂಡಿವರ್ಪ ಬಲ್ಲಾಳ್ತನದ ಗಂಡುಗಲಿಗಳಿರಾ ! ಎನ್ನೀಕೆಯ್ವೀಳೆಯುಮಂ ಕೆಯ್ಕೊಳ್ಳಿಂ, ಎಂಬುದುಂ ;—ಆಂ ತಾನೆಂಬಾಕೆವಾಳರ ಗಲ್ಲಣೆಯ ಬಲ್ಲುಲಿಯುಂ ಮಾಣಿಸಿ ಪುರ್ವಿನೊಂದು ಜರ್ವಿಂ ಕಂಠದೊಂದು ಹುಂಕೃತಿಯಿಂ ಬೀರರ ಜಂಗುಳಿಯೊಳ್ ಸುರ್ಗಿ ಬೀದಿಗೊಂಡು ರಾಯನಿದಿರ್ವಂದು ಶತ್ರುಘ್ನಂ—ಆರುಮಲ್ತಾನೆ ಕೊಳ್ವೆಂ, ಎಂದಂ. ರಾಯುಂ ತನ್ನ ಕಿಱುದಮ್ಮನ ಬೀರದ ಮೆಯ್ಸಿರಿಯ ಬಿಂಕದ ಮೆಯ್ವೞಿಯ ನುಡಿಗೆ ಸಂತಸಂಗೊಂಡು—ಲೇಸು, ಲೇಸೈ ! ಭರತಂ ನಗರಪಾಲಕಂ ನೇರ್ಪಡೆ, ಲಕ್ಷ್ಮಣನೆನ್ನ ಕೆಯ್ಗುಂದಿನೂೞಿಗದೊಳಿರೆ, ನೀನಲ್ಲದಾವಂ ಮೇಣೀಕಜ್ಜದೊಳ್ ಸಾಲ್ವಂ. ಪೋ, ಕ್ಷಾತ್ರಧರ್ಮಂಗಳೊಳಮುಪಾಯಂಗಳೊಳಂ ನೀಂ ಜಾಣನಿರ್ಪನಂ ಪೆಱತಾವುದಂ ನಡೆನುಡಿವೇೞ್ವೆಂ ? ಆದೊಡಂ ಕೇಳ್. ಮೊನೆಗಲ್ಲದೆ ಬರ್ಪ ಪಿರಿಯರುಂ ವಿಪ್ರರುಂ ಸೇವ್ಯರಪ್ಪಿನಮವರಂ ಕಡೆಗಣ್ಚದಿರ್. ಹರಿಹರರೊಳ್ ಭೇದಮೆಣಿಸದರಂ ನೀನುಂ ಭೇದಮೆಣಿಸದಿರ್. ಜೀವನಂ ಪಶುಜೀವನಮೆಂದುಂ ವ್ಯಾಘ್ರಜೀವನಮೆಂದುಂ ವ್ಯಾಳಜೀವನಮೆಂದುಂ ಉತ್ತಮಮಧ್ಯಮಾಧಮವಿಭೇದದಿಂ ಮೂದೆಱನಿರ್ಕುಂ. ಲೋಗರ ಶಿಕ್ಷೆರಕ್ಷೆಗಳೊಳಿವಱೊಂದು ಚಾಣ್ಮೆಯಿರ್ಕೆ. ರಣದೊಳ್ ನಿರಾಯುಧರಂ ಮೂರ್ಛಿತರಂ ಸಮಂತು ಪಲಾಯಿತರಂ ನೋಯಿಸದಿರ್ ; ಮತ್ತಂ ಪುತ್ತನೇೞಿದರಂ ಪುಲ್ಲಂ ಕಚ್ಚಿದರಂ ಬಾಯೊಳ್ ಬೆರಲನಿಟ್ಟರಂ ಮುಟ್ಟದಿರ್ ; ಮಱಿಮೋಸದ ಕವಡುಬಿಜ್ಜೆಯಂ ಕಾಳೆಗದೊಳ್ ಮಾಣ್ ; ಪೆಣ್ಗೊಲೆಗೆಳಸದಿರ್ ; ಇಂತು ನಯಂಬಿಡಿದು ಮಾರ್ಮಲೆವರಿರಾಯರಂ ಗೆಲ್ದು ಬಾರಯ್, ಎಂಬುದುಂ ; ನೆರೆಯೊಳೆ ನಿಂದಾಲಯ್ಪು ಸೀತಾವರಜಂ ಲಕ್ಷ್ಮೀನಿಧಿ ತಾಂ ಮುಗುಳ್ನಗೆಯಿಂ ರಘುಪ್ರವರಂಗೆ—ಭಾವ ! ಇಂತುಟೆಲೆ ಕ್ಷಾತ್ರಧರ್ಮರಹಸ್ಯಂ. ನೀಮೆ ಪಂಡಿತರ್ಪೈಸೆ ! ಮುನ್ನಮಾತಾಟಕೆಯಂ ಕೊಲ್ವಂದೀ ಅಱಿವೆತ್ತವೋದುದೋ? ಭಾರ್ಗವನೊಳ್ ಪೊಣರ್ದಿರೆ ! ವಾಲಿಯೊಳಂದೇತಱ ಕಾಳೆಗಮಾಯ್ತೊ !

ನಿಮ್ಮಯ್ಯಂ ತಾಂಡವನನೇಸೆಂದು ಕೊಂದನೊ ! ಈಲಕ್ಷ್ಮಣಂ ಶೂರ್ಪಣಖಿಯ ಕಿವಿಮೂಗುಗಳಂ ಬೆಚ್ಚಬಿಸುಗೆಯಿಂ ಕೀಱಿನೆ ! ಇಂತಿದು ಬಱಿವಿರುದಲ್ತೆ ! ಈಗಳ್ ಶತ್ರುಘ್ನನುಮಂತಿರೆ ಧರ್ಮವುಂ 'ಬಱಿಸಲ್ವಂ ! ಎಂದು ವಿನೋದಮಾಗೆ ಹಾಸ್ಯಮನಾಡಿದಂ. ಅದರ್ಕೆ ರಾಘವಂ—ಆಃ ! ನನ್ನಿಗಮಸುಳಿ ! ನೀನಱಿಯಯ್ ಇಂತೀರಹಸ್ಯಮಂ, ನಿನ ಬಿಲ್ಲೋಜನಪ್ಪ ಶತಧೃತಿಯುಂ ಕೇಳೆಂದು ಮಾರ್ನುಡಿದಂ. ಈನುಡಿಗೆ ಸಭ್ಯರೆಲ್ಲರ್ ತಲೆದೂಗಿ ಸಂತಸಂದಾಳ್ದರ್. ಅಂತಿರ್ಪುದುಮಾಗಳ್ ಲವಣಾಂತಕಂ ರಾಘವನಂ ಮಣಿದುಂ ಭರತಾದ್ಯರಂ ಪೊಡೆಮಟ್ಟುಂ ಮಾತೆವಿರನೆಱಗಿಯುಂ, ಗುರುವಂ ನಮಸ್ಕರಿಸಿಯುಂ, ಪಿರಿಯರಂ ತಲೆವಾಗಿಯುಂ, ವಿಪ್ರರಂ ಕೆಯ್ಮುಗಿದುಂ, ಋತ್ವಿಜರಂ ತುಱಿಲ್ಗೆಯ್ದುಂ, ಸಭ್ಯರ ಕುಂಬಿಟ್ಟುಂ, ಮುತ್ತಯ್ದೆಯರಂ ಕಾಲ್ವಿಡಿದುಂ ಪರಕೆಗೊಂಡು, ಬೆನಕಂ ಬಿಂಗಿಕ್ಕಿಯುಂ, ಭಾಸ್ಕರನಂ ಧ್ಯಾನಿಸಿಯುಂ, ತ್ರಿಮೂರ್ತಿಗಳಂ ಸ್ತುತಿಯುಂ, ನವಗ್ರಹಂಗಳಂ ಭಾವಿಸಿಯುಂ, ದೆಸೆವಳರಂ ನೆನೆದುಂ ಬಲಗೊಂಡುಂ, ಯಜ್ಞೀಯಾಶ್ವಮಂ ಬಲವಂದುಂ, ಸಸಾಯಕಂ ಸರ್ವರಾತಿಗೊಂಡು ಸುಮತಿವೆರಸು ಪೊಱಮಟ್ಟಂ. ಆ ಪೊೞ್ತಿಂಗೆ ಹನುಮಂ ಸುಗ್ರೀವನೀಲನಳಜಾಂಬವಾದಿಯುಪ್ಪ ಕಪಿವೀರರುಂ ಕೋತಿವಡೆಯನೊಗೊಂಡು ನಾಯಕನ ಮೆಯ್ಗಾವಲ್ಗೆಂದು ತಳರ್ದರ್. ಈತಂಗಳಂ ಕೂ ಪ್ರತಾಪಾಗ್ರ್ಯನೀಲರತ್ನವಿಪುತಾಪೋಗ್ರಾಶ್ವಲಕ್ಷ್ಮೀನಿಧಿಗಳೆಂಬ ಪಂಚಮಹಾರಥಿಕರ್ ಪ್ರತ್ಯಕ್ಷೌಹಿಣೀಸೇನಾಸಮೇತರ್ ನಡೆದರ್.

ಮತ್ತಮಾವೇಳೆಯೊಳ್ ಮೆಟ್ಟಿದ ಬಣ್ಣಾವುಗೆಯ ಸಿಂಗರದಟ್ಟ ಬೀರಗಾಸೆಯಂದದ, ಕಟ್ಟಿದ ಪಟ್ಟಿಯ ಬಲ್ಪಿನ, ತೊಟ್ಟ ಪೊಸಗುಪ್ಪಸದ ಚೆಲ್ವಿನ, ಇಟ್ಟ ಕೀಱುಗಂದದ ರಯ್ಯದ, ಅಳವಟ್ಟ ಮಣಿಯ ಕುಂಣದ ಮಗುಟದ ಸೊಬಗಿನ, ಕಿಱುಜವ್ವನದ ಬಿಂಕದ, ನಡೆವೊಂದು ಗಡಿಯ ಪುಷ್ಕಲಂ, ಆಗಳೆ ತಂದೆತಾಯ್ವಿರಡಿಯಾಣತಿವಡೆದು ಕಿಱಿಯಯ್ಯನ ಬೆಂಬಲಕ್ಕೆಂದು ನಾಯಕಂಗಳನೆತ್ತಿ ಪೋಪವಸರದೊಳ್ ಬಿಡಜಡೆಯ ಬಿದುವೊಗದ ಬಿರಿದೆಸಳ್ಗಣ್ಣ ಪೂಮಿಲ್ಪುರ್ಬಿನ ಬಿಂಗಗೆಕ್ಕೆಯ ಬಿಂಬಾಧರದ ಬಿಲ್ವಸ್ತನದ ಬಿಣ್ಗೊಡೆಯ ಬಡವಾಸೆಯ ಬಟಲ್ನಡುವಿ ಬಲಮುರಿಸಂಕುಗೊರಲ ಬಸೆನಡೆಯ ಬೆಳ್ವಳಿರ್ಗಯ್ಯ ಬಂದುಗೆವೊಗ

ಬಾವನ್ನಸೊವಡ ಬಟಲೊಡಲ ಬೆಡಂಗಿನ ಬಾಲೆಯೊರ್ವಳ್ ತನ್ನ ಕಿಱು ವೆರಲ ಸೆಳ್ಳುಗುರ್ಗೊನೆಯಿಂ ಮುಂಗುರುಳನೇಱೊತ್ತುತುಂ ಅರೆಜಾಱು ದ ಮೇಲುದುಮಂ ಸಮಂ ನೇವರಿಸುತುಂ ಪತ್ತಿವಿಡಿದುಡೆನೇಣನೊತ್ತಿ ಸೇರಿಸುತುಂ ಕೆಯ್ವಳೆ ಪುಲ್ಪುಲ್ಲೆನೆ ಮಂಜೀರಂ ಘಲ್‌ಘಲ್ಲೆನೆ ನಸುನಗೆ ಯರೆನೋಟದ ತಲೆನಾಗಿನ ವಿಲಾಸದಿಂ ಮಂದಾರದ ತೋರದಂಡೆಯು ನಿಱಿಸಿ ಪೊಂಬಟ್ಟಲನೆತ್ತಿ ಬರುತುಮಿರ್ದಳ್.

ಇಂತು ಕಾವನಧಿದೇವತೆಯೆನೆ ಕಟ್ಟೆದಿರೊಳಿರ್ದಿರ್ಪರ್ಪ ತನ್ನ ಮನ ದೆಱಕದಿನಿಯಳಂ ಕಂಡು ನಸುನಕ್ಕು ಮುಟ್ಟೆಸಾರ್ದು ತಳ್ಕೆಗೆಯ್ದು ನು ಣ್ಗಲ್ಲಮನಲುಗಿ ಮೆಯ್ಸೋಂಕಿನೊಂದು ಸೊಗದಿಂ ನಿಮಿರ್ದವಿರ್ ಗುಡಿ ಗಟ್ಟೆ ಕಾಂತೆಗೆ—ಕಾಮಕಲ್ಪವಲ್ಲರೀ! ಅಯ್ಯನ ಪಿರಿಯಯ್ಯನಾಣತಿಯಾ ಯ್ತು. ಇದೆ! ಜನ್ನಗುದುರೆಯ ಬೆಂಗಾವಲ್ಗೆಂದು ಪೋಪ ಕಿಱಿಯಯ್ಯನ ಬೆಂಬಲಮಾಗಿ ತಳರ್ದೆಂ. ಬಾಲೇ! ಆನಿತೊಂದು ಕಾಲಂ ನೀಂ ಮನಮ ಱುಗದೆ ನಿನ್ನತ್ತೆವಿರ ಸೇವೆಯ ನೋಂಪಿಯೊಳೆ ಬಾಟ್. ಇದು ನಿನ್ನನ್ನ ರಪ್ಪ ಹದಿಬದೆಯರ್ಗೆ ಮೇಲ್, ಎಂದಂ. ಆನುಡಿಗೆ ಕಾಂತಿಮತಿ ತಾಂ ಗದ್ಗದನಾಣಿಯಿಂ ನಲ್ಲಂಗೆ—ಇನಿಯ! ಚಿರಕಾಲಂ ನಿನ್ನನಗಲ್ವೆನೆಂಬೊಂದು ಬೇವಸದಿಂ ನೋವೆನಾದೊಡಂ ದಿಗ್ವಿಜಯಾರ್ಥಂ ಪೋಪ ವೀರರಂ ತಡೆವು ದು ವೀರಪತ್ನಿಯರ್ಗೆ ತಗದಲ್ತೆ. ಲೇಸ್ಸೈ! ಎಣೆವೆಂಡಿರ ನಗೆಗೆನ್ನಂ ಪಕ್ಕಾಗದಂತು ಮಾಡಿ ಗೆಲ್ದಿವೆಣ್ಣಂ ಸವತಿಯನಾಗಿಸಯ್. ನಿನ್ನನುಱಿದುಂ ಕುಳಿಗರ್ಳಿಗೆ ಕಾವಂಗೆ ಅಮರ್ದುಗೆಯ್ಯಂಗೆ ಸುಗಿದುಂ ಗಳಿಗೆಯಂ ಯುಗ ಮನೆ ಬೇಟದ ಸೂಡಿಂಗೆ ನೂಂಕಿ ನಮೆಯಲಿರ್ಪೆನ್ನೊಳ್ ನಿನ್ನಡಿಗ ಳೊಂದು ನಲ್ಮೆ ಸಮಂತಿರ್ಕೆ! ಮೇಣಾರ ಮುಖತುರಗಕ್ಕೆ ಬೆಂಬಱಿ ವೋಪೆಯಾರಾಮನೊಲ್ಮೆ ನಿನಗೆ ರಕ್ಷೆಯಿರ್ಕೆ! ಎಂದು ಕಟ್ಬಾಣಿಮು ತ್ತಿನ ಸೇಸೆದಳಿದು ನಱುದಂಬುಲಮನಿತ್ತು ಸುಖಾಶ್ರುವೆನೆ ಆಲಿನೀರ್ ತುಱುಂಕೆ ಕಿಱುಮೊಗದ ಸುಕರ್ದಂಬಗೆಯು ಬಾವದಿಂ ನಿಂದಿರ್ಪ್ದಂ; ಭಾರತಿ, ಕಾಂತೆಗೆ—ಕಾಂತಿಮತಿ! ಎಣ್ಣೆಯೇಂ? ದೆಸೆಗೆ ಬಿಟ್ದಾರಾ ಯರ ಬಾಟ್ಗಲೆವಿಡಿದುಂ ಜಯಕಾಂತೆಗೆ ತೊಟ್ಟಿರಂ ಮಾಡುತುಮಲ್ಲದಂ ದವರ ಪಂದಲೆಯ ತಿಱಿಕಲ್ಲಾಟದಿಂ ಮರುಳ್ಪಡೆಗೆ ನಲವೆರ್ಚಿಸುತುಂ ಕಪ್ಪಕಾಣ್ಕೆಗಳಂ ಸೆಳೆದು ತರ್ಪೆಂ; ನೋಯದಿರ್; ಪೋಗೆಂದೊಡಂ

ಬಡಿಸಿ ಬೀೞ್ಕೊಟ್ಟಂ. ಅಂತಾಕಾಂತೆ ವಿಜಯಕ್ಕೆಂದು ಪೋಪ ನಲ್ಲನ ತಲೆಮುಡಿಯುಡಂಗುವನ್ನಮೆೞ್ದೆೞ್ದು ನೋಡಿಯುಂ ಬಯಲಾಸೆಯಿಂ ಬೀಡಂ ಪೊಕ್ಕಳ್. ಭರತಾತ್ಮಜನುಂ ತನ್ನ ಬಗೆಯನಿರ್ಕುಳಿಗೊಂಡ ಕಾಂತೆಯ ಕಾದಲ್ಮೆಯುಂ ನೆನೆನೆನೆಯುತೆ ಪೋಗಿ ಶತ್ರುಘ್ನಂಗೆ ಬೆಂಬಲವಾದಂ.

ಈಗಳ್ ಶತ್ರುಘ್ನನಾಜ್ಞೆಯಿಂ ಪುಷ್ಕಲನೊಂದು ನಿಯಮದಿಂ ರಥಿಕರ ಮಂತಣದಿಂ ಪಟುವಾನಸಬೀರರ ಪದ್ಧತಿಯಿಂ ನಡೆವ ಸೇನೆಯ ಕಾಪಿಂ ಮುಖತುರಂಗಂ ತರಂಗಲೀಲೆಯಿಂ ಯಥೇಚ್ಛಂ ಪೋದುದು. ಅಸ್ಕಂಧಿದಿತಧಾರೆಯಿಂ, ಸುದೃಢಪೀವರಕಾಯದೊಂದು ಕಾಂತಿಯಿಂ, ನಿಮಿರ್ದ ಕೊಡಂಕೆಯಂದದಿಂ, ರನ್ನದಾರದ ಪೊನ್ನ ಕಿಱುಗಂಟೆಯ ಚೆಲ್ವಿನ ಗೋಣ ಸೊಬಗಿಂ, ಪಣೆಯ ಬಿರುದೋಲೆಯೊಪ್ಪದಿಂ, ಸನ್ತಂ ಪೋಪ ಕುದುರೆಯ ಬೆನ್ನೊಳಿ ಅತ್ತಪಜೞಿಯ ಪೆರ್ಗಾಳೆಯ ಪಳಹದ ಕೊೞಲ ತಂಬಟೆಯ ಶ್ರುತಿಯ ಡೌಡೆಯ ಮುವುರಿಯ ಭೇರಿಯ ಭೂರಿನಿನಾದಂ ದೆಸೆಮುಟ್ಟೆ ಪಳಂಚಲೆಯೆ, ಸೇನಾಪದಸಂಘಾತಸಂಜಾತರೇಣುಜಾತಮಂಬರಮಂ ಮುಸುಂಕೆ, ಎತ್ತಿದ ಸತ್ತಿಗೆಯ, ಡಾಳಿಸುವ ಚಾಮರದ, ನಿಮಿರ್ದ ಕೇತನದ ಪಂತಿಯೆತ್ತಂ ನಿಮಿರ್ದಿರೆ, ರಾವುತರ ಮಾವತಿಗರ ತೇರಾಳ್ಗಳ ಚಪ್ಪರಣೆಯೊಳ್ ಕೆಳರ್ದ ಹಯದ ಗೀಱಿಡುವಾನೆಯ ಕಿಱಿಗಿಱಿವ ಪೊಂದೇರೋರಣಮಿಂಬಿಡಿದಿರೆ, ಕಡಿತಲೆಯ ಸುರಗಿಯ ಕೊಂತದ ಸೂಳದ ಬಿಲ್ಗಣೆಯ ಮೂಡಿಗೆಯ ಭಟರ ದೆಖ್ಖಾಳಂ ನೇರಮಾಗೆ, ಗರಗರಿಕೆಯ ದೞಿದುಱಿದ ಬಿಂಕದ ಬೀರರುಗ್ಗಡಣೆ ಪಿರಿದಾಗೆ, ಜೋದರ ಗೋಟಾಯಿಲರ ರಥಿಕರ ಕಾಲಾಳ್ಗಳ ಪಡೆವಳರಾಕೆವಾಳರ ಗಡಣಂ ನೆರೆದಿರೆ, ಲವಣಾಂತಕನ ಕಟ್ಟಾಣತಿಯಿಂ ಪಡೆ ನಡೆಯುತುಮಿರ್ದುದು.

ಇಂತು ಪರ್ವದ ಕಡಲೆಂಬಂತಿರೆ ಮೇರೆವರಿದು ಪೋಗೆವರ್ಪ ಸೇನೆಯೊಂದಿರವಂ ತಮತಮಗೆ ಸಂತಸದುರ್ಬಿನಿಂ ಕಾಂತೆಯರ್ ಸೆಲಿವಾಡಮನೇಱಿಯುಂ ಮೊಗಸಾಲೆಯೊಳಿರ್ದು ಬಾಗಿಲೊಳ್ ನಿಂದುಮರೆದೆೞೆದ ಪಡಿಯ ಗವಾಕ್ಷದೊಳ್ ನಿಳ್ಕಿಯುಮೀಕ್ಷಿಸುತಿರ್ದರ್. ಅವರೊಳೊರ್ವಳ್ ಜಕ್ಕಜವ್ವನದ ಚೆಲ್ಲಗಾರ್ತಿ ತನ್ನ ಬೞಿವಂದ ಕಾದಲನನೆಂತಂತು ಕೊರಲಂ ತೞ್ಕೈಸಿ ಪಿಡಿದ ತುಂಬುನೀರ ಪೊಂಗೊಡಮು

ನಿಱಿಪಿ ಪಡಿಮೊಗದ ನೆರವೀಡ ನಡುಜವ್ವನದ ಕೆಳದಿಯೊರ್ವಳಂ ಸನ್ನೆಯಿಂ—ಎಲೆ ಅತ್ತಿಗೆ, ಎಂದುಂ ನಿನ್ನ ತೋಳಿಡೆಯೊಳೊಪ್ಪುವಂಗದಂ ತೋರ್ಕುಮಿಲ್ಲವಿಂದೇನೆನೆ ; ತಂಗೆ ! ಊರ್ಗೆವೋದ ನಲ್ಲನಿಂದು ಬರ್ಪಿನ ಮಾತನ ಪದಸೇವೆಯೊಳ್ ಸಂದಿರಲೊಡಮೆಂತೊ ಮೆಲ್ಲನೆ ಸಡಿಲ್ದು ಈಗಳ್ ಕಟಕಂಬೊರ್ದಿರ್ಕುಂ, ಇದೆ ! ಎಂದು ಕೆಯ್ಯೆತ್ತಿ ತೋಱಿದಳ್.

ಮತ್ತಮೊಂದೆಡೆಯೊಳೊರ್ವ ಸಿಂಧುರಬಂಧುರಯಾನೆ ತನ್ನೊತ್ತಿನ ವಿದಗ್ಧೆಯೊರ್ವಳಂ ಮಂದಹಾಸದಿಂ— ರಥಾಂಗಂ ಸಡಿಲ್ದುಚ್ಚೆಂತು ತೊಱೆದೀಸು ಕಟಿಲ್ಚಿದ ತೇರನೇಕೊ ನಿಮ್ಮ ಕಾವನ ಬೀರರಡರ್ವರ್. ನಿರ್ನೆರಂ ಏಂ ಸೊಗಮೊ ! ವೇಗಂ ಮಂದಮಾಗದೆ ಎಂಬುದುಂ ; ಅವಳ್— ಆಃ ! ಪೊಸತೇರೆಂತೊ ಕಿಱುಗುಟ್ಟುಗುಮೆಂದುಱಿದು ಪಲವುಂ ಸೂೞ್ ರಂಗಂಬೊಕ್ಕು ಗಂಡುಗಲಿಗಳಂ ಗೆಲ್ದು ಪಱಿಂಗಿದ ತೇರನೆ ಆವುದೊ ಕುಱುಪುಗೊಂಡು ಬಿಡದಾಯ್ದುಡರ್ದು ಸಂಗರದೊಳ್ ಬಲ್ಪೊಬ್ಬುಂ ಕಾದುವರ್. ಈ ಕಾವರಾಯನ ಸಂದ ಸೆಣಸಾಳ್ಗಳ ಕಟ್ಟಾಳ್ತನಮಂ ನೀನಿನ್ನುಮಱಿತೆಯಿಲ್ಲಮೆಂದು ಮಾರ್ನುಡಿದಳ್.

ಇಂತೀಪರಿಯ ಕಟಕಿನಾತಿಸ ವೋಡಿಯ ಪೊಱನಾಡ ಕೇರಿವೆಣ್ಗಳನಭೀಕ್ಷಿಸುತ್ತುಂ ಮೂಡದೆಸೆವಿಡಿದು ವಾಜಿಯ ಕಾಪಿಂ ವಾಯ್ದಱಿಂ ಸಡಗರದಿಂ ನಿಜ ಪಯಣದಿಂ ದೇಶದೇಶಂಗಳಂ ಕಱಿಕಱಿದು ಪೋಗುತುಮಿರ್ದುದು.

ಎಂಬಲ್ಲಿಗೆ ಶ್ರೀರಾಮಾಶ್ವಮೇಧದೊಳ್
ವಿಜಯಪ್ರಯಾಣಮೆಂಬ ಸಪ್ತಮಾಶ್ವಾಸಂ ಸಂಪೂರ್ಣಂ.

---

## ಅಷ್ಟಮಾಶ್ವಾಸಂ

### — ಕಾಮಾಕ್ಷಿದರ್ಶನಂ —

ಪುಷ್ಕಳಂ—ಓ ! ಎನ್ನ ನಿಚ್ಚನಿಡುಗುಂಕುವದ ಬಿಂಕದ ಮೆಚ್ಚುಗಾರ್ತಿ ! ಓ ! ಎನ್ನ ಇಚ್ಚೆಗಾಱನ ಬೆಚ್ಚ ಪಚ್ಚೆಯ ಕೆಯ್ಗನ್ನಡಿ!

ಓ! ಎನ್ನ ಎಚ್ಚ ಮೆಯ್ಗಣ್ಣ ಪೆಣ್ಣೆ! ಓ! ಎನ್ನ ಮೀಂಮುಚ್ಚಲಚ್ಚಣದ ಸಿರಿಗೆಂಪ್ಪೆ! ಓ! ಎನ್ನಮೂಗೊಂಕುಮೂಗೆರೆಯ ಗುಜ್ಜುಗೊರಲ ತರಳೆ! ಕೇಳ್. ಇಂತೀಮಾೞ್ಕೆಯಿಂ ಯಜ್ಞೀಯಾಶ್ವಂ ನಾನಾವಿಷಯಂಗಳೊಳಂ ಮನೋರಥದ ವಾಜಿಯ ಪಾಂಗಿನಿಂ ತೊೞತೊೞಲ್ದು ಬರೆವರೆ, ಊರಾಳ ಬಲ್ಲಾಳ ಪೆರ್ಗಡೆಮಾಸಾಮಂತಮನ್ನೆಯರಾಯರ್ ಮುಂತಪ್ಪ ನಾಡೊಡೆಯರ್ ಶ್ರೀರಾಮನ ಕಟ್ಟಾಳ್ತನದ ಬಲ್ಪಿನ ಬೞಿವಿರುದನೋದಿಯುಂ ಹಯದ ಬೆಂಬಲದ ಬಲ್ಗೆಯ್ಬಂಟರಂ ಕಂಡುಂ ಕೆಯ್ಮುಗಿದು ಶತ್ರುಘ್ನನ ಮಱೆವೊಕ್ಕುಂ ಕಪ್ಪಮನೊಪ್ಪಿಸಿ ತಾಮುಂ ಪಡೆವೆರಸಿ ಕುದುರೆಯ ಕಾವಲ್ಗೊದವಿ ಪೋದರ್. ಆಕಾಲದೊಳ್—

ಆರಂ ತೋಡುಂಗಿಱದೆ ತನ್ನೊಂದು ಗರಗರಿಕೆಯ ಸೊಮ್ಮಿನಭ್ಯುದಯದೆ ಪದುಳಮರಸಾಳ್ವ ಬಸಂತರಾಯನುರ್ಕುಂ ಸೊರ್ಕುಂ ಸೋರ್ದು ಬಯಲಪ್ಪಿನೆಗಂ ದಾೞಿಗೆಯ್ದಾತನ ನಾಡಂ ಬೀಡಂ ಪಡಲಿಡಿಸಿ ಪುರುಳ್ಗೊಂಡು ತಾನುಂ ಲವಣಾಂತಕಂಗೆ ನೆರನಾದನೆನೆ ಗ್ರೀಷ್ಮರಾಜಂ ತಲೆದೋಱಿದಂ. ಕೞಿವೂವೞಿಯೆ, ನೀರುಂ ಬತ್ತೆ, ಕೆಸಱುಂ ಪಾವಸೆಯುಮುೞಿಯೆ, ಕೊಳನಂ ನಿಸ್ಸಾರಮೆಂದು ಪುರುಳ್ಗುಂದಿದಾಣ್ಮನಂ ತೊಱೆದು ಪೋಪ ತುೞಿಲಾಳ್ಗಳಂತಿರೆ ನೀರ್ವಕ್ಕಿಗಳ್ ದೆಸೆದೆಸೆಗೆ ಪೋದುವು. ಈ ಅಪದೆಸೆಯಂ ಕಂಡೊಂದು ಬಕಂ ಬೆಳರ್ತು ಮುಂಗಾಣದೆ ತನ್ನ ನಂಟುಮೊಱೆಯ ಮೀಂಗಳ್ಗೆ ಮುಂತೆ ಬಟ್ಟೆಯಾವುದೆಂದಾವಗಮುಗಲದೆ ಚಿಂತಾಪರನಾಗಿರ್ಕುಂ. ಪೆರ್ದೊಱೆ ಕಾಲ್ವೊಱೆಯುಂ ಕಿಱುದೊಱೆ ಪುೞಿಲ್ವೊಱೆಯುಮಾಯ್ತು. ನಾಡುಂ ಕಾಡುಂ ಬೀಡುಂ ಸೂಡಿಂ ಸೀಕರಿವೋಯ್ತು. ಕಾಯ್ತ ಮರಂ ಪೂತ ಬಳ್ಳಿ ಸುರ್ಕಿ ಸುೞಿವಾಡಿದುದು. ಕಲ್ ಸುಣ್ಣಬೇನಾಯ್ತು. ಮೞಲ್ ಹುರಿಗಡಲೆಯ ಮುಮ್ಮುರಿಯಾಯ್ತು. ವನಜಂತುಗಳ್ ಬಯಲ್ವೊಱೆಗೆ ಮರುಳ್ಗೊಂಡುವು. ಪಕ್ಕಿಗಳ ಗಳರವದೆ ಭಿನ್ನಸ್ವರಂ ಪುಟ್ಟಿತ್ತು. ಆಗಳಾಗ ಕುರಗಂಗಳ್ ತಮ್ಮಾರೋಗಣೆಯ ಪೊೞ್ತಂದು ಸಂಚರಿಸಲ್ತೊಡಂಗಿದುವು. ಅಲರ್ವಕ್ಕಿಗಳ್ ಬಂಡನುಂಡುಂಡು ಬಾಯಾಱಿ ಬಂದು ಕನ್ನೆವೆಣ್ಗಳ ಕೆಯ್ಗೊಡನ ತುೞುಕುಂಬನಿಯಂ ಕುಡಿಯಲಾಟಿಸಿದುವು. ಕಾಂತಾಜನಂ ಪಟ್ಟುಡೆಯಿಂ ಪುಡಿಗಪ್ಪುರಂಬೆರೆದ ಸಿರಿಕಂಡದಣ್ಪಿಂ ಮುತ್ತಿನೊತ್ತೆಸರದ

ತೊಡವಿನುಳ್ಳಲರ್ದ ಬೈಗುಮಲ್ಲಿಗೆಯ ಜೊಲ್ಲೆಯದ ತುಱುಬಿಂ ಕಣ್ಗೆಡ್ಡ ಮಾದುದು. ಬಟ್ಟಿಗರಜವಟ್ಟೆಗೆಯ ಬಾಲೆಯರ ನಯನಾತಿಥಿಗಳಾದರ್. ಬಿರಯಿಗಳ ಬಿಸುಸುಯ್ಲಿಂ ಪೊರೆದುದೆನೆ ಬನಗಾಳಿ ಬೆಚ್ಚನೆ ತೀಡಿದುದು. ಶೋಗರ್ ತೃಷ್ಣೆಗೊಂಡರ್. ಭಾಸ್ಕರನಾಗಳುಂ ಕಾಯ್ಪನೊಳ್ದರ್ಪಂ.

ಇಂತು ಬಂದ ಕಡೆಯ ಕಡುವೇಸಗೆಯೊಳಂ ತುರಂಗಂ ಮುಂತೆ ಮುಂತೆ ಪೋಗೆವೋಗೆ ಅಂದಂದು ಚಾಟಿ ಪೇರೊಡಲಿನುಗಿದುಂ ಬಿಗಿದುಂ ಪೊಱದೆಗೆದ ಬೆಳ್ವಕ್ಕದ ತುಂಬುವೆಱೆಗಳನೊಟ್ಟೈಸಿ ಮೂಸೆಯೊಳಿಟ್ಟು ತಿದಿಯೊತ್ತಿ ಕರಗಿಸಿಯುಮೆಱೆದುಂ ಕಂಡರಸಿಯುಂ ಹಳಿದು ಕೆತ್ತಿಯುಂ ಬೆಚ್ಚಿಂ ನಯಸಾಣೆವಿಡಿದುಂ ಸಮೆದುದೆಂಬಂತಿರೆ ತಳತಳನೆ ಪೊಳೆವ ಬಿತ್ತರಂಬಡೆದ ಬಿದುಗಲ್ಲ ಸುತ್ತಣ ಮೆಟ್ಟಡಿಯಿಂ; ಪಾಸಿದ ತಣ್ಗದಿರಱೆಯ ಪಾದವಟ್ಟೆಗೆಗಳೊಳಗೇಱೆಯ ನಿಡುಮರಂಗಳೞುಂಬಿನ ಕಟ್ಟಲೆಯನೊಳ್ ಕೊಂಡು ಬೆಳರ್ವಣ್ಣ ಪೊಸಕಡಾಯದೊಳ್ ತುಂಬಿದ ನೀಲಿಯ ತನಿ ರಸಮೆಂಬಂತಿರೆ ಕಳಿಂದಜೆಯ ಕರ್ಮಡುವಿನೊಂದು ಪೊಳೆಪಿಂ ಗುಣ್ಪಂ ತೋರ್ಪ ತಿಳಿನೀರಿಂ ; ತುಂಬಿ ತುಳುಂಕುವ ತಿಳಿನೀರ್ಗಡೆಯೆಡೆಯೊಳ್ ಕಾರಿರುಳಾಗಸದೊಳ್ಡಿಕಿಱಿದ ತಾರೆಗಳ ಪಾಂಗಿನುಳ್ಳಲರ್ದ ರಯ್ಯಮೊಪ್ಪುವ ಬೆಳ್ದಾವರೆಗಳಿಂ ; ಬಂಡೊಸರ್ವ ಪುಂಡರೀಕಮಂ ನಱುಗಂಪಿನ ಬೞಿಗೊಂಡೆಯ್ತಂದು ಕಮಲೆಯ ಮುಖಕಮಲದ ಕತ್ತುರಿಬೊಟ್ಟನನುಕರಿಸಿ ಮುಸುಱಿ ಮೊರೆವ ಮಱಿದುಂಬಿಗಳಿಂ; ಬಂದೆಱಗಿ ಬಂಡಿನಲರ್ವುಡಿಯಿಂ ಪೊರೆದ ಪರಮೆಪಱಿಯುಂ ಕೋಶದೆೞಬಿಟ್ತುಗೆತ್ತು ಕರ್ದುಂಕಲೆಂದಪ್ಪಳಿಸುವ ಬಾಲಹಂಸಂಗಳಿಂ, ಮೆಲ್ಲಮೆಲ್ಲನೆ ನಡೆದುಂ ಪಾಱಿಯುಂ ಪೋಪ ಬಾಲಹಂಸೆಗಳಿಂ, ಬೆಳ್ವಕ್ಕಿಯ ಬಿಗುರ್ಪಿಂ ನೀರೊಳೊಳಗೊಳಗೆ ಮೆಯ್ಗರೆವ ಮೀಂಗಳಿಂ, ಮೀಂಗಳ ನೀರ್ವಕ್ಕಿಗಳ ಕಿಱುಗಾಳಿಯುಲಿಪದಿಂ ಕಾಲ್ಪರಿವ ತೆರೆಯಿನೊಂದು ಕೊಳಂ ಪಗಲ್ವೆಣ್ಣ ಕೆಯ್ಪುಡಿಯೆಂಬಂತಿರೆ ಸೊಗಯಿಸಿದತ್ತು.

ಇಂತು ಮುಂಗಾರೆನ್ನದೆ ಸುಗ್ಗಿಯೆನ್ನದೆ ಬೇಸಗೆಯೆನ್ನದಾಸಡಿಯೆನ್ನದಿಂಬೊಸರಿಂ ತುಂಬಿ ಪೊನಲ್ವರಿವ ಹೊಕ್ಕರಣೆಯುಂ ಬೞಿಗೊಂಡೊಂದು ಬನಂ ಬನರಾಣಿಯ ಕರತಳದ ಚೆಂಬೊಗರ್ಗನುಕಾರಿಯಪ್ಪೆಳದಳಿರಿಂ ತೀವಿ ತೋರ್ಪ ಚೆನ್ನಸುಗೆಯಿಂ, ಬಸಂತಂ ಪೊಲ್ದು ಸಮಕಟ್ಟಿದ ಮ

ಲಂಗೆಂಬಂತಿರಡಿವಿಡಿದು ಮುಡಿವರೆಗಂ ಬಲ್ವಣ್ಗಳಿಂ ತುಱುಗಿ ತೋರ್ಪ ಬಕ್ಕೆವಲಸಿಂ. ದಿನಲಕ್ಷ್ಮಿ ನಡೆಯೊಂದು ಸೇದೆಯಿಂ ಬೞಲ್ದು ಪಯಣಂ ಬರ್ಪ ತನ್ನಿನಿಯನ ನೀರೞ್ಕೆಗೆಂದೇಱಿತ್ತಿ ನೀಡಿದ ತಣ್ಣೀರ ಪೊಸಪೊಂಗಳಸಮಿದೆನೆ ಇಂಬಿಡಿದ ತೆಂಗಾಯಿಂ ಬಾನುದ್ದಂ ಬೆಳೆದೋರಣಮಾಗಿ ತೋರ್ಪ ತೆಂಗಿಂ, ಮಾರವೀರನ ಕಟ್ಟೋಲಗದ ವಾದಿಗಳ ಮಾಗಧರ ಗಾಯಕರ ಪಸುರ್ವಟ್ಟೆಯ ಗೂಡಾರದ ಬೀಡಾರಮೆನೆ ಚೆಂದಳಿರಿಂ ತನಿವಣ್ಣಿಂ ಪೊಸಪೂವಿಂ ತೀವಿದಿನ್ಮಾವಿಂ, ಇಚ್ಛೆಗಾರ್ತಿಯ ಪೆರ್ಚಿದ ಬಲ್ಮೊಲೆಯ ಪಾಂಗಿನಿಂ ಜೋಲ್ದು ಪೊಂಬಣ್ಣದಿಂ ಮನೋಜ್ಞಮಾದ ಬೀಜಪೂರದಿಂ, ಬನಸಿರಿಯ ಸಿರಿಮೊಗದೊಳೊಗೆದ ಬೆಳ್ನಗೆಯೊಳಂದು ಪೊಱತೋರ್ಪ ಬಾಯ ಸುಲಿಪಲ್ಲನನುಕರಿಸಿ ಬಿೞ್ತನೊತ್ತರಂಬಿಡಿದರೆವಿರಿದ ದಾಡಿಮದಿಂ, ರತಿಕಾಮರ್ಕಳ ತಿಱುಕಲ್ಲಾಟದ ಇಂದ್ರಾಶ್ಮಕಂತುಕಂಬೊಲೆಸೆವ ಬಾಲಜಂಬೀರದಿಂ, ಮಧುಲಕ್ಷ್ಮಿಯ ಕೇಶಪಾಶಮೆನೆ ಮಡಲ್ತು ಕಱಂಗಿ ಕೞ್ತಲಿಸಿದ ತಮಾಲದಿಂ, ಕಾಮನ ಪೇರುಕ್ಕೆವದೊಳಂದು ಪೊತ್ತಿಸಿದ ದೀವಿಗೆಗಂಬಮೆಂಬಂತಿರೆ ಪೂವಿಂ ಕರಂ ಚೆಲ್ವಾದ ಸಂಪಗೆಯಿಂ, ಕುಸುಮಾಯುಧನ ಪೊಸಮಸೆಯೊಪ್ಪದ ಕೂರ್ವಾಳೆನೆ ಮಿಱುಗಿ ಕುತ್ತೆಸಳಿಂ ತೀವಿದ ಪೊಂಗೇದಗೆಯಿಂ, ಮುಗುಳ್ತ ಪಾರಿಜಾತದಿಂ, ಪೂತ ಮಂದಾರದಿಂ, ಉಳ್ಳಲರ್ದ ಸುರಹೊನ್ನೆಯಿಂ, ನನೆಯೇಱಿದ ಸುರಯಿಯಿಂ, ಬಕುಳದಿಂ, ಸಿರಿಸದಿಂ, ಪುನ್ನಾಗದಿಂ ಸೊಗಯಿಸಿ ತೋರ್ಕುಂ. †ಕೊನರಿಲ್ಲದ, ಮಿಡಿಯಿಲ್ಲದ ಕಸುಗಾಯಿಲ್ಲದ, ದೋರೆವಣ್ಣಿಲ್ಲದ, ತನಿವಣ್ಣಿಲ್ಲದ ಮರಂಗಳಿಲ್ಲಾ ಬನದೊಳ್.† ಮುಗ್ಗದ ಮುಗಿಯದ ಬಾಡದ ನುಱುಗದ ಸುರುಂಟದ ಪೂವೆ ಪೂ ಬನದೊಳಳುಂಬಂ. ಮತ್ತಂ ಮೃದ್ವಂಗಿಯೆಂತಂತು ನುಣ್ಪುವಡೆದುಂ, ಗಾಡಿಯಿಂ ನಡೆವ ಕೃಶೋದರಿಯೆಂತಂತು ಬಳ್ಕಿಯುಂ, ನಚ್ಚಣಿಯೆಂತಂತು ಪೊೞ್ತುಪೊೞ್ತಿಂಗೆ ತಲೆಯನೊಲೆದುಂ, ಸೂೞ್ಗವಂದ ಕಾದಲೆಯೆಂತಂತು ನೆರೆಯ ತೆಳ್ಮರನಂ ತಳ್ತಮರ್ದಪ್ಪಿಯುಂ ಪೂವಳ್ಳಿ ಮಡಲ್ತಿಸುಗುಂ. ಬಿರಿದ ಮುಗುಳ ಕಂಪಿಂ ಬೆರೆದು ತನಿವಣ್ಗಳ ನಱುವಿಂ ಪೊರೆದುಗುವ ಸೊನೆಯ ಸೌಸವದಿಂ ನೆರೆದದಿರ್ಗಂತಿಯುಂ ತಾಟಿ ಮಾಲತಿಯುಂ ಮುಟ್ಟೆ ಮಾಧವಿಯಂ ಕಿಟ್ಟೆ ಬನಗಾಳಿ ತಣ್ಣನೆ ತೀಡುಗುಂ. ಅಂತುಮಲ್ಲದೆಯುಂ—ತೀಟದ ಕಂಪೆತ್ತಲತ್ತಲ್ ಮೋಹರಿಸಿ ಗಾವರಿಸಿ ತಂಡತಂಡದಿಂ ತೆಂಕುತೆಯ್ತಂ

ದು ಮುಂದೈಸಿದಲರ್ಜೊಂಪಮುಂ ಕಂಡು ಪಿಂಡೆಱಗಿ ಪೊಸಜೇನನುಂಡು ಱಿಕ್ಕೆಯುಂ ಬಿದಿರ್ಚಿ ಮೊರೆದೆೞ್ದು ಮೇಣುಂ ಮುಂಬರಿವ ಬವರಿವಿಂಡಿಂ, ಪಿಳ್ಳನೆ ಪಿಱಿದು ತನಿರಸದ ತಂದಲ್ಸುರಿವರನೇಱಲ ಗೊಂಚಲಂ ಕಟ್ಟಿದಿರೊಳ್ ಕಂಡು ತಾನುಂ ಸಾರಿಗೆಯುಮಿರದೆ ಪವ್ವನೆ ಪಾಱು ಸೆಳೆಗೊಂಬಿನಡರ್ದು ಮೆಯ್ಯಾಗಿ ಕೆಲಕೊಲೆದ ಕಱುವಣ್ಣಂ ಕೊಕ್ಕಿಂ ಕುರ್ಕಿ ಸೀಯೆನೆ ಸವಿವ ನುಡಿವಕ್ಕಿಗೊಂದಣದಿಂ, ಬಂದ ಸೀಮಾವಿನಳ್ಳೆಗೊಂಬಿನೊಳಿರ್ದು ಕಣ್ಮುಗಿದು ಕೊನರ ಕನಸೋರ್ಗೆಸೆಯುಂ ಚಂಚೂಪುಟದಿನಡಿಗಡಿಗೆ ಮೇದೊಲ್ದು ಪುಯಿಲ್ವಾವ ಪಡಿಯಱವಕ್ಕಿಗಳ ತಂಡದಿಂ, ನಿಱುಗದ ಮರಂಗಳೊಂದು ಪೊದೆಯಿಂ ಪುದಿದ ಬನಗಟ್ಟಲೆಯೆ ಕಾರ ಕಾರ್ಮುಗಿಲೊಡ್ಡಾಗೆ ಇದಿರ್ಗಾಳಿಗೊಲೆವ ಮಾವಳ್ಳಿಯು ದಾಂಗುಡಿಯು ನುಣ್ಬೊಗರೆ ಬಳ್ಳಿಮಿಂಚಾಗೆ ಅಡಿಗಡಿಗೆ ಜಗ್ಗಿಪ ಮೇಳಂಬದ ಮೊರೆಯು ಗುಡುಗುವ ಬಲ್ದನಿಯಾಗೆ ಪೂದೊಂಗಲತ್ತಣಿನೆಡೆವಿಡದೆ ಪನಿವ ತನಿಜೇನೆ ಸೋನೆಯಾಗೆ ಕಾರ್ಗೆತ್ತು ನಾಟ್ಯಮಾಡುವ ಸೊರ್ಕಿನ ಸೋಗೆನವಿಲ್ಗಳೊಂದು ಕೂಟದಿಂ ಬನಂ ಮನಂಗೊಂಡುದು.

ಈ ತೆಱನೊಂದು ಮಾಱಿಶ್ರಿಯಿಂ ಮಾಧವನೋಲಗದ ಸಾಲೆಯೆಂಬಂತಿರೆ ಕರಂ ಸಿಂಗರಂಬೆತ್ತ ತೋಂಟದೊತ್ತಿನೊಳ್—ಕಂಕಣವಲಯಂಗಳಿಂ ಮನೋಜ್ಞಮಪ್ಪ ಸುಮೇರುವೆಂತಂತು ಕಿಸುವೊನ್ನ ಪಿಂಜರಿಯ ಚೆಂದವಗಲ್ಲ ಕೋಂಟೆಯು ಮೂವಳಸಿನಗಱಿಂದೊಳಗೆ ಕರ್ಮಣಿಯ ನೆಲೆಗಟ್ಟಿಂ ಪಳಿಕಿನಱಿಯ ಭಿತ್ತಿಯಿಂ, ಬಜ್ಜರದ ಜಂತೆಯಿಂ, ರನ್ನದೊಳ್ಗಂಬದಿಂ, ಮುತ್ತಿನ ಜಲ್ಲರಿಯಿಂ, ಪುಷ್ಪಸರಾಗದ ಪೊಸಂತಿಲಿಂ, ಗೋಮೇಧಿಕದ ದಾರವಂದದಿಂ, ಪವಳದ ಪಡಿಯಿಂ, ಮರಕತದೊಂದು ಕಳಸದಿಂ ತಾರಗೆವಟ್ಟೆ ಮುಟ್ಟೆ ನಿಗುರ್ದು ಸೈಪಿನಾಗರಂಬೋಲ್ ಮಣಿಸತ್ತಿಗೆಯ ಮೊಗಮುಂಟಪದ ಬಣ್ಣವಟ್ಟೆಗೆಯ ಅಮಳಗುಱಿಯ ನಂದ್ಯಾವರ್ತದ ತೋರಣದೋರಣದ ಲೋವೆಯ ಮದನಕೆಯ್ಯ ಬಾಗಿಲ್ವಾಡದ ಸಿಂಗರದೊಂದು ದೇಗುಲಂ ಕಣ್ಗೆಡ್ಡಮಾಗಿ ರಂಜಿಕುಂ.

ಇಂತು ಸೊಂಪಿನ ಪೆಂಪಿನಲಂಪಿನೊಂದು ಚೊಕ್ಕಳದ ನೀರ್ದಾಣಮುಂ ಬನಮುಂ ದೇಗುಲಮುಂ ಕಂಡು ಬಗೆವಗೆಯ ಕಟ್ಟೆಚ್ಚರಿಯಿಂ ತನ್ನ ಮುತ್ತ ಮಂತುಗೆ—ಅಯ್ಯ ಸುಮತಿ! ಕಂಡೆಯ! ಈಕಟ್ಟುರ್ಬಿನ

ಬೇಸಗೆಯ ಬೇಗೆಯೊಳಂ ಬತ್ತದೆ ತುಂಬಿ ಬೆಳ್ಳಂಬರಿವ ಬೆಂಚೆಯುಂ. ಓ! ನೋೞ್ಪೊಡೀಬನಂ ಸಂದ ಸುರನಂದನಮನೇಳಿಕುಂ ಚೋಜಿಗಮಲೆ! ಇದೆಕೊಳಾತ್ತೋರ್ಪುದಾತ್ತೋರ್ಪುದೊಂದು ದೇಗುಲಂ ಬೆಳ್ಳಿವೆಟ್ಟಿನ ಪಾಂಗಿಂ. ಆವ ದೇವತೆಯಿರ್ಕಮೊ? ಆವ ಪೆರ್ಮೆಯು ಗೊತ್ತೊ? ಪೇೞ್! ಎಂದು ಬೆಸಗೊಳಲೊಡಂ; ಮಂತ್ರಿಪಂ—ಜೀಯ! ಇಂತಿವೆಲ್ಲಮಾತ್ತೋರ್ಪ ಪೊೞಲ್ಗೊಡೆಯಂ ಸುಮದಂಗೊಲ್ದು ಬಂದೀದೇಗುಲದೊಳ್ ನೆಲೆಗೊಂಡ ಕಾಮಾಕ್ಷೀದೇವಿಯೊಂದು ಮೆಯ್ಮೆಱೆಸೆ. ಅಂತದಱಿನೀಪುಣ್ಯರೂಪಿಣಿಯ ದರ್ಶನಂಗೆಯ್ದು ಬಲಂಗೊಂಡೊಡೆಮ ಗೆಲ್ಲಂ ಗೆಲ್ಲಮೆಂದಂ. ಆನುಡಿಗೆ ಶತ್ರುಘ್ನಂ—ಅಂತೇಂ? ಸುಮದನಾವ ನಾಡೊಡೆಯಂ? ಏಕೆ ದೇವಿಯಂ ಮೆಚ್ಚಿಸಿದಂ? ಏವಂದಱಾರವರ್? ಆಂ ತಿಳಿವಂತು ಬಿತ್ತರಿಸಯ್, ಎಂದು ಕೇಳ್ದಂ. ಅದರ್ಕೆ ಸಚಿವಂ—ಲಾಲಿಸಯ್. ಈಭೂಕಾಂತೆಗೆ ಲಲಾಮಮೆಂಬಂತಿರಿದೆ ನಂದನಕೆ ಕೆಲನೊಳೊಪ್ಪುವುದಹಿಚ್ಛತ್ರಪುರಂ. ಈನಾಡಂ ಸುಮದನೆಂಬೊರ್ವನಱಕೆಯ ರಾಯನಾಳ್ವಂ. ಮುನ್ನಮೊರ್ಮೆ ತನ್ನ ಪೊೞಲನರಿರಾಯರ್ ಸೂಱೆಗೊಳಲೊಡಮದುವೆ ವೈರಾಗ್ಯಮಂ ಪುಟ್ಟಿಸೆ ಹತಭಾಗ್ಯಂ ವನಂಬೊಕ್ಕು ಕಾಮಾಕ್ಷಿಯನೊಲಿಸಲ್ಕೆಂದು ತಪದೊಳ್ ನಿಂದಂ. ತರಗೆಲೆಯುಂಡು ಮೂಱುಂಬರಿಸಂ, ನೀರುಂಡು ಮೂಱುಂಬರಿಸಂ, ಗಾಳಿಯನುಂಡು ಮೂಱುಂಬರಿಸಂ, ನಿರಾಹಾರಂ ಮೂಱುಂಬರಿಸಂ, ಕಟ್ಟುಗ್ರಂ ತಪಂಗೆಯ್ದಂ. ಇಂತು ಪನ್ನೆರಡು ಕಾಲಂಬರಂ ತಪದೊಳಿರ್ಪುದುಂ. ಕಡಲ್ ಕುದಿವನ್ನಂ ನೆಲೆವೆಟ್ಟು ಜರ್ಗವನ್ನಂ, ವನಂ ಬೇವನ್ನಮಾಶಾಧಿಪರ್ ಗೆಂಟುಗೆಂಟಿನೊಳೋಸರಿಪನ್ನಂ ತಪಃಪ್ರಭಾವಮೊಂದೇೞ್ಗೆವೆತ್ತು ದೆಸೆ ದೆಸೆಯೊಳಂ ಪಸಗೆ ಕಂಡು ಪುರುಡಿಂ ಮೆಯ್ಗಣ್ಣಂ ಕೀೞ್ಬಗೆಯಿಂ ತಪೋವಿಘ್ನಮಂ ನೆಗೞ್ಚಲೆಂದು ತಱಿಸಂದು, ಕಾಮನಂ ಬರವೇೞ್ದು, ತಾನು ಮಾತನುಂ ಮಂತಣದೊಳಿರ್ದಿಂಬೞಿಯುಂ—ಎಲೆ ಕಾಮ! ಆಮುಂ ನೀಮುಂ ತವಸಿಗಳ್ಗೆ ಪಗೆಗಳಲ್ತೆ! ಆರಾಯನ ತಪಕೆಂತುಂ ಬನ್ನಮನೊಡರ್ಚಯ್. ಅಚ್ಚರಸಿಯರಂ ನಿನ್ನ ಬೆಂಬಲಕ್ಕೆ ಬೞಿಯಟ್ಟುವೆನೆಂದಂ.

ಮನೋರಮೆ—ಅಣ್ಮ! ನಾಕಲೋಕದ ದೇವರ್ಕಳ್ಗಮೀನರಲೋಕದ ತವಸಿಗಳ್ಗಮಾವ ಮೊಱೆಯೊಳ್ ಪಗೆ ಪೇೞ್?

ಮುದ್ದಣಂ—ಒಚ್ಚೇರೆಗಣ್ಣಪೆಣ್ಣೆ ! ಇಂತಿದು ಮೊಱೆಯುಂ ಪುದುವಂ ಪಾರಿತಿಲ್ಲಿಕ್ಕುಂ ಜತಿಗಳೊಳೊಂದು ಪುಟ್ಟುವಗೆಯ್ಯೈಸೆ ! ನೂಱೇಂ ? ನಾಡಿಗರ್ ದಿನದಿನಂ ಬೇಳ್ವೊಂದು ಹವ್ಯಮನುಂಡುಂಡು ಸವಿಗೊಂಡ ಬೋೞಿಯರೆತ್ತಾನುಮೊರ್ವನೀನಿಚ್ಚವಲಿಯೆಡೆಯಿಂ ಪುರುಳ್ಗಾಣದೆ ಪಜ್ಜೆವಿಟ್ಟು ತಿರುಳಂ ಸಮಂತು ಪುರುಳಂ ತೋಱುವ ಜೋಗವೆಣ್ಗೆ ಸಂಚುಗೆಯ್ಯಲೊಡಂ ಕಱುಂಬಿ ಸಿರ್ನೆರವೀವುಜ್ಜುಗಕ್ಕೆ ತಡೆವರ್ಪರ್. ಕಳ್ಗಡಿವರೇಂ ಮಾಡರೊ? ನೂಱುಂಜನ್ನದೊಂದು ಬಲ್ಮೆಯಿಂ ಸಗ್ಗದೊಳ್ ಬಾೞ್ವಿಂದಿರನುಮೀಜೋಗವಟ್ಟಿಯುಂ ಕಂಡಿರೆ.

ಮನೋ—ಉಂ ! ಪೋಕೆ. ಮುಂತೇಂ ಮುಂತೇಂ ? ಕಾವನೇನೆಂದಂ ?

ಮುದ್ದ—ಆಱನೆಂಬನೆ ! ಸುಮತಿ ಶತ್ರುಹಂಗುಸಿರ್ದಂ ಕೇಳ್.

ಸುಮತಿ—ಕೇಳಯ್ ! ಆಗಳ್ ಮದನಂ ತಳ್ವದೆ ಕೋಲ್ಬಿಲ್ಗಳಂ ಕೊಂಡು ಪೊಱಅಡಿಯೊಳ್ ಬರ್ದಿಲರೊಡೆಯಂಗೆ—ಕಾಣಿರೆ ತನ್ನ ಬಲ್ಲಾಳ್ತನಮಂ ! ಜಗದಱ್ಕೆಯ ಸಾಂತನರಿವೆಣ್ಣಾಗನೆ ! ಬಾನಗಲಂ ತೊಟಲ್ವ ಚೆಂದವಂ ಕಡೆಗೆ ತಾರೆಯುಂ ಮಱೆವುಗನೆ ! ಏತಱ ಮಾತೋ ! ಎನ್ನ ನನೆಯಂಬಿನ ಮೊನೆಗೆ ಸುಗಿದಹಲ್ಯೆಯುಂ ನೀಮೆ ಶರಣ್ವೊಕ್ಕುದೇನಱಿಯುದುದೇ ! ಪೋ ಬಡಗೊಂದೆದವಸಿಯೋಮಂ ? ಆಜೋಗವಟ್ಟಿಗೆಯುಮಾಬೆಳ್ಪಡೆಯುಮಾಬೆಂಬೂದಿಯು ಪೂಸುಮಾಚೆಂಗಾವಿಗಪ್ಪಡದುಡೆಯುಂ ಮೇಣಾಮಾಸುಂದೊವಲುಮೆನ್ನೀ ಎಸುಗೆಯ ಕೂರಂಬಿನ ನನೆಯೊಂದು ಕುತ್ತೆಸಳ ಜಾಲೆಗೆ ಸೀಕರಿವೋಗದೇಂ ಮಾಣ್ಗುಂ. ಸುತ್ತೇಂ ? ಎನ್ನೊಂದುಗೆಯ್ಮೆಯಿನಾಗಾಮಿಲ ಜೋಗಿಯನೆರ್ದೆಯನುಗಿಬಗಿಮಾಡಿ ಬಗೆಯಂ ಕದಡಿ ತೋಱುವ ಗಾರಿಗೆಗಂಪಿಗೆ ಬೆನ್ನನೆ ಬರ್ಪ ಕುನ್ನಿಯುಂತಿರೆ ನಿನ್ನಾರಂಭೆಯರ ಬೆಂಗೊಂಡು ಬರ್ಪಂತು ಮಾಡದಿರೆ ಬಿಂಕದ ಬೀರನೆ ! ಸಂತಮಿರೆಂದು ಪೊಣ್ದು ಕಾಮುಂ ಪ್ರಕಾಮುಂ ತನ್ನ ಪುಸಿವಡೆವೆರಸು ತಪೋವನದತ್ತಣ್ಗೆಯ್ತರುತುಮಿರ್ದಂ. ಆತಂಗೆ ಬೆನ್ನೊಳೆ ಊರ್ವಶಿ, ರಂಭೆ, ಮೇನಕೆ, ತಿಲೋತ್ತಮೆ, ಮಂಜುಘೋಷಿ, ಘೃತಾಚಿ ಮುಂತಪ್ಪ ಅಚ್ಚರಸಿಯರ ಪೆಣ್ಬಡೆ ನಡೆತಂದುದು.

ಅನ್ನೆಗಮಾತನ್ನಚ್ಚುಮೆಚ್ಚಿನ ಚೆನ್ನಿಗಗೆಳೆಯುಂ ಪಗೆಯೊಳೆತ್ತಿಪ

ಪೂರ್ಣಂದೊಸಗೆಯುಂ ಮಱಿದುಂಬಿಗಳಿಂಬೋಲಿಕಾಱರ ಬಗೆಯೊಳಱಿತು ಸಂತಸಮುಗುಂದಲೆಯಾಗೆ ಪಡೆವೆರಸು ನಡೆತರ್ಪ ಬಿತ್ತಿಗನುಕ್ಕೈವಕೆಂದು ಬಸಂತಂ ಮಡಲ್ತು ದಾಂಗುಡಿಯಿಡುವೆಳವಳ್ಳಿಯೆ ಬಳ್ಳಿದೋರಣವಾಗೆ ಪಚ್ಚನೆ ಬೆಳೆದ ಬಾೞೆಲೆಯೆ ಪೂಸಕಾವಣಮಾಗೆ ಕಮ್ಮಲರ್ಜೊಂಪಮೆ ಜಲ್ಲರಿಯಾಗೆ ಪಣ್ತುತೊಂಗುವ ಪಣ್ ಫಲಾವಳಿಯಾಗೆ ಸಮೆದೊಂದೋಲಗದ ಶಾಲೆಯೊಳ್ ಸುರಿವ ಜೇಂಬನಿಯ ಸಾರಣೆಗೆಯ್ದುಮುಂದಿರ್ಪ ಚೆಂಬೊಗರಲರ್ವುಡಿಯ ಬಣ್ಣವಲ್ಲಿಗಳಂ ಬರೆದುಮುಸುಗೆಯ ಮಾಮರನ ಚೆಂದಳಿರ ಗದ್ದುಗೆಯ ನೇರ್ಪಡಿಸಿಯುಂ ಬಿರ್ದವರ್ಪ ಪೊೞ್ತಂ ಪಾರುತುಮಿರಲೊಡಂ—ಆವೇಳೆಗೆ ತನ್ನಾಗಮನಮಂ ನೆಱೆ ತಿಳಿಪಲ್ಕೆಂದು ಪೂಗಣೆಯುನಟ್ಟಿದ ದಕ್ಷಿಣಾನಿಲಂ ಮುಂತೆವಂದು ಸೊಗದ ಸುಗ್ಗಿವೆಸರೋಲಗಸಾಲೆಯ ಬಾಗಿಲ್ವಾಡದೊಳೆ ನಿಂದಿರ್ಪಾಬಸಂತನಂ ಕಂಡೆಱಗಿ ತಮ್ಮಾಣ್ಮನಟ್ಟಿದ ಪಾವುಡಮನೊಪ್ಪಿಸಿ—ಜೀಯ ! ಈನೆಲೆಯೊಳೊರ್ವಂ ಪಗೆಜೋಗಿ ಬಯ್ತಿರ್ಕುಂ ಗಡ ! ಆತನಂ ಬಾೞ್ದಲೆವಿಡಿವೊಡೀಗಳೆಮ್ಮಾಕಾವರಾಯುಂ ದಂಡೆತ್ತಿ ಬರ್ಕುಮಂತದಱಿನೀಯೊಸಗೆಯಂ ನಿಮ್ಮೊಳಾಡುವುದೆಂದೆನ್ನಂ ಕೞಿಪಿದನೆಂದಱಿಕೆಗೆಯ್ದಂ.

ಆನುಡಿಗೆ ಬಸಂತಂ ಸಂತಸದೊಂದು ಕೌಪರೆಯೊಳ್---ಬಂದನೆ ! ಲೇಸು ! ಲೇಸು ! ಅಂತೆಂದೆ ಏಪೊೞ್ತುಂ ಪಾರ್ದು ನಿಂದಿರ್ದೆಂ. ನಿಮ್ಮಾಳ್ದಂಗೆ ಮೇಲಕ್ಕೆ ! ಎಂದು ಬಣ್ಣನೆಯೆರೞ್ನುಡಿಯಿಂ ಮನ್ನಿಸಿ ದೂದುವಂದಾಗಾಳಿಗೆ ಪಡಿಬೀಡಾರಮಂ ಕುಡಿಸಿದನಿತಱೊಳೆ ಮುಂದೆಸೆಯ ಪಡಿಯೊಳ್—ಇದೆ ! ಬರ್ಪಂ ! ಎಂಬೊಂದುಲಿ ಕೇಳಿಸಲೊಡಂ: ಸಸಂಭ್ರಮ [ಲತಾವನಿತೆಯರ್] ಪೂವಲಿಗೆದಱೆ, ಬಲ್ವಕ್ಕಿಗಳ ತೋರದನಿಯೊಸಗೆವಱೆಯೆತ್ತಂ ಮೊೞಗೆ, ಮಯೂರಿಗಳ ಲಾಸ್ಯಮೊಂದೇೞ್ಗೆವೆತ್ತಿರೆ ಮಾಧವಂ ತನ್ನ ಗಿಳಿಗಳ ಮಱಿಗೋಗಿಲೆಗಳ ಪಸಾಯ್ತರಿಂ ಕೂಡಿ ಭೋಂಕನೆೞ್ದು ಇದಿರ್ವಂದು ಗಾಡಿಯಿಂ ಬರ್ಪ ಚೆನ್ನ ಪೊಂಗನಂ ಕೆಯ್ಗೊಟ್ಟು ಕೂಡಿವಂದೋಲಗದ ಸಾಲೆಯಂ ಪುಗಿಸಿ ಎಳದಳಿರ ನಲ್ವಾಸಿನೊಳ್ ಕುಳ್ಳಿರಿಸಿ ತಾನುಮೊತ್ತಿನೊಳ್ ಮಂಡಿಸಿ ಸೊಗಂಗೇಳ್ದು ಕಿಱಿದಾನುಂ ಪೊೞ್ತುಪಚರಿಸುತಿರ್ದಂ.

ಇಂತಿರ್ಪುದುಂ ತನ್ನನಲ್ಗೆಳೆಯನೊಂದು ಸಪರ್ಯೆಯಿಂ ಸಂತುಷ್ಟ

ನಾಗಿ ದಪ್ಪಗಂ ಪಡೆವೆರಸುೞಿದ ಕಡೆವಗಲನಿರುಳಂ ಪುಸಿಗಾಳಿಗದುಜ್ಜುಗ ದೊಂದೆಣಿಕೆಯುಂ ಕೞಿದು ಪೊೞ್ತುಱಿಯೊಳ್ ತನ್ನಂಕದ ತುೞಿಲಾಳ್ಗಳ ಬಲ್ಗೆಯ್ವಂಟನಪ್ಪ ತೆಂಗಾಳಿಯುಂ ಕರೆದು—ಅಯ್ಯಾ ! ಇದೆ ಕೆಲನ ಬನ ದೊಳೊರ್ವಂ ತವಸಿ ಎಮ್ಮೊಳಾದ ಪಗೆಯಿಂ ಮೂಗುವಟ್ಟು ಕೆಮ್ಮನಿರ್ಕುಂ. ಅಂತದಱಿಂ ನೀಂ ಪೋಗುತುಮೆಮ್ಮಾಳ್ತನದಗ್ಗಳಿಕೆಯನೆಮ್ಮ ಪಡೆಯ ಪವಣನಣಿಯಱಮೊರೆದು ಎಮ್ಮೊಳ್ ಪಗೆಗೊಂಡು ನಿರ್ನಿಮಿತ್ತದಿನಲರಂ ಬಿಂಗೆ ತಲೆಯುಂ ಮಾಱುಗುಡದೆ ಮಱೆವಾೞ್ವುದೊಳ್ಳಿತೆಂದು ನಯಂ ಬೇೞ್ದು ಬಾರೆಂದು ನಿರವಿಸಿ ದೂದಟ್ಟಿದಂ. ಆನುಡಿಗೊಪ್ಪಿ ದೂದು ಗಾಱನಲ್ಲಿಂ ತಳರ್ದು ಒರೊಂದು ನೆಲೆಯ ಕಾಯ್ತುರನೇಱಲೆಂಬ ತಿಟ್ಟನೇ ಱಿಯುಂ, ತಳಿರ್ತ ಚೆನ್ನಸುಗೆಯೆಂಬ ಜಾದುವೆಟ್ಟನಿೞಿದುಂ, ಪೂತ ಬಳ್ಳಿ ವೊದಱೆಂಬ ಸಱುವೊಳ್ ನುಸುಳ್ದುಂ, ಕಱಂಗಿದ ತಮಾಲಮೆಂಬ ಕಾೞ್ಕಿಚ್ಚುಮಂ ಪಾಯ್ದುಂ, ತೂಗಿ ತೊನೆವ ಪೂಗೊಂಚಲೆಂಬ ಬೞಿ ಯುಂ ಕೊಂಡು ಮೆಲ್ಲಮೆಲ್ಲನೆ ತವಸಿಯ ಪೊರೆಗೆಯ್ತಂದಂ.

ಅಂತು ಬಂದು ಕಟ್ಟಿದಿರ ಜೋಗಿಯಂ ಕಂಡು ಭುಗಿಲೆಂದುಂ ಭೋಯೆಂದುಂ ರಯ್ಯೆಂದುಂ ಸುಯ್ಯೆಂದುಂ ತಮ್ಮೊಡೆಯನಾಣತಿಯಂ ಪೇೞಲೊಡಂ ; ಯೋಗಿ ತಾಂ ಮಱುನುಡಿಯದೆಯುಂ ತನ್ನಂ ಮನ್ನಿಸ ದೆಯುಮಿರ್ಪುದಂ ಕಂಡು, ಕಿನಿಸಿಂ—ಆಃ ! ನುಡಿಯಂ ಗಡ ! ಬಿಗುರ್ಪ ಗಡ ! ಏನೆಂಬ ಸೆಂಪೊ ! ನೋಡುಗೆ ಎಮ್ಮೊಂದು ಬಲ್ಮೆಯಂ ! ಈಗಳೆ ಸೆಱೆವಿಡಿದು ಕೊಂಡುಯ್ದು ಕಾವಂಗೊಪ್ಪಿಸುವೆನೆಂದೊಡನೆಯೆ ರಾಜ ಯೋಗಿಯಂ ಮೇಲ್ವಾಯ್ದಂ. ಏನೆಂಬೆನೋ ಅಂತು ಬಿಜ್ರನೆ ಮೇಲ್ವಾಯ್ದು ದಂ ಕಂಡರುಂಟು; ತಪದೊಂದು ಬೇಗೆಯ ಸೂಡಿಂ ನಾಡೆ ಪೊತ್ತಿ ಸೀಕರಿ ವೋದುದಂ ಕಂಡರಿಲ್ಲ; ಪಲವೇಂ. ಇಂತು ಬಂದ ತೆಂಗಾಳಿ ನಡೆಗೆಟ್ಟು ಕಾಣದಪ್ಪುದುಮಿತ್ತಲ್ ಕಾವನಿನಿವಿರಿದುಂ ಪೊೞ್ತು ಊೞಿಗದೊಂದು ನೆವದಿಂ ಪೋಗಿಯುಂ ಬಾರದ ಗಾಳಿಯಿರವಂ ಬಗೆದು, ಎಂತು ಬಡ ಕಿತ್ತಡಿಯ ಲಂಚದ ಸಂಚಿಂಗೊಡಂಬಟ್ಟು ಮಾಣ್ದನೆಂದು ತಱಿಸಂದು— ಆಃ ! ಈಪಡೆಯಿನೇವುದೆಂದು ಕಾಯ್ಪಿಂ ತಾನೆ ಕೈದುವೊತ್ತು ನೆರೆಯ ಬನಕ್ಕೆಯ್ತಂದು ಸಮಾಧಿಯೊಳಿರ್ಪ ರಾಯನಂ ಕಂಡಂ.

ಇಂತಿರೊಂದು ಮಾೞ್ಕೆಯಿಂ ಗೞ್ಕನೆ ಬಂದು ನಿಂದಿದಿರ ಜರೆಯ

ನರೆಯ ಮಡಲ್ತು ಸೆರೆದುಱುಗಲ ಸುರ್ಕುಂದೊವಲ ಅಸಿಯೊಡಲ ಬಱು
ವಂ ಜೋಗಿಯುಂ ಮಾಲಿಸುತುಂ—ಆಃ! ಈಯೆಲ್ಗೊಡಿಂಗೇಕೊ ಎಮ್ಮೊಳ್
ಪಗೆಮಾೞ್ಪೊಂದು ಬೆಸನಂ ? ಓ ! ಆನುಮೇನೆಂದು ಪುರ್ಚುಗೊಂಡು
ಕೈದುವೊತ್ತು ಕಾದುವೆನೋ ? ತೊಂಡುಗೆಡೆವ ಪುರುಳಿ ಸಾಲದೆ ? ಒಚ್ಚ
ತಂ ಕುಕಿಲ್ವ ಕೋಕಿಲೆ ಸಾಲದೆ ? ತಣ್ಣನೆ ತೀಡುವ ಬನಗಾಳಿಯೊಂದು
ಸಾಲದೆ ? ಎಂದು, ಮತ್ತಂ ಪರಿಭಾವಿಸಿ—ಒಲ್ಲೆನೊಲ್ಲೆನೀಲಂಚವಣಿಗರಂ.
ಆಗಳೆ ಸಂಧಿಗೆಂದು ಬಂದ ತೆಂಗಾಳಿ ಏಂ ಗೆಯ್ಗುಂ. ಉಗುರಿಂ ಚಿವುಡಲ್ತು
ಗುವೊಂದು ಕಜ್ಜಕ್ಕೆ ಕೊಡಲಿಯೊಂದು ನೆರವಂ ಪಾರ್ವರೆ ? ಸಂದೊಂ
ದಂಬಿನೊಳೆ ನೋಯಿಸದೆ ಬಿಡೆನೆಂದು ಮಱೆಯೊಳೆ ನಿಂದು ಬಾಣಮ
ನಿಸಲೊಡರ್ಚಿದಂ. ಅಂತು ಬಗೆದಱಿತು ಕಾಮಂ ಕರ್ಬುವಿಲ್ಲಂ ತುಡುಂ
ಕಿಯುಂ, ತುಂಬಿವೆದೆಯನೇಱಿಸಿಯುಂ, ಪೂಗೋಲ್ಗೆ ಕೆಯ್ನೀಡಲೊಡಮೆ
ನಗೆ ತನಗೆಂದು ಮೂಡಿಗೆಯಿನೊಂದಱ ಬೆಂಬೞಿಯೊಳೊಂದು ತಲೆದೋ
ಱಿದುವು. ಪಿಡಿವಾಗಳೊಂದು ; ಪಿಡಿಯಿಂ ತುಡುವಾಗಳೆರಡು ; ತೊಟ್ಟನೆ
ಸಿಡಿವಾಗಳ್ಮೂಱು ; ಗುಱಿಯಂ ಕೆಡೆವಾಗಳ್ ನಾಲ್ಕು ; ಪಂಚಾಯು
ಧನ ಪೊಸಮಸೆಯ ವಿಶಿಖಂಗಳ್. ಮುನ್ನಮೋರೊಂದು ಮತ್ತಮೀ
ರೆರಡು ಮೇಣ್ ಮೂಮೂಱು ಬೞಿಕ್ಕಂ ನಾಲ್ನಾಲ್ಕು ಕಡೆಯೊಳೈದೈ
ದು ತಾವರೆಯ ಕರ್ನೆಯ್ದಿಲ ಮಲ್ಲಿಗೆಯ ಮಾವಿನ ಪೊಸಅಸುಗೆಯ
ಕೂರಂಬುಗಳಳುಂಬಂ. ಆದೊಡಮೇವನೊ! ದೈವದ್ರೋಹಿಗಾವುದು ತಾಂ
ಸಲ್ಗುಂ ! ಈ ಮಾೞ್ಕೆಯಿನಾರ್ದೆಚ್ಚ ಮಲರಂಬುಗಳ್ ಗೋಱಿಗಳ್ಗೆ
ತೆತ್ತಿಸಿದ ಕಲ್ಲಂಬುಗಳಪ್ಪುದುಂ ಮಯಣದ ರೂವೊಂದು ಕಿಚ್ಚನಿದಿರ್ಚಿ
ಮೆಯ್ಯೞಿವಂತಿರೆ ಮದನಂ ಪೋಗಿ ಯೋಗಿಯಂ ಕೆಣಕಿ ಕಡೆಯೊಳ್
ತಪದುರಿಯಿನಳವೞಿದಂ.

ಆವೇಳೆಯೊಳೀತಂಗೆ ನೆರವಾಗುತುಂ ಬೀಡಿಕೆಯಿಂ ಕಟ್ಟುಱದಿಂ
ಪೆಣ್ಬಡೆಯ ನೀಱಿವೆಣ್ಗಳ್ ಬಂದೊದವಿದರ್.

ಎಸೆವಲತಗೆಯಿಂ ಪೊರೆದ ಮೆಲ್ಲಡಿಯ ನಡೆಯ ಬೆಡಂಗಿನೊಂದು
ಬಾವದಿಂ ನೆಲೆವೞಿಯ ಕಲ್ಗಳ್ಗೆ ರಾಗಮನೊಡರ್ಚಿಯುಂ, ಸೂಡಿದ ಮು
ಡಿಯಿನಡಿಗಡಿಗೆ ಸೂಸುವ ಬಿಡುಮಲ್ಲಿಗೆಯ ಕಂಪಿನೊಡವರ್ಪಾಱಡಿಗಳ್ಗೆ
ನಡೆವಳ್ಳಿಯ ಬೆಮೆಯುಂ ಪುಟ್ಟಿಸೆಯುಂ, ಪೆಱನೊಸಲೊಳ್ ಕಱಿಯ

ಪಾಂಗಿನಿಂದಲೆವ ಮುಂಗುರುಳಂ ನೂಂಕೊತ್ತುವೊಂದು ನೆವದಿಂ ತೋಳ ಮೊದಲಂ ತೋರ್ಪಡಿಸಿಯುಂ, ಕೆಕ್ಕೆಯ ಕತ್ತುರಿಯ ಮಕರಿಕೆಗಂಡಲೆದು ಮುಸುಱಲವ್ವಳಿಸುವ ಮಱಿದುಂಬಿಯ ಕೂಟಮಂ ಮುರಿಮುರಿದು ನೋಟ್ಪಿ ಭಂಗಿಯಿಂ ತಮ್ಮಾ ಕೊನೆಗಣ್ಗಳ ಕಾಂತಿಯಿಂ ದೆಸೆಯನೆತ್ತಂ ಬೆಳಗಿಯುಂ, ಬಿಣ್ಪುವೆತ್ತ ಬಟ್ಟಮೊಲೆಗಳೆರ್ದೆಯನೇಱುತ್ತಿ ನಿಗುರೆ ಘನನಿತಂಬಂ ಕದಕ್ಕದಿಸೆ ಪುಸಿನಡು ಬಳ್ಕೆ ಬಂದು ತಪದೊಳಿರ್ಪ ರಾಯಂಗೆ ಕಟ್ಟಿದಿರೊಳಾದರ್. ಆಪೊೞ್ತು ಕಾವಂ ತನಗೆ ಬೆಂಬಲಮಾಗೆ ನಡೆತಂದ ದಂಡಂ ಕಂಡಳವಿಯೊಳಾರ್ದು ಸಾರ್ದು ಬಿಲ್ಮಿಱುವನ್ನಂ ತುಂಬಿವೆದೆ ಕಡಿವನ್ನಂ ನಿಷಂಗಂ ಮುಗಿವನ್ನಂ ಐವಡಿಗಣೆಯಿಂ ಮಱುವಕ್ಕದೊಳಿರ್ದಾರಾಯನನಿಸುತಿರ್ದಂ.

ಇತ್ತಲ್ ಮುಂದೆಸೆಯೊಳ್ ಬಂದ ಸಂದ ಸಿಂಗಾರಿಯರುಂ ಸಂದಣಿಸಿ ಕಾದಿದರದೆಂತೆನೆ :—

ಅವರೊಳೊರ್ವಳ್ ಸೋಮರ್ಡಿಯ ಸೊರ್ಕಿನ ಮಂಜುಘೋಷಿಯೆನಸುಂ ದೂರದೊಳಿರ್ದ ರಾಯಂಗೆ—ಎಲೆ ಮಾರಾಯ ! ಇದೇತಱ ಮಾಟಮೊ ! ಮಡದಿಮಕ್ಕಳಂ ಪೊಡವಿಯೈಸಿರಿಯನುೞಿದೀಕಾರಡವಿಯೊಳ್ ಮೂಗುವಟ್ಟಿರ್ಪೊಂದು ಹದನೇಂ ! ಕಲಿ ಸೋಂಕಿದಂತಿರೀಕವರ್ಲೆಯಂ ನೆಱೆ ಪೊಕ್ಕು ಬಾೞ್ವ ಬವಣೆಯದೇನಯ್ ? †ಪುಲಿಯಿರ್ಕುಮಾನೆಯಿರ್ಕುಂ ಚಲದಂಕರ ಲೆಂಕ ! ನೀನೆ ಮಂಕಡನಾಗ ! ಎಂಬುದುಂ—

ಅನಿತಱೊಳ್ ಮತ್ತಮೊರ್ವಳ್ ಕೊಂಕುಗುರುಳ ಬಿಂಕದ ರಂಭೆ ತನ್ನ ಮೇಲುದಂ ಬರಿಸೆಳೆಯುತುಂ ತಮ್ಮವರ್ಗೆ ಸುಟ್ಟಿಸಿ—ನೋಡಿರೆ ! ಕಾಯ್ಪ ಬೇಸಗೆಯ ನೇಸಱ ಸೂಡೆನ್ನದೆ ತೀಡುವ ಕುಳಿರ್ಗಾಳಿಯ ಕೋಡೆನ್ನದೆ ಕಱಿವ ಕಾರ ಸೂೞ್ಸರಿಯ ಜಿನುಂಗೆನ್ನದೆ ಮರವಟ್ಟು ಮೋನದಿಂ ಪುರ್ಚುಗೊಂಡನಂತುಮಿರ್ಪ ಕಾಡಾಡಿ ರಾಯನೊಂದು ಗೆಯ್ಮೆಯುಂ ! ಎಂದು ; ಮುಂದು ನಿಂದು ಸುಮದರಾಜಂಗೆ—ವೋ ! ಮಾಣೆಲೆ ಜೋಗಿ ! ಏವುದೊ ನಿನ್ನೀತಪಮೋವುದೊ ಜಪಮೋವುದೊ ಜಾನಂ ? ಮುದಿರ್ಪ ಕಣ್ಣವೆಯುಂ ಬಿದಿರ್ಚೆ ನೋಡೆಮ್ಮಂ. ಇದೆ ! ಬರ್ದಿಲನಾಡಿಗರ್ಗಂ ನೋಡಲ್ಬಾರದಚ್ಚರಸಿಯರ ನಲ್ವೆಂಡಿರ್ ನಿನ್ನನಾರಯ್ವ

ಡೆಂದು ಬಂದು ನಿಂದಿರ್ಪರ್. ನೀನಿಂತು ಗುಮ್ಮನಂತಿರೆ ಕಣ್ದೊಳಸಿಂ ದಿಟ್ಟಿಸದಿರ್ಪುದೇಂ ? ಆವ ಸೋಗದ ಭೋಗದ ಬಿಟ್ಕಿಯುಂ ಕಿಟ್ತಿತ್ತ ಲಾಟಿಪೆಯೊ ? ತಿರೆಯೊಳ್ ಬಲ್ಲರ್ಗೆ ಕಾಟದ ಬೇಟದ ಕೂಟದೆಳವೆಂಡಿ ರೊಡನಾಟದಿಂ ಪೆಱತು ಭೋಗಮುಂಟೆ ? ಬಳ್ಳಿಯೊಳೆ ಪಣ್ತು ತೊಂ ಗಲ್ದೊಂಗುವ ತೊಂಡೆಯು ಕೞಿವಣ್ಣ ದೊರೆವವರ್ಗಾತುಂಬುಂ ಜವ್ವನದ ನಲ್ವೆಂಡಿರ ಚೆಂದುಟಿಯುಂ ಮಾಣ್ಮಾಣೆಂಬೊಂದು ನೆವದಿಂದೊಚ್ಚತಮು ಣ್ಮುವ ಕಾಮಿನಿಯು ಕಂಠರುತಿಯ ಹೂಂಕೃತಿಯುಪಚಾರಮಾಗೆ ತುಂ ಬುಂಗೊಡನೊಳಿಟ್ಟೊಂದು ನುಣ್ಮಾಬಿಲ್ವರಲಿಂ ಪುಟ್ಟುವ ಕುಳ್ಳುಳಿಂಬ ಮೆಲ್ಲುಲಿಯು ಪಾಂಗಿನಿಂ ಕಂಠಮೂಲದೊಳಡಿಗಡಿಗೆ ಕಳಕಳನಾದನೊದ ವೆ ಮುಂಬಲ್ಗಳಿಂ ಮೆಲ್ಲನೆ ಕರ್ಚಿಯುಂ, ತನಿರಸಂ ಸೋಱುವನ್ನಂ ನಾಲ ಗೆಯೂಱಿ ಸೀಯೆಂದು ಚುಂಬಿಸಿಯುಮಂತಂತಾಗಳಾಗಳೊಸರ್ವ ಅಧ ರಾಮೃತಮಂ ನಿಚ್ಚಂ ತಣ್ಣನೆ ಸವಿವ ಬರ್ದುಳ್ಳರ್ಗೆ ಬರ್ದಿಲರೇಂ ಪಾ ಸಟಿಯೆ ? ಅಂತುಮಲ್ಲದೆಯುಂ ತನ್ನ ಏಱುಂಜವ್ವನದ ಕುಱಿಪಿದೆನೆ ಏಱಿಟ್ಟು ಮೇಲುದುಮಂ ಪಾಱಿ ನೂಂಕುವ ಕಾವನಾಟದ ಸೆಂಡೆಂ ಬಂತು ತೋರ್ಪ ಜೋಡೆಯು ಬಟ್ಟ ನೆಲೆಮೊಲೆಗಳಂ ತಳ್ತು ಪಿಡಿದೌಂಕಿ ಯುಂ ಮತ್ತಂ ತನ್ನಂ ಸೋಂಕಿ ಪಾಯ್ವ ಕಾದಲೆಯಂ ಬರಸೆಳೆದೊಳಅಟ್ಟಿ ನುರ್ಗುನುಱಿಯುಪ್ಪಿನಂ ಮಿಡಿದೊಡೊಡೆವಮುಳ್ಮೊಲೆಯೊಡೆದು ಪಾಲ್ ಸುರಿವಿನಂ ತನ್ನೆರಡುಂ ಸಿಡುದೋಳ್ಗಳಿನಮುರ್ದು ಬಿಗಿದು ತಬ್ಕೈಸಿಯುಂ, ಮೇಣ್ ಕಾಡುವ ಕಾವಂ ಕೋಡುವ ಕಮ್ಮೆಲರ್ ಮೂಡುವ ಚೆಂದವಂ ನೇಹಿಗರಾಗೆ ನೆಲೆವಾಡದ ತೂಗುಂಮಂಚಮೆತ್ತಂ ಅಂಚೆದುಪ್ಪುಟಿ ನಲ್ವಾ ಸೆತ್ತಂ ಬನದ ಬಳ್ಳಿವಾಡಮೆತ್ತಮೆಳದಳಿರ ಮೆಲ್ವಾಸೆತ್ತಂ ! ಮತ್ತಂ ಜತೆ ಗೊಂಡು ಸಾರ್ದು ಇನಿವೊಬ್ಬುಂ ಲಲ್ಲೆವಾತಿನ ಸೊಲ್ಲ ಸೊಗದೊಳಿರ್ದು ಸೊಲ್ಲಮೆಲ್ಲನೆ ಮೆಯ್ಸಾರ್ಚಿ ನಡುವಂ ಸಡಿಲ್ಚಿ ನಿಱಿಯುಂ ಬಿದಿರ್ಚಿ ಬಗೆಬಗೆ ಯಂ ತನುತನುವನೊಂದುಗೂಡಿ ನೆರೆವ ಜಾಣ್ಮೆಯ ಹೆರಳಿಗರ ಭೋ ಗಮೆ ಭೋಗಮಲ್ತೆ ! ಅಂತಿರೆ, ಗಾವಿಲ ! ನಿನ್ನೀ ಮೂಱುಂದಿವಸದ ಬಾಟ್ಕಿಯುಂ ಸೊಗದೊಳಾಗಿಸದೆ ಜೋಗದೊಂದು ಬೆಮೆಯಿಂ ಬಾರ್ತೆ ಗೆಟ್ಟೇಕಾಡಂ ಪೊಕ್ಕು ನಿರ್ನೆರಂ ಚೀ ! ನಱಿಕರಡಿಗಳ ಬಾಯ್ಗೆ ತುತ್ತ ಪ್ಪೆಯೆ ? ಬಾ ! ಬಾರೆಂದು ಕರೆದಳ್.

ಮತ್ತಮಾಪೊೞ್ತಿಂಗೆ ಬಡನಡುವಿನ ಮೇನಕೆ ಸಂಚುಗೆಯ್ವ ರಂಭೆಯುಂ ಮಾಣಿಸಿ ತಾಂ ಮುಂಬರಿದು ಮಾರಾಯಂಗೆ— ಎಲೆಲೆ ಕಾಮರಾಜ ! ಇಂತೊಂದುಂ ಬೆಸನಮೇಂ ! ನಿನ್ನನ್ನರಪ್ಪ ನಡುವರಯದ ಜವ್ವನದ ಗಂಡುಗಲಿಗಳ್ಗೀತೆಱನೊಂದು ಬನ್ನದೊಳ್ ಬಾೞ್ವರೆ ? ನಿನ್ನನುೞಿದೆಮ್ಮಾಪೆಣ್ಬಾಳ್ಗಮಾರಂ ಸೇರ್ಗುಂ ! ಎಲೆ ಚೆನ್ನಿಗರಾಯ ! ಎನ್ನೊಳ್ಮುನಿಸೇನಯ್ ? ತನ್ನಾಣೆ ! ಅರೆಗಳಿಗೆಯೊಳೆ ಕಾವನಾಟದೊಂದು ಮಾಟದಿಂ ನಿನ್ನಂ ಸಂತಸಂಬಡಿಪೆಂ. ಇಂತು ನಿನ್ನನೆ ನಂಬಿ ಸೋಲ್ತು ಬಂದಳೊಂದು ಜವ್ವನದ ಗಾಡಿಯು ಮೋಡಿಯುಂ ಬಗೆಯದೆ ಸವಿನುಡಿಯಿಂ ನುಡಿಯಿಸದೆನಸುಂ ಕಟಾಕ್ಷಿಸದೆ ದೆವ್ವಮಾಳ್ದಂತಿರೆ ಗುಱುಗುಮ್ಮನೆ ಬೆಕ್ಕಸಮಾಗಿರ್ಪರೆ ! ತಪಮಂ ಸುಡು ! ಮೋನಮಂ ಬಿಡು ! ಬಳ್ಳಿವನೆಗೆ ನಡೆ ! ಕಾಮಸಾಮ್ರಾಜ್ಯದೊಡೆತನಮಂ ಪಡೆ ! ಇದೆಕೊಳ್ ನಱುದಂಬುಲಂ ! ಹಾ ! ಹಾ ! ಇನಿವಿರಿದುಂಕಾಲಂ ಬಿಸಿಲೊಳಿರ್ಪಿನಂ ಪಿತ್ತಂ ನೆತ್ತಿಗೇಱುತಕ್ಕುಂ ; ಬಾರಯ್ ನೀರೆಱೆವೆಂ ಮೀಯಿಸುವೆಂ, ಪೂಸುವೆಂ, ಬಾವನ್ನದಿಂ ತಿಮಿರ್ವೆಂ, ತಿಲಕಮನಿಡುವೆಂ, ತನಿವಣ್ಗಳಂ ತಿನಲೀವೆಂ, ನಿನ್ನನಗಲದಾವಗಂ ಸೇವಿಸುವೆಂ. ಎನ್ನಪ್ರಾಣೇಶ್ವರಾ ! ನಿನಗಿಂ ಶಶ್ವತ್ಸುಖದ ಬಟ್ಟೆಯುಂ ತೋಱುಪೆಂ, ಎಂದಳ್.

ಆಗಳ್ ಕಿಕ್ಕಿಱಿದ ಕಕ್ಕಸವೊಲೆಯ ತಿಲೋತ್ತಮೆ ಮೇನಕೆಯ ನುಡಿಯನನುಕರಿಸಿ ಜತಿರಾಯನೊಳ್— ಏನೆಲೆ ಷಂಡ ! ಪೆಂಡಿರ್ವಂದು ಕರೆಯೆ ಆಱೆನೆಂಬ ನಿನ್ನ ಗಂಡುಗಲಿತನಮಂ ಸುಡು ! ಪಂದೆಯರ್ಗಂತಂತು ನೀಂ ಕುಱು, ಪೆಣ್ಗಂಜುವೆಯೆ ! ಆಃ ನಿನ್ನೀಪುಟ್ಟಂಗೇನೆಂಬೆನೊ ? ಚಿಃ ! ನಿನಗೀಜವ್ವನಮೇಕೆಯೊ ? ಆಣ್ಬರಿಜೇಕೆಯೊ ? ಏನೆಮ್ಮಂ ಕಂಡು ಬೆದಱು ಮರವಟ್ಟೆಯ್ ! ಎಂದು ಕೊಱಚಾಡಿದಳ್.

ಇಂತೆಂದಾಡುವ ತಿಲೋತ್ತಮೆಯನಾಕ್ಷೇಪಿಸಿ ಕುಡುನೋಟದ ಕುಡಿವುರ್ವಿನೂರ್ವಶಿ—ಪೋ ಪೋಗಿರೆ ! ಬೂದಿಯ ಬಱುಜೋಗಿಯ ನುೞಿದತ್ತಂ. ಪೆಣ್ಗಳಿರ್ದುಂ ನಾಣೞಿದು ಗೞಿಸಾಳೆವೆಣ್ಗಳೊಂದು ಮಾೞ್ಕೆಯಿನಿಂತು ನುಡಿವರೆ ! ಎಂತೆಂತೊ ಬೊಮ್ಮನಂದಂಧುಡಿದ ಕಡಿಯೆಲ್ಗಳಿನಟ್ಟಿಯೊಂದಂ ಬಿಗಿದು ತೊವಲಂ ಪೊದೆಯಿಸಿ ಪುಸಿಯುಸಿ

ಯಸುವೊಂದಂ ತುಂಬಿ ಬಿನದಕ್ಕೀವನದತ್ತಣ್ಗೆಟ್ಟೆರ್ಕುಮಲ್ಲದೀಜೇವಿಯೊಳ್ ಮಾನಸರ ಲಕ್ಷಣಮುಂ ಪುರುಳುಮುಂಟೆ ! ಪೊ ! ಮಾಣ್ ! ವಿಹಾರಂ ನೇರಮಾಯ್ತು, ನಡೆ ಪೋಪಂ, ಎಂದಿಱಿದು ನುಡಿದಳ್.

ಕೇಳ್ ದೇವಾಂಗನೆಯರಿಂತು ಪೊಗೞ್ದುಂ ತೆಗೞ್ದುಂ ಬಯ್ದುಂ ಭಂಗಿಸಿಯುಂ ನುಡಿಸಿದೊಡಂ ಮೋನಮನೊಡೆಯದ ಕಣ್ದೆಱೆಯದ ಕದಲದ ರಾಯನ ಕಟ್ಟಾಯಸದ ತಪದ ಬಲ್ಮೆಯಂ ಕಂಡು ದೂರದೆ ಕೆಯ್ಮುಗಿದು ಬೆಂಗೊಟ್ಟರ್ ; ಕಾವನಾವ ನಾಡನೊ ಪೊಕ್ಕಂ.

ಇತ್ತಲಿಂತಾಗೆ ರಾಯನ ನಿಚ್ಚಟದ ಭಕ್ತಿಗೊಲ್ದು ಕೆಲವಾನುಂ ದಿನಕೆ ದೇವಿ ಮೆಯ್ದೋಱಿದಳ್. ಇಂತು ತನ್ನ ಕಣ್ಗಿದಿರೊಳ್ ಮೂರ್ತಿಗೊಂಡ ಆದಿಮಾಯೆಯಂ ಕಣ್ಣಾಱೆ ಕಂಡಾನಂದಾಬ್ಧಿಯೊಳೋಲಾಡಿಯುಂ ಪಾಡಿಯುಂ ಪೊಗೞ್ದುಂ ಮಣಿದುಂ ದೈನ್ಯದಿಂ— ಎಲೆ ಮಾತೆ ! ನೀಂ ಭಕ್ತವತ್ಸಲೆ ಸಾಜಂ ! ಧ್ಯಾನಗಮ್ಯೆ ಸಾಜಂ ! ಸಕಲೇಷ್ಟಪ್ರದಾಯಿನಿ ಸಾಜಂ ! ಆದಿಶಕ್ತಿಯೆನಿಸಿರ್ದುಂ ಮೂಗವಲಿಂ ಹರಿಹರಬ್ರಹ್ಮರ್ಕಳಂ ಮೋಹಿಸಿದ ನಿನ್ನೀಮಾಯಾವಿನೋದಮನಾರಱಿಗುಂ ! ಎನ್ನನುದ್ಧರಿಸೌ ! ಎಂದು ಬಗೆವಗೆಯೊಳ್ ತುತಿಸುತುಮಡಿಗೆಱಗಿದಂ.

ಆಗಳಾತನಂ ನಾಲ್ಕುಂ ಕೆಯ್ಗಳಿನೆತ್ತಿ—ಮಗನೆ ! ಪಿರಿದಾಯಸಂಗೊಂಡಯ್ ! ನಿನ್ನಿಷ್ಟಾರ್ಥಂ ಸಿದ್ಧಿಪುದು ದಿಟಂ, ಎಂಬ ಶುಭರೂಪಿಣಿಯಂ ಕಾಮಾಕ್ಷಿಯಂ—ನಿನ್ನಂ ಕಂಡೆನಗೆ ಪೆಱತಾವುದೊ ಇಷ್ಟಂ? ಎಂದು ಬಿನ್ನಯಿಸಿದಂ. ಈ ನುಡಿಗೆ—ಹಾ ! ಸೊಗಂಬಾಱಿಯ್ ! ಶತ್ರುಹೃತಮಾದ ನಾಡುಂ ಸಕಲಸಂಪದಮುಂ ನಿನ್ನೊಡಮೆಯೊಳಕ್ಕೆ ! ಪೋಗೆಂಬುದುಂ ; ಸುಮದರಾಜಂ—ಅಬ್ಬೆ ! ನಿನ್ನಡಿಗಳನುೞಿದುಮಾಂ ಪೋಗಲ್ಕುಂಟೆ ! ರಾಜ್ಯದಿನೇಂ, ಭಾಗ್ಯದಿನೇಂ ? ಆನೊಲ್ಲೆನೀಕ್ಷಣಭಂಗುರದ ಭೋಗಂಗಳಂ. ನೀನೊಲ್ವುದು ನಿಕ್ಕುವಮಪ್ಪೊಡೆನಗಾಸ್ಥಿರಪದವಿಯಂ ತೋಱಿಸ, ಎಂದು ಬೇಡಿದಂ. ಮತ್ತಮಾರಾಯನ ಬಿನ್ನಪಕ್ಕೆ ಕಾಮಾಕ್ಷಿ— ಅಂತಾಗದಯ್, ನಿನಗಿಹದ ಭೋಗಂಗಳಿನ್ನುಂ ತೀಱಿತಿಲ್ಲದಱಿನಂತದು ಸಮೆವನ್ನಮಾನಿನ್ನ ರಾಜ್ಯಪದದೊಳೆ ಇರ್ದುಬಾೞ್. ಮೇಣೆಂದಿಂಗೆ ಶ್ರೀರಾಘವನ ಜನ್ನದ ತುರಗಂ ನಾಡಂ ಪುಗುತರ್ಪುದಂದೆ ಧರಣಿಯನಾತನ ಚರಣಕ್ಕರ್ಪಿಸಿ ನೀನಾತನ ಸೇವೆಯೊ

ಳಿರ್ದೊಡೆ ಮುಂತೆ ಲೇಸಕ್ಕುಮನ್ನೆಬರಂ ನಿನಗಂ ಪೊಲ್ಲಿಂ ರಕ್ಷೆಯಿ ರ್ಪಂತಾಂ ನಿನ್ನನಾಡೊಳ್ ನಿಲ್ವೆನೆಂದನುಗ್ರಹಿಸಿ ಮೆಯ್ಗರೆದಳ್.

ಲಾಲಿಸು ! ಅಂತು ತನಗಾಣತಿಯಿತ್ತುಂ ಮಾಯೆಯಾದ ಆದಿ ಮಾಯೆಯಡಿಗಳಂ ನೆನೆಯುತ್ತೆ ತಪೋವನದತ್ತಣಿಂ ತಳರ್ದು ಪುರ ಕೆಯ್ತಂದು ಪಗೆರಾಯರನೆಬ್ಬಿಟ್ಟಿಯುಂ ತಾನರಸುಗೆಯ್ಯುತುಮೀಗಳುಂ ನಿರ್ಮಾಗವುನಮನೆ ಪಾರುತುಮಿರ್ಪಂ.

ಅಂತು ರಾಯಂ ತನಗೊಲ್ದ ಕಾಮಾಕ್ಷಿದೇವಿಗೆಂದೇರ್ಪಡಿಸಿದ ದೇಗುಲವನ್ನೈಸೆ ಆಗಳುಂ ತನ್ನಂ ಮುಱಿವುಗುವರಂ ಕಾವೊಂದು ವ್ಯೆಮೆವೆ ತ್ತೀದೇವಾಗಾರದೊಳ್ ನೆಲಸಿರ್ಪಳೆಂದು ಸುಮುದರಾಜಚರಿತಮುಂ ಸಮಂ ತು ಕಾಮಾಕ್ಷಿಮಾಹಾತ್ಮ್ಯೆಯುಂ ಶತ್ರುಘ್ನಂಗೆ ಮಂತ್ರಿಪಂ ಕೇಳಿಸಿದಂ.

ಮುದ್ದಣ— ಎನ್ನರಸಿ ! ಶತ್ರುಘ್ನನಿಂತೇರ್ಪಟ್ಟೊಂದು ವ್ಯೆಮೆ ಯಂ ಕೇಳ್ದು ಸಂತುಷ್ಟನಾಗೆ ಮಂತ್ರಿವೆರಸು ತಾಂ ದೇವೀದರ್ಶನಾರ್ಥಂ ದೇಗುಲಮನೊಳವೊಕ್ಕು ಮೂರ್ತಿವೆತ್ತ ಕಾಮಾಕ್ಷಿಯುಂ ಪ್ರಾರ್ಥಿಸುತು ಮಿರ್ದಂ.

ಅನ್ನೆಗವ.ತ್ತಲ್ ಯಥೇಚ್ಛಂ ಪೋಪ ಜನ್ನಗುದುರೆ ಮುಂತೆಸೆ ವಹಿಚ್ಛತ್ರಪುರಮುಂ ಪುಗುತರ್ಪುದುಂ ನಗರಪಾಲಕರ್ ಪಿಡಿದು ರಾ ಯಂಗೊಪ್ಪಿಸಿದರ್. ಸಾಲ್ಗುಮೀಬಿತ್ತರಂ. ರಾಯಂ ಹಯದ ಪಣೆಯ ಲಿಖಿತಮನೋದಿಸಿ ಇಂದಿಂಗೆ ಪಾವನನಪ್ಪೆನೆಂದು ತಱಿಸಂದು ಶತ್ರುಘ್ನ ನಂ ಬರಿಸಿ ತನ್ನ ಪೊಲಂ ರಾಘವನ ಪೆಸರೊಳರ್ಪಿಸಿ ಆತನ ಸೇವೆ ಯೊಂದು ಬಗೆಯಿಂ ಸೇನಾಸಮೇತಂ ಲವಣಾಂತಕನೊಡನೆ ಪೊಱ ಮಟ್ಟಂ. ರಾಘವಾನುಜನುಮಾತನ ಕುಮಾರಂಗೆ ಪಟ್ಟಂಗಟ್ಟಿ ರಾಜ್ಯ ಪದದೊಳಿಟ್ಟು ಕಾಣ್ಕೆಗೊಂಡು ಕುದುರೆಯುಂ ಬೆಂಬತ್ತಿ ಮುಂ ತೆರಳ್ದಂ.

ಎಂಬಲ್ಲಿಗೆ ಶ್ರೀರಾಮಾಶ್ವಮೇಧದೊಳ್
ಕಾಮಾಕ್ಷೀದರ್ಶನಂ ಅಷ್ಟಮಾಶ್ವಾಸಂ ಸಂಪೂರ್ಣಂ.

## ನವಮಾಶ್ವಾಸಂ

## — ಚ್ಯವನಾಶ್ರಮವರ್ಣನಂ —

ಸುಂದರೀ ! ಇಂತು ಶತ್ರುಹಂ ತುಂಬಿದೆಳೆಗೆ ನನ್ನಿವೊಱಲೆಂಬೊಂದು ಜಸದಿಂ ಪೆಸರ್ವೆತ್ತು ಪುದಿದು ಪುದುವಾೞ್ವ ಪಾರ್ವರ ಬಂಚದಜಿನ ಬಾೞ್ವನೆಯೆಂಬೊಂದು ನೆಗೞ್ತೆಗಡರ್ಪಾಗಿ ಸಂದ ಅಹಿಚ್ಛತ್ರಪುರವರದ ರಾಯನ ಮನ್ನಣೆಯ ಬಿರ್ದಂ ಕೆಯ್ಕೊಂಡು ಮೂವಗಲಿರ್ದು ಬೞಿಕ್ಕಮಾತನನೊಡಂಗೊಂಡು ತನ್ನಂಕೆಯಂಕದ ದಱಿಂಬೆರಸು ನಾಜಿಯ ಬೆನ್ನೊಳೆ ನಡೆದು ಪಲವುಂ ನಾೞ್ಕಳಂ ಕೞಿಕೞಿದು ಪೋಗೆ ಪೋಗೆ, ಮುಂತೆ ಮುಂತೆ—

ಭೂರಮೆಯ ನೇವಾಳಮೆಂಬಿನಂ ಪೊನಲ್ವರಿವ ಪಯೋಷ್ಣೀನದಿಯ ಕೂಲದೊಳಗ್ಗಿವೊಗರ್ಗೆ ಬಾಣಸುಗೆಯ್ದು ನಿಚ್ಚಮುಯ್ವ ಜನ್ನದುರಿಯ ನಡೆಬೀದಿಯೆನೆ ಮುಗಿಲುದ್ದವೊಂದಿದ ಕರ್ವೊಗೆಯಿಂ, ಅಗ್ಗಿಗೊಂಡದೊಳ್ ಪೊತ್ತುವ ನಱುನೆಯ್ಯ ನೆಲ್ಲರಳ ಬಲಿಗೂೞ, ಸಿರಿಕಂಡಸೆಕ್ಕೆಯ ಸವುದೆಯ ಕಮುರಿಂ ಪೊರೆದೆಲ್ಲೆಡೆಯೊಳೆತ್ತಂ ಪಳಂಚಲೆವೆಲರಿಂ, ತೋರಮರಂಗಳ ಪಾಱುಗೊಂಬನೇಱು ರಯ್ಯಮಾಗೆ ಮೊರೆವ ಕುಕಿಲ್ವ ಪಾಡುವ ಬಾಸೆವಕ್ಕಿಗಳ ಗಜಬಜದಿಂ, ನಿರ್ವೈರಂ ಕೂಡಿ ಬಾೞ್ವ ಮೃಗಂಗಳೊಂದು ನೆರವಿಯಿಂ, ತಾಂ ತಮುಗಣಂ ಭಯಮಿಲ್ಲೆನೆ ಸ್ವೇಚ್ಛೆಯಿಂ ಮೇದು ಮುನಿಗಳ್ಗೆ ಏವೊೞ್ತುಂ ಪಾಲನೀವ ಸಗ್ಗದಾವನಿೞಿಕೆಯ್ವಾಶ್ರಮದಾಕಳಿಂ, ತೋರ್ಪ ತಪೋವನವೊಂದು ಕಣ್ಗೊಳಿಸಲೊಡಂ ; ರಾಜಂ ಸುಮತಿಯೊಳಿದೇಂ ತಪೋವನಮಾವ ಮುನಿಪುಂಗವನಾಶ್ರಮಂ ಪೇೞೆಂದು ಬೆಸಗೊಳ್ವುದುಂ ; ಶತ್ರುಹಂಗೆ, ಇಂತೀತಪೋವನಮಶ್ವಿನೀದೇವತೆಗಳ್ಗೆ ಸುರಪಙ್ತಿಯೊಳೆಡೆಗೆಯ್ದು ಹವಿರ್ಭಾಗಮಂ ಸಲಿಸಿದ ಚ್ಯವನಋಷಿಗಳಾಶ್ರಮಮೆಂದಂ. ಏಗಳೆಂತೇಂ ? ಆರಾಮುನಿಪಂ ? ಜಂಟಿದೇವರ್ಗೆ ಎಂದು ಸುರರೊಳ್ ಪಂತಿಗೊಟ್ಟನೇಕೆ ? ಆನಱಿವಂತು ಬಣ್ಣಿಸಿ ಪೇೞಿಂಬುದುಮಱ್ತಿಯಿಂ ಕಥಿಸಿದನದೆಂತೆನೆ :—

ಈಪೊಡವಿಯೊಳ್ ನಿಂದ ಪೞನುಡಿವೆಂಡಿರ್ಗೆ ಗಂಡನೆನಿಸಿ ಬಂದ ಹೊನ್ಯಕ್ಕೆ ಮೊದಲಿಗನಾಗಿ ಸಂದ ಜೋಗಿಗಳ ಪಿರಿಯನೊರ್ವಂ

ಭೃಗುವೆಸರ ರಿಸಿಯುಂಟು. ಆತನೊರ್ಮೆ ಮೊಗಸಿದ ಗಜವಟ್ಟಕ್ಕೆ
ಸಮಿತ್ಕಾರಂಗಳಂ ತಿರಿತರ್ಪೊಂದುಜ್ಜುಗದಿಂ ಬೈಗುವೊೞ್ತಿಂಗೆ ತನ್ನಾಶ್ರ
ಮದತ್ತಣಿಂ ಪೊಱವೋದಂ. ಆಗಳ್ಗಾಪೊೞ್ತೀಪೊೞ್ತಿಂ ಪೊೞ್ತಿಂ
ಪಾರುತಿರ್ದ ದವನನೆಂಬೊರ್ವನೞಿರಕ್ಕಸಂ ಉಟಜವಮಂ ನೋಳ್ದು
ಸೊರ್ಕಿನುರ್ಕಿಂ ಪೊಡೆವ ಸಿಡಿಲ ಬಿಱುದನಿಯೊಳ್—ಮುನಿಕಾಂತೆಯಾವ
ಳೆತ್ತವೋದಳಾರೇನೆಂದು ಗದಱಿ, ಅತ್ತಮಿತ್ತಂ ಕಂಡು ಕಾಣದೆ ಮತ್ತಂ
ಕುಂಡದಗ್ನಿಯಂ ಜರ್ವಿದಂ. ಅಂತಪ್ಪುದುಂ ವೈಶ್ವಾನರಂ ಈ ಮರ್ಬಿ
ಗನೊಂದು ಜಂಕಣೆಗೆ ಬೆದಱಿ ನಡುಗಿ ಮುನಿಪತ್ನಿಯುನಂತರ್ವರ್ತ್ನಿಯುಂ
ಪತಿಪರಾಯಣೆಯುಂ ತೋಱಿಸಲೊಡಂ ; ಕೂೞಿಂ ಪತ್ತೆಸಾರ್ದು ಕೊಡನ
ಮಱಿಯ ಪಡೆಯಂ ತುಡುಕುವೆಗ್ಗನಂತಿರೆ ಸತಿಯ ನಿಡುಜಡೆಯಂ ಪಿಡಿ
ದೀೞ್ದುಯ್ಯುತುಮಿರ್ದಂ. ಆಃ ! ಮಱುಗದರಾರೊ ! ತುರುಕನ ಬಂ
ದಿಯೊಳಾದ ಆವಿನಂತಿರೆ ಮುನಿಕಾಂತೆ ಬೆಟ್ಕಿಱಿಂ ಸಿಡಿಮಿಡಿಗೊಂಡು
ದೆಸೆಗೆಟ್ಟು ಬಾಯ್ವಿಟ್ಟು ಪಿಂದೆಸೆಯನೆ ನೋಡಿನೋಡಿ—ಹಾ ಮುನಿ !
ಹಾ ಗುರು ! ಹಾ ನಾಥ ! ಹಾ ! ನಾಯಕ ! ದಾನವನೊಂದು ಸೆಱೆ
ಯಿಂ ರಕ್ಷಿಸಯ್, ಎಂದು ಕೀಱಿದಳ್. ಆವೇಳೆಯೊಳಿಂತು ಭಯತ್ರ
ಸ್ತೆಯುಪ್ಪ ಹದಿಬದೆಯ ಬಸಿಱಿಂ ಗಟ್ಕನೆ ಗರ್ಭಂ ಸೋರ್ದು ನೆಲನನಿ
ೞಿಯೆ ಪಿಂಡದಿನೊಂದು ಮೂರ್ತಿಯೊಗೆತಂದು ಮಯ್ವೆತ್ತು ಕೊಲೆಗನಂ
ತಡೆದು, ಪೊಲ್ಲದ ಕಜ್ಜಮನೊಡರ್ಚಿದ ನೀಂ ಪೊತ್ತಿಬೂದಿಯಾಗೆಂದು ಶಪಿ
ಸಲೊಡಂ ; ದವನಂ ಸುಟ್ಟುರಿದು ಕರಿಮುರಿವೋದಂ. ಅನಂತರ
ಮಾಕಾಮಿನಿ ತಾಂ ಪೆತ್ತ ಕಿಱುಗೂಸಂ ತೋಳನೆತ್ತಿ ಮೆಲ್ಲಮೆಲ್ಲನಾಶ್ರ
ಮಕ್ಕೆ ನಡೆತಂದಾಗಳೆ ಬಂದ ಕಾಂತಂಗೆ ತನಗೊದವಿದೊಂದು ಸಂಕ
ಟಮಂ ಕೇಳಿಸಿದಳ್. ಆಗಳ್ ಮುನಿಪನಗ್ನಿಯೊಂದು ಗೆಯ್ಮೆಗೆ ಕಱು
ತ್ತುರಿದು—ನೀಂ ಪಿಱಿತಿನಿಯ ಪಾಂಗಿನಿಂ ಎಲ್ಲಮಂ ತಿಂದು ಸಾವುದೆಂದು
ಬಯ್ವಂ. ಅಂತಿರೆ ಬಯ್ಗುಳಿಂ ನೊಂದು ಬೆದರ್ಕೆಯಿಂ ನಡುನಡುಗಿ
ಯುಂ ಹುತವಹಂ ರಿಸಿಗೆಱಗಿ—ರಕ್ಕೆಯಕ್ಕೆ ! ಪುಸಿಯೋತದ ಮಾತಿನೊಂ
ದು ಭೀತಿಯಿಂ ಮಾತೆಯಂ ತೋಱಿದೆನಾಣ್ಮನೊಳ್ ದ್ರೋಹದೆಣಿಕೆ
ಯಿನಲ್ತು, ಎನ್ನನೋವ ಕಾವ ಪೊಱೆ ತಮ್ಮಡಿಯೊಳೆಂದು ಕಣ್ಣೀರ್ವಿಡು
ವುದುಂ ; ಕೂರ್ಮೆಯೊಡೆಯನಗ್ಗಿಯಂ ಅಂತು ಪಿಡಿದುದಂ ಗಿಡಿದುಂ

ಮುಡಿಯೆನಿಸೆಂದು ಸಯ್ತಿಟ್ಟು ಬೀೞ್ಕೊಟ್ಟಂ. ಇತ್ತಲ್ ಬಸಿಱಿಂ ಜಾಱಿ ಪುಟ್ಟಿದಂಗೆ ಚ್ಯವನನೆಂಬೊಂದು ಸಕ್ಕದದೊಳ್ಪೆಸರನಿಟ್ಟು ಕೊಂಡಾಟದಿಂ ಪೊರೆಯುತಿರೆ ಮುದ್ದಿನ ಪುಟ್ಟಕುವರಂ ಬೆಳ್ವಕ್ಕದೇಱುಂಬೆಱಿಯಂತೆ ದಿನದಿನಕ್ಕೆ ಕಳೆಯೇಱಿ ಬಳೆಯುತಿರ್ದಂ. ಇಂತು ಬಳವಿಯ ಕಂದಂ ಸಾಂಗವೇದಂಗಳಂ ಕಲ್ತು ಗುರುವಂತಿರೆ ತಾನುಂ ಹರಿಯೊಲ್ಮೆಯುಂ ಪಡೆ ಯಲ್ಕೆಂದು ತಪಂಬೊಕ್ಕಂ. ನೆಲೆಗೊಂಡ ನಿಚ್ಚಟದ ಜೋಗದೊಂದು ಜಾನದಿಂ ಮೆಯ್ಮಱಿದೊಳನೋಟದೆ ಪಲವುಂ ಬರಿಸಂ ಸಮಾಧಿಯೊಳಿರ್ಪುದುಂ ; ಮೆಯ್ಯೊಳ್ ಪುತ್ತುಮೂಡೆ ಮುಯ್ಪಿನೇಱಿನೊಳ್ ದಟ್ಟೆಗೊಂಬಿನ ಬಲ್ಮರಂಗಳ್ ಪುಟ್ಟಿ ಕೆಂಜೆಡೆಮುಡಿಯ ಮುಡಿಯೊಳ್ ಮಡಲಿಱಿದ ಬಿಟಿಲ್ವೊದಱ್ ಪೊದೆಯೆ ಕಾಂಚನಲತೆಯುಂ ತುಱುಗಿ ಜಂಬೂವೃಕ್ಷದಿನೆಸೆವ ಪೊಂಬೆಟ್ಟದಟ್ಟದ ದಟ್ಟದಟ್ಪಲಂ ಗೆಲೆವಂದಂ.

ಅನ್ನೆಗಮಿತ್ತಲ್ ಶರ್ಯಾತಿವೆಸರ ಮನುಕುಲದ ರಾಯನೊರ್ವಂ ಸಕುಟುಂಬಂ ಬೆಂಬಱಿಯ ಮೆಯ್ಗಾವಲ ಚತುರಂಗಸೇನೆವೆರಸು ತೀರ್ಥಯಾತ್ರೆಗೆಂದು ಬಂದು ರೇವಾತೀರದೊಳಿಱಿದು ಪುಣ್ಯತೀರ್ಥದೊಳ್ ಮಿಂದು ಕ್ಷೇತ್ರವಿಧಿಯೊಳಿರ್ದಂ. ಆಪೊೞ್ತಿಂಗಾತನಣುಗುಗುವರಿ ತನ್ನೆಣೆವರಿಯದ ಗೆಡೆಯ ಜೋಡುಕಾರ್ತಿಯರೊಡನಾಡುತಾಡುತೆ ಬಲನ ಬನಂಬೊಕ್ಕೋರೊಂದೆಡೆಯ ತಳಿರ್ಜೊಂಪಮುಂ ಪಿಡಿದುಂ, ಪೂಗೊಂಚಲಂ ಮುಡಿದುಂ, ಪಣ್ಗೊಂಗಲಂ ಸವಿದುಂ, ಬಿನದದಿಂ ವಿಹರಿಸುತುಮಿರ್ದಳ್. ಇಂತಾಡುವ ಬಾಲೆ ತನ್ನಿದಿರೊಂದು ಪುತ್ತಂ ನಿರುಕಿಸಿ ಕೆಳದಿಯರ್ಗೆ—ಆಂ ಕಂಡೆಂ ; ಏಂ ಕಂಡೆಂ ಪೇೞಿಮೆಂದು, ಮತ್ತಂ ಬಾಲೆಯರ್ ಪಡಿನುಡಿಗುಡದಿರೆ ನಕ್ಕು—ಎನ್ನೀಸ್ಸೈಪಿಂಗೇನೆಂಬೆಂ. ಇದೆ ಪುತ್ತಿನೊಳ್ ತೆತ್ತಿಸಿದ ಕರ್ಮಣಿಗಲ್ಲೆರಡಂ ಕಂಡೆನೀಗಳೆ ಕಿೞ್ತುಕೊಳ್ವೆನೆಂದು ಕೆಯ್ಯೊಳಾಟದ ಕವಲ್ಗೋಲಿಂ ಮಣಿಯೆಂದೆ ಬಗೆದು ನಿಶ್ಚಲಂ ಮಿನುಗುವ ಮುನಿಯ ಕಣ್ಗಳಂ ಕುರ್ಕಿದಳ್. ಅಕ್ಕಟಾ ! ಪೊನಲಿಡುವ ಕೆನ್ನೀರ ಕಾಲಂ ಕಂಡು ಬಾಲೆ ಭಯದಿಂ ಮನದೆ ತಳಮಳಂಗೊಂಡು ಆರೊಳಮೆನ್ನದೆ ತನ್ನೆಡೆಗೆ ಸರಿದಳ್. ಆಕಾಲದೊಳೇನೆಂಬೆನೊ ! ಪಗಲೊಳೆ ಉಲ್ಕಾಪಾತಂಗಳಾಗೆ, ಧೂಮಕೇತುಗಳ್ ದೆಸೆದೆಸೆಗೆ ಮುಸುಂಕೆ, ನೆತ್ತರ ಸರಿ ಸುರಿಯೆ, ಆಗಳಾಗಳ್ ಪೊಡವಿ ನಡುಗೆ, ರಾಯನ ಸೇನೆಯೊಳ್ ಕುತ್ತಂ ಕುಱುಪಿಡೆ, ಕುದರೆ ಕಣ್ಣೀ

ರಿಡೆ, ಗಜಂ ಮಣ್ಣಂ ಗೋರೆ, ತೇರ್ ಮುಱಿಯೆ, ಉತ್ಪಾತಮಾಯ್ತು. ಇಂತೆಡೆವಿಡದೆ ತಲೆದೋಱುವ ದುರ್ನಿಮಿತ್ತಂಗಳ್ಗೆ ರಾಜಂ ಪಿರಿದುಂ ಕೊರಗಿ ಏನಾನುಮೊಂದಡಿಯಿರ್ಕುಮೆಂದು ತಱಿಸಂದು ಸುತ್ತಂ ಬನದೊಳ್ ಚರಿಸುತಿರೆ; ತನ್ನಿದಿರೊಳ್ ಬಿಂಜವೆಟ್ಟೆನಿಱಿತರ್ಪ ಶೋಣನದದೆರಡುಂ ಪೊನಲೆಂಬಂತಿರೊಂದು ಪುತ್ತಿನತ್ತಣಿಂ ಕವಲ್ವರಿವ ನೆತ್ತರ ಮುರಿಯುಂ ದಿಟ್ಟಿಸಿ ಕಟ್ಟಚ್ಚರಿಯೊಳೆ ಮುಟ್ಟೆಯಿಸಿ ನೋೞ್ಪುದುಂ; ತಪದೊಳಿರ್ಪ ಮುನಿಪಂ ಗೋಚರನಾದಂ. ಆಗಳಾತನಡಿಗಳ್ಗೆಱಗಿ ರಾಜಂ—ಶಾಪಾನುಗ್ರಹಸಮರ್ಥರ್ ನೀಮೆ ವಲಂ. ಪರಿವ ನೆತ್ತರೇನೊ! ಎಂತಱಿವೆನೀಮ್ಮೈಮೆಯುಂ ಕುಱಿನಾನಿಸನೆಂ. ತೀರ್ಥಯಾತ್ರಾರ್ಥಂ ಬಂದೀತೊರೆಯೊತ್ತಿನೊಳೆ ಬನದೆ ಬೀಡಂ ಬಿಟ್ಟೆಂ. ತಪೋವನಮೆಂದಱಿತೆನಿಲ್ಲಂ. ಎನ್ನಾ ಸೇನೆಯೆಂತುಮಾಧಿವ್ಯಾಧಿಕ್ಷಾಮಡಾಮರಂಗಳ್ಗೆ ಕೋಳುವೋಯ್ತು. ಎನ್ನೊರ್ವನಯೆ ಕತದಿಂ ವನಮುಂ ಪಾೞಾಯ್ತುಕ್ಕಟಾ! ಮುನಿರಾಯ! ಈಗಳ್ ನಿನ್ನನೆ ಮಱೆಗೊಂಬೆಂ. ನೀಂ ಕರುಣಿಸಿ ಕಾವುದೆಂದು ಪ್ರಾರ್ಥಿಸೆ; ಚ್ಯವನಂ ರಾಯಂಗೆ—ಎಮಗಿನ್ನಾವ ಮೈಮೆಯೊ! ಆವ ತಪಮೊ! ಕಣ್ಗುರುಡರಾದೆವ್ವೈಸೆ! ಕೇಳ್ ನಿನ್ನಯೆ ಕುವರಿ ತನ್ನಾಟದೊಂದು ಗಮಕದಿಂ ಸೆಳೆಯಿನೆನ್ನ ಕಣ್ಗಳಂ ಕುರ್ಕಿ ನೋಯಿಸಿದಳ್. ಇಂತಿದು ನೆತ್ತರ್. ಏವೇೞ್ವೆನೊ! ಎನ್ನೊಂದು ನೋವಿಗಿಂತು ಔತ್ಪಾತಿಕಂಗಳೆಂದಂ. ಆ ನುಡಿಗೆ ರಾಜಂ ನೊಂದು, ಮೇಣ್ ಶಾಂತಿಯೇನೆಂಬುದುಂ; ಮುನಿಪಂ—ನಿನ್ನಾಕನ್ನೆಗುವರಿಯನೆ ಎನ್ನ ಸೇವೆಗೀವುದಱಿಂ ನಿನಗಂ ಸೇನೆಗಂ ಸುಭಿಕ್ಷಮಕ್ಕುಮೆಂದು ಮಾರ್ನುಡಿಯಲೊಡಂ; ಶರ್ಯಾತಿ ತಾಂ ತಲೆವಾಗಿ ರಾಣಿಯೊಳ್ ನಿಧಾನಿಸಲ್ಕೆಂದು ತನ್ನಾವಾಸಕ್ಕೆ ನಡೆತಂದು ಅರಸಿಗೀಕತೆಯುಂ ಪೇೞ್ದಂ. ಆಗಳಾತನ ರಾಣಿ ಪೆತ್ತ ಬಸಿಱಿನೊಂದುರಿಯಿಂ ನೊಂದು ಪಳಯಿಸಿ—ಹಾ! ಎನ್ನೀ ಮುದ್ದುಗುವರಿಯನೆಂತಗಲ್ವೆನೊ! ಎಂತೀಪೆತ್ತೊಡಲಂ ಪಿಡಿವೆನೊ! ದೈವಮೊಂದೀ ಬಾಲೆಯೊಳೆ ಕಣ್ಣಿಟ್ಟುದೇ! ಅಕ್ಕಟಾ!

†ಎತ್ತಣ ಬನಮೆತ್ತಣ ಮುನಿ।ಯೆತ್ತಣ ತಪಮೆತ್ತಣಾಟಮೆತ್ತಣ ನೋಟಂ॥
ಎತ್ತಣ ಶಲಾಕೆ ಪೋ ಮಾ। ಣೆತ್ತಣ ಪಗೆಯೆತ್ತಣಾಧಿಯೆತ್ತಣ ದಾನಂ!॥

†ನಡೆಬಾರದ ನುಡಿಬಾರದ। ಗೆಡೆಬಾರದ ಕೂಡುಬಾರದಂದದ ಸಯ್ತೊ॥
ದುಡೆಬಾರದ ಮುಡಿಬಾರದ। ಬಿಡಬಾರದ ಪಸುಳೆ ಮಗಳನೆಂತಾಂ

ಕುಡವೆಂ ! ॥ ಎಲೆ ರಾಯ ! ನೀನುಮೊಡಂಬಡುವಯ್‌! ಜಾವಳದವಸಿಯ ಕವಡುಮಾಯೆಗೊಳಗಪ್ಪರೇಂ ! ಆಃ ! ಎನ್ನೀಕೊಡುಗೂಸಿಂಗೇವೂರ ಕೊಳ್ಳುಡೆ ! ಮನುಕುಲದೆ ಪುಟ್ಟು ಪಟ್ಟಾಗಿರೆ ಚೆಲ್ವಿನ ಬಲ್ವಿನ ರಾಯುಗುವರನ ಕೊರಲ್ಗೆ ಮಾಲೆಯಿಕ್ಕಿ ತುಂಬುವಳಗದೊಳ್‌ ಬಾೞ್ವನ್ನೀಬಾಲೆ ತಿರೆ ಪಱಿವಿನಂ ತಪದ ಮುದುಗೂಗೆ ಕುಂಗಂಗಿತ್ತು ಕೊರಲಂ ಕೊೞಸಿನಾ ! ಎಂದು, ಬಱಿಕ್ಕಾಟದ ಮಗಳಂ ಕೊರಲೊಳ್‌ ತಱ್ಕಯಿಸ್ಸಿ ಕಣ್ಣೀರ್ಸುರಿದು—ಹಾ ಗುಣಮಣಿ ! ಹಾ ಮುದ್ದಿನ ಕಣಿ ! ಹಾ ಕುಲರತ್ನಮೆ ! ಹಾ ಸಿಂಗರದ ಮುದ್ದು ! ಎಂತು ನಿನ್ನನಗಲ್ದು ಬಾೞ್ವೆನೌ ! ಅನುದಿನಂ ನೋಂತು ನೋಂತು ತನು ತವಿಯೆ ಕರಮುಪವಾಸಮುಱಿದುಂ ಕಱಿದುಮೊಡಲ ತಿಣ್ಣದೊಂದು ಬೇನೆಯಿಂ ನೋವೆ ಪೊತ್ತುಂ † ಪೆತ್ತಿನ್ನೆಬರಂ ಪಾಲಿಸಿ ಲಾಲಿಸಿ ಮುದ್ದುಗೆಯ್ದು ನೀಗ*ಳೆಂತಾಂ ಪಱಿವಾನಿಸಂಗೆ ಕುಡುವೆಂ ಮಗಳೇ ! ಆಸಿಯೊಡಲ ಬಾಲೆ ! ನೀಂ ಪಸಿದು ಸಸಿನಂಬಡದಂತಾರಯ್ವರಾರ್‌ ! ಸೋರ್ಮುಡಿಯನಾಗಳಾಗಳ್‌ ಪಿಕ್ಕಿ ಪೂದೊಡಂಬೆಯಂ ಮುಡಿಯಿಸುವರಾರ್‌ ! ದಿನದಿನಕಂ ಮಿಾಯಿಸುವರಾರ್‌ ! ನಲ್ನುಡಿಯನುಡಿಸುವರಾರ್‌ ! ನಲ್ತೊಡವಂ ಕುಡುವರಾರ್‌ ! ನಿನ್ನನೊಡಂಬಡುವರಾರ್‌ ! ಕೊಂಡಾಡುವರಾರೋವರಾರ್‌ ಬೇನೆಗೆ ನೋವರಾರೆಲೆ ಕುವರೀ ! ಆಃ ! † ಆರೊಡನುಣ್ಬೆ ಬೇಸತ್ತಾರಂ ನಡೆನೋಡಿ ಕೂಡಿ ನುಡಿವೌ ಪಡುವೌ ; ಆರೊಡನಿರ್ಪೌ ಮೇಣಿನ್ನಾರಂ ಪೆತ್ತಬ್ಬೆಯೆಂದು ಕರೆವೌ ಮಗಳೇ ! ॥ ಅಕ್ಕಟಾ ಕಂಗಳನಾದೊರ್ವನಂ ಮುದುಪಾರ್ವನಂ ಕೆಯ್ವಿಡಿವೊಂದು ಯೋಗವಂ ಬಿದಿ ಮಾಡಿದನೇ ! ಲೋಕದೆ ಲೋಗರ್‌ ಕಾಡ ಬೀೞಂ ತಂದು ಊರ ಮರನೊತ್ತಿಗಿಡುವರುಂಟು. ನೋಡೆ ನಾಡೆಳವಳ್ಳಿಯಂ ಸಮಂತು ಕಾಡ ಕರ್ಮರನೊಳ್‌ ಪತ್ತುಗುಡುವರೊಳರೇ ! ನೂೞಿಂ ಪಲವೇಂ ? ನೂಳದದೊಂದು ದಂದುಗಕ್ಕೆ ಕೆಯ್ಗಮರ್ದ ಚಿಂತಾಮಣಿಯನೊತ್ತಿಯಿಟ್ಟು ಬಾಳ್ವ ಕೈನೆಯ ಕಯ್ಮೆಗೊಳಗಾದೆನಕ್ಕಟ ! ಎಂದು ಮಱುಮಱುಗಿ ಹಮ್ಮದಂಬೋದಳ್‌. ಆಗಳಾಕಿಱುವರಯದ ರಾಯುಗುವರಿ ಮಾತೆಯಂ ಸಯ್ತಿರಿಪೊಂದು ನುಡಿಯ ಬಿನ್ನಣದಱಿವಿನ ಜಾಣ್ಮೆಯಂ—ಅಬ್ಬೆ! ಏನೆಂದಱಲ್ವೆ ! ಪೆತ್ತರೊಳ್‌ ಪೆಣ್ಣೊಡವೆಯಿದು ನ್ಯಾಸಮಲ್ತೆ. ಎಂತುಂ ಕುಲಕ್ಕೆ ಪೆಱಳಪ್ಪ ಮಗಳೊಳೇಂ ಮಱುಕಂ ! ಮನುವಾಧೊಡಂ ಘ್ನುನಿಯಾ† ದೊಡ

ವೇಂ ! ಕೊಡಗೂಸಿನೊಂದು ಭಾಗ್ಯಮೆ ಭಾಗ್ಯಂ, ಸೈಪೆ ಸೈಪು. ಪೆಱತಾವ ಭೋಗಂ ಸಲ್ಗುಂ ? ಮುನ್ನೊಡಲೊಂದುಗೆಯ್ಮೆಯು ನೋಂಪಿಯೆಸಕ ಮೊಡರ್ಚೆ ತಿರಿಕುಳಿಯೊಳಮರವೆಂಡಿರ ಭೋಗಮನುಣ್ಗುಂ ; ಮೇಣ್ ಕೈನೆಯಾಗೆ ರಾಯನ ಕೆಯ್ವಿಡಿದುಂ ತಿರಿದುಣ್ಗುಂ ಪೆಣ್. ಅದು ಕಾರಣಂ ನೀಂ ಸಂತಮಿರೆಂದು ತಾಯ್ಗೆ ನಯಂಬೇೞ್ದು, ಅಯ್ಯಂಗೆ—ಅಯ್ಯ ! ಮುನಿಯೆಡೆಗೆ ಪೋಪಂ ಎಂದು ಕರೆದುಯ್ದಳ್. ಅಂತು ಬಂದಾ ಕನ್ನೆವೆಣ್ ತವಸಿಯುಂ—ಒಡೆಯ ! ಅಪ್ಪುದಪ್ಪುದಾನಾಟದೋಟದೊಳ್ ತಮ್ಮಡಿಗಳ್ಗೆ ತಪ್ಪನೆಸಗಿದೆಂ. ಇದೆ ! ಅಯ್ಯನೆನ್ನಂ ನಿಮಗರ್ಪಿಸಲ್ಕೆಂದು ಬಂದಿರ್ಪನದಱಿನಾದಾನಮನೊಲ್ದು ಕೆಯ್ಕೊಂಡು ಕೂರ್ಮೆಯಿನೆಮ್ಮ ಜಾತ್ರೆವಯಣಿಗರ್ಗೆ ನೇರಿಟ್ಟಾಧಿವ್ಯಾಧಿಗಳಂ ಪರಿಹರಿಸಿ ಪೊರೆಯಯ್ ! ಎಂದು ಕಾಲ್ಗೆಱಗಿದಳ್. ಇಂತಪ್ಪುದುಂ ಚ್ಯವನಂ ಕನ್ಯೆ ಸುಕನ್ಯೆಯ ಜಾಣ್ಮೆಯ ಮೆಲ್ನುಡಿಗೊಱಲ್ದು, ಸಮಾಧಿಯನುೞಿದು, ರಾಯಂ ಶಾಂತಿಗೆಂದಿತ್ತ ದಾನದ ಬಾಲೆಯನೊಪ್ಪಿ, ಪಯಣಿಗರ್ಗಂ ನಾಡಿಗರ್ಗಂ ಸೊಗಮಪ್ಪಂತು ಕರುಣಿಸಿ, ಶರ್ಯಾತಿಯುಂ ಪರಸಿ ಬೀೞ್ಕೊಟ್ಟಂ.

ಇತ್ತಲ್ ಶರ್ಯಾತಿರಾಜತನೂಜೆ ನಿಜಪತಿಯಂ ತನಗೊಲ್ದ ದೈವಮೆಂದೆ ಬಗೆದು ಮುನಿ ಮನಂ ಮೆಚ್ಚುವನ್ನಂ ಸಂದ ಸೇವೆಯೊಳ್ ಬಟ್ಟಳ್. ಚ್ಯವನರ್ಷಿಯುಂ ಮಾನವಿಯೊಂದಾರಯ್ಕೆಯಿಂ ತನ್ನ ಕುರುಡಿನ ಬೇನೆಯಂ ಮಱೆದು ಎಡೆಯೊಳ್ ಆಶ್ರಮಮನೊಂದಂ ನೇರ್ಪಡಿಸಿ ದೈವಭಕ್ತಿಯೊಳ್ ಸಂದು ತಾನುಂ ಸಂತಮಿರ್ದಂ. ಇಂತು ಕೆಲವಾನುಂ ದಿನಮತಿಕ್ರಮಿಸಲೊಡಮೊರ್ವರ್ ಬರ್ದಿಲವೆಜ್ಜರಾಬಟ್ಟೆ ಮುಟ್ಟಿವಂದು ಮುನಿಯೆಲೆವನೆಗೆ ಪುಗುತರ್ಪುದುಂ ; ಸುಕನ್ಯೆ ಅತಿಥಿಗಳಂ ಯಥಾವಿಧಿ ಉಪಚರಿಸಿ ಮನ್ನಿಸೆ ; ಬಿರ್ದುವಂದ ದೇವರ್ ಹದಿಬದೆಯ ನಡೆವಳಿಗಂ ಭಕ್ತಿಗಂ ಮೆಚ್ಚಿ ಸಂತಸದಿಂ ಮುನಿಪತ್ನಿಯುಂ ವರಮಂ ಬೇಡೆಂದರ್. ಅದರ್ಕಾಕಾಂತೆ—ಆಂ ಪೆಱತಾವ ವರಮಂ ಬೇೞ್ಪೆನೊ ! ಎನ್ನೀ ಪತಿಯ ಕುರುಡಂ ಪೋಗೊಳಿಸಿ ಕಾವುದೊಂದೆ ಎಂದು ಮಾರ್ನುಡಿದಳ್. ಮೇಣಾದೇವತೆಗಳ್—ನಿನ್ನ ಮುನಿ ಎಮಗೆ ಸುರಪನ ಪಂತಿಗುಡುವೆನೆಂದು ಪೂಣ್ದೊಡೆ ಕಣ್ಗಳನೀವೆವೆನೆ ; ಮುನಿಪಂ—ತಡೆಯೇಂ, ಇದೆ ಬಾಸೆಯೀವೆಂ. ಆಂ ಪುರೋಹಿತನಿರ್ದು ಬೇಳಲಿರ್ದ ಜನ್ನದೊಳ್ ನೀಂಗಳ್ಗೆಯೆ

ಮುನ್ನವೆಡೆ, ಬೞಿಯಮಿಂದ್ರಂಗೆಂದು ಕೆಯ್ಗೊಯ್ದಂ. ಆನುಡಿಗೆ ಸುರವೈದ್ಯರೊಪ್ಪುಗೊಟ್ಟು ಮುನಿಯೊಡನೆ ತಡೆಯದೊಂದು ಬೆಂಚೆಯೆಡೆಗೆಯ್ತಂದು ತಾಂ ಮೂವರುಂ ಮೆಯ್ಯಟ್ಟಿಲೊಡಂ ಬಗೆಯುಬ್ಬಾರದ ಪಡಿಮಱುಗಳೆನೆ ಒಂದಚ್ಚಿನೊಳೆಱಕಂಬೊಯ್ದ ಮೂಱುಂ ಪೊಂಬಾಪೆಯೆನೆ ಮೂವರುಮೊಂದೆ ರೂಪಿನೊಳೊಗೆದು ಮರಲ್ದುಟಜದೆಡೆಗೆಯ್ತಂದರ್. ಇಂತು ಬಂದ ಸುಕುಮಾರಗಾತ್ರರಪ್ಪ ಮೂದೇವರೊಳ್ ಮುನಿಯಾರೆಂದಾರಯ್ವೊಡಾಱದ ಬಾಲೆ ಸ್ವರ್ವೈದ್ಯರಂ ಮೇಣಾಂ ಮಱಿವುಗೆ ತಾಮೊಲ್ದು ತೋಱೆ ಪತಿಯಂ ಮೆಚ್ಚುಗೊಟ್ಟು ತಮ್ಮೆಡೆಗೆ ಬಿಜಯಂಗೆಯ್ದರ್.

ಕೇಳಯ್ ! ಶತ್ರುಘ್ನ ! ಮೂಲೋಕಮುಮಂ ತನ್ನೊಂದು ಜೋಗದ ಜಾಣ್ಮೆಯ ಮೈಮೆಯ ಬಲ್ಮೆಯಿನೊರ್ಮೊದಲೊಳೆ ತೆಮಳ್ದಿ ಬಿಚ್ಚೞಿಸಿ ನೋಡಲಾರ್ಪ ತನ್ನೊಳನೋಟದ ಪೆರ್ಮೆಯ ಜೋಗಿಗೀಗಳ್ ಬಾಂಬಟ್ಟೆಯ ಪರ್ದಿಗೇಟ್ಮೆಡಿಯೆತ್ತರದಿಂ ಪೊಱನೋಟಮೊದವೆ ಕರುವಿಟ್ಟ ಕಡವರದ ರೂವೆನೆ ಮೆಯ್ಸಿರಿ ಪೊಗರೇಱೆ, ಮಱಿಸಿಂಗನೊಳ್ಗಣ್ಣ ಮಿಱನಿೞಿಕೆಯ್ವೊಂದು ತೇಜಮನೊಳಕೊಂಡು ರಾಜಿಪ ಜಡೆಮುಡಿ ಸೊಗಯಿಸೆ, ಪೊಂಬೆಟ್ಟಿನ ಕೋಡುಗಲ್ಲಿಂ ತಳ್ತು ಪುದಿದು ಪೊದೆದ ಬೈಗಿನ ಚೆಂಬಿಸಿಲ ಬೆಳಗಿಂಗೆ ದೊರೆವರ್ಪ ಪೀತಾಂಬರದುಡೆ ನಡುವಿನೊಳ್ ವಿರಾಜಿಸೆ, ಅರಸಿಂಗನ ಬಲ್ಲೆರ್ದೆಗೆ ಪಾಸಟಿಯೆನಿಪ್ಪ ಪೇರಗಲದೆರ್ದೆ ಮನಂಗೊಳೆ, ಯೂಥನಾಥನ ದಟ್ಟಸೊಂಡಲಂ ಗೆಲೆವರ್ಪ ತೋರತೋಳ್ಗಳೆಸೆಯೆ, ಸಿರಿಸೋರ್ವ ಮುಖಪದ್ಮಂ ಚಳಚಳಿಸೆ, ಚ್ಯವನಂ ಜವ್ವನದೇೞ್ಗೆಯಿಂ ಸಂತಂ ಪತ್ನಿವೆರಸಿರ್ಪನ್ನೆಗಮೊರ್ಮೆ ಶರ್ಯಾತಿರಾಜಂ ತಾಂ ಮೊಗಸಿ ನೆಗೞ್ಚಲಿರ್ಪ ಜನ್ನಕ್ಕೆ ತನ್ನಳಿಯನನೆ ಪುರೋಧಸನಾಗೆ ಬರವೇೞ್ಪಟ್ಟಲೊಡಮೋಲೆಕಾಱರ್ ಬಂದು ಮುನಿಗೆಱಗಿ ಪಾವುಡೆಯುಮಂ ಕಟ್ಟೋಲೆಯುಮನೊಪ್ಪಿಸಿದರ್. ಚ್ಯವನನೋಲೆಯೊಕ್ಕಣೆಯನೋದಿ ರಾಜನಿಂಗಿತಮನಱಿತು ಸಂತಸಂಗೊಂಡೋೞಿಗದಾಳ್ಗಳಂ ಮನ್ನಿಸಿ ಬರ್ಪೆನೆಂದು ಮಱುನುಡಿಯಂ ಬರೆದು ಕಳುಪಿದಂ. ಬೞಿಕ್ಕಂ ಮುನಿದಂಪತಿಗಳ್ ತಮ್ಮಾಶ್ರಮದಿಂ ಪೊಱಮಟ್ಟು ಪಯಣಂಬಂದು ಮಾವನ ನಾಡಂ ಪುಗುತಂದು ರಾಯನರಮನೆಗೆಯ್ದೆವಂದು ಕುಳ್ಳಿರ್ದುದುಂ ;

ರಾಯಂ ಮಗಳಂ ಬೞಿಯಂ ಜವ್ವನದ ಚೆನ್ನಿಗನಂ ಕಂಡು ಕಱುತ್ತು ಮುರಿಮುರಿದು ಆಃ ! ಮನುಕುಲದೆ ಪುಟ್ಟಿ ನಿಟ್ಟುರದ ಬೊಡ್ಡಿತನಮಿಂತೇಂ ಸೂೞಿನನಾಯ್ದು ಬಾೞ್ವಿ ನೀಂ ಮಗಳೇ ! ಕೆಲಸಾರೆಂದು ಗದಱಿ; ಅಯ್ಯನಡಿಗೆಱಗಿ ಕಿಱುನಗೆಯಿಂ—ಜೀಯ ! ಆನಱಂಗೆಟ್ಟು ಬೞಿಗೆ ಪೞಿವೊರ್ದುವಂತು ನಡೆದೆನಿಲ್ಲ, ಈತನೆ ತನ್ನಾಣ್ಮನೆಂದು ಸಕಲಾಂಶಮುಂ ತಿಳಿವಂತಾಡಿ ತೋಱಿದಳ್. ಇಂತಾಗೆ ನಲ್ಗವರಿಯ ನೆಗೞ್ತೆಯುಂ ಕರಮೊಲ್ದು ಬಂದಾಮುನಿಯುಂ ಪೊಗೞ್ದು ಪಾಡಿದಂ.

ಇಂತಿರ್ಪುದುಂ ಬೞಿಕ್ಕಮೊಂದು ಶುಭದಿನದೊಳ್ ಚ್ಯವನಂ ಪುರೋಹಿತನಾಗೆ ರಾಜಂ ಯಾಗಮಂ ತೊಡಂಗಿ, ನೆರೆರಾಯರ್ ಪೊಗೞ್ವನ್ನಂ, ಭೂಸುರರ್ ತಣಿವನ್ನಂ, ದೇವರ್ಕಳ್ ಸಂತುಷ್ಟರಪ್ಪನ್ನಂ ಬೇೞ್ದಂ. ಆಗಳ್ ತನ್ನೊಂದು ಪೂಣ್ಕೆಯಂ ನೆನೆದು ಪುರೋಧಸಂ ಹವಿಪ್ರದಾನದೊಳ್ ಮುನ್ನಂ ಮುನ್ನಮಿದು ಬೋೞಿಯರ ಬೆಜ್ಜರ್ಗೆ, ಇಂತಿದಮಳ್ದೇವರ್ಗೆ, ಮೇಣಿದಶ್ವಿನೀಸುತರ್ಗೆಂದು ಕರೆಕರೆದೆಡೆಗೊಟ್ಟು ಬೞಿಯುಮಿದು ದೇವೇಂದ್ರಂಗಿದು ಸುರಪಂಗಿಂತಿದು ಮೆಯ್ಗಣ್ಣಂಗಿದು ಎಂದು ಹೋಮಿಸಿದಂ. ಇಂತು ತನ್ನನೇಳಿಸಿಯುಂ ಪಂತಿಗೆ ತಗದ ಅಶ್ವಿನೀದೇವರ್ಕಳಂ ಮನ್ನಿಸಿ ಮುನ್ನೆಡೆಗೆಯ್ದನೆಂಬೊಂದು ಕತದಿಂ ಕಱುಂಬಿ ಸುರಪಂ—ಈ ಅೞಿವಾರ್ಪನಂ ತಲೆಗಡಿವೆನೆಂದು, ತನ್ನ ಬಜ್ಜರಗೈದಂ ಜಳಪಿಸುತೆ ಮಾರ್ಮಲೆತಿಸಲೊಡರ್ಚಿದಂ. ಅನಿತಱೊಳೆ ಚ್ಯವನಂ ತನ್ನೊಂದು ಬಲ್ಮೆಯಿಂ ಸುರಪನುಮಂ ಕೈದುಮಂ ತಡೆಗೆಯ್ದಂ. ಇಂತು ಮರವಟ್ಟಿರ್ಪುದುಂ ಸಕಲಮನುಗಳುಂ ಮುನಿಗಳುಂ ಸುರರುಂ ಮೈಮೆಯಂ ಪೊಗೞ್ದು ಸುರಪನನುದ್ಧರಿಸಲ್ಕೆಂದು ಚ್ಯವನನಂ ತುತಿಸಿದರ್. ಅಂತು ಸುರಪನಂ ಸೆಱೆವಿಟ್ಟುಂ ದೇವವೈದ್ಯರ್ಗೆ ಪಂತಿಗೊಟ್ಟುಂ ನೆಗೞ್ದನೀಮುನಿಯಿಳೆಯೊಳ್.

ಮೆಚ್ಚುಗಾರ್ತಿ ! ನಾಡಿಂ ನಾಡಿಂಗೆ ಪಯಣಂಬಂದ ಬೞಲ್ಕೆ ಮುಡಿವನ್ನಂ, ಕೊಡಂಕೆ ನಲ್ಗತೆಯ ಪುರುಳಿಂ ತುಂಬುವನ್ನಂ, ಮನದ ಬಯಕೆ ಯೞಿವನ್ನಂ, ಶತ್ರುಹಂ ಸುಮತಿಯೊರೆದ ಕತೆಯಂ ಕೇಳ್ದು ಸಂತಸಂದಾಳ್ದಿ ಅಂತಿರ್ಪನಂ ಮುನಿಯಂ ಕಾಣಲ್ವೇೞ್ಕುಮೆಂದು ನಿಚ್ಚದ ತುೞಿಲಾಳ್ಗಳಿಂ ಬೆರೆದು ಪುಣ್ಯಾಶ್ರಮಕೆಯ್ತಂದು ಚ್ಯವನನಂ ಕಂಡೆಡೆ

ಗೆಡೆದು—ತಾಂ ಶ್ರೀರಾಮನನುಜನೆಂ, ಶತ್ರುಘ್ನವೆಸರ ಬಾಲಕಂ, ಜನ್ನಗುದುರೆಯುಂ ಬೆಂಬೞಿವೋಪ ಬಟ್ಟೆಯೊಳ್ ತಮ್ಮಡಿಯುಂ ಕಂಡು ಪರಕೆಗೊಳ್ವೊಡೆಂದು ಬಂದೆವೆಂದು ಕೇಳಿಸಿದಂ. ಮುನಿಯೆಂಗುಂ—ನಿಡುಗಾಲಂ ಜಗದಱಿಕೆಯೊಳ್ ಬಾೞ್ವೊಂದು ಸೈಪಂ ನಿನ್ನೊಳೀಶನೊಡರ್ಚುಗೆ ! ಶ್ರೀರಾಘವಂ ಬೇಳಲಿರ್ಪನೆಂದು ಜಾನದೊಳ್ ಬಗೆಯಱಿತು ನೀಂಗಳಿತ್ತಂ ಬರ್ಪೊಂದು ಪೊೞ್ತಿನೆ ಪಾರುತುಮಿರ್ದೆಂ ; ಚೆನ್ನಾಯ್ತು, ಕುಳ್ಳಿರೆಂದು ಯಥೋಚಿತಂ ಸತ್ಕರಿಸಿದಂ. ಮತ್ತಮೆನಸುಂಬೋೞ್ತು ಧರ್ಮಕಥಾಕಥನದೊಳಿರ್ದಿಂಬೞಿಯಂ ರಾಘವನಂ ಕಣ್ಣಾಱೆ ನೋಡಲೆಣಿಪ ಮನದಿರವನಱಿಪಿದಂ. ಶತ್ರುಹನೆಂಗುಂ—ಮುನಿಯಿಷ್ಟಮಿಂತಿದು ; ಬಯಸುವೆಯಪ್ಪೊಡೆ ಈಗಳ್ ಕೊಂಡುಯ್ವಂತೀರಾಮದೂತನಂ ನೇರ್ಪಡಿಸುವೆಂ. ಮುನಿಯೆಂಗುಂ—ಲೇಸು ! ಲೇಸು ! ಈ ಪೊೞ್ತು ರಾಮನಡಿದಾವರೆಯಂ ಕಂಡು ಸಕುಟುಂಬಂ ಧನ್ಯನಪ್ಪೆಂ. ಆರವಂ ರಾಮನ ನಚ್ಚಿನ ಬಂಟಂ ? ಶತ್ರುಹಂ ಹನೂಮಂತನಂ ಸುಟ್ಟಿಸಲೊಡಮಣುವಂ ಮುನಿಗೆ ತಲೆವಾಗಿ—ಆಣತಿಯೊಳಿರ್ಪೆನೀಗಳ್ ಅಯೋಧ್ಯೆಗೆ ನಿಮ್ಮನುಯ್ದು ಮಖಶಾಲೆಯೊಳ್ ಬಿಟ್ಟು ಮರಳ್ದಪೆನೆಂದಂ. ಒಡನೆಯೆ ಚ್ಯವನಂ ತನ್ನಾಶ್ರಮಮಂ ಮಿಕ್ಕುೞಿದ ಋಷಿಗಳ್ಗೊಪ್ಪಿಸಿ ಬೆಸನಂಗೊಂಡು, ತಾನುಂ ಸುಕನ್ಯೆಯುಂ ವಾಯುಸುತನ ಪೆಗಲನೇಱೆ ವಾಯುವೇಗದಿನಯೋಧ್ಯೆಗುಯ್ದಿೞಿಪಿ, ಇನ್ನೆಬರಂ ತಮ್ಮ ವಿಜಯಯಾತ್ರೆಯುಂ ರಾಘವಂಗಱಿಪಿ, ಮತ್ತಮಾತನಾಣತಿಯಿಂ ಬೆನ್ನನೆ ಶತ್ರುಹಂಗೆ ಬೆಂಬಲಮಾಗಿ ಬರುತುಮಿರ್ದಂ.

ಎಂಬಲ್ಲಿಗೆ ಶ್ರೀರಾಮಾಶ್ವಮೇಧದೊಳ್
ಚ್ಯವನಾಶ್ರಮವರ್ಣನಮೆಂಬ ನವಮಾಶ್ವಾಸಂ ಸಂಪೂರ್ಣಂ.

---

*

## ದಶಮಾಶ್ವಾಸಂ

### — ನೀಲಾಚಲದರ್ಶನಂ —

ಎನ್ನ ನಿಚ್ಚದ ಪೂಜೆಯ ಕಟ್ಟಚ್ಚಿನ ಪ್ರಾಣಲಿಂಗಮೆ ! ಎನ್ನ ಕೈ ಮರ್ಚಿನ ಗೆಡೆಯಾಟದ ಮುತ್ತಿನ ಸೆಂಡೆ ! ಎನ್ನ ಚಿನ್ನ ಪೊನ್ನರಿಸಿ !

ಇಂತು ಹಯಂ ಪಯೋಷ್ಣೀನದಿಯಂ ದಾಂಟಿ ಬಲ್ದೂರಂ ನಡೆ ನಡೆದು ಪೋಗೆ ಪೆರ್ವೆಟ್ಟಂ ಮುಂ . . . . .

ಮನೋರಮೆ—ಎನ್ನರಸ ! ನೀನೋರ್ವನಪೂರ್ವಂ ಬಣ್ಣಗಬ್ಬಿಗರ ಬಲ್ಲಹಂ ಗಡ ! ಪೋಪೋಪ ಬಟ್ಟೆಯೊಳ್ ಅಡವಿವೆಟ್ಟುಗಳನೆ ಬಣ್ಣಿಪಯ್. ಅಶ್ವಮೆತ್ತಾನುಂ ನಾಡಂ ಪುಗದೆ ?

ಮುದ್ದ— ಓ! ಆಗಡೆ ವಾಜಿ ನಾಜಿಪುರಮಂ ದಾಂಟಿ ಪೋದುದು.

ಮನೋ— ಏಂ ಬಲ್ಪುಳ್ಳರಾಯಂ ಕಟ್ಟಿ ಕಾದನೆ !

ಮುದ್ದ— ದಿನಪತಿಯ ಪೆಂಕುಳಿರಾಯನೇಂ ಕಟ್ಟುಗುಂ ! ಏತಱ ಬೀರಂ ! ತಾನೆ ಕೆಯ್ಗುಟ್ಟಿದಂ.

ಮನೋ—ಶತ್ರುಹಂಗೆ ಕಾಣ್ಕೆಯಿತ್ತು ಮಱವೊಕ್ಕನೇಂ ?

ಮುದ್ದ—ಅಪ್ಪುದಪ್ಪುದು ; ತಾಂ ತನ್ನಂ ತನ್ನ ನಾಡಂ ತನ್ನ ಬೀಡಂ ರಾಘವನ ಪೆಸರೊಳ್ ಶತ್ರುಹಂಗೊಪ್ಪಿಸಿದಂ.

ಮನೋ—ಆಃ ! ಶತ್ರುಘ್ನಂ ಬಲ್ಗಡಸುಗಾಱಂ.

ಮುದ್ದ—ತಡೆಯೇಂ ! ಅಂತು ಮಱವೊಕ್ಕು ಬಂದ ರಾಯನಂ ನಾಡಂ ಒಪ್ಪುಗೊಂಡು ಮುಂತೆ ಬರ್ಪಾಪಥದೊಳ್—

ಅಡಿಗಡಿಗೆ ಬದ್ದಬದಸಿಂ ಪಗೆದು ಪತ್ತುವಿಡಿಸಿ ದೆಸೆಗಿಡಿಸಿದೊಂದು ಬಗೆಗೇಡಿಂ ದೆಸೆದೆಸೆಯ ಕಟ್ಟಿಲೆಯ ಬಿಂದಮೊಂದುಗೂಡಿ ಗುಂಡುಗೊಂಡು ತಮ್ಮ ಪಗೆಯ ಬೆಂಗದಿರನ ಬೊಂದಿಯಂ ಬಂದಿವಿಡಿವೊಂದು ಱವಣೆಯಿಂ ಬಾಂದಳಮನೇಱ ಪೋಪುವೆನೆ—ನೆರೆದ ನೀರ್ವೊಟ್ಟಣದೊಳ್ ಬೆಚ್ಚಂತಿರೆ ಮೆಯ್ವೆರ್ಚಿ ನಿಗುರ್ದದೊಂದು ನೀಲಪರ್ವತಂ ಮಾಕಾಳಿಯ ಎಡಮೊಲೆಯಂತೆ ವಿರಾಜಿಸಿದತ್ತು. ಅಂತದು ದಟ್ಟಯಿಸಿ ಮುಗಿಲ್ಮುಟ್ಟಿ ಬೆಳೆದ ಕರ್ಬುರರಂಗಳಿಱಂಬಿನ ಬನಗಟ್ಟಿಲೆಯನೊಳಕೊಂಡೇಪೊಟ್ಟುಂ ಚರಿಪ ಖಗಮೃಗಂಗಳ್ಗೆ ತಣ್ಗೊಳನೊಂದು ಭ್ರಾಂತಿಯಂ ಪುಟ್ಟಿಸಿ ಒರ್ಣ

ರದಿನಿಂಬುಗೊಂಡ ಕರ್ವುಣಿಯ ಪಾಸಱೆಯಿಂ, ಅಂದು ಚಂಡಿಕೆಯ ಕೂರ್ವಾಳಿಂ ಪೋೞ್ಗಡಿವೋದ ಮಹಿಷಾಸುರನ ಬಿರಿವೊಡೆಯಿಂ ಸುರಿದ ದಂಡೆಗರುಳ್ಗೆ ಪಾಸಟೆಯುಪ್ಪ ಅರೆಜರಿದ ಜಾದಿನ ಕೋಡುವೆಟ್ಟನೊತ್ತುಗೊಂಡು ಸಿಂದೂರವಿಲಿಪ್ತಮದಸಿಂಧುರಗಂಡಮಂಡಲದೊಂದು ಪಾಂಗಿನಿಂ ತೋರ್ಪ ತಟ್ಪಿಲಿಂ, ಪಗಲ್ಗೆ ಪಡಿನೇಸಱನೆ ಇರುಳ್ಗೆ ಪಡಿದಿಂಗಳೆನೆ ತೊಳಗಿ ಬೆಳಗಿ ಬೆಟ್ಟುವಗೆಯುಂ ಪಗೆಯಿಸಿಟ್ಟ ಕುಳಿಸದ ಕಡಿಕಂಡದಂ ತೊಪ್ಪುವಚ್ಚುಪಳಿಕಿನ ಗಂಡಶೈಲದಿಂ, ನಿಚ್ಚವಯಣಂಬರ್ಪ ಜಾತ್ರೆಯ ಜನರ ಬಿರ್ದಿನ ಪಗಲೂಟದ ಬಾಣಸಿನಾವಿಗೆಯ ತನಿಗೆಂಡದೋವರಿಯೆಂಬಂತು ತೞತೞನೆ ಪೊಳೆವ ರಂಗುಮಾಣಿಕದಗೞ್ತಿಯಿಂ, ಪುರುಷೋತ್ತಮನ ನಿಡುವಣೆಯ ತ್ರಿಪುಂಡ್ರದೊಂದು ಮಾೞ್ಕೆಯಿಂ ಮೂಱುಂ ಕೆಲನೊಳೆೞ್ತರ್ಪ ಬೆಳ್ಪಂಬರಿವರ್ಪಿಯಿಂ, ಉಣ್ಮಿದರುಣ್ಬಮರ್ದುಮರ್ದಮರ್ದಪೊಂಬಾೞ್ದೋಂಟದೊತ್ತಿನ ಪೇರುಚ್ಚದಿಂ, ಸಿದ್ಧರಸದ ಮಡುವಿಂ, ಪರುಸಗಲ್ಗಳಿಂ ಮನೋಜ್ಞಂ.

ಮತ್ತಮಲ್ಲಿ ರನ್ನಗಲ್ಲೆಡೆಯ ಪುಲ್ಲ ನಲ್ವಾಸಿನೊಳ್ ಚೆಲ್ಲದಿಂ ನಲ್ಲಳ್ವಿರಸು ನಿಲ್ಲದೆ ಕುಳ್ಳಿರ್ದು ಮೆಲ್ಲಮೆಲ್ಲನೆ ಲಲ್ಲೆಗಱೆವ ಬಲ್ಲತನದ ಸೊಲ್ಲಸೊಗದ ಭುಲ್ಲಣೆಯ ಕೊಲ್ಲಣದೊಳೆಸೆದುಮಲ್ಲಿಗಲ್ಲಿಗೆ ಮಲ್ಲೞಿದಿರಿವ ಪಲ್ಲ ಬಲ್ಲುಲಿಗೆ ಕಲ್ಲದಾಡುವ ತೆಲ್ಲಯಿಸಿದ ಮಲ್ಲಗಿಳಿಯ ಸವಿನುಡಿಗೆ ಪಲ್ಲಟದ ಫಲ್ಲಣೆಯಲ್ಲಣಿಯ ಗಂಡುಗೋಗಿಲೆಯಿಂಚರಕ್ಕೆ ಪಲ್ಲಣಿಯ ಬೆಲ್ಲಂಗೋಲ್ವಿಲ್ಲನ ಮಲ್ಲಿಗೆಸರಲ ಜಲ್ಲಣೆಗೆ ತಲ್ಲಣಂಗೊಂಡು ಸಾವಗಿಸುವ ನೋವನೋವದೆ ಬಾವೆಯೊಡನೆ ಪೂವ ಸೇವತಿಗೆಯ ಕಾವಣದೋವರಿಯುಂ ಸಾರ್ದು ಕಾವನಾಟದೊಳೇವೊಟ್ಟುಂ ಸೇವಿಸುವ ಬಿಜ್ಜೋದರರುಂ ; ಮತ್ತಮೊಂದೆಡೆಯೊಳ್ ಕಡೆಗಣ್ನೋಟಂ ಕುಡಿವರಿಯೆ ಕುಡುವುರ್ವು ಸೆಡೆಯೆ ಬಿಡುಜಡೆ ಬೀಡುವಿಡೆ ನಡು ಪೊಡೆಯೆ ನಿಡುಮೊಲೆ ಜಡಿಯೆ ತೊಡೆಯೊಳಿಟ್ಟೆಡೆಯೊಳಾನಿಸಿ ಜತೆಗೂಡಿದೇೞುಂ ಸರದ ಮೆಲ್ದನಿಯೋಜೆಯಿಂ ನುಡಿವಂತು ಮಿಡಿದು ಮಿಡಿದಂತು ಪಾಡಿ ಬಿನದಿಪ ಕಡುಬೆಡಗಿನಚ್ಚರಸಿಯರುಂ ; ಮೇಣಾಂ ಪೆಱತೊಂದು ತಾಣದೊಳ್ ತಮ್ಮ ನಿಚ್ಚವಸದನದ ಸಿಂಗರಕ್ಕೆಂದು ಸಿಂಗನೆಱಗಿ ಮಿದುಡುಂಡು ಕೆಲಕೊಕ್ಕ ಮುತ್ತಾನೆಯ ಆಣಿಮುತ್ತುಗಳಂ ಮತ್ತಂ ಬಟ್ಟೆಯೆಡೆಯೆಡೆಯ ಕೆಂಬರಲನೋರನ್ನಮಾಗೆ ಕಂ

ಪುಗುವ ಪಾರಿಜಾತದ ಮಂದಾರದ ದುಂಡುಮಲ್ಲಿಗೆಯ ಸೆಂಡುಮಲ್ಲಿಗೆಯ
ಬಿರಿಮುಗುಳಂ ತಿಱಿದೊಟ್ಟಿ ಮಾಣಿಕದಡಕಿಲ್ದಟ್ಟಿಯೊಳ್ ತುಂಬಿ ಮೊ
ಱೆದು ಬೞಿಸಲ್ವ ಮೇಳದ ಮೇಳಂಬಂಗಳ್ ಮುಸುಱದಂತು ಮೇಲು
ದಱ ಕಿೞ್ಸಿಱಂಗಂ ಬಾಸಣಿಸಿ ಬೆನ್ನನೆ ಬರ್ಪ ಜೋಲೆಗರ ಬರವಂ ನಿರು
ಕಿಸುತುಂ ನಿಲ್ವ ಪೋಪ ದೇವಾಂಗನೆಯರುಂ ಕಣ್ಗೆವರ್ಪರ್.

ಇಂತು ಕರಮೊಪ್ಪುವ ಕಾರಾನೆಯ ಕಾಳಸಿಂಗನ ಕರ್ಗೋಡಗನ
ಕರ್ವಕ್ಕಿಯಿಕ್ಕೆಯಾದ ಕರ್ವುರರನ ಕಕ್ಕೆಯ ಕರ್ದಾೞಿಯ ಕರ್ಮಣಿಯ
ಕರ್ಗಲ್ಲ ಕರ್ವೆಟ್ಟಮನಿಟ್ಟೆಡೆಯೊಳ್ ದಿಟ್ಟಿಸಿ ಸುಮಿತ್ರಾತ್ಮಜಂ ಸುಮತಿಯಂ
—ಎಲೆ ಅಜ್ಜಮಂತು ! ಮುಂತಿದೆ ಕಾಳರಕ್ಕಸಿಯ ಪಾಳೆಯದ ಕರ್ವಟ್ಟಿ
ಯ ಗೂಡಾರಮೆನೆ ಕೞ್ತಲೆಯ ಬೀಡಾರದೊಂದಿರವಿಂ ತೋರ್ಪ ಕಾರೊ
ಡಲ ಬಲ್ಪೆಟ್ಟಂ ಏನೆಂದು ಪೇೞಯ್, ಎಂಬುದುಂ ; ಸಮಸಂದ ಮುದು
ಪಿನಱಿವಿನೊಂದೇೞ್ತರಮಂಗೆಯ್ಸೆಲ್ಲಿಯಾಗೆ ತಾನಿಂತು ಪೇೞ್ದನೆಂತೆಂ
ದೊಡೆ :—

ಬಲ್ಲಾಳ್ಗಳ ಬಿರುದರ ಮನ್ನೆಯರರಸ ! ಸರಸಿಜಾಕ್ಷನ ಬಿತ್ತರಂ
ಬೆತ್ತ ಪುತ್ತಿನೆ ಆತೊರ್ಪುದೆ ನೀಲಾಚಲಂ. ಪರರೊಡವೆಯನೞಿಪುವ
ಬವಸಿನ ಕೂೞರ್ಗೆ, ಪೆಱವೆಂಡಿರ್ಗೆಳಸುವೊಂದು ಬೆಸನದ ಸೂಳರ್ಗೆ,
ತನ್ನಱಮಂ ಮಾಱುಗೊಟ್ಟು ಪಸುನಾಟ್ಟಿ ಗೊಂದೆಬೊಂದಿಗೆ, ಸಂದುಗೊಂ
ದಿನೊಳಡಂಗಿರ್ದು ಬೞಿವೋಕರಂ ಕೊಲ್ವ ಕಳ್ವ ದುರುದುಂಬಿಕೊಲೆಗಂಗೆ,
ಪೆತ್ತ ಕೊಡಗೂಸಂ ಪಣಕೆ ಮಾಱಾಡಿ ಒಡಲಂ ಪೊರೆವೞಿಒಡಲಿಂಗೆ,
ಪೞನುಡಿಯುಂ ಪೞಿದು ಮೀಹಜಾನಂಗಳನುೞಿದ ಬೊಮ್ಮವೋಲಿ
ಯಂಗೆ, ಬೆಸಲಾದ ಮಡದಿಯುಂ ಬಡಿವ ಮಾನಸರಕ್ಕಸಂಗೆ ಕಣ್ಗೆ ಕಾಣ
ಲ್ಬಾರದೊಂದು ಮೈಮೆವೆತ್ತು ನಿಂದಿರ್ಕುಂ. ಮತ್ತಮೀಪೆರ್ಮೆಯ ಪೆರ್ವೆ
ಟ್ಟಿನ ತುತ್ತತುದಿಯ ತಪ್ಪಲೊಳ್ ತನ್ನಂ ಮಱೆವೊಕ್ಕು ತುೞಿಲ್ಗೆಯ್ದು
ಸೇವಿಸುವಱಿಕೆಯ ದಾಸರ್ಗೆ ಮಱುವುಟ್ಟಂ ಪೋಗೊಳಿಸಿ ಸಾರೂಪ್ಯಮನಿ
ತ್ತು ತನ್ನಂತು ಮಾೞ್ಪ ನಾಲ್ದೋಳಿನೆಸೆವ ಪುರುಷೋತ್ತಮನೊಂದು
ವಾಸದ ಗುಡಿಯಿರ್ಕುಂ. ಆವನಾನುಂ ಭಕ್ತಿಯಿನಾಕ್ಷೇತ್ರದೊಳ್ ಸೇವಿ
ಸುತ್ತುಮಿರೆ ತನ್ನಿಂ ತಾನೆ ಚತುರ್ಭುಜನಕ್ಕುಂ. ಸಂಕಿನ ಬಟ್ಟಗೈದಿನ
ಗಜೆಯ ತಾವರೆಯ ಸೊಬಗಿನ ಪೊರ್ದುಗೆಯಿನೆಸೆಗುಂ. ಇದರ್ಕೊಂದಿ

ತಿಹಾಸಮಂ ನೇರ್ಪಡೆ ಪೇೞ್ವೆನೆಂತೆನೆ :—

ಈ ಜಂಬುದೀವಿಯೊಳ್ ತೆಂಕಲ್ಗೆ ಅಲ್ಲಿಗಲ್ಲಿಗೆ ಸಂಚರಿಪ ಕೇರಳಿಯರ ತಳಿರಡಿಯ ಲೆಪ್ಪದಲತಿಗೆವೊನ್ನಿಂ ಕೊರ್ವಿ ಬೆಳೆದ ಕೆಯ್ವೊಲನಿನತ್ತಲಿತ್ತಲೆಡೆಯಾಡುವ ಚೋಳಕಾಮಿನಿಯರ ಕೆಂಪಡರ್ದ ಕಡೆಗಣ್ಣ ಸವಿನೋಟದಮರ್ದಿನ ಪೊಯ್ನೀರಿಂ ತಳ್ತು ಪರ್ಬಿ ನಳನಳಿಸುವ ಪೂದೋಂಟದಿಂ ಒಡನೊಡನೆ ಜತೆಗೂಡಿ ನಡೆದಾಡುವ ಪಾಂಡ್ಯನಾರಿಯರ ಮೆಯ್ಯ ಪಚ್ಚದ ಪೊಸಮೊಗರಿಂ ಬಣ್ಣವೆರ್ಚಿ ಮಿಱುಗುವ ಸೌಧಂಗಳಿಂ ರಂಜಿಸಿ ಸೌಭಾಗ್ಯಲಕ್ಷ್ಮಿಯ ಕಾಂಚೀದಾಮದ ಪೊನ್ನಕೀಲೆನೆ ತೋರ್ಪ ಕಾಂಚೀಪುರಮುಂಟು.

ಮುನ್ನಮಾಪೊೞಲಂ ರತ್ನಗ್ರೀವನೆಂಬೊರ್ವಂ ಕೈದುಕಾಱರ ದೇವಂ ಮಾರ್ಮಲೆದು ಕೆಯ್ಗೆಯ್ವ ಪಗೆರಾಯರ ಅಟ್ಟೆಯ ಕೆನ್ನೀರ ಬೆನ್ನೀರಿಂ ಬೀರಸಿರಿಯಂ ಮೀಯಿಸುತುಮಾವಗಂ ಮಱೆವಾೞ್ವ ಸಾಮಂತ ಪೆರ್ಗಡೆಯರ ನಾಡಿನ್ನೈಸಿರಿಗಣಿಯರಂ ನೆಲೆವೀಡನಾಗಿಸುತುಂ ತನ್ನೊಂದೇ ಱಂಜಸದೆಸಕದಿಂ ದೆಸೆವಳರ್ಗೆ ಪೊಸಮಾಡಮಂ ನೇರ್ಪಡಿಸುತುಂ ಪಲವುಂ ಪಗಲರಸಾಳುತಿರ್ದಂ.

ಇಂತು ಕೆಲವಾನುಂ ಕಾಲಂ ಪೋಗೆ ಮಾರಾಯಂ ಸಿರಿವೊೞ್ತುನೊಳೊರ್ಮೆ ಜಾನಂಬೊಕ್ಕು ಬೞಿಯಂ ಬೞಿಯರಸಿಯ ಮೊಗಮಂ ನೋಡಿ ಬೇಸಱಿಕೊಂಡು ಮಾತಿನೊಳಿಂಗುಂ :—“ ಎನ್ನರಸಿ! ಸಂಸೃತಿಯೇನಪಾರಮೊ ! ಎನಿವಿರಿದೊ ! ಇನಿಗಾಲಂ ನಮೆದೊಡಂ ಸಮೆಯದೆ ಪಂಜರನೊಂದು ಪಕ್ಕಿ ತಾಂ ಸಂತಂ ಸೊಗಂಬಾೞಲಿರ್ಪಾ ವನರಾಜ್ಯದೞಿವಂ ಮಱೆದು ತನ್ನ ಬಂದಿವಾೞ್ಕೆಯೊಳೆ ದಿನದಿನದ ಪಾಲ್ವಣ್ಗಳನಿನಿದಿನಿದಾಗಿ ಸವಿಯುತುಂ ನಿಶ್ಚಿಂತಮಿರ್ಪಂತಿರಿದೆ ಮಾನಸಂ ಪ್ರಪಂಚದೊಳ್ ಮಾಯೆದಾಮಿಂ ಕಟ್ಟುವಡೆದು ಬಗೆವಗೆಯ ನಶ್ವರಭೋಗಂಗಳ್ಗಾಸೆವಡುತುಮೆಣಿತುಂ ಪರಮಂ ಮಱೆದಿರ್ಕುಂ. ಆಃ ! ಲೋಗರ ಲೋಕದ ತೃಷ್ಣೆಗೆ ತಡಿಯುಂಟೆ ! ಸಾಜಂ. ತಾಂ ತನಗೆಂಬೊಂದು ಬೆಮೆಯಿಂ ನರನೞಿಗುಂ. ಹಾ! ಜೋಲ್ವುಂ ಸಡಿಲ್ವುಂ ನರೆತುಂ ಬಱತುಂ ಸುರ್ಕಿಯುಮಿೞಿದುಮುೞಿದುಂ ಪೋಪೀಮೆಯ್ಯುಂ ನಿಚ್ಚಮೆಂದೆ ನಂಬಿ ಸೊಮ್ಮಂ ಪೆರ್ಚಳಿಸುವಂ ಗಾಂಪನಲೇ ! ಏಂ ಬಯಲಾಸೆಯೊ ! ಆವಗಂ ಸೊಗಮುಂಟೆ ! ಪೋಕೆ !

ಒಲ್ಲೆನೊಲ್ಲೆನೀರಾಜ್ಯಭಾರದೊಂದು ದಂದುಗದೆಡರಂ. ಅದಱಿನೀಪೊ ಱಿಯುಂ ಎನ್ನ ತೋರದ ಬೇರದ ಮಗನೊಳೇಱಿಸಿ ಮನಂ ನೆಮ್ಮುಗೆ ಗೊಂಡು ನೆಲೆನಿಲ್ವಿನಂ ತೀರ್ಥಾಟನಂಬೋಗಲೆಣಿಪೆಂ. ನೀನುಮಾನುಂ ಪೋಪಂ. ಪುರುಳೇಂ ಬಱುವಾೞ್ಕೆಯ ಬರ್ದುಂಕಿನೊಳ್ !''

ಸೌಮಿತ್ರಿ ! ಇಂತರಸನರಸಿವೆರಸು ಸಂಸೃತಿಯೊಂದು ಬಾೞ್ಕೇ ಡಂ ಕುಱಿತು ಮಾತುಗುಟ್ಟುತಿರ್ದುಂ ಬಿರ್ದುಣಿಸಂ ಮರ್ದುಣಿಸೆಂಬಂತಿ ರುಂಡು ಸೆಜ್ಜೆವನೆಗೆ ಪವಡಿಸಲ್ಕೆಂದು ಪೋದಂ. ಅಂತು ಬಗೆಯ ಬಗೆವ ಗೆಯ ನೆನಪಿನ ಕಳವಳದಿಂ ನಿದ್ದವೋದ ರಾಯಂ ಕಡೆಯಿರುಳೊಳೊರ್ವಂ ಪಾರ್ವಂ ಬಂದು ತೀರ್ಥಯಾತ್ರಾಫಲಮುಂ ತದುಕ್ತವಿಧಿಯುಂ ನೆಱೆ ತಿಳಿಪಿ ಮಾಯಮಾದೊಂದು ಕನಸಂ ಕಂಡು ಪೊೞ್ತಡೆಯೊಳೆೞ್ದು ನಿತ್ಯ ಕರ್ಮಂಗಳಂ ಗೆಯ್ದೋಲಗಮುಂ ಪುಗುತಂದಂ.

ಆಪೊೞ್ತಿಂಗೆ ಮೂಡಿವರ್ಪ ಸೆಗಳಿಗದಿರನ ತೇಜಮುಂ ಪಡಿತಳಿಸಿ ಕಡೆಗಣ್ಚುವ ಸಿರಿಮೊಗದ ಕಾಂತಿಯಿಂ, ಗಂದರಗಿರಿಯನ ನಡುನೆತ್ತಿಯಿಂ ತಿರೆಗೆ ಭೋರೆಂದು ಧುಂಕಿಡುವ ಸುರಗಂಗೆಯೊಂದು ಬೆಳ್ವೊನಲ್ಗೆ ದೊರೆ ವರ್ಪ ಬಿಡುಜಡೆಯ ಬೆಳಗಿಂ, ತಳ್ತೈಕಿಲ ಪುಡಿಗಪ್ಪುರದ ಮಲ್ಲಿಗೆಯ ಪಾಲ್ಗಡಲ್ನೊರೆಯ ಸಮಸಂದೊಂದು ಬೆಳರ್ಪಿಂ ರಾಜಿಪ ಮೆಯ್ಯಿಂ, ಅತ್ರಿಪುತ್ರನ ಕೆಯ್ಗುಂಡಿಗೆಯುಂ ಕೀೞ್ಮಾಡುವೊಂದು ಪಳಿಕಿನ ಕರವತಿಗೆ ಯಿಂ, ನಾರಾಯಣನ ನಾಲ್ಕುಂ ತೋಳ್ಗೆ ಪಡಿವರ್ಪ ನಾಲ್ದೋಳಿಂ, ಚೆ ಲ್ವಾದ ಭೂಸುರಂ ಚಾವಡಿಗೆ ಪಡಿಮೊಗನಾಗಿ ಬರುತುಮಿರ್ಪುದಂ ಕಂಡು ರಾಯನಿದಿರೆೞ್ದು ಬಂದು ತಲೆವಾಗಿ ಕೆಯ್ಗೊಟ್ಟು ನಡೆಯಿಸಿ ತಂದು ಪೊನ್ನ ಗದ್ದುಗೆಯೊಳ್ ಕುಳ್ಳಿರಿಸಿ ಯಥೋಚಿತಂ ಪೂಜಿಸಿದಂ. ಮೇಣಾಂ ಸುಖೋಪವಿಷ್ಟನಾದಾಭೂಸುರನಂ ಒರೊಂದು ನುಡಿಗುಟ್ಟಿಂ ಕುಶಲಪ್ರಶ್ನೆ ಯುಂ ಬೆಸಗೊಂಡು ಮತ್ತಂ—ದೇಸಿಗರಾಣ್ಮ ! ಬೆಳರ್ಮೆಯ್ಯನಾಂತ ಪಕ್ಕಿ ದೇರನಂತುಂ ನಾಲ್ಗೆಯ್ವತ್ತ ಬಾಂಬೊಚ್ಚದಲೆಯನಂತುಂ ಒರ್ತಲೆಯ ಪೊಂಬಸಿಱನಂತುಂ ನಿನ್ನಂ ಕಾಣ್ಬೆಂ. ಇಂದಿಗೆನ್ನೀಪುಟ್ಟು ಕಟ್ಟುಗೆಟ್ಟುದು. ಆಃ ! ನಿನ್ನನೆ ಕುಱುಪಿಟ್ಟು ಪೇೞ್ದುದಕ್ಕುಂ ನಿನ್ನಿನೊಂದು ಕನಸು. ದಿಟ್ಟಂ! ಪುಟ್ಟುೞಿವೞಿವೆಂಬ ಕಟ್ಟುಬ್ಬಸದುರ್ಬಿನ ಕಡಲೊಳೊಡಲೋಡಮುಂ ಪೋವಿಟ್ಟನಗೆ ನೀನೆ ಪುಟ್ಟು. ಇನ್ನೇಂ ? ಮಱುಮೆಯ್ಯೊಳೀಬನ್ನಮುಂ

ಕಾಣಲ್ಕಾರದಂತು ಕರುಣಿಸಯ್ ! ಮರ್ತ್ಯರ್ ತೀರ್ಥಯಾತ್ರಾದಿಸತ್ಕರ್ಮಂಗಳಿಂ ಪಾವನರಪ್ಪರೆಂಬರಲ್ತೆ. ಅಂತಿರ್ಪಿನಂ ತೀರ್ಥಯಾತ್ರೆಗಾವ ಕ್ಷೇತ್ರಂ ಮೊದಲ್, ಆವುದು ಪೆರ್ಮ್ಮೆಗೆಡೆ ? ನೀಂ ಜಾತ್ರೆಗನಲೆ ! ಕೂರ್ಮೆಯಿಂ ನಿರವಿಸೆಂದು ಕೆಯ್ಮುಗಿವುದುಂ ; ಭೂಸುರಂ—ರಾಜಕಂಠೀರವ ! ನೀಂ ಶುದ್ಧಾತ್ಮಂ. ಪೂರ್ವಜನ್ಮವಾಸನಾವಿಶೇಷದಿನಿಂತೊಂದು ಬಯಕೆ ಪುಟ್ಟುಗುಂ ಜನರ್ಗೆ. ಕೇಳಯ್ ! ಸಮಸ್ತಕ್ಷೇತ್ರಂಗಳೊಳಂ ಶ್ರೀರಾಮನೆ ಪಾವನನಾತನಯೆ ಕೀರ್ತಿ, ಆತನಯೆ ಮೂರ್ತಿ, ಆತನಯೆ ವೈಮೆ, ಆತನೆಯೆ ಪೆರ್ಮೆ. ಇವಱೊಳೊಂದು ಪುಣ್ಯಕ್ಷೇತ್ರಮೆನೆ ಪ್ರಸಿದ್ಧಕ್ಷೇತ್ರದಿರವನೊರೆವೆಂ :—

ಮುನ್ನಂ ಗಾವಿಲನಾಂ ಸ್ಥೈಪಿನೊಂದೆಡೆಯನಾಯ್ವೆನೆಂದು ಪೆಸರ್ವೆತ್ತ ತೀರ್ಥಕ್ಷೇತ್ರಂಗಳೊಳ್ ಸಂಚರಿಸುತಿರ್ಪನ್ನಂ ನಡುವಟ್ಟೆಯೊಳ್ ಪಲಂಬರಂ ಕರ್ವೇಡರಂ ಕಂಡೆಂ. ಕೊರಲ ತೊಳಚಿಯ ಮೆಲ್ದುಡಿಯ ತೋರದಂಡೆ ವಿರಾಜಿಸೆ ಪಣೆಯ ಮೂಱುಂಗವಲ ನಿಡುನಾಮಮೆಸೆಯೆ ಮೆಯ್ಯ ಕರ್ಬೊಗರ್ ಮುಗಿಲ್ಗೆ ಪಾಸಟಿಯಾಗೆ ಅಳವಟ್ಟ ನಾಲ್ಗೆಯ್ಗಳೊಳ್ ಪೊತ್ತ ಕೈದು ತೆಜಂಬೊಳೆಯೆ ವಿಷ್ಣುದೂತರೆನೆ ಬಲ್ಲಿದರಪ್ಪ ಶಬರರಂ ದಿಟ್ಟಿಸಿ ಕಟ್ಟಚ್ಚರಿವಟ್ಟವರೊಂದು ವೃತ್ತಾಂತಮಂ ಬೆಸಗೊಂಡೆನದಕಾ ಪುಳಿಂದರೊಳೊರ್ವನಿಂತು ಬಿತ್ತರಿಸಿದಂ :—

ಚಿತ್ತವಿಸಯ್ ಗಹನರೊಡೆಯ ! ಇದೆ ಪೊಂಬೆಟ್ಟದೊಡನೆ ತೂಗೆವರ್ಪ ಕರ್ವೆಟ್ಟು. ಮುತ್ತ ಕಾಲದೊಳೊರ್ವ ಬೇಂಟೆಯೊಂದು ಬೆಸನದಿಂ ಆತೋರ್ಪ ನೆರೆವೆಟ್ಟನೆಮ್ಮ ಪಕ್ಕಣದಿಂ ತಳರ್ದು ಬಳಗಂಬೆರಸೀ ಅಂಜನಗಿರಿಯಡಿಯ ಕಿಬ್ಬರಿಯ ಪಟುವೊಳ್ ಸರವಿವೋಪುದುಂ, ಎಮ್ಮ ಬಾಲಕರ್ಗಳೊಳೊರ್ವಂ ತನ್ನೆಣೆವರೆಯದ ಗೆಣೆಯರ ಕೂಡಾಡುತೆ ಕಣ್ಮುಚ್ಚಿಯಾಟಕ್ಕೆ ಮೆಯ್ಗರೆದಡಂಗಿರಲ್ಕೆಂದು ಮೆಲ್ಲಮೆಲ್ಲನೆ ತುತ್ತತುದಿಗೆ ಪೋಪೋದಂ ಗಡ ! ಅಂತು ಪೋದ ಬಾಲಕನ ಕಣ್ಗೊಂದು ಬೆಲೆವಣಿಗಟ್ಟಿನ ದೇವಾರಂ ತೋಱುವರ್ಪುದುಂ, ತನಗದು ಮುಱಿಯೊಂದು ತಾಣಮೆಂಮೊಳಪೊಕ್ಕಂ. ಆಗಳೊಳಗೊಳಗೊಂದೆಡೆಯೊಳ್ ಪರುಟವಣೆಯ ಗಾನದ ನಚ್ಚಣೆಯ ಬಾಜಣೆಯ ಬಿಜ್ಜೋದರರ ಗಂದರರಚ್ಚರರ ಗಜಬಜಿಂ ತೇರಯ್ಸಿದ ಕುಂಚದ ಕಂಚುಗನ್ನಡಿಯ ಬಿಜ್ಜಣಿಗೆಯ ದೇವಾಂಗನೆಯರ

ಗೊಂದಣಂ, ಸೇವಿಪ ಭಾವಿಪ ಸಂದ ದೇವರ್ಕಳೊಂದೊಗ್ಗರಂ, ಒಲ್ಮೈಪ ಸೂೞುತೆಱಗುವ ಬೇಡುವ ನೋಡುವ ದೆಸೆಗೊಡೆಯರೋಳಿ, ಎತ್ತು ವಾರತಿಯ ಪೊಗೆವ ದೂಪದ ಬೆಳಗುವ ದೀಪದ ಪೊಸನೋಟಂ ತನ್ನಂ ಬೆಮೆಗೊಳಿಸಲೊಡಂ ; ಪಸುಳೆಗುವರಂ ತನ್ನ ಕಟ್ಟೆದಿರ ಪುರುಷೋತ್ತಮ ಮೂರ್ತಿಯನೆವೆಯಿಕ್ಕದ ನಡುನೋಟದಿಂ ದಿಟ್ಟಿಸುತೆ ಕುಳ್ಳಿರಲೊಡಂ ; ಭು ಭೂ ಭೂ ಎಂದು ಪೂರಯಿಪ ಶಂಖದ ಧೞಂ ಧೞಂ ಧೞಮೆಂದು ಮೊೞಗುವ ಭೇರಿಯ ತುತ್ತುತ್ತುರೆಂದು ಸೂಳಯಿಪ ಪೆರ್ಗಾಳೆಯ ಬಲ್ಲುಲಿಯೊಳ್ ಮಾಪೂಜೆ ಸಮಸಂದುದು. ತಱುವಾಯಿಂ ಪರಿವಿಡಿಯೊಳೆಡೆಗೊಂಡ ಪಂತಿಗೆ ತೀರ್ಥಪ್ರಸಾದಂಗಳನೋರಣದಿಂ ಪಚ್ಚುಗೊಟ್ಟುಂ ಸವಿದುಂ ತಂತಮ್ಮೆಡೆಗೆ ಪೋದಿಂಬೞಿಯುಂ ತನ್ನ ಪಾಲ ಸಿಕ್ತಕಮನುಂಡೆಮೆಳೆಯನುಂ ಪೊಱಮಟ್ಟಂ. ಇನಿವೊೞ್ತುಂ ತಡೆದೆಂ, ತೆತ್ತಿಗರೇಂ ಬಯ್ವರೋ ಕಾಣೆನೆಂಬೊಂದು ತಳಮಳದಿಂ ಬಿಮ್ಮನೆ ಬರ್ಪಾಹೂನ್ಯದೊಂದು ರೂವಿನೆಮ್ಮ ಮುದ್ದುಗುವರನಂ ಕಟ್ಟೆದಿರೊಳ್ ಕಂಡು ಸೊಂಡಿಲೊಂದು ಚೆಲ್ವಿನ ಪಲ್ಲಮುಱಿ ಬಗೆಯೊಳೊಡರ್ವಂತು ಪೊತ್ತ ನಾಲ್ದೋಳ ಶೋಭೆಯ ಕಂದನೊಂದಿರಂ ಮನಂಬುಗಲೊಡಂ ಸಂತಸದಚ್ಚರಿಯೊರ್ಮೊದಲೊಳೊಗೆತರ್ಪುದುಮೀಕತೆಯನಾತನಂ ಕೇಳ್ದೆವು. ಆಗಳ್ ತಾಂ ಪೋದುದಂ ಕಂಡುದಂ ಕೊಂಡುದನುಂಡುದಂ ಮತ್ತಂ ಬರ್ಪಾಬಟ್ಟೆಯೊಳೆ ಪೊಸತೋಳ್ ಕವಲೊಡೆದುದನೆಮಗೆ ತಿಳಿಯೆ ಪೇೞ್ದುಂ ನಡೆದುಂ ಬೞಲದೆ ನುಡಿದುಂ ಬೇಸಱದ ತನ್ನವತೆಯಂ ತೋಱಿಸಿದಂ. ಏಱಿದರರಸ ! ಪಾರದಂ ಸಿದ್ಧರಸಮಾದೊಂದು ಸಂತಸಂ ಬಾಲನಿರವಂ ಕಂಡೊಡಪ್ಪುದುಂ ಆವೆಲ್ಲರುಮಾನೀಲಗಿರಿಯ ಮುಗಿಲ ನಿಗರದ ಶಿಖರಮನೇಱಿ ಮೈಮೆವೆತ್ತ ಶ್ರೀಪುರುಷೋತ್ತಮನಂ ಕಂಡು ಇಂತು ಪಾವನರಾದೆಮಯ್ ! ಎಮಗಾವಗಂ ಪಸಿವುನಿದ್ದೆಗಳ ಸೋನಾಗದು. ನೀನುಮಾ ಕಾರುಣಿಕಮೂರ್ತಿಯಂ ಕಣ್ದಣಿಯೆ ಕಂಡು ಧನ್ಯನಾಗು ಪೋಗೆಂದೆನಗೆ ಬಟ್ಟೆದೋಱಿ ಬೇಡರ್ ತಮ್ಮಾವಾಸದತ್ತಲ್ ಸಂದರ್.

ಇಂತು ತನ್ನ ಮುನ್ನೊಡಲೊಗೆತನದ ಸುಕೃತವಿಶೇಷದಿನಾಬೇಡರೊಂದುಪದೇಶಮನೊಪ್ಪುಗೊಂಡು ಪೆಸರ್ವೆತ್ತ ನೀಲಶೈಲಮನಡರ್ದು ಆದಿಮೂರ್ತಿಯ ದರ್ಶನದಿನಾನುಮಾತನ ಸಾರೂಪ್ಯಪದವಿಯೊಳ್ ಸಂದು

ಬಂದೆನರಸಾ ! ಈಗಳಾನುಂ ನಿಶ್ಚಿಂತಂ. ನಿನಗವಿೀ ಒಗೆವಗೆಯು ಪೋಳ್ತಿ ತಿಣ್ಣಮಾಗೆ ನಿಕ್ಕುವಮಾದ್ಯೈವದೊಂದು ನೆರಂ ಪಾರಲಪ್ಪುದೆಂದು ಕಥಿಸಿದಂ.

ಲವಣಾಂತಕ ! ಇಂತು ತನ್ನೊಂದಿರವಂ ಕೇಳಿಸಿದ ಬ್ರಾಹ್ಮಣನಂ ರನ್ನಗೊರಲಂ ಮತ್ತಮದೊರ್ವೆ—ಲೇಸುಲೇಸಯ್ ! ನೀಂ ಧನ್ಯಂ ಸಾಜಂ, ನಿನ್ನೊಂದು ದರ್ಶನಮಪ್ಪಿನಮಾನುಂ ಧನ್ಯನೆಂ. ಆದೊಡಮುಂ ತೀರ್ಪಟ್ಟ ಕ್ಷೇತ್ರಮುಂ ಕಣ್ಣಾಱ ಕಂಡು ಬಂದ ಭವದ ಬವಣೆಯೊಂದ ದಂತುಂ ಮುಂದಣ ಭವದ ಭಾವಂ ಬಾರದಂತು ತಡೆಗೆಯ್ಯುವದೇ ಮೇಲ್. ಅಂತದುಕಾರಣಂ ನೀನೆ ನಾಯಕನಾಗಿ ಕೊಂಡುಯ್ದಾಕ್ಷೇತ್ರಮನೆಮಗಂ ತೋಱು, ಎಂಬುದುಂ ; ವಿಪ್ರಂ—ತಪ್ಪೇಂ ! ಬರಲಪ್ಪೆನೆಂದು ಸಂತವಿಡೆ, ಜಾತ್ರೆಯ ಪಯಣಕ್ಕೆ ಪವಣಾದ ಸನ್ನಣಮಣಿಯಾದುದು. ಆ ಪೊೞ್ತಿಂಗೆ ಪೊಟಲ ಕೇರಿಕೇರಿಯ ಬೀದಿಬೀದಿಯೊಳಿತ್ತಂ—ಓವೊ ! ಒಗೆತನದ ದಂದು ಗದ ಬೇನೆಯ ಸೂಡಿಂ ಬೇವರ್, ಸಂಸ್ಕೃತಿಯ ಕಣ್ಣೆವಲೆಯೊಳ್ ಕಟ್ಟು ವಡೆದು ನೋವರ್, ಮುಂಚಿ ಬಂದ ಸಂಚಿನ ಪ್ರಪಂಚದ ಕೋಲಿಗುತ್ತ ದ ಬೇನೆಗೆ ನರಲ್ವರ್, ಅಱಮಗೆಗಳ್ಗೆ ತಮ್ಮಂ ಮಾಱುಗೊಟ್ಟ ತೊ ೞ್ತಿರ್ ! ಇದೆ ಮಾರಾಯಂ ತೀರ್ಥಯಾತ್ರೆಗೆ ಪೋಜಮುಡುಗುಂ ಮನ ಮುಳ್ಳರ್ ಬರಲಕ್ಕುಮೆಂದು ಡಂಗುರಮಂ ಸಾಱುವಂತಿರಂಕವಱ ಮೊಟಿ ಗಲೊಡಂ, ತಮಗೀಬಾೞ್ಕೆಯೇಂ ಬಾೞ್ತಿಯೆಂದು ಪೌರರೆಲ್ಲರ್ ಪೋಱ ವಯಣಕನುವಾದರ್.

ಇಂತು ಕೊಂಗರ ಕೊರವರ ಮಡಿವಳರ ಕಮ್ಮಱರ ಕುಂಬಱರ ಕಂಚುಗಾಱರ ದೂಸಿಗರ ಪೂವಡಿಗರ ಸಮ್ಮಗಾಱರ ಬಲೆಗಾಱರ ಪರದರ ಕ್ಷತ್ರಿಯರ ಪಾರ್ವರ ನಾಡಿಗರೊಂದು ಜಂಗುಳಿ ಶ್ರೀರಾಮನ ನಾಮದ ಜಾನದೆ ನಾಡಂ ಬೀಡಂ ಕಡೆಗೊತ್ತಿ ಪೋಱಮಟ್ಟರಪ್ಪುದುಂ ರಾಜನೇೞ್ತರ ದೞ್ತಿಯಿಂ ತನ್ನವರ್ವೆರಸು ಸಬಳದ ಕೊಂತದ ಕೂರ್ನಾಳ ಬಿಲ್ಲ ಬಾಣ ದ ಮೆಯ್ಕಾವಲರೊಡನೆ ಮಂಗಳಯೋಗದೊಳ್ ಶ್ರೀರಘುಪ್ರವರನಡಿಯ ತುೞಿಲ್ಪಾಡಿನ ಬೀಣೆಯ ಜವಳಿಮದ್ದಳೆಯ ಕಂಸಾಳೆಯ ಸಂಕಿನ ಕಾಳೆ ಯ ಮೇಳದವರ್ ಕೂಡೆ ಬೀಡಿಂ ತಳರ್ದು ದಿನವಯಣದೊಳ್ ಜಾತ್ರೆ ವೋಗುತುಮಿರ್ದಂ.

ಲಾಲಿಸು ಶತ್ರುಘ್ನ ! ಈ ಬಗೆಯಿಂ ರತ್ನಗ್ರೀವಂ ತನ್ನೊಂದಿಗರೊಡನೆ ನಿಚ್ಚವಯಣದೊಳ್ ಪಲವುಂ ದಿನಂಬರಂ ಬಟ್ಟೆವೞಿಯೋರೊಂದು ತಾಣದ ಪುಣ್ಯಕ್ಷೇತ್ರಂಗಳ ದರ್ಶನಂಗೊಂಡು ಮುಂತೆ ಮುಂತೆ ಪೋಪೋಪ್ಪುದುಂ ; ಪೊಂಬಸಿಱನ ಕೆಕ್ಕೆಯೊಳೊಸರ್ದು ಪುಣ್ಯಭೂಮಿಗಿೞಿತಂದು ಒದಂಬೆತ್ತು ಮೋದಂಬಿಯು(?) ನೞ್ದು ಪಂಕಮಂ ಸಂತಮುಲುಂಬಿದ ಸಂತರ್ಗೆ ನಿಚ್ಚಸಂತಸದೆಡೆಯಂ ತೋಱಿ ದೇವರ್ಕಳಿಂ ಸಂಭಾವ್ಯೆಯೆನಿಪ್ಪ ಗಂಡಕಿ ಕಾಣಿಸಿಕೊಂಡಳ್.

ಈಪೊಂದು ಮಾೞ್ಕೆಯಿಂ ಪೊನಲ್ವರಿವ ಕಣ್ಣೆದಿರ ಪುಣ್ಯವಾಹಿನಿಯಂ ದಿಟ್ಟಿಸುತರಸಂ ದಿನವಯಣಂಮಾಣ್ದೊತ್ತಿನೊಳೆ ಬೀಡುವಿಟ್ಟು ತಾನುಂ ವಿಪ್ರನುಮಿನಿವೊೞ್ತುಂ ಸಲ್ಲಾಪಂಗೊಂಡು ಮತ್ತಂ ಮುಂದೆಸೆಯ ತೊಱೆಯಂ ತೋಱಿ ಇದೇತಱ ಪೊಚ್ಚಂ ನಿರವಿಸೆಂದು ಕೇಳಲೊಡಂ ; ಭೂಸುರನಿಂತು ಬಣ್ಣಿಸಿದಂ.

ಕೇಳಯ್ ! ಜಗದೆ ದೊರೆವಡೆದ ಪಾಪದ ಕೋೞ್ಕಸಱ ಬೆಂಕೆಯೊಳ್ ಪಂದಿಯಂತಿರೆ ಪೊರಳ್ದು ನರಲ್ವೆಗ್ಗಿನ ಲೋಗರ್ಗೆ ಮೆಯ್ಗರ್ಚಲ್ಕೆಂದು ಬೊಮ್ಮಂ ಪೊಸತೆನೆ ಸಮೆದ ಗಂಡಕಿವೆಸರ ತೀರ್ಥಮೈಸೆ. ಆರಾನುಮೊರ್ವನೊಮ್ಮೆ ದಿಟ್ಟಿಸಲೊಡಂ ಪಾವನಂ, ಮುಟ್ಟಲೊಡಂ ಶುದ್ಧಂ, ಸವಿಯಲೊಡಮಮರಂ, ಮುೞುಂಗಲೊಡಂ ಮುಕ್ತನಪ್ಪನೆನೆ ಈ ತೀರ್ಥದ ಮೈಮೆಯನಾವಂ ಬಣ್ಣಿಸಲಾರ್ಪನೊ ! ನದಿಯೊಳಿರ್ಪ ಕಲ್ಲೆಲ್ಲಂ ಸಾಳಿಗ್ರಾಮಂ ವಲಂ. ಈ ಕಲ್ಗಳೊಂದು ಕಡುಪನೇಂ ಪೊಗೞ್ವಂ ! ಭವರೋಗದೊಳಸವೞಿದು ನವೆವ ರೋಗಿಗಿಂತೊಂದು ಕಲ್ಲಂ ಕರ್ಚಿದ ನೀರಂ ಕುಡಿಯಿಸಲೊಡಮೊಡನೆಯೆ ಕುತ್ತಂ ಭೇದಂ ಬರ್ಕುಂ, ಮೇಣೆಂದುಂ ಮಱುಕೊಳಿಸದು. ಇಂತೇರ್ಪಟ್ಟ ಸಾಳಿಗ್ರಾಮದ ಮಾಹಾತ್ಮ್ಯೆಯಂ ಕುಱಿತೊಂದು ಕಥೆಯುಂಟು :—

ಮುನ್ನಮೊರ್ವನಱಿಗುಲಿವೆಸರ ಕರ್ವೇಡಂ ನರಮೃಗಂಗಳಂ ತಲೆಯನೊಡೆದುಂ ಬಡಿದುಂ ಕಡಿದುಂ ಪಿಡಿದುಂ ಬೇಂಟೆಯಾಡುತೆ ತನ್ನೊಗೆ ತನಕ್ಕೆ ಪೇೞ್ದಱನಂ ಬೞಿಸಂದು ರೂಪುಗೊಂಡ ಪಾಪದೊಂದು ಮೊತ್ತಮೆನೆ ಪಲಗಾಲಂಬರೆಗಂ ಜೀವಿಸಿರ್ದುಂ ಕಡೆಯೊಳೊಂದು ದಿನಂ ಕಾಳ್ಧರ್ಮಮಂ ಕಾಣಲಿರ್ಪವಸರದೊಳ್ ತಾಂ ಗೆಯ್ದ ಕೊಲೆಯೆ

ಪಲವುಂ ಮೆಯ್ವೆತ್ತು ಸಂದಣಿಸಿ ಬಂದಿದಿರ್ಚಿತೆಂಬಂತಿರೆ ಕೋಱದಾಡೆ ಯ ಕೊಂಕುಂಬನೆಯ ಕುಱುಗಣ್ಣ ಕೆಮ್ಮೀಸೆಯ ಜೋಲ್ವಾಯ ಪೊದ ರ್ದಲೆಯ ಕಮ್ಮೊಗದ ತೇಱುಡ್ಡೀರನೊಂದು ಪೊಡರ್ಪಿನ ಪರ್ಪರಿಕೆಯ ರೋಸದ ಬೀರದ ಜವನ ದೂಱುಗಾಱರ ಜಂಗುಳಿನೇಣ ಶೂಲದ ಕರ ಗಸದ ಇಟ್ಟಿಯ ಕವೆಗೋಲ ಇಕ್ಕುಱುಯ ದಂಡದ ಗಂಡುಗತ್ತರಿಯ ಕೊಡಲಿಯ ಕೂರ್ವಾಳ ಪರುಟವಣೆಯ ಸಡಗರದ ದಟವುಬಿದಿಂ ಬಂದು ಮುತ್ತಿ ಮುತ್ತಿ ಅಱುಗುಲಿ ಜೀವಾತ್ಮನಂ ಸೆಱವಿಡಿದತ್ತು.

ಇಂತು ಬಂದು ಬಂದಿವಿಡಿದುಂ ನೇಣಿಂ ಬಿಗಿದುಂ ಮುಳ್ಳಿಂ ಗೊಳ್ಳೆಯಿನಿಟ್ಟು ಮಣೆದುಮಾದುಂ ಸಾದುಮೆಟ್ಟಿದುಯ್ವಾಗಳ್ ಕೂ ರಂಕುಸದಿಱತರ್ಕಂ ನಟ್ಟೊತ್ತಿ ನಾಂಟುವ ಕಲ್ಮುಳ್ಗಳಿನೊಂದು ಬೇನೆ ಗಂ ನೊಂದು ಸುರುಳ್ದುರುಳ್ದು ತಾಂ ಕೆಟ್ಟೆನೆಂದು ಗೋಱುಟ್ಟಲ್ವು ಬಡ ವೊಂದು ಜೀವಿಯುಂ ದಿಟ್ಟಿಸಿ—ಒರ್ವಂ ಸಚ್ಚರಿತ್ರನಪ್ಪ ಭಾಗವತಂ ಮುಟ್ಟಿಯಿಸಿ ಬಂದು ತನಗಾತನೊಳ್ ಮಱುಕಂ ಪುಟ್ಟಿಲೊಡಂ ಕೆಯ್ಗ ರಡಿಗೆಯ ಕರ್ಗಲ್ಲಿಂ ಕರ್ಚಿ ತೀರ್ಥಮನಾತನ ಬಱತ ಬಾಯೊಳೆಱದಂ. ಇಂತೆಱದ ಸಾಳಿಗ್ರಾಮತೀರ್ಥದೊಂದು ಮೈಮೆಯಿನಾಪೊಲೆಯನ ಬಾ ಯ ತುದಿನಾಲಗೆಯೊಳ್ ಕಟ್ಟನೆ ಉಱದೆ ಶ್ರೀರಾಮಧ್ಯಾನಂ ನೆವಮಿಲ್ಲ ದೊಂದು ಸಂದಿನಿಂ ನೆಗಟ್ಟುದಾಪದನೊಳ್. ನಿಱುವಿಡಿದುಟ್ಟ ಪೀತಾಂ ಬರದ, ಮಿಱುಪ ದ್ವಾದಶನಾಮದ, ಪೊಳೆವ ಕರ್ಣಕುಂಡಲದ, ನಳ ನಳಿಪ ತುಳಸೀದಾಮದ, ತೊಳಪ ನಾಲ್ಕುಂದೋಳ್ಗಳ, ಪಾಱುಂಬಳೆಯ ಗಜೆಯ ಪದುಮದ ಸಂಕಿನ ಕುಱುಪಿನ, ಸಿಂಗರದ ದಿವ್ಯಸುಂದರವಿಗ್ರ ಹರ್ ವಿಷ್ಣುದೂತರಿಱುತಂದು ಶ್ರೀರಾಮನಡಿಯ ಜಾನದೊಳಿರ್ಪ ಬೇಡ ನಂ ಬಱುಸಂದು ಬೋಳಯಿಸುತಿರ್ಪುದುಂ; ಬೆಕ್ಕಸಂಬಟ್ಟು ಕಕ್ಕಸದ ಜವನಾಳ್ಗಳ್. ವೈಷ್ಣವರಂ ನಿವಾರಿಪೊಂದು ಬಗೆಯೊಳ್—ಓ! ಪಿರಿಯರಿ ದೇತಱ ಗೆಯ್ಮೆಯೊ! ನೇರಿದರ್ಗಿನಿತೊಂದಱುಯಮೆ ನೋಟಿಪ್ಪೊಡರಿದು ಗಡ! ಇಸ್ಸಿ! ಪೊಲೆಯನಂ ಕಿಟ್ಟುವ ದೇವರುಂಟೆ! ನಿಮಗೀತನೊಳೇ ತಱ ಕಜ್ಜಂ! ನೀಂ ಬಱದೆ ಕೊಂಡುಯ್ದು ವೈಕುಂಠಮುಂ ಪೊಲೆಗಿಡಿಸ ದಿರಿಂ, ತೊಲತೊಲಗಿಂ. ಇದೆ! ಈ ದೋಷಮ್ರತನೆಮ್ಮ ಪಾಲ್ಗೆ ಸಂದವ ನೈಸೆ! ಇಂತೀಗಳೆ ಪಿಡಿದುಯ್ದು ಸೂಲದೊಳೊತ್ತಿಂ ಪೋಟ್ಟಂ, ಕಲ್ಲಾ

ಲೆಯೊಳಿಕ್ಕಿ ಸುಟ್ಟುದುಂ, ಕರಗಸದವುಳ್ಜಂತ್ರದೊಳ್ ಕೊಱೆದುದುಂ, ನೆಲ್ಲೊರಲೊಳಿಟ್ಟವಲ್ದುಂ, ನೆರೆದ ನೆತ್ತರ ಕೀವಿನೊಂದು ಕೊಳನೆಳವುಳು ಗಳ್ಗೆ ತಿನಬಡಿಸುವೆವು ; ಅಲ್ಲದೊಡೆ ಕಿಮುಳ್ಚಿ ಸೊವಡುವಸೆಯಂ ಪಿಂಡಿ ಜವನೆರ್ದೆವೋರಿಗೆಱೆತಂಗುಡುವೆವು. ಅಂತದುಕಾರಣಮೆಮಗವೆಮ್ಮೊ ಡೆಯನಾಣತಿಗಂ ತಡೆವಾರದಂತುಂ ನಿಮ್ಮೊಂದು ಪೆರ್ಮೆಗಂ ನೆಗ ೞ್ತೆಗಂ ಪಟುವನೊಡಗೂಡಿಸದಂತುಂ ಪಿಂದೆಗೆದು ಪೋಪುದೆಂದು ಬಿನ್ನ ಯಿಸಿದರ್. ಅದರ್ಕಾವಿಷ್ಣುದೂತರ್ ಯಮಭಟರ ಕಾಮಕರಂ ಕರಂ ಕರಂಗುವಿನಂ ಮಾಂಕರಿಸುತೆ—ಪೋಪೋಗಿರೆ ಬಡಿನಾರದ ಕೂಟರೆ! ಈಗಳೀತಂ ವಿಷ್ಣುಭಕ್ತನಾಗನೆ! ಸಾಳಿಗ್ರಾಮದೊಂದು ಕರ್ಚುನೀರಿಂ ಪರಿಶುದ್ಧನಾದೊಡಲವನಂ ಕಿಟ್ಟದಿರಿಂ. ಕಡೆವೊೞ್ತಿಗಾನುಂ 'ರಾಮ ರಾಮ' ಎಂಬೀ ನಾಲಗೆ ಪುಟ್ಟುವ ನಾಲಗೆಯ ಮಾನಸಂ ಪಾವನನಾಗ ದೇಂ ಪೋಕುಂ! ಶ್ರೀಹರಿಗೆ ಕರ್ಗಲ್ಲ ಕಾಲ್ಮಣೆಯೆನಿಪ್ಪ ಸಾಳಿಗ್ರಾಮದ ಮಹಾತ್ಮ್ಯೆಯೇಂ ಕಿಱಿದೆ! ನೀಮಱಿಯಿರೆಂದು, ತಾಂ ಬಲ್ಲಂತು ಬಣ್ಣಿಸಿ ತೋಱಿ ಯಮನ ದೂತರನೆಟ್ಟಿಬಿಟ್ಟದರ್.

ಆ ವೇಳೆಯೊಳ್ ದೇವಾಂಗನೆ ತಾಂ ನಿಚ್ಚಮೆಱೆವ ಪೊಯ್ನೀರಿಂ ಪ್ರೂತ ಮಂದಾರದ ಬಿರಿಮುಗುಳ ಮಾಲೆಯಿಂ ಚೆಲ್ವಾಗೆ ಸಗ್ಗದ ಬೆಲೆ ವಣಿಸತ್ತಿಗೆಯಿಂ ಸಿಂಗರಂಬೆತ್ತ ಸಿವಿಗೆಯೊಂದು ನೆಲಕ್ಕಿೞಿತರ್ಪುದುಂ ; ವಿಷ್ಣುದೂತರಾವಿಷ್ಣುಭಕ್ತನನದಱೊಳೇಱಿಸಿ ತಾಮುಮಡರ್ದು ಪೋ ದರ್ ಗಡ! ಅಂತದುಕಾರಣಂ ದೊರೆನಾರದ ದೊರೆವಡೆದೊಂದು ವೈ ಮೆಯಿನಾಗಂಡಕಿವೆಸರ ಪೊನಲ್ಗಂ ಕಲ್ಗಂ ಸಲ್ಗುಂ. ನೀನೀನೀರೊಳ್ ಮಿಂದುಂ ಶಿಲೆಯಂ ಪೂಜಿಸಿಯುಂ ಕೃತಕೃತ್ಯನಾಗೆಂದಱಿಪಿದಂ.

ಪಗೆಗಾಱರ ಮೊನೆಗಾಱರ ಬೀರ! ಬಳಿಕ್ಕಂ ರತ್ನಗ್ರೀವಂ ವಿಪ್ರ ನೊಂದು ಸೊಲ್ಲಿಂಗೊಡಂಬಟ್ಟು ಸಪರಿವಾರಂ ತೀರ್ಥದೊಳ್ ಮುೞುಂಗಿ ಸಾಳಿಗ್ರಾಮಪೂಜೆಯನೊಡರ್ಚಿ ತಾನೊಂದು ಕ್ಷೇತ್ರಸಂಖ್ಯೆಯ ಕಲ್ಗಳಂ ಕೊಂಡು ಮುಂ ತೆರಳ್ದಂ.

ಇಂತು ಸತ್ಯದ ನೆಲೆಯಂ ನಿತ್ಯದ ಬೀಡಂ ನನ್ನಿಯ ಕಡಲಂ ಹೊನ್ನದೊಡಲಂ ಭಕ್ತಿಯ ಗುಂಪಂ ಮುಕ್ತಿಯ ಪೆಂಪಂ ಅಱನೊಗೆವ ಗೊತ್ತಂ ಪರಸುಖದೊತ್ತಂ ಕಟಿದು ಮುಂತೆ ಮುಂತೆ ದಿನವಯಣಂ

ಬೋಗುತಿರ್ಪಿನಮಾಪಥದೊಳ್—

ಮೊತ್ತಮೊದಲ ಗೆಡೆಯ ಗೆಣೆಯ ಪೊಸಕೂಟದ ಕೂರ್ಪರ ಮೀಂಟಿದ ಸಂತಸದುರ್ಕಿನ ಪೆರ್ಚುಗೆಯೊಂದು ಲೀಲೆಯ ಮಾೞ್ಕೆಯಿಂ ನಡಿಗಡಿಗೆ ತಂತಮಗೆ ಬೆರೆವೊಡೆನಾಟದ ತೆರೆಗೆಯ್ಯ ತೞ್ಕೆಯಿಂ, ಭೋರ್ಗರೆವ ಸಬುದದ ಮನ್ನಣೆಯ ಬಣ್ಣನೆನುಡಿಯಿಂ, ಕರೆಗಣ್ಮುವ ಸಾಲ್ವರಿವ ಬೆಳ್ನೊರೆಯ ಬೆಳ್ನಗೆಯಿಂ, ಕಣ್ಗೆಡ್ಡಮಾದ ಗಂಗಾಸಾಗರ ಸಂಗಮಂ ಮುಂಗಡೆಯೊಳೆಸೆದತ್ತು. ಮತ್ತಮದು ಗುೞುಗುೞಿಸು ತೇೞ್ವ ಬೀೞ್ವ ಮುಱಿಮೀಂಗಳೆಡೆಯಾಟದಿಂ, ತಾಂ ತಮಗೆ ನೆಗೆನೆಗೆದು ರುಳ್ವ ಮೀಂಗಳೊಂದು ಸೋವಿನ ಹೊಂಚಿನೋಟದೊಳೆ ಎಡೆಗೆಡೆಗೆ ಪಾಱುವ ಕಡಲ್ವಕ್ಕಿಗಳ ಸುೞಿಯಿಂ, ಮುತ್ತಿ ಮಂಡಳಿಸಿದ ನೀರ್ವಕ್ಕಿಗಳತ್ತಣೊಂದು ಭಯದಿಂ ನೀರೊಳೆ ಮೆಯ್ಗರೆವ ಬಾಳೆಮೀಂಗಳಿಂ, ಒಳಗೊಳಗಡಂಗಿ ಪರಿದಾಡುವ ಬಾಳೆಗಳಂ ಬೆಂಬೆಂಬತ್ತಿ ಸುೞಿಸುೞಿದು ತಳಮಳಂಗೆಯ್ವ ತಿಮಿತಿಮಿಂಗಿಳಗಳ ದೞಿದುೞಿದಿಂ ಕರಮೊಪ್ಪಿರ್ದುದು.

ಇಂತು ರನ್ನಬಂಡಾರಿಯನೆ ಆಯ್ದೊಱಲ್ದು ಬೆರೆದು ಬೆಱೆದಿರ್ಪ ನೀರವೆಣ್ಣ ಕಡುಜಾಣ್ಮೆಗೆ ಸೋಜಿಗಂಗೊಂಡು ತಲೆದೂಗಿ ಮೇಣ್ ತಾಂ ಪೋಗಲಿರ್ಪ ಕ್ಷೇತ್ರದೊಂದು ನೆನಪಿಂ ವಿಪ್ರನೊಳ್—ಆಚಾರ್ಯ ! ಎನಿದೂರದೊಳಿರ್ಪಮಾಸಂದ ನೀಲಾಚಲಂ, ಎಂದಿಗೆ ಕಾಣ್ಬೆಂ, ತಿಂಗಳೊಂದಾದುದಲೇ! ಎಂದು ಬೆಸಗೊಳಲೊಡಂ ; ಭೂಸುರಂ—ಏಂ ತೋಱದೆ? ಅಲರ್ವಕ್ಕಿಯ ಮುಗಿಲ ಕರ್ಮಣಿಯ ಮಾಕಾಳಿಯ ಒಡಲ ಕರ್ಪಿನಚಲಂ ಅಂದೀಯೆಡೆಯೊಳೆ ನಾಲ್ಗೆಯ್ಯ ಬೇಡರಂ ಕಂಡೆನೀಬಟ್ಟೆಯೊಳೆ ಪೋದೆನೀದೆಸೆಯೊಳೆ ಬೆಟ್ಟಮನೇಱಿದೆನಿದೆ ಬೆಟ್ಟಂ ದಿಟ್ಟಸೆಂದು ಸುಟ್ಟಿ ತೋಱಿದಂ. ಆಗಳರಸಂ ಕಣ್ಣೆತ್ತಿ ನಾಲ್ಕುಂ ದೆಸೆಯುಂ ಸುತ್ತಿ ಕಂಡುಂ ಕಾಣಿಸದಿರೆ ದುಗುಡದಿಂ ಬೆಮಗೊಂಡು,—ಪಾರ್ವಂ ಪೇೞ್ದ ಬೆಟ್ಟಮಂ ಕಂಡಿರೆ ಎಂದು ತನ್ನ ಪರಿಜನರಂ ಕೇಳ್ವುದುಂ ; ಕಂಡೆವಿಲ್ಲೆಂದು ಮಾರ್ನುಡಿದರ್. ಆನುಡಿಗೆ ರತ್ನಗ್ರೀವಂ ಕಟ್ಟಚ್ಚರಿವಟ್ಟು—ಏನಯ್ಯ ! ನೀನೊರ್ವನೆ ಕಂಡಯ್ ! ಆಮಿನಿಬರುಂ ನೋಡಲಾಱದ ಪಾಪಿಗಳೆ ? ಇದಱಡಿಯೇಂ ? ಪೇೞೆಂದು ಕೇಳಲೊಡಂ ; ತನ್ನ ಜಾನದ ಜಾಣ್ಗೆ ನೆರನಾಂತಱಿವಿಂ ವಿಪ್ರಂ—ಅಪ್ಪುದಪ್ಪುದು ಈಗಳಱಿತೆಂ,

ತೊರ್ಪೀಸಂಗಮದೊಳ್ ಮೊದಲೊರ್ವೆ ಮಿಾಯದಿರ್ಪ ಜಾತ್ರೆಗರ್ಗೆ ಬೆಟ್ಟಂ ದಿಟ್ಟಿಗೆ ಬಾರದೈಸೆ! ನೀಮದುಕಾರಣಂ ಗಂಗಾಸರಿತ್ಸಾಗರ ಸಂಗಮತೀರ್ಥದೊಳ್ ಮಿಂದು ಬರ್ಪುದೆಂದು ತಿಳಿಪಿದಂ.

ಕೇಳ್! ಆನುಡಿಯಂ ಕೇಳ್ದಿಟ್ಟು ಸರ್ವರುಂ ತೀರ್ಥಸ್ನಾನಂ ಗೆಯ್ದು ದಾನದಕ್ಷಿಣೆಗಳಿಂ ವಿಪ್ರಕುಲಮಂ ತೃಪ್ತಿಗೊಳಿಸಿ ತವಕದಿಂ ಮುಂದೆ ಸೆಯಂ ನೋಟ್ಪುದುಂ; ಪುಣ್ಯದ ರಾಶಿಯಂತೆ ಬಗ್ಗಿನ ನೆಲೆಯಂತೆ ವೈಮೆವೆತ್ತು ಚೆಲ್ವಾದ ಪರ್ವತಂ ತೋಱುವಂದುದು. ಆಗಳಾಗಳೆ ಪೆಳವಂ ನಡೆಗೊಂಡಂತುಂ, ಕುರುಡಂ ಕಣ್ಬಡೆದಂತುಂ, ಷಂಡಂ ಪುರುಷನಾದಂತುಂ ಪೆರ್ಚಿದೊಂದು ಸಂತಸದಿಂ ಬೈಗಿನೊಳ್ ಕೆಲೆದುಂ ಮುಕ್ಕುಱಿಕ್ಕಿಯುಂ ನೆಗೆದಾಡಿಯುಂ ಚೆದಱಿ ಪೋಪಾಕಳ ಮಂದೆಯ ಮಾಟ್ಕಿಯಿಂ ನೆರೆದು ಬಂದ ಜಾತ್ರೆಯ ಪಯಣಿಗರ್ ಶ್ರೀರಘುವರನಂ ಪಾಡುತುಂ ನೋಡುತುಮೋಡುತುಂ ದೊರೆವಡೆದ ಕರ್ವೆಟ್ಟಮನೇಱಿ ಪೋದರ್.

ಕೇಳಿಲಿ ಚಿಕ್ಕರಸ! ಇಂತು ನೀಲಾಚಲಶಿಖರಮನಾರೋಹಣಂ ಗೆಯ್ದು ಶ್ರೀಪುರುಷೋತ್ತಮಮೂರ್ತಿಯಂ ಕಂಡುಂ ಪ್ರಸಾದಮಂ ಕೊಂಡುಂ ಸಿಕ್ತಕಮನುಂಡುಂ ಕೆಲಕೆಲರ್ ವಿಷ್ಣುಸಾರೂಪ್ಯಮಂ ಪೊಂದಿದರ್; ಕೆಲಕೆಲರ್ ಪೊಂದಿ ವಿಷ್ಣುಲೋಕಕ್ಕೆಯ್ದಿದರ್; ಕೆಲಕೆಲರ್ ಪುರುಷೋತ್ತಮನ ಸೇವೆಯೊಳೆ ನಿಂದರ್; ಕೆಲರ್ ಬಂದರ್. ರತ್ನಗ್ರೀವಂ ನಿಜಸತಿಸುತಮಂತ್ರಿಪುರೋಹಿತರ್ ಸಹಿತಂ ದೇಹಂಬೆರಸು ಸಾಯುಜ್ಯಪದವಿಗೇಱಿದಂ ಕಣಾ! ಇಂತೇರ್ಪಟ್ಟ ವೈಮೆ ಈ ಬೆಟ್ಟಿಡೆಯಂಗೆ ಸಲ್ಗುಮೆಂದು ನೀಲಗಿರಿಮಹಾತ್ಮ್ಯೆಯಂ ಮಂತ್ರಿಪಂ ಕಥಿಸಿದಂ.

ರಮಣೀಮಣಿ! ರಾಘವಾವರಜಂ ಇನಿತೊಂದು ಪೆರ್ಮೆಯ ಕ್ಷೇತ್ರದೊಂದು ವೈಮೆ ದಿಮ್ಮಿತೆಂದು ಕೌತುಕಂಗೊಂಡು ದರ್ಶನಸ್ತುತಿಗೆಯ್ದು ತುರಂಗದ ಬೆಂಬಲದ ಸೇನೆಯ ಕಾಪಿನೊಳೆ ಪೋಗುತುಮಿರ್ದಂ.

ಎಂಬಲ್ಲಿಗೆ ಶ್ರೀರಾಮಾಶ್ವಮೇಧದೊಳ್
ನೀಲಾಚಲದರ್ಶನಮೆಂಬ ದಶಮಾಶ್ವಾಸಂ ಸಂಪೂರ್ಣಂ.

## ಏಕಾದಶಾಶ್ವಾಸಂ.

### — ಸುಬಾಹು ಯುದ್ಧಂ —

ಎನ್ನ ಸಿಂಗರದ ಸಿರಿಯೆ ! ಆ ಅಂದಿನ ರಗಳೆಯ ಬಣ್ಣನೆ
ದಿನಂಗಳ್ ಪಿಂಚಿದುವು. ಆಗಳುಂ ತನ್ನೊಡಲುರಿಯೊಂದು ಬೇವಿನ
ರ್ಕೆಯಿಂದೆಡೆವಿಡದೆ ಪುಯ್ಯಲ್ವುವ ಕಡಲೀಗಳ್ ಬೇಸಱನೆನಸುಂ ಸ್ವೈರ
ಗೊಂಡುದು. ಪೊಸವೆಸಲಾದ ಪೆಣ್ಗಳ ಜವ್ವನದ ಬಿಗುರ್ಪಿೞಿದು
ವಂತೆ ತೊಱೆವೆಂಡಿರ್ಗುರ್ಕಿನುಬ್ಬರಮಡಂಗಿ ತಿಳಿದುದು. ತಾನುವ
ಣದ ಪೆಱವರ್ಗಮೀಯದ ನೆಲಕಲನ ಮಱಿಯ ಮುಚ್ಚಿನ ಬಂಡಾ
ದೊಳಗಣೊಂದು ಪಾಟಕ್ಕೇಡಿಂ ಪುರುಳ್ ಕುಂದುವಂತಿರೆ ಕೊಳಂ
ಜಳಂ ಮೆಲ್ಲಮೆಲ್ಲನೊಳಗೊಳಗಿಂಗಿದುದು. ಬೈಗಿನ ಮುತ್ತ ಪೊಟ್ಟಿ
ಚೆಂಬಿಸಿಲ ಪರ್ಬುಗೆಯ ಬೆಳಗಿನೊಂದಿರವಿಂ ತಾವರೆಯಿರ್ದುವು. ಸಾ
ರ್ಗ ನೋವದೆ ಅವರ ಜಾಳಿಗೆವೊನ್ನಂ ಕವರ್ವೊಂದು ಬಗೆಯೊಳಾರಯ
ನೆಂಟರ್ಗ ದೊರೆವಂದ ಬಂಡುಣಿಗಳ್ ನೀರ್ವೂಗಳಂ ಸೇವಿಸುತಿರ್ದ
ನೀರುಣದೆ ಮುಗಿಲ್ಗಳ್ ಬೆಳರ್ತು ಬೆಂಡಾದುವು. ಪೆಱನೇಸರ್ಕ
ಕೈಗಳ್ ನೀಡಿದಾದುವು. ಇರುಳ್ ಬಾಂಬೊಲಂ ಬಿತ್ತಿದಱಲಗೆಯಿ
ಸೊಗಯಿಸಿದತ್ತು. ಭೂರಮೆ ಕಱಂಗಿ ಬೆಳೆದಾರವೆಯೆಂಬ ಕಾಂಗಿ
ಸೀರೆಯನುಟ್ಟು ನಳನಳಿಸುವ ಕೆಯ್ವೊಲವೆಂಬ ಮಿಸುನಿಗಚ್ಚಿನ ಪೊಂ
ಪ್ಪಸವಂ ತೊಟ್ಟು ಕಣ್ಗೆಡ್ಡಮಾದಳ್.

ಇಂತು ಮುಂಚಿ ಬಂದ ಶರತ್ಕಾಲದೊಳ್ ರಾಘವನ ಜನ್ನ
ಬಣ್ಣಗುದುರೆ ತೆಂಕಲ್ಗೆ ಮೊಗಮಿಕ್ಕಿ ನಡೆಯುತುಮಿರ್ಪುದುಂ.

ಇತ್ತಲಾವೇಳೆಯೊಳ್ ಚಕ್ರಾಂಕಪುರದ ರಾಯುಗುವರಂ ಪ್ರಜ
ಳೊಂದು ದೂಱಿಂಗೆ ತನ್ನೊಂದು ಬಿನದಕ್ಕೆ ಮೇಲಾಳ್ತನದ ಸಡಗರದ
ಬೇಂಟೆಗೆಂದು ಪಟುವಂ ಪುಗುತಂದಂ. ಆಗಳ್ ದಿಕ್ಕರಿಗಳ್ಗೆ ಗಿರಿಗಳ್ಗೆ ದೊ
ವರ್ಪಕರ್ವೇಡರ್ ಎಕ್ಕಡವಾವುಗೆಯ ತೊವಲುಡೆಯ ತುಪ್ಪುಳಿಂಗಿಂ
ಸೊಪ್ಪಿನ ಟೊಪ್ಪಿಗೆಯ ಸಿಂಗರದಿಂ ಕವಣೆಯ ಮಿಂಟೆಯ ಪೆಂಟೆಯ ಅಂ
ವಲೆಯ ತಡಿಕೆವಲೆಯ ಬೀಸುಂಬಲೆಯ ಪಾಸುಂಬಲೆಯ ಕಣ್ಣಿವಲೆ
ಬೆಳ್ಳಾರ ಬಲೆಯ ಗುದಿಯ ಸಬಳದ ಕವಲ್ಗೋಲ ಅಡಿಕಿಲ್ಗೊಡೆಯ ನೇ

ಕಡಿಗತ್ತಿಯ ಬಿಲ್ಲಂಬುಗಳ ಬಲ್ಪೊಱೆವೊತ್ತು ಪೀಲಿಯುಡೆಯ ಜಂತದೋಲೆಯ ಪುಲಿಯುಗುರಬಾವುಲಿಯ ಗುಂಜಿಯೆಕ್ಕಸರದ ಎಲ್ವಿನ ಬಳೆಯ ಸಾದಿನ ಬೊಟ್ಟಿನ ತಮ್ಮ ಪುಳಿಂದಿಯರ್ವೆರಸು ಜಾಯಿಲಂಗಳಂ ಕೂಡಿ ನಡೆತಂದು ನೆರೆದರ್. ಅಂತು ಬಂದ ಬೇಡರ್ ಕಾಡಂ ಮುತ್ತಿಯುಂ, ಮಿಗದಿಕ್ಕೆಯುಂ ಹೊಂಚಿಯುಂ, ಕೊಣಕುವ ಸಬುದಮನಾರಯ್ದುಂ, ಕರ್ಪನಗುೞ್ದುಂ, ಬಲೆಗಳನೊಡ್ಡಿಯುಂ, ಕುತ್ತುಱಂ ಸೋವಿಯುಮಿಡಿ ಕುೞಿಯೊಳ್ ನುಸುಳ್ದುಂ, ಸರುವೊಳ್ ಹುದುಗಿಯುಂ, ನೀರ್ದಾಣದೊಳ್ ಕತ್ತರಿಗಂಡಿಯನೆತ್ತಿಯುಂ, ಮರನನಡರ್ದುಮಬ್ಬರದೆ ಬೊಬ್ಬಿಱಿದಱಚಿ ಬೇಂಟೆಯಾಡುತಿರೆ ; ನಟ್ಟ ಕೊಡಂಕೆಯ ಮೊಲನ, ಅಳ್ಕಿಯೊತ್ತುವ ಮರೆಯ, ಡಗೆವೊಯ್ದರಲೆಯ, ಹಕ್ಕೆಗೆಟ್ಟ ನರಿಯ, ಬೆದಱಿದ ಕಡವೆಯ, ಕೆರಳ್ದಿಕ್ಕಲನ, ಕೊಕ್ಕರಿಸಿದ ಕಕ್ಕಡವಂದಿಯ, ಕಣ್ದೊಳಸಿನ ಕರಡಿಯ, ಮುಕ್ಕುಱುಕ್ಕುವ ಕಾಱೆರ್ಮೆಗಣನ, ಕೋಡಿಡುವಾನೆಯ, ಗರ್ಜಿಸುವ ಸಿಂಗದ, ಮೊರೆವ ಬಲ್ಪುಲಿಯ ಗಜಬಜದ ಸಂಚಾರಂ ಬಲ್ಪಿರಿದಾಯ್ತು.

ಆಗಳ್—ಇದೆ ಕಿಱುಬನನಿಸು ! ಇದೆ ಕಾಟ್ಕುಱಿಯನಿಡು ! ಇದೆ ಬಗ್ಗನನಿಕ್ಕು ! ಮೇಣಿದೆ ಚಿತ್ತಗನಂ ತುಡು! ಇದೆ ಕಲ್ಲಾನೆಯಂ ಕತ್ತು! ಇದೆ ಪೆರ್ವುಲಿಯಂ ಕುತ್ತು ! ಎಂದೆಚ್ಚಱಿಸುತುಂ ಮುಟ್ಟಿವರುತುಂ, ಮೇಣೊರ್ವರ್ ಸೊಪ್ಪುಳಾಗದಂತು ಸನ್ನೆವೇಂಟೆಗೆಯ್ಯುತುಮಳವಿಗೆಟ್ಟ ಕೂಟ್ಮಿಗಂಗಳಂ ಸಂಹರಿಸಿದರ್. ನೊರೆಯಿಡಿದರೆಗರ್ಚಿದ ಪುಲ್ಲ ಪುಲ್ಲೆ, ಮುಱಿಗೋಣ ಮಱಿಯ ಮರೆ, ಕಱ್ಗಿದ ಮೊಗದ ಪೊಡೆಯೊಡೆದುಡು, ಮತ್ತಂ ಕೋಡುಡಿದಾನೆ, ಮತ್ತಂ ನಟ್ಟಾಲಿಯ ಮೊಲಂ, ತಲೆ ಕಡಿವೋದ ಪೆರ್ಬುಲಿ, ಮತ್ತಂ ಪಲ್ಲುಡಿದ ಪಂದಿ, ಮತ್ತಂ ಕರುಳೊಕ್ಕ ಕಱ್ತಿ ಬೇಡರ ಬಗೆಗೆ ಬಂದುಂ ಬಾರದಾಯ್ತು.

ಇಂತು ವನದೊಳ್ ಮೃಗಕುಲಂ ನಿರ್ಣಾಮಮಾಗಲೊಡಂ ಸಂತಸಮಾಗೆ ಬೇಡರ್ ಸವಿಯಡಗಂ ಬಸೆಯಂ ನೆತ್ತರಂ ತೊವಲಂ ಕೋಡಂ ಜಂತಮುಂ ಮತ್ತಂ ಚವುರಿಯಂ ಪೊತ್ತು ನಗರಿಗೆ ಮರಲ್ದು ವರ್ಷಾನಡುವಟ್ಟೆಯೊಳ್ ಚಂಚಲಿಸುವ ಮಿಂಚಿನಂತಿರೆ ಮುಂಚಿವರ್ಪ ಮಿಂಚುವ ಪಂಚವರ್ಣದ ಕುದುರೆಯಂ ಕಂಡು— ಎಲೆ ಅಣ್ಣ ! ಎಲೆ

ತಮ್ಮ! ಏವೂರ ನಿಗಳದೊಂದು ಬಣ್ಣಗುದುರೆ! ಎಮ್ಮೀಜಾಯಿಲಂಗೆ ದೊರೆವರ್ಕುಂ! ಕೊಂಕದ ಬಾಲಂ, ನಿಮಿರ್ದ ಕೊಡಂಕೆ, ಡಗೆವೊಯ್ವಳ್ಳಿ, ಗುಜ್ಜುಗಾಲ್, ನಿಟ್ಟೊಡಲ್, ಕಟ್ಟಾಯದ ಮೆಯ್ಸಿರಿ. ಆಃ! ಕೀೞುಂ ಪಲ್ಲಣಮುಮೇನಾಯ್ತು? ಒ! ಸೊರ್ಕಿದ ದುಱುದುಂಬಿ ಗುದುರೆ! ಇಂತುಂ ಸಿಂಗರಮೇಂ ನೋಟ್ಪಿಂ ನೊಟ್ಪಮೆಂದು ಮುಟ್ಟಿವಂದು ಪಿಡಿದು ತಮ್ಮೊಡೆಯಂಗೆ ವಾಹನಮಕ್ಕುಮೆಂದು ದಮನಂಗುಯ್ದೊಪ್ಪಿಸಿದರ್.

ಆಗಳ್ ತನಗೆ ದೊರೆವಡೆದೊಂದು ಜವ್ವನದ ಪೊಸಕುದುರೆಯಂ ನಿಟ್ಟಿಸಿಯುಟ್ಕಿಱಿಂ ಪೊಂಪುೞಿವೋಗಿ, ಬಾಳದ ಬಿರುದಿನ ಪಾಡಿನೊಕ್ಕಣೆಯ ಓಲೆಯಂ ಕೆಯ್ಯೊಳ್ ಕೊಂಡಿಂತು ವಾಚಿಸಿದಂ :—'' ಕಡಲೆ ಕಡೆಯಾದೀಪೊಡವಿಯಂ ತನ್ನೊಂದು ಬೆಳ್ಗೊಡೆಯ ನೆೞಲೊಳಿರಿಸಿ ಮಾರ್ಮಲೆವ ಪಗೆರಾಯರ ಬಿಂಕಮನುರ್ದಿ ತಿರ್ದಿ ಸಮಕಟ್ಟಿ, ಬಿರುದರ ಗಂಡಂ ಕೈದುವೊತ್ತರ ದೇವಂ ಶ್ರೀರಾಮಚಂದ್ರಮಂ ಅಯೋಧ್ಯೆಯೊಳರಸುಗೆಯ್ಯುತ್ತುಮಿರ್ದಪಂ. ತನಗೆ ಕೂೞರತ್ತಣಿಂ ಬಲ್ಪೊಱೆಯಾಗೆ ಬಣ್ಣವಿೞಿದು ಸೊಬಗೞಿದು ಸುಱುಂಟೆ ಮುಱುಂಟೆ ಮೆಯ್ಗುಂದಿದೀ ಭೂರಮೆಯಂ ಪೊರೆವೊಂದು ದೂಸಱಿಂ ರಾವಣಾದ್ಯರಂ ಕೊಂದೊಂದು ಕೊಲೆಯ ಶಾಂತಿಗೆಂದು ಕುಂದದ ಜನ್ನಮಂ ಕೆಯ್ಕೊಂಡು ದೀಕ್ಷೆಯೊಳಿರ್ಕುಂ. ಇಂತಿದಾತನಯ ಜನ್ನಗುದುರೆ. ತನ್ನಣುಗದಮ್ಮನ ಶತ್ರುಘ್ನನ ಮೊನೆಗಾಱನ ಬೀರಸಿರಿಯ ಗಂಡನ ಕಾಪುಂಟು. ಅಂತದಱಿನಾರಾನುಮೆತ್ತಾನುಂ ಮಿಡುಕುಳ್ಳ ಪೆಂಪಿನ ಕೊರ್ವಿನ ಜವ್ವನದ ಗಂಡುಗಲಿತನದ ರಾಯರಿರೆ ಹಯಮಂ ಕಟ್ಟಿ ಕಾದುವುದು. ಕೈದುಗೆಯ್ದು ಸೋಲ್ತರ್ ಮೇಣ್ ಕಾದಲಾಱರ್ ಶತ್ರುಘ್ನನಂ ಕಂಡು ಮಱೆವೊಕ್ಕು ಕಪ್ಪಮನಿತ್ತು ಸಂತಂ ಬೞಿಸಂದು ಬಾೞ್ವುದು. ಶ್ರೀರಾಮನಾಣೆ!''

ಕಾಮಕಲ್ಪವಲ್ಲರೀ! ಇಂತು ದಮನಂ ಪರಿವಿಡಿಯಿನೋಲೆಯನೋದಿದನಪ್ಪುದುಂ ಕೈಪೆಯನುಂಡಂತುಂ, ಕಲ್ಲೆಡವಿದಂತುಂ, ಮುಳ್ ಬೆಟ್ಟಿದಂತುಂ, ತೇೞ್ ಇಱಿದಂತುಂ ಕಲಂಕುವಗೆಯೊಳ್ ಏಱುಗೊಂಡೆಕ್ಕಲನ ದಾಂಟುಗೊಟ್ಟ ಪಾವಿನ ಪೊಸವಗೆಯೊಂದು ಮಸಕದಿಂ ಕಿಡಿಕಿಡಿವೋಗಿ ಕುಡಿವರಿವ ಮೀಸೆಯಂ ತಿರ್ದುತೆ—ಆಃ! ಶ್ರೀರಾಮಂ

ಗಡ! ಒಂದೆ ಬೆಳ್ಗೊಡೆಯೊಳಾಳ್ವ ರಾಯಂ ಗಡ! ರಾವಣಾದ್ಯರಂ ಕೊಂದಂ ಗಡ! ಶಾಂತಿ ಗಡ! ಜನ್ನಗುದುರೆ ಗಡ! ಬೀಳ್ವಂ ಗಡ! ತಮ್ಮಂ ಶತ್ರುಘ್ನಂ ಗಡ! ಕಾಪು ಗಡ! ಮಿಡುಕುಳ್ಳ ಬೀರರ್ ಕಾದಲಕ್ಕುಂ ಗಡ! ಕಾಣ್ಕೆ ಗಡ! ಪೂಣ್ಕೆ ಗಡ! ತನ್ನಾಣೆ ಗಡ! ಜಗಕೆ ರಾಮನೊರ್ವನೆ ಚಲದಂಕಂ; ಶತ್ರುಹನೊರ್ವನೆ ಬೀರಂ; ಮಿಕ್ಕ ರಾಯುಗುವರರ್ ಪಂದೆಗಳೇನಾಗರೆ! ಏತಱಿಂದು ಪೊಚ್ಚಱದ ಮಾತಿನೊಂದು ನಿಱಿಗೆಯೊ! ಲೋಗರೊಳ್ ಬಲ್ಲರ್ ತಮ್ಮಾಳ್ತನದ ಪೆರ್ಚಳಿಕೆಯಂ ಗಳಪುವರೆ! ಲೋಗರ ಕಣ್ಣೆಂಜಲ್ ತಾಗದಂತು ಬೆರ್ಚನಿಟ್ಟು ಪಕ್ಕಿಗಳಂ ಬೆದರ್ಚಲೊಡರ್ಚಿದ ತೋಂಟಿಗನೊಂದಾಯತಿಯಂ ಕಂಡನಕ್ಕುಂ ರಾಮಂ! ಅಕ್ಕೆ, ತಪ್ಪೇಂ. ಇಂತೊಂದು ಪೂಣ್ಕೆ ಎಮ್ಮನ್ನರ್ಗೆ ದಕ್ಕಿಸುವ ಬಲ್ಗಿಚ್ಚಿನೊಳೆಱದ ಪೊಸ ನೆಯ್ಗೆ ಪಾಸಟಿವಾರದೇಂ ಪೋಕುಂ. ಅದುಕಾರಣಂ ತಾಂ ತನಗೆ ದೊರೆಕೊಂಡ ಕುದುರೆಯಂ ಕಟ್ಟಿ ಕೆಯ್ವಿಡಿದ ನಲ್ಲಳ್ಗೆ ಸಂತಸವೆಕ್ಕಸಂಗಳ ನವಿರ್ ಮೂಡುವಂತುಂ, ಪೆತ್ತೋವಿದಬ್ಬೆಗೆ ಪೆತ್ತೊಡಲ ಎತ್ತಿದ ತೋಳ್ಗಳ ಕಟ್ಟುಬ್ಬಸದಾಯಸಂ ಸ್ಮರಣೆಗೆ ಬಾರದಂತುಂ, ಅಂದಂದಿಂಗಂ ಬಳೆಯಿಸಿ ನಡೆನುಡಿವೇೞ್ದು ಪೊರೆದಯ್ಯನ ಕೂರ್ಮೆ ಪೆರ್ಮೆವಡೆವಂತುಂ, ಬೀರದ ಗಂಡುಗಲಿಗಳಪ್ಪ ಗೆಣೆಯ ರಾಯುಗುವರರ್ ತಲೆದೂಗುವಂತುಂ, ನೇಹದ ನಂಟರೊಳನಂಟು ಗಂಟುಗೊಳ್ವಂತುಂ, ಬಿಡುಗಣ್ಣರ್ಗೆ ಕಣ್ಣಹಬ್ಬವುಪ್ಪಂತುಮೆತ್ತಿವಂದ ಪಗೆಯಂ ಬಾರಿಸುವೆಂ. ಮೋಣೆನ್ನ ಗಂಡುಗಲಿತನದ ಚಲವುಂ ತೋಱಿಸುವೆಂ, ಎಂದು ತಱಿಸಂದು ಶ್ರೀರಾಘವನ ಕುದುರೆಯಂ ಬಂದಿವಿಡಿದು ಬೇಡವಡೆಯ ಕಾಪಿನೊಳ್ ತನ್ನ ಪೊಟಿಲ್ಗಟ್ಟಿದಂ.

ನಸೆಗಾರ್ತಿ! ಇಂತು ದವನಂ ಹಯಮಂ ಸೆಱವಿಡಿದು ನಿಜಪುರಕೆ ಕಳಿಪಲೊಡಮಿತ್ತಲ್ ಹಯದ ಬೆಂಬಲದ ಕಾಪಿನಾಳ್ಗಳ್ ತತ್ತಱಿದಿನೊತ್ತರಿಸಿ ಪತ್ತೆಸಾರ್ದು ರಾಯುಗುವರನಂ ಸುತ್ತಂ ಮುತ್ತಿ ಮೊಯ್ಗಲಿಯಂ—ಎಲೆಲೆ ಪಗಲ್ಗಳ್ಳ! ಏತಱಿಂದು ಗೆಯ್ತಂ! ತಾಂ ತಾಂ ಬಟ್ಟೆವಿಡಿದೆಯ್ದೆ ಪೋಪ ಕುದುರೆಯನಿಂ ನೀಂ ಕಟ್ಟಿಕೊಂಡುಯ್ವ ಬಲ್ಪೇವುದೊ! ಆರೊಂದು ಹಯಮೆಂಬುದನಾರಯ್ದು ಪೋಗದೆ ಪತ್ತುಗೊಳ್ವ ನೀಂ ಕಾಲುರಿಚನಕ್ಕುಂ, ಸಾಜಂ. ನಿಲ್ ನಿಲ್! ಮಾಣ್ ಮಾಣ್!

ಶ್ರೀರಾಮನ ಜನ್ನದೊಂದು ಸಿಂಗರದ ಕುದುರಿ ಕಣಾ ! ದೇವರ್ ಮುನಿವೆಡೆಯೊಳ್ ಕಳ್ವ ಕೊಳ್ವ ನಿನ್ನೀಬಲ್ಮೆ ಪೊಳ್ಳಕ್ಕುಂ, ನಿನ್ನಡಗು ಪರ್ದಿಂಗೆ ಬಿರ್ದಕ್ಕುಂ, ಮೇಣ್ ನಿನತ್ತುಸುವಿನುಸಿರ್ ಜವಹುರದ ಪುಟುಗಳ್ಗೆ ಸುಯ್ಲಾಡುವ ಜೀವದ ಗಾಳಿಯಕ್ಕುಂ, ಮೇಣೀನಿನ್ನ ಪಾಟಿಚೂಡಲ ನೆತ್ತರ್ ಪಿಱಿದಿನಿವಡೆಗೆ ಪಗಲ ಬೋನದೊಂದು ಕಟ್ಟಕ್ಕುಂ. ನಿನ್ನಟ್ಟಿಯೆಲ್ವು ಕುಟ್ಟಿವುಟುಗಳ್ಗೆ ಕಟ್ಟೆಚ್ಚಿನ ಹೋಟಿಗೆಯಕ್ಕುಂ, ನಿನ್ನೀರುಂಡಂ ಮರುಳ್ವಡೆವೆರಸು ಮುಂಡಳಿಸಿ ಸೆಂಡನಾಡುವ ಮಾಕಾಳಿಯ ಕೆಯ್ಗಂದುಗಮಕ್ಕುಂ. ನೂಱಱನೇಂ ; ನಿನ್ನ ನಾಡು ಬಕ್ಕಂಬಯಲಕ್ಕುಂ. ಅಂತದಱಿಂ ಬಗೆಗೇಡಿಂ ತಕ್ಕಟಿಾದು ಸಿರ್ನೆರಂ ನೀಂ ಬನ್ನದೊಳಾಗದೆ ಬೇಗದೆ ಹಯಮಂ ಬಿಟ್ಟು ನೆಟ್ಟನೆಮ್ಮಂ ಶರಣ್ಬೊಕ್ಕು ಸೊಗಂಬಾಟ್ವುದೆಂದರ್. ಆನುಡಿಗೆನಸುಂ ನಕ್ಕು ಮತ್ತಂ ಕಿಸುಗಣ್ಚಿ ದಮನಂ ಕೆಯ್ಯ ಕೂರ್ವಾಳ ತೆಳ್ಮೊನೆಯಂ ನೂಂಕಿ— ಈ ಸೂಟಿಗ್ಗ ನಿಮ್ಮಂ ತಲೆಗಾವೆಂ, ಮುಂತಿಂತು ಬಾಯ್ಗೆ ಬಂದಂತೆ ಜಜಂಜೆ ಕುಡಿನಾಲಗೆಯಂ ಸೌಳನೆ ಸೀಟಿಪ್ಪಂ, ನಿಕ್ಕುವಂ. ಆನೆ ಬಲ್ಪುಳ್ಳಂ, ಕುದುರೆಯಂ ಕಟ್ಟಿದೆಂ. ಕಾದುವೊಂದು ಬೆಸನಮೆಮಗಕ್ಕುಂ. ಆಸೂರ್ಕಿನ ರಾಮಂ ನಿಮ್ಮ ದೇವ ನಾವನೇವಂ ? ಈಗಳೆ ನಿಮ್ಮಾಳ್ದನಂ ತಟ್ಟ ರಣಕಟ್ಟಂ ; ಇದೆ ಎನ್ನೊಂದು ತೋಳ್ಬಲಮಂ ಮೆಱೆವೆಂ. ಕುದುರೆಯೊಂದು ದೂಸಱಿಂ ಮೊನೆಯೊಳೆನ್ನೀಮೊನೆಯ ಬಾಳ್ಗೆ ತಲೆಯಂ ಮಾಱುಗುಡದಿರಿಂ. ಪೋ ! ಪೋಗಿರೆ !, ಎಂದು ಕಾಪಿನಾಳ್ಗಳಂ ಗದಱಿ ಗರ್ಜಿಸಿದಂ.

ಇಂತಪ್ಪುದುಮನುಚರರ್ ಪೇಳಿಗೆಯ ಪಾವಿನೊಂದು ಮಾಟಿಕ್ಕಿಯಿಂ ತಡೆಗಟ್ಟುವಟ್ಟರಾಗಿ ಮರಳ್ದು ತಮ್ಮೊಡೆಯನಪ್ಪ ಪ್ರತಾಪಾಗ್ರ್ಯಂಗಿಂತಿದಂ ಬಿತ್ತರಿಸಿದರ್.

ಮುದ್ದಣಂ—ದೇವೀ !

ಮನೋರಮೆ—ಆವ ದೇವಿ ! ಶ್ರೀದೇವಿ, ಏಂ ಭೂದೇವಿ !

ಮುದ್ದ—ನಿನ್ನನೆ ದೇವಿಯೆಂದು ಕರೆದೆಂ.

ಮನೋ—ಬಲ್ಲತೆಯಂ ಬಿತ್ತರಿಪೊಂದುಬ್ಬೆಮೆಯೊಳೇನೆನ್ನಂ ತೊಟ್ತುಮಾಡಿ ದೇವಿಗೆತ್ತು ಕರೆದಯ್ ?

ಮುದ್ದ—ಏಂ ಕಾಣೆನೆ ! ಸೋಯಂದಪ್ಪಿದೆನೆ !

ಮನೋ—ಮೋಹಾವ ದೇವಿಯಾಂ ?

ಮುದ್ದ—ರತಿದೇವಿ.

ಮನೋ—ಅಂತಪ್ಪೊಡೆ ನೀಂ ಕಾಮದೇವಂ.

ಮುದ್ದ—ಅಕ್ಕೆ ದೇವಿಯೊಂದು ಹಸಾದಂ.

ಮನೋ—ಎಲೆ ಮದನಮೋಹನರಾಜ ! ಅಂತಿರ್ಪೊಡೆ ನೀಂ ಪೇಟ್ದು ರತಿಯುನೆ ಬಣ್ಣಿಸಿ ಪೊಗಟ್, ನೋಟ್ಪಿಂ.

ಮುದ್ದ—ಓ ! ಏತಱ ಮಾತೊ ! ಎನ್ನಳವೆ !

ಮನೋ—ಆಃ ! ರತಿಯುಂ ಬಣ್ಣಿಸಲ್ಕೆ ಸಲ್ಲದ ನೀನೇತಱ ಕಾಮ ದೇವಂ !

ಮುದ್ದ—ಅಂತಪ್ಪೊಡೆ ಸಲ್ವೆಂ ಸಲ್ವೆಂ, ಕಾಮದೇವನೆಂಬೊಂದು ಬಿರುದಂ ಪಡೆದುಮಾಜಱನೆ ? ತೆಗಟ್ಬಿರ್ಕೆ ! ಇದೆ ಇದೆ ತೊಡಂಗಿದೆಂ : —ಅಸಿಯೊಡಲ ಪೂಗಣ್ಣ ಪೆಣ್ ; ಸಸಿಮೊಗದ ಕಿಸುಬಾಯ ಪುಸಿನಡು ವಿನರಸಿ ; ಮಿಡಿಮೊಲೆಯ ಪಿಡಿನಡೆಯ ಬಿಡುಜಡೆಯ ಸೀಱಿ, ಬೆಟ್ಟ—

ಮನೋ—(ಅರೆನೋಟದಿಂ) ಆಃ! ಕಬ್ಬಿಗರ್ಗೆ ನೀಂ ಕಲ್ಲಾಯ್ತು ಸಕ್ಕುಂ. ಎಂದುಂ ಕಾಣದರೊಂದು ಸಾಂಗಿಸಿಂ ಪೇಟ್ದು ಪೊಚ್ಚಱದ ನಿನ್ನೀಬಣ್ಣನೆಯ ನುಡಿಗೇನೆಂಬೆನೊ ! ಒಡಲಸಿದೇಂ ? ಮೊಗದೊಳೇ ತಱ ಸಸಿ ; ಕಣ್ಣೊಳೇತಱ ಪೂ, ನಡುವಿನೊಳೇಂ ಪುಸಿ ! ಎಂದು ಬಾಯುಂ ಕಿಸಿದಳ್. ಜಡೆಯುಂ ಬಿದಿರ್ಚಲ್ಕೇಂ ದೆವ್ವಮಾಳ್ಕುದೆ ? ಪೋ ! ನೀಂ ಕಾಮನಲ್ತು ಭೀಮಂ.

ಮುದ್ದ :—(ಕಿಱುನಗೆಯುಂ) ಎನ್ನ ಕುಲದೇವಿ ! ಇನಿತೊಂದು ಮುನಿಸೇಂ ? ಎನ್ನೆಗ್ಗಿನಿಂತಾಯ್ತುಕ್ಕುಂ. ಸೈರಿಸು ! ಸೈರಿಸು ! ನುಡಿನಿಱು ಗೆಯುಂ ಬೆದಂಕಿ ಪಾರದಂತುಂ, ಇರ್ದಂತೆ ಬಣ್ಣಿಪೊಂದು ಜಾಣ್ಮೆ ದೊರೆ ಕೊಳ್ವಂತುಂ, ಬಾಸೆವೆಣ್ಣೊಂದೊಲ್ಮೆದಾಳ್ದಿ ವಾಕ್ಸಿದ್ಧಿಯುಂ ಪಡೆದು ನಿನ್ನಂ ಎನ್ನ ಜನ್ಮದಾರದಾಣೆ ! ರತಿಯಿಂ ನೂರ್ಮಡಿ ಮಿಗಿಲೆನಿಸಿ ಬಣ್ಣಿಪೆಂ.

ಸುವ್ವಿ ! ಸುವ್ವಿ ! ನಾಲ್ಮೊಗನಗ್ಗಿಟ್ಟಿಕೆಯೊಳೊಗೆದ ಬೆಳ್ಳಗೆಯ ಮುದ್ದುಗುವರಿ ! ಸುವ್ವಿ ! ಸುವ್ವಿ ! ಬೀಣೆಹೊತ್ತಗೆಗಳಂ ಪೊತ್ತ ಕೆಯ್ಯ ಚೆಲ್ವೆ ! ಸುವ್ವಿ ! ಸುವ್ವಿ ! ಬಾಣಿ, ಎನ್ನೀ ಮಡದಿರನ್ನೆಯುಂ ರತಿಗೆಣೆಯೆಂದು ಪೊಗಟ್ದು ಪಾಡುವೊಂದು ಜಾಣ್ಮೆಯ ಪೊರ್ದುಗೆಯ

ನುಡಿಬಿನ್ನಣಮನೆನಗೆ ಕರುಣಿಸೌ! ನಿನಗೆಱಗುವೆಂ. ಸುಪ್ವಿ! ಸುಪ್ವಿ! ಆ! ಆ! ಆ! ಆ! ಆ!!!

ಮನೋ—ನೀಂ ಗೆಯ್ದ ಸರಸತಿಯ ಪೊಗೞ್ಕೆಯ ತುತ್ತತುದಿಯ "ಆ! ಆ!!" ಏಂ?

ಮುದ್ದ—ಅಂತದು ಪಾಡಿನ ಜೋಡಿನ ದಾಟಿಯ್ಯೆಸೆ.

ಮನೋ—ಆಯಸ್ತಾಯ್ತು ಚೆಲ್ವ, ಏಂ ನಿನ್ನಂ ಸರಸತಿಯೊಲ್ದಳ್?

ಮುದ್ದ—ಎಂತೆಂತೊ ಪಾಡಿ ಬೇಡಿ ಒಲ್ಮೆವಡೆದೆಂ. ಈಗಳಿನಸುಂ ತಡಂಬಡದೆ ಬಣ್ಣಿಸಿ ನಿನತೊಂದೊಲ್ಮೆವಡೆದಪೆಂ. ಕೇಳ್,

ಮಾಕಾಳಿಯ ಮೆಯ್ಯೊಗರ್ಗೆ........

ಮನೋ—ನಿನ್ನ ರತಿಯಂ ಬಣ್ಣಿಪೊಂದು ಸಂಧಿಯೊಳ್ ಮಾಕಾಳಿಯೊಳೇಂ ಕಜ್ಜಂ?

ಮುದ್ದ—ಆಃ! ಎಡರ್ಗೇಡಿಯನೆ ಮಱತೆಂ. ಆತನಂ ಬಲಂಗೊಳದಿರ್ಪಿನಂ ಮೊತ್ತಮೊದಲೊಳಿನಿತುಂ ವಿಘ್ನಂ. ಓ ಓ! ಒರ್ಪನೆಯ ಬಿಂಕಣಿಗಿವಿಯ ಮೂಗೊಂಕುಮೂಗಿನ ಪೇರೊಡಲ ಇಲಿದೇರ ಬೆನಕ! ಇದೆ ಮಣಿವೆಂ. ಈರಮಣೀಮಣಿಯಪ್ಪ ರತಿದೇವಿಯಂ ಬಣ್ಣಿಪೊಂದು ಕವನದ ಕಜ್ಜದುಜ್ಜುಗದನಿತೊಂದು ಪೊಟ್ಟನೇಮಾಟ್ಕೆಯೊಳಮೆಡರ್ ಬಾರದಂತು ಕಾವುದು. ಇನಿತೊಂದು ಮೇಲನೊಡರ್ಚಿದೆಯಪ್ಪೊಡೆ ಆಬಣ್ಣನೆಯ ಪೊಗೞ್ಕೆಯ ಪಾಡಿಂಗೊಲ್ವೆನ್ನೀಮುಡದಿ ಕೂರ್ವೆಯನೆನಗೆ ತಿನವಡಿಸುವಾಪಸುಗೆಯ ಚಕ್ಕುಲಿಯುಂ ಗಾರಿಗೆಯುಂ ಪುರಿಗಡಲೆಯನವಲಂ ಕಬ್ಬಂ ತೇಂಗಾಯುಂ ನಿನಗಂ ಪಾಲಿತ್ತು ಮೊದಲೊಳರ್ಪಿಸುವೆಂ.

ಮನೋ—ನಿನ್ನ ಬೆನಕಂ ಒರ್ಪನೆವಾಯೊಳೆಂತುಣ್ಗುಂ.

ಮುದ್ದ—ಏಂ ರಮಣಿ ದೇವರುಣ್ಬರೆ! ಉಣ್ಬೊಡಂತೆಂಬೆನೆ?

ಮನೋ—ಮೇಣೊರ್ವನೆ ತಿನಲ್ ಬಗೆವಾ!

ಮುದ್ದ—ನೀನೀವುದೇಂ ದಿಟಂ.

ಮನೋ—ಎತ್ತಾನುಮಿತ್ತೊಡೇಂಗೆಯ್ವೆಯ್?

ಮುದ್ದ—ಇಸ್ಸಿ! ಅನಿತ್ತು ಭಕ್ಷ್ಯಮನೊರ್ವನೆ ನುಂಗಲಾಂ ರಾವೆ? ಚಕ್ಕುಲಿಗಾರಿಗೆಗಳ್ ಕಾಮದೇವಂಗೆ; ಅವಲುಂ ಪುರಿಗಡಲೆಯುಂ

ಮುದ್ದಣಂಗೆ; ಕಬ್ಬು ಕಬ್ಬಿಗಂಗೆ; ತೇಂಗಾಯೆನಗ್ಗೈಸೆ!

ಮನೋ—ನೀಂ ಜಾಣಂ. ನಿನ್ನ ರತಿದೇವಿಗೇಂ?

ಮುದ್ದ—ತಾನೆ ಒಲ್ದೀವ ದೇವಿಗಾವುದಱೊಳಾಸೆಯೊ?

ಮನೋ—ಅಂತಿರೆಯುಂ ಮನೋರಮೆಗೇಂ?

ಮುದ್ದ—ಓವೊ! ರತಿಯುಂ ಬಣ್ಣಿಪೊಂದು ಬೆಸನದೊಳ್ ಮನೋರಮೆಯುಂ ಮಱದುಟೀದೆಂ. ಅಕ್ಕೆ! ಕರ್ಬಿನ ಸಿವುರುಂ ಮುಗ್ಗಿದ ಗಾರಿಗೆವುಡಿಯುಂ ಮನೋರಮೆಗಿರ್ಕೆ.

ಮನೋ—ನೀಂ ಬಲ್ಲಡಸುಗಾಱಂ, ಸಾಱಂ. ಇರ್ಕೆ. ನೀಂ ಮನದೊಳೆ ಮಂಡಿಗೆಯನುಂಡಂತಾಯ್ತು. ಈಗಳೆಂ ಕೇಳ್ವೆಂ ರತಿಯ ಪೊಸಬಣ್ಣನೆಯಂ.

ಮುದ್ದ—ಕೇಳ್. ಆಂ ಬಣ್ಣಿಪ ರತಿಗೆ ಮಿಂದ ಮರಗೂಟನೊಂದು ಮೆಯ್ದೊಗರ್.

ಮನೋ—ಮರಗೂಟನೆಂದೊಡಾರ್?

ಮುದ್ದ—ದೆಸೆವಳರೊಳೊರ್ವಂ.

ಮನೋ—ಉಂ. ಹುಂ.

ಮುದ್ದ—ಸಿಂಗರದ ಮಲೆನಾಡಿಗನೊಂದು ಭಂಗಿಯ ಮೊಗಂ.

ಮನೋ—ಮಲೆನಾಡಿಗನೆಂದೊಡಾವಂ?

ಮುದ್ದ--ಮಲೆಯೊಳೆ ನೆಲೆಗೊಂಡಿರ್ಪ ನಾಲ್ಗೆಯ್ಯ ದೇವರ್.

ಮನೋ—ಇಂತಪ್ಪ ದೇವರೊಲ್ಮೆವಡೆದೆ ಮಲೆನಾಡ ಪೆಣ್ಗಳ್ ಕಣ್ಗೆ ಚೆಲ್ವೆಯರಾದರಕ್ಕುಂ?

ಮುದ್ದ—ಅಪ್ಪುದು. ಮತ್ತಮಾನೀಱಗೆ ಇರುಳ್ಗಣ್ಣಂಗೆಂತಂತೊಪ್ಪುವ ಬಟ್ಟನುಣ್ಗಣ್.

ಮನೋ—ಇರುಳ್ಗಣ್ಣನೆಂದೊಡೆ ಆವ ಸ್ಯೆಪುಳ್ಳಂ?

ಮುದ್ದ—ಇರುಳ್ಗಣ್ಣನೆಂದು ಚೆಂದವನಕ್ಕುಂ.

ಮನೋ—ಆಃ! ಎಲೆಲೆ, ಕಾಮದೇವರ ದೇವ! ಈಗಳೀಗಳಱುತೆಂ. ನೀಂ ಬಣ್ಣನೆಯೊಳೆರಡನೆಯ ಬೊಮ್ಮಂ ನಿಕ್ಕುವಂ. ಎನ್ನೀ ಜೋಲ್ಮುಡಿಯ ಪೂಸರದಾಣೆ! ನಿನಗಾವ ಭಕ್ಷ್ಯದೊಳಿಷ್ಟಂ? ಪೂರಣಗಡುಬನೀವೆನೋ? ಚಕ್ಕುಲಿಯಂ?

ಮುದ್ದ—ಇರಿರ್! ಸಯ್ತು ಬಯ್ತಿಡು; ಮಾದೇವಿಯ ಕಡೆವೊಲ್ತಿನೊಂದು ರೂಪಿಗೆ ಪಡಿಮರಿಜಾಗೆ ಮೆಚ್ಚಿವೆನ್ನ ರತಿದೇವಿಯುನಡಿವಿಡಿದು ಮುಡಿವರೆಗಂ ಬಣ್ಣಿಸದ ಮುನ್ನಮಿನಿತೊಂದು ಬೇಗದಿನೊಲ್ವಾ!

ಮನೋ—ಮುನ್ನೀರ ನೀರ ಸವಿಯುನರಿವೊಂದು ಬಗೆಯೊಳ್ ಕೊಡನ ಕುವರನಂತಿರೆ ಬಲ್ಗಡಲನೆ ಕುಡಿವೊಡಕ್ಕುಮೆ? ಒರ್ಪನಿ ಸಾಲದೆ?

ಮುದ್ದ—ಅತಿಪ್ರಸಂಗಂ ಸಾಲ್ಗುಂ. ಇಂತು ವ್ಯಥಾಲಾಪದಿಂ ಪೊಲ್ತುಂ ಕಳಿವೆಮ್ಮಂ ಲೋಗರ್ ಪಳಿಯುರೆ? ಪೋ ಮಾಣ್, ರಾಮ ಕಥೆಯುನಿನ್ನೊರೆವೆಂ, ಕೇಳ್.

ಆವೇಳೆಯೊಳ್ ಶ್ರೀರಾಮನ ಕುದುರೆ ಬಲ್ಪಿನ ಪಗೆರಾಯುಗುವರನೊಳ್ ಬಂದಿವಟ್ಟುದೆಂದು ಚರರಿಂದ ನಿಟ್ಟುರದ ಕಕ್ಕಸದ ನುಡಿ ತನ್ನ ಕಿವಿವೊಳಗಂ ಪುಗುತರ್ಪ ಮುನ್ನಮೆ ಪ್ರತಾಪಾಗ್ರ್ಯನೆಕ್ಕೆಕ್ಕೆ ಮಿಕ್ಕುವರ್ಪ ತೆಕ್ಕದೆಕ್ಕತುಳದ ರೋಸದಿನಾಡಿ ಕುಣಿವ ಕುಡುಮೀಸೆಯುಂ ಪುರಿಗೆಯ್ದು ಬೆಮರಿಡುವ ಕೆಕ್ಕೆಯುಂ ಸಮುಱು ಕೆತ್ತುವ ಮುಯ್ಪನೊತ್ತಿ ಬಿಲ್ಗೆ [ಜೇಯು] ನೇಱಿಸಿ ತಿರುನಾಯ್ಗೆ ಕಣೆಯುಂ ಪೂಡಿ ತೇರನೇಱಿ ನಾಲ್ವಗೆಯ ಪಡೆ ವೆರಸು ಕುದುರೆಗಳ್ಕನಾವನಾವಂ ತೋಱು ತೋಱಿಂದು ಪಗೆಯೊಳೆತ್ತಿ ನಡೆದಂ.

ಇತ್ತಲ್ ದಮನಂ ಪೊಣರ್ಕೆಗೆಂದು ಬರ್ಪರಿಸೇನೆಯುಂ ಕಂಡು ತನ್ನ ಮೆಯ್ಗಾವಲ ಕಿಱುವಡೆಗೆ ಕೆಯ್ವೀಸಿ ಚೂಣಿಯೊಳೆ ನಿಂದು ತಾಗಿದಂ. ಆವೊಲ್ತಿಂಗೆ ಮಾಱಾಂತರಿರಾಯುಗುವರನಂ ತೂಳ್ದು ಬಾರಿಸುವ ಪರ್ಪರಿಕೆಯ ಸೂರುಳೊಂದು ಬಲ್ಲಾಳ್ತನದ ಗಂಡಗರ್ವದಿಂ ತೇರಂ ನೂಂಕುತುಂ, ಕಾರ ಕರ್ಮುಗಿಲೊಡ್ಡೆನಲ್ಕೆಡ್ಡಮೆಸೆವ ಪೇರಾನೆಗಳ ಘಟೆಯುಂ ನೋಳಿಸುತುಂ, ಪೇರುರ್ಬಿನ ಕಡಲ ನಡುವಿನೊಳಡಿಗಡಿಗೆ ಗುಡಿಗಟ್ಟಿ ಮಡಿಮಡಿವ ನಿಡುದೆರೆಯ ಲೀಲೆಗೆ ಪಡಿವರ್ಪೊಂದು ಗತಿಯ ಕುದುರೆಗಳ ತಟ್ಟನಣೆದೊತ್ತುತಂ, ಮಾರಿಯ ಮುಸಣಿಯ ಚೂಳಿಯುಂ ಪಿಡಿದು ಜಡಿವ ಜವಹುರಮುಂ ತಗುಳ್ಚಿ ತಾಮೊಕ್ಕಲಿಕ್ಕುವ ಬೋಳಿಯರ್ಗೆ ಗುರ್ವನಗುರ್ವಿಸುವ ಸೆಜಗಂ ಬೆಜಗಂ ಪಾರದ ಬಲ್ಗೈಬಂಟರ ಪೆರ್ವಡೆಯುಂ ಜರ್ವಿ ಕೆತ್ತಿಸುತುಂ ತಾಂ ನಾಯಕನಾಗೆ ಪ್ರತಾಪಾಗ್ರ್ಯಂ ಮಾರ್ಮಲೆದು ದಮನನಂ ತಡೆದೊಡ್ಡಿ ನಿಲ್ತಂ. ಇಂತುಱುಬಿ ಬಂದುಂ ನಿಂದುಂ

ಮುಂದುಂ ಪಿಂದುಂ ಸಂಧಿಸಿದ ಬಂದಿಗಾಱರ ಗೊಂದಣಮುಂ ನಂದಿಪೊಂದು ಕುಂದದ ಗರಗರಿಕೆಯು ಕೈದುಗಾಱತನದ ಬಲ್ಮೆಯೊಳೆ ಮಾಱುಡ್ಡಿ ಮೊನೆಗಾಂತ ದಮನನನಿದಿರ್ಚಿ ಕೋಲ ಸರಿಯುಂ ಕಱುಯುತೆ ಕರೆಯುತೆ —ಎಲೆ ಪಸುಳೆ, ನಿನಗಿಂತೇಂ ಹರಣಂ ತಿಣ್ಣಮಾಯ್ತೆ! ನಿರ್ನೆರಮೆನ್ನೀಕೂರಂಬುಗಳ್ಗೆ ತಲೆಯುಂ ಮಾಱುಗೊಟ್ಟು ಸಾಯಲ್ ಬಗೆವಾ! ಇಸ್ಸಿ! ನೀಂ ತರಳಂ; ಪೊಣರ್ಕೆಯಾಗದು. ಅಂತಿರ್ಪನಂ ದೇವರ್ಕಳಿಂ ನಿಚ್ಚಂ ನುತಿಗೊಳ್ವ ಪೆರ್ಮೆಗೊಡೆಯನಪ್ಪ ರಾಮನ ಹಯಮುಂ ಬಿಟ್ಟು ಕಾಣ್ಕೆಯುಂ ಕೊಟ್ಟು ಪುದುವಾಳ್—ಎಂದು ಕೇಳಿಸಿದಂ. ಅನುಡಿಗೆ ಕಡಂಗಿ ದಮನಂ—ಕೇಳ್! ಕೇಳ್! ಹರಣಂ ತಿಣ್ಣಮಾದರ್ಗೆ ದಾವುಂ ಸಾವುಂ ನೀರೊಂದು ಟಾವುಂ ಪೊತ್ತುವ ಕಿಚ್ಚಿನ ಬೇವುಮೊಳವು. ಸಂಗರದೊಂದು ದಂದುಗಮೇಕೆ? ನಾಲಗೆ ನಿಡಿದಾದರ್ಗೆ ಕೂರ್ವಾಳುಂ ಕೋಲುಮೀಗಳೆ ಸಾಧ್ಯಂ. ಅಂತದುಕಾರಣಂ ಸಲ್ಲದ ನಿನ್ನಂಕದ ಬಿಂಕದ ಮೆಯ್ಯಾಸದ ಸಡಗರದ ಬಿಡುನುಡಿಯು ಚೊಕ್ಕಳಿಕೆಯುಂ ಒಲ್ಲದೆ ನಿಲ್ಲದೆ ಮರಲ್ವುದೆಂದಂ. ಇಂತಾಡಿದ ದಮನನಂ ಪೊಸಮುಸೆಯು ಕೂರ್ಗಣೆಗಳಿನಿಸುತುಂ —ಎಲೆ ಕುದುರೆಗಳ್ಳ! ಕೂಟಿ! ನೀಂ ಬಾಲನೆಂದಿಂತು ನಯಂಬೇಱುಡಂ ಬಳ್ಳದಳ್ಳದೆ ಮಾಱಾಂತಿದಿರ್ಚಿ ಸಾವ ನಿನ್ನೀನೊಸಲಕ್ಕರದೋದಿಂಗೇನೆಂಬೆನೊ! ಪುಣ್ಯಮೂರ್ತಿರಾಘವನ ಜನ್ನಕ್ಕೈಡರಂ ತಪ್ಪೊಂದು ಸೆಡಕಿಂ ದುಡುಕಿಂ ಪೋಪ ಹಯಮುಂ ಬಂದಿಗೊಂಡೊಂದಱುಗೆಯ್ಮೆಯ ಸಿಂದಿದುದಕ್ಕುಂ; ತಪ್ಪೇಂ—ಎಂದಾಡಿದಂ. ಆಗಳ್ ಕೋಪಾಟೋಪದಿಂ ದಮನಂ—ತೆಗೆ ತೆಗೆ ನಿನ್ನಾರಾಘವನಂ, ಹಯಮುಂ. ಗಂಡುಗಲಿತನದಿಂ ರಾಯುಗುವರನೆಂ ನಿನ್ನ ಬನ್ನದ ಜನ್ನದ ತುರಂಗಮುಂ ಕಟ್ಟಿದೆಂ, ನೀಂ ಕಲಿಯಾಗೆ ಕಾದಿ ಎನ್ನಂ ಸಮಂತು ಹಯಮುಂ ಗೆಲ್ವುದು ಕೊಳ್ವುದು—ಎಂದಂ. ಪ್ರತಾಪಾಗ್ರ್ಯನೆಂಗುಂ:—ಬಿಟ್ಟ ಕುದುರೆಯುಂ ಬಿಟ್ಟರ್ಪರೆ ಬೀರರ್? ಇದೆ ಇದೆ ಪೊಂಗಱಯ ಕೋಲ್ ಕಟ್ಟ ಬಿಡದರೆರ್ದೆಯೊಲ್ಗಳಂ ಪುಡಿಗುಟ್ಟೆ ನೆಟ್ಟನೆ ಹಯಮುಂ ಮರಲ್ಚಲ್ಕೆಂದು ಪೂಣ್ದು ಪೂಡಿದೆಂ. ಅರಮಗನೆಂಗುಂ:—ಅಂತಿರಂತು ಮರಲ್ಚಲ್ಕೆಂದು ಬರ್ಪ ಪಗೆಯನೆಚ್ಚಟ್ಟಲ್ಕೆಂದು ಬೀರಸಿರಿಯೆತ್ತಿದ ನೆತ್ತರುಂಡ ಕೆಂಗಣೆಯುಂ ನೋಡಿದೆಂ,

ಕಾಂತೆ, ಈಗಳ್ ಪೊಯ್ಸುಯ್ಗೆ ಮೊದಲ್. ಪ್ರತಾಪಾಗ್ರ್ಯಂ ತನ್ನೊಂದದಟನರಿಯಂ ಶರಜಾಲದಿಂ ಮುಸುಂಕಲೊಡಂ ನಡುವಟ್ಟೆಯೊಳೆ ಬರ್ಪ ಕಣೆಗಳಂ ಮುಕ್ಕಡಿಗೆಯ್ದು ಮೇಲಂಬುಗಳನೇಸಾಡುವುದುಂ, ಪ್ರತಾಪಾಗ್ರ್ಯಂಗೆ ಜೀವರಕ್ಕೆ ಬೆಸುಗೆವಿಟ್ಟುದು ; ತೇರಿನರಗೀಲ್ ಕಱಿಲ್ದುದು ; ಪಱಿಯಿಗೆಯುಡಿದತ್ತು. ಮತ್ತಂ ಪೊಸದಗಲೆಯಂ ಬಿಗಿದು ಅಳವಟ್ಟ ಪೊನ್ನ ಪಡಿದೇರನೇಱಿ ಮುಟ್ಟೆಯಿಸಿ ಕಱುತ್ತೆಱಗಿ—ನೀಂ ಕಡುಗೈಗಲಿಯಕ್ಕುಂ, ಏಂ ಮಿಱುತ್ತುವಿನುಂಡಿಗೆಗೊಂಡಯ್ ! ಇದೆ ಇದೆ ನಿನ್ನಟ್ಟೆಯಿಂ ಜವನರಮನೆಯ ಮುಂಬಾಗಿಲ್ಗೆ ಲಾಳವಿಂಡಿಗೆಯಂ ಸಮೆವೆನೆಂದು ಮೂಡಿಗೆಯಿಂ ಕಿಡಿಯಿಡುವುರಿಗಣೆಯನಾರ್ದೆಚ್ಚಂ. ಅನಿತಱೊಳೆ ದಮನನಂ ಭುಗುಭುಗಿಲೆಂದು ಪೊಗೆದುಂ ಪೊತ್ತಿಯುಂ ಕಿಡಿಗಾಱಿಯುಂ ಜಾಲೆಯೊಕ್ಕುಂ ಮಿಕ್ಕುಂ ಮೀಱಿಯುಂ ಪರಿತರ್ಪ ಕಿರ್ಚುಂಗೋಲಂ ಚೆಚ್ಚರದೊಳೆ ತನ್ನೊಂದು ಬೆಚ್ಚಪೊಚ್ಚಪೊಸನೀರೊಡಲ ನಿಡುಗೋಲಿಂ ಕಾಲ್ವೊಳೆಯಿಸಿದಂ. ಬಱಿಯಂ ಮಱುವಕ್ಕದತ್ತಣಿಂ ವಾಯವ್ಯಾಸ್ತ್ರಂ ತಳರ್ದು ಬರ್ಪುದುಂ ಸರ್ಪಾಸ್ತ್ರಮಂ ಸಂಧಿಸಿದಂ. ಇಂತು ಮಂತ್ರಾಸ್ತ್ರಂಗಳ್ ಮುಡಿಯಲೊಡಂ, ಬಲ್ಮೆಯ ತೋಳ ತೋಟಿ ಬೆಳ್ವಳಮಾಗೆ ಪೊಣರ್ದರ್. ಕಡೆಯೊಳ್ ಪ್ರತಾಪಾಗ್ರ್ಯಂ ದಮನನ ಬಲ್ಪಿಡಿಗುರ್ದಿಂಗೆ ನಿಟ್ಟವೋದಂ. ಆಪ್ರಸ್ತಾವದೊಳ್ ರಥಿಕನೊಂದು ಸೋಲಂ ಕೇಳ್ದು ಪುಷ್ಕಲಂ ಶತ್ರುಘ್ನನಿಂ ಬೆಸನಾಂತು ತಳ್ವದೆ ಮಾಱಾಂತ ವಿಕ್ರಾಂತರಾಜಪುತ್ರನಂ ಸರಲ ಸೋನೆಯಿಂ ಕಾವಳ್ಗೆ ಮಸುಳ್ಚೆ—ಎಲೆಲೆ ಪೋ ಪೋಗದಿರ್, ಭಟನಾಂ ಕಾಳೆಗದ ಮೊನೆಗೆ ಬಿಲ್ಗೊಂಡು ಬಂದೆಂ. ನಲ್ನುಡಿಯೊಳೆ ಹಯಮಂ ಚಲಮಂ ಬಿಡು. ಅಲ್ಲದೊಡೀಗಳೆ ಪಡೆಯನೊಡೆಮುಱಿವೆಂ—ಎಂದು ತಡೆದಂ. ಆಗಳ್ ಸುಬಾಹುತನಯಂ ಬಂದನಂ ನಿಂದು ನೋಡಿ—ನೀಂ ಪಡೆಯನಲ್ತೊಡೆಯಂ ಮುಱಿವಯ್ ; ಭಟನಲ್ತು ಭಟ್ಟಂ ; ಕೊಂಡುದು ಬಿಲ್ಲಲ್ತು ಪುಲ್ ; ಬಂದುದು ಕಾಳೆಗದ ಮೊನೆಗಲ್ತು ಮಾಳೆಯದ ಮನೆಗೆಂದಂ. ಪುಷ್ಕಲಂ ಕಾಹುರದಿನೆಂಗುಂ :—ಬಿಡು ಬಿಡೀಬಿನ್ನಣದ ನುಡಿಯಂ. ಇದೆ ಪೂಣ್ದೆಂಬೆಂ. ಇಂದೀ ಕೊಳುಗುಳದೊಳ್ ನಿನ್ನಂ ಗೆಲ್ದಲ್ಲದೆ ಕಾಱಿಗ್ಗಡೆದೆನಾದೊಡೀಬಿಲ್ ಊಱುಂಗೋಲಕ್ಕೆ, ಅಣ್ಮು ಕಣ್ಮಾಯಮಕ್ಕೆ, ಮೇಣಾಂ ಗೆಲ್ಲವೇಣ್

ನಿನ್ನೊಳ್ ಕೇಣಿಯಕ್ಕೆ ! ಕೆಯ್ಮಱೆದು ಕೆಕ್ಕಳಿಸದಿರ್. ದಮನನೆಂಗುಂ :—ನೀನಿಂತಿರೆ ಗಡಾವಣೆಯುಂ ಕೋರವಿಸಿ ಗಟ್ಟಿಸಲೇಂ ? ಪೋ, ಗಸಣಿಯ ಗರುವಾಯ ಗೂಳೆಯದ ಜೋಹಮುಂ ಬಿಡು. ಆರ್ಪೊಡೆ ಕೆಯ್ಪಳಕಮಂ ತೋಱು. ಪುಷ್ಕಲನೆಂಗುಂ :—ಅಬ್ಬಾ ! ಮೊನೆಗಾಱದ ಮೊನೆಗಾಱಕುವರ ! ನಿನ್ನೊಳ್ ಕಡುಕೆಯ್ದು ಪೋಣರ್ಪಿನಂ ಗುಣಂ ಬಾರದೆಂಬೊಂದು ಬಗೆಯಿಂ ಸಯ್ತಿಡೆ ನೀನೊಡಂಬಡದೆ ಬಾರ್ತೆಗೆಟ್ಟೆಳನೆತ್ತರ ಕೊರ್ವಿಂ ತಲೆಯುಂ ಪೋಗುಡುವೀನೀಂ ಮರುಳಾಗಾ ! ನಿರ್ನೆರಂ ಕಾಡಾನೆಯೊಳಿದಿರ್ಚುವ ನಾಡ ಕುನ್ನಿಯಂತು ನೀನೆನ್ನೊಳ್ ಕಡುಕೆಯ್ವಾ ! ದಮನನೆಂಗುಂ :—ನೀಂ ಕಾಡಾನೆಯಲ್ತು ; ನೆಣಗೊರ್ವಿ ನೂರಾನೆಯುಕ್ಕುಂ. ಪುಷ್ಕಲನೆಂಗುಂ :—ಏನೆನ್ನಂ ನಾಡ ಪಂದಿಯೆಂದು ಕೊಱಚಾಡುವಾ ! ನಿನ್ನ ತುದಿನಾಲಗೆಯನೀಕೂರ್ವಾಳಿನೀಗಳೆ ಸೌಳನೆ ಸೀೞ್ವೆಂ, ಗೞಪದಿರ್. ದಮನನೆಂಗುಂ :— ನಿನ್ನಂ ಪಂದಿಯೆಂದರಲ್ಲ ; ಪಂದಿಯೆಂದು ನುಡಿದರೊಳರೇ ! ಇಂತೀನುಡಿಗೆ ಪುಷ್ಕಲಂ ಕರಂ ಕನಲ್ದು ದೊಣೆಯಿಂ ನಂಜನುಗುಳ್ವ ಕವಲಂಬುಗಳನುರ್ಚಿ ಮೊಗೆದಿಸುತುಮಿರೆಯಿರೆ, ದಮನಂ ಎಡನಂ ಬಲನಂ ತಿರುಗಿಯುಂ ಸಾರ್ದುಂ ಪಡಿಸರಲಂ ಜೋಡಿಸಿಯುಂ ರಯ್ಯನೆ ಬರ್ಪ ಪಗೆಯ ಪೊಸಕಣೆಗಳಂ ಖಂಡಿಸಿಯುಂ ದೇವರ್ಕಳ್ ಪೊಗಳ್ವನ್ನಂ ಸಮದಂಡಿಯೊಳ್ ಪೊಣರ್ದಂ. ಕಟ್ಟಕಡೆಯೊಳ್ ಕೈಸೋಲ್ತು ಮೆಯ್ಗುಂದಿ ಬಸವೞಿದು ಮುಱಿಪೋದಂ.

ಮುದ್ದಣಂ—ಸಕಲಗುಣಸಂಪನ್ನೆ ! ಏಕಗುಣಹೀನೆ !

ಮನೋರಮೆ—ಅಬ್ಬಾ ! ಎನ್ನ ಗುಣದೊಳಾವುದೊ ಒಂದು ಹೀನಂ !

ಮುದ್ದ—ನಲ್ಗತೆಯುಂ ಪೇಳ್ವರ ಕಣ್ಗೆ ಕಟ್ಟಿದಿರೊಳ್ ಪುರುಳನಱಿಯದ ಗಾಮ್ಪಿನ ಕಾಡವರಂತಿರೆ ನಿದ್ದೆಯ ಬಿಣ್ಪಿಂ ತೂಂಕಡಿಪ ನಿನತೊಂದು ಗುಣಂ ಹೀನಂ !

ಮನೋ—ತೂಂಕಡಿಸದೇವೆನೊ? ಕಿವಿಗಳ್ಗೆ ಪುರುಳಮರದ ಗುರ್ದಿನಾಟದ ಬಱುರಗಳೆಯ ನಿಡುಗತೆಗೆ.

ಮುದ್ದ—ನಿನಗೇಂ ವೀರರಸಂ ಮೆಚ್ಚದೆ ?

ಮನೋ—ಮೆಚ್ಚುಮುಚ್ಚನಜಾಯೆಂ. ಎರ್ದೆವುಗುವ ಪೊಚ್ಚ ಪೊಸನಲ್ಗತೆಗಳನೆ ಮೆಚ್ಚುವೆಂ.

ಮುದ್ದ—ಉಂ ! ಪೋಕೆ. ಮುಂತೆ ಮುಂತೆ ಚೆಲ್ವಿನ ಬಲ್ಸೊಗಸಿನಯೆ ನಲ್ಗತೆಗಳ್.

ಇಂತು ಸುಬಾಹುಜಂ ಪುಷ್ಕಲನೊಂದು ಬಾಣಹತಿಗಳವಟ್ಟಿದು ಮೆಯ್ಮರೆಯಲೊಡಮಾಗಳ್ ತಳ್ವದೊರ್ವನೋಲೆಕಾಱಂ ತಳರ್ದು ಪುರಕೆಯ್ತಂದು ಸೋದರಂಬೆರಸೊಡ್ಡೋಲಗಂಗೊಟ್ಟಿರ್ಪ ತಮ್ಮಾಳ್ದಂಗೆ ನೊಟ್ಟಿ—ಕಾವ ದೇವರೀಗಳೆ ಕೊಳುಗುಳಕ್ಕೆ ಪೊಱಮಡಲಕ್ಕುಂ. ಅರಿರಾಯರೊಳೆಮ್ಮ ಚಿಕ್ಕರಸನಿಂದು ನಿಂದು ಕಾದಿ ಮೆಯ್ಸೋಲ್ತಂ. ಇಂತಿದೆ ಕಜ್ಜದುಜ್ಜುಗದೊಂದು ಬಿನ್ನಪಂ ಬಿನ್ನಪಮೆಂದು ಕೇಳಿಪುದುಂ, ಸುಭುಜಂ ಕಿಕ್ಕಿಱಿದೆಟ್ಟು ತೂಗುಂದೊಟ್ಟಿಲೊಂದು ಪಾಂಗಿನಿಂ ಬಗೆಮನಮುಱುಕದ ಗಂಡಗರ್ವದಿರ್ದೆಸೆಮೂಲೆಗಳೊಳಮುಯ್ಯಲಾಡೆ ತನ್ನೊಂಡಾಯುತಿಯಿಂ ತಱಿಸಂದು ಸಂಗರಕ್ಕೆಂದು ಪೊಱಅಡಿಯಿಕ್ಕೆ ಮಿಕ್ಕಿನ ಸೇನೆ ನಡೆದು ಬರ್ಪಂತು ರಣದುಂದುಭಿಯುಂ ಮೊಳಗಿಸಿದಂ. ಆ ವೇಳೆಗೆ ಅಂಬಿಗರ ಸಬಳಿಗರ ಕೊಂತಗಾಱರ ಹರಿಕೆಗಾಱರ ಕೈದುಗಾಱರ ಪಡೆವೆರಸು ಪಡೆವಳ್ಳರ್ ರಾವುತ್ತರ್ ಸಾದಿಗಳ್ ತೇರಾಳ್ಗಳ್ ದಂಡೆತ್ತಿ ಪೋದರ್. ಅವರಂ ಬೞಿಯಿಸಿ ಚಿತ್ರ ಚಿತ್ರಾಂಗ ಸುಕೇತುಗಳ್ ಮುಂತಪ್ಪ ಸಂದ ಮಹಾರಥರುಮತಿರಥರುಂ ಜೋದರುಂ ನಿಚ್ಚದ ಕಾಪಿನ ಬಂಟರನುಟ್ಟಿದು ಪಡಿಬಲಮುಂ ಕೂಡಿ ತೆರಳ್ದರ್. ರಾಯನುಂ ಬೆಂಬಲಂಗೊಂಡು ರಥಮನಡರ್ದು ತಳರ್ದಂ.

ಅಂತು— ಇಟ್ಟೆತ್ತಿರ್ಪ ಸೊವಡುಗುವ ದಾನಧಾರೆಯು, ಪನಿತು ಮೊಟಂಗಾಲೊಳ್ ಕಾಲ್ವರಿವ ನೊರೆಯು, ತಲೆಯೊಳೊಟ್ಟಿದ ಮಣ್ಣು, ಪೊಸತೊಂದು ಮಾಟಕ್ಕಿಯಿಂ ಬೆನ್ನ ಜಿಂಜೆಯು, ಪಕ್ಕೆಯ ಗುಬಿದ, ಕೋಡ ಕೀರ್ತಿಮುಖದ ಕೊರಲ ಕಿಱುಗಂಟೆಯು, ಕಾಲ ಗಗ್ಗರಗೆಜ್ಜೆಯು, ನೊಸಲ ಜಂಟೆಚೌರಿಯು, ಕೆಯ್ಯ ಇಟ್ಟೆಯ ಸಿಂಗರದ, ನೆಲವೆಟ್ಟುಗಳೊಟ್ಟಜದಂತೆ ಮುಗಿಲ್ಕೊಡ್ಡಿನ ದಡ್ಡಿಯಂತೆ ಜವನಾಳ್ಗಳ ಜಂಗುಳಿಯಂತೆ ನಡೆವ ಕಾರೊಡಲ ಪೇರಾನೆಗಳ—ಮತ್ತಂ ಮಿಂಚಿನ ವೇಗದಂತೆ ಸಿಡಿವ ಸಿಡಿಲಂತೆ ಕಡಲ ತೆರೆಯೊಟ್ಟಿನಂತೆ ಬೆಳಗಿನ ಪರ್ಬುಗೆ

ಯುಂತೆ ಮೀಱು ಧೀಂಕಿಡುವ ಪೊನ್ನಕಡಿಯಾಣದ ಸಮ್ಮ್ರದವಾಗೆಯುದ ರನ್ನದ ಪಲ್ಲಣದ ಸೊಗಸಿನ ತುರಗದೞದ—ಮತ್ತಂ ಎತ್ತಿದ ನೊಗದ ಸುತ್ತುವ ಗಾಲಿಯ ಬಿಗಿದಚ್ಚಿನ ನಿಂದ ಪಾಪೆಯ ನೆಮ್ಮಿದರಗೀಲ ಸಮ ಕಟ್ಟಿದೀಸಿನ ಗಟ್ಟಿಸಿದ ಮೊಗಪಾಡದ ಬೆಟ್ಟಿದ ಕೀಲ ಕಟ್ಟಿದ ಕುದುರೆಯ ನಟ್ಟ ಪೞಿಯುಗೆಯ ತೇರ್ಗಳ ಮೊತ್ತದ—ಮತ್ತಂ ಮಾರಿಯೊಳ್ ಪೋರ್ವ ಮಸಣಿಯೊಳ್ ಗಸಣಿಗೆಯ್ವ ಜನಸಂ ಜವಗಿಡಿಸುವ ಕುೞಿಕನಂ ಗುೞಿಗೆ ಗಟ್ಟುವ ಪೆರ್ಕಳದ ಕಾಲಾಳ್ಗಳ ಪಡೆಯ—ಮತ್ತಂ ಖಳಿಲೆಯ ಕಾಯ್ಪ ನೇಡಿಸುವ, ಬಲ್ಸಿಂಗನ ಮುಂಗುಡಿಯ ಜರ್ವನಣಕಿಸುವ, ಪಲ್ಲವ ಱಯ ಚಲ್ಲದ ಸೊರ್ಕನಿೞಿಕೆಯ್ವ, ಬೀರದ ಜೋದರ ದೞವುೞಿದಿಂ ಸೇನೆ ಗೞಿಗೆಗೞಿಗೆಗೆ ಮುಂದೊತ್ತಿ ಕಡಲ್ಗೆ ಪಡಿಗಡಲ್ ಕೆಯ್ಯೆತ್ತಿ ನಡೆ ವಂತು ನಡೆದು ಮುಗಿಲ್ ಮುಗಿಲಂ ತಾಗಿದಂತೆ ಬೆಟ್ಟು ಬೆಟ್ಟವ ನಿದಿರ್ಚಿದಂತೆ ತಾಗಿ ನಿಲ್ವುದುಂ ;

ಮೊದಲ ರಣರಂಗದೊಳ್ ಪಗೆಯ ಕೋಲ ಪೊಯ್ಗೆ ಬಸವೞಿದು ಮುಚ್ಚಿಗೆ ಸಂದ ದಮನನೞಿದುೞಿದ ಮೆಯ್ಗಾಪಿನ ತುೞಿಲಾಳ್ಗಳ ಕೃತ್ರ್ಯೋಪಚಾರದತ್ತಿಣಿಂ ಮೆಯ್ವೞಿದೆತ್ತಂ ದಿಟ್ಟಿಸುವ ಭರದೊಳ್ ಇದಿರ್ಗೆ ಬಂದ ತನ್ನಯ್ಯನ ಬೆಂಬಲದ ಸೇನೆಯುಂ ಕಂಡು ತಾನವಱೊಳೊಂದಿದಂ. ಮತ್ತಮಿಂತಳನಾಂತ ಕುವರನೊಂದಿರಕ್ಕೆ ಮೆಯ್ವೆರ್ಚಿ ಸುಭುಜಂ ಪಗೆ ರಾಯುರಂ ಕೊಲ್ವೆನೆಂಬಾಸೆಯಿಂ ಬಾಸೆಗೊಟ್ಟು, ತನ್ನ ಪಡೆಯುಂ ಕೊಂಚೆ ಗಟ್ಟಿನ ಕೋಂಟೆಯುಂ ಸಮೆದು, ಮೊಗದೊಳನುಜಸುಕೇತುವಂ ಕೊರ ಲೆಡೆಯೊಳ್ ಚಿತ್ರಾಂಗನಂ ಪಕ್ಕಂಗಳೊಳ್ ಚಿತ್ರದಮನರನಿರಿಸಿ ತಾಂ ಬಾಲದೊಳ್ ನಿಂದು ಒಡಲೊಳ್ ಮಿಕ್ಕ ಜೋದರಂ ತುಂಬಿ ಯುದ್ಧ ಸನ್ನದ್ಧನಾದಂ.

ಅತ್ತಲ್ ಮಱುವಕ್ಕಮಿಂತೇರ್ಪಟ್ಟ ಪವಣ ಪೊಸಗೆಯ್ಮೆಯುಂ ದಿ ಟ್ಟಿಪುದುಂ ಕಲಿಯಾಗಿ ಪೆಟ್ಟುವೆರ್ಚಿ ಬೊಬ್ಬಿಱಿದು ದೊಣೆಯುಂ ಕಣೆ ಯುನಣಿಗೆಯ್ದುಂ ಕೆಯ್ಯ ತೆಳ್ವಾಳಂ ಮಸೆದುಂ ಬಿಲ್ಲ ಹೆದೆಯುಂ ಪೊಸೆದುಂ ದಿಟ್ಟಮಾಯ್ತು.

ಅಪ್ಪೊೞ್ತಿಂಗೆ ಶತ್ರುಹಂ ಮಂತ್ರಿಯುಂ—ಅಯ್ಯ, ಎಮ್ಮಾ ಕುದುರೆ ಯುಂ ಸೆಱಿವಿಡಿದಿನ್ನೆಬರಮೆಮ್ಮೊಡನೆ ಕೆಯ್ಗೆಯ್ದ ಕಲಿಯಾವನೀಗಳ್

ಬಲ್ಪಿಡೆವೆರಸು ಬಂದಿದಿರ್ಚುವನಾವನಾವ ನಾಡಿದು ? ಏನೆಮ್ಮೊಳ್ ಕಾದ ಲಾರ್ಪನೆ ? ಪೇಟ್—ಎಂದು ಕೇಳಲೊಡಂ, ಸುಮತಿ—ಇದೆ ತೋ ರ್ಪುದು ಚಕ್ರಾಂಕಪುರವರಮಿರಾರಾಯನಾನಾಡೊಡೆಯಂ. ಮೊನೆಯ ಮೊದಲೊಳ್ ತನಯನಳವಟ್ಟುದನೆಂದಱಿತು ಎಮ್ಮೊಳೆತ್ತಿ ಬಂದಿರ್ಪಂ. ಕಡುಗಲಿ ದಲಿವಂ. ಕಾದಿ ಗೆಲ್ವೊಡೆಮ್ಮಿನಸದಳಂ. ಈತನೊಳ್ ಕಾ ದುವ ಬೀರನಾವನೊ ? ಎಂದು ಸೇನೆ ಬೆಱಗುವಡೆ ನುಡಿದಂ. ಆ ನುಡಿಯಂ ಮಾಂಕರಿಸಿ ಲಕ್ಷ್ಮೀನಿಧಿ ತಾಂ ಕೆಯ್ವೊಯ್ದು ಏತಱ ಪೊಳ್ಳು ರಾಯಂ. ಎನ್ನೊಂದು ಸೂಟಿಯ ಗಜೆಯ ಬಡಿಗೆಡೆಗಿಡದೇಂ ಪೋ ಕುಂ ? ಸಂತಂ ನೋಟ್ಪುದೆನ್ನೊಂದು ಕೆಯ್ಚಳಕಮನೆಂದು ಪಸ್ನತಿಕೆಯ ಗಂಡಗರ್ವದಿಂ ಸುರ್ಗಿ ನೋಳ್ಪುಱುಮೊಗನಂತಿರೆ ಕೊಂಚೆಗೋಂಟೆಯುತ್ತ ಣ್ಗೆತ್ತಿ ನಡೆವುದುಂ, ಬೆಂಬಟ್ಟಿಯ ಕಾಲಾಳ ದಟ್ಟ ವ್ಯೂಹವಂ ಮುತ್ತಿ ದುದು. ಅಂತು ಮುತ್ತಿಯುಂ ಕೊಪ್ಪರಿಸಿಯುಂ ಸಾರ್ದುಂ ಸೇರ್ದುಂ ಕಾಲಾಳ್ಗಳ್ ಕಾಲಾಳ್ಗಳಂ ತೇರಾಳ್ಗಳ್ ತೇರಾಳ್ಗಳಂ ಗೋಟಾಯ್ತರ್ ಗೋಟಾಯ್ತರಂ ಸಾದಿಗಳ್ ಸಾದಿಗಳನಿದಿರ್ಚಿ ಕಾದುತಿರಲೊಡಮಾ ಗಳ್ ಪಡೆಗೋಂಟೆಯ ಬಾಗಿಲೊಳೆ ತನ್ನಾಯತಿಯಿಂ ನೂಂಕಿ ನಡೆವ ಲಕ್ಷ್ಮೀನಿಧಿಯಂ ತಡೆದು ಸುಕೇತು ಗದಱಿ—ನಿಲ್ನಿಲ್ ! ಜವ ಹುರದ ಪೆರ್ವಾಗಿಲಂ ಪುಗುತರ್ಪಂತಿರೆ ಬರ್ಪಟ್ಟಬೀರ ! ನೀನಾರವಂ ? ಎಂದು ಜರ್ಿದುಂ. ಅದರ್ಕೆ ಸೀತಾವರಜಂ ಆನಾಱುವನಲ್ತು ಜವ ನೆರ್ವೆವೋರಿಯುವಂ, ನಿನ್ನನುಯ್ವೊಡೆಂದೆ ಬಂದನೆಂದಂ. ಆ ನುಡಿಗೆ ಸುಕೇತು ಕಿಸುಗಣ್ಣೆ ಗಜೆಗೊಂಡು ತನ್ನಾತೇರಿನೆಳೆಗೆ ಧಿಮ್ಮನೆ ಧುಮ್ಮಿಕ್ಕಿ ಮಾಱಾಂತ ಬಲ್ಲಾಳ್ತನದ ಬಂಟನನೊತ್ತಿ—ಅಂತವ್ವೊಡಿನಿತೊಂದು ಬಡಿ ಯನಾನುಂ ಕೊಂಡುಯ್ದು ಪೋಗೆಂದು ಮೋದುವನಿತೊಂದು ಬೇಗದಿಂ ಜನಕಜಂ ಕುಳಿರ್ತು ಪಗೆಯ ಬಡಿಗೆ ತಪ್ಪಿ ತನ್ನ ಗಜೆಯಿಂದೆ ಮೊಟ ಕಾಲ ಕೀಲನಿಟ್ಟಂ. ಒಡನೆಯೆ ಸುಧ್ವಜನುಂ ಪಿಂಜರಿದರಿಯ ಕೆಯ್ಯಂ ಕುಟ್ಟಿದಂ. ಮತ್ತಮಿರ್ವರುಮೆಟ್ಟು ಗದೆಗಳಂ ತಿರಿಪುತೆ ಜಡಿದುಂ ಬಡಿದುಂ ಪಿಡಿದುಂ ಪೊಣರ್ದರ್.

ಇಂತು ಮುಂದೆಸೆಯೊಳ್ ಪೊಣರುತಿರೆಯಿರೆ ಪಕ್ಕದೊಳ್ ಕಟ್ಟನೆ ಪುಷ್ಕಲಂ ಕುದುರೆಗಳಂ ಚಪ್ಪರಿಸಿ ಪೊಂದೇರಂ ಮುಂತೆ ನಡೆಯಿಸಿ ಮ

ಲೆವ ಜೋದರಂ ತತ್ತಱದಱಿದು ತಾನುಂ ತನ್ನನೊಲ್ದ ಬೀರಸಿರಿಯುಂ ಬೀದಿವರಿದು ಸುರ್ಗಿವರ್ಪನ್ನೆಗಂ ಚಿತ್ರಂ ಹೂಟೆಯ ಬೆಳ್ಗುದುರೆಯ ತನ್ನ ರನ್ನದೇರಂ ನೂಂಕಿ ಕೋಲ ಹಂದರಮನೊಡ್ಡಿ—ಎಲೆಲೆ! ಇದೇನೆತ್ತಣ್ಕೆ ಪೋಗು. ನಿಲ್ ನಿಲ್ಲೆಂದು ತಡೆದಂ. ಈನುಡಿಗೆ ಪಡಿನುಡಿಯೊಳಿ—ಕೇಳಿಲೆ! ಎಮ್ಮುತ್ತಶ್ವಮಿರ್ಪತ್ತಣ್ಗೆಮ್ಮ ಪೋಕು ಕಣಾ! ಇಂತೆಮ್ಮ ಪೋಗಂ ಬರವಂ ಕೇಳ್ವ ಪೇೞ್ವ ನೀನಾರ್ಗಾರೊಳ್ ಪೇೞೆಂದು ಕೋಲ ಮುಸುಂಕಂ ಪರಿಹರಿಸುತೆಂದಂ. ಚಿತ್ರನೆಂಗುಂ :—ಕೇಳ್ವೊಡೆ ಕೇಳ್. ಈನೆಲದೊಳ್ ಸಂದ ಬೀರರ ಲೆಕ್ಕಕ್ಕೆ ದತ್ತಕನಿಷ್ಠಿಕನಾಗಿ ಅಲರ್ವೊಡೆಯನಡಿಮಲರ ಬಂಡುಣಿಯೆಂಬೊಂದು ಬಿರುದಂ ತಾಳ್ದಿ ಬಾೞ್ವ ಚಕ್ರಾಂಕಪುರದರಸಂಗೆ ಸುಭುಜಂಗೆ ಪುತ್ರಂ ಚಿತ್ರಂ ಕಿಱಿಯಂ, ನೀನೇಂ? ಭಾರತಿಯೆಂಗುಂ— ಇದು ಚಿತ್ರಂ! ನೀಂ ಸುಬಾಹುಜಂ ಬಾಹುಜರನೆಮ್ಮಂ ತಡೆವುದು. ಅಂತದಱಿಂ ನಿರ್ನೆರಂ ಕಡುಕೆಯ್ದು ಕಾೞ್ಕಿಡದೆ ಸೋದರರೊಂದು ಬಗೆಯ ನಂಟಂ ಮಖಾಶ್ವಮುಂ ಬಿಟ್ಟು ಕಟ್ಟಿಱಿಕದಿನೆಮ್ಮೊಳ್ ಪುದುವಾೞ್. ಚಿತ್ರಾಖ್ಯನೆಂಗುಂ— ಎಲೆ ಅಣ್ಣಂಗಳಿರಾ! ಏಮಾತೊ! ಚಲದಿಂ ಬಲದಿಂ ಕಟ್ಟಿದ ಕುದುರೆಯಂ ಮೊನೆಯೆಡೆಯೊಳ್ ಕೊಟ್ಟು ಕೆಮ್ಮನೆ ಮಾಣ್ಬ ರಾಯರ್ ಪಂದೆಗಳಾಗರೆ! ಅಂತು ಬೇೞ್ಪ ರಾಯರ್ ಬೀರರೇಂ? ದಾನಮುಂ ಪಾರ್ವ ಪಾರ್ವರಾಗರೆ? ನಂಟುಂ ಬಂಟುಂ ನೆರಮಿರ್ಪಿನಂ ಗೆಲ್ವುದುಮೊಲ್ವುದುಂ ನಿಮಗಕ್ಕುಂ. ಪುಷ್ಕಲನೆಂಗುಂ—ಬಲ್ಲರ್ ನಯಮಂ ಕೇಳರೆ! ಬಡರಾಯುಗುವರ! ನಿನಗೆಮ್ಮೊಳ್ ಕಾದುವೊಂದು ಬೆಸನಮೇಕೊ! ಪೆರ್ಮೆಯಿನಾಗಳೆಮ್ಮಂ ತಾಗಿದ ನಿನ್ನಣ್ಣನೇನಾದನೆಂದು ಬಗೆಯದೆ ಕುದುರೆಯೊಂದು ದೂಸಱಿಂ ಬಂದು ಸಾಯಲಿರ್ಪ ನೀಂ ಮರುಳರಾಗಿರೆ! ಚಿತ್ರನೆಂಗುಂ— ಮರುಳರೆನಲ್ಕಾಂ ನಾಡನುೞಿದು ಕಾಡಂ ಪೊಕ್ಕು ತೊೞಲುತುಮಿರ್ದವೆ? ಪುಷ್ಕಲಂ ಕೆರಳ್ದೆಂಗುಂ— ತಾಂ ಪೊಡಸು ನುಡಿ ಬಿಱುಸು ಗಡ! ಅಯ್ಯನ ನನ್ನಿಗೆಂದು ಕಾಡಂ ಪೊಕ್ಕ ಶ್ರೀರಾಮನಂ ಹಗರಣಂಗೆಯ್ವಾ! ನಿಮ್ಮವರಪ್ಪ ಕಾಲುರಿಚರಾಯರ್ ಕ್ಷಾತ್ರಧರ್ಮಂಗಳನೆತ್ತಣಿನಱಿವರ್. ಚಿತ್ರನೆಂಗುಂ— ಕ್ಷಾತ್ರಧರ್ಮಮನಱಿಯದಾದೊಂದು ಕೊಱತೆಯಿನಱಂಗೆಟ್ಟೆಮ್ಮವರಾವ ಕಲಿಯುಂ ಗನ್ನಗತಕ

ದಿಂ ಮುನ್ನಂ ಕೊಂದರುಂಟು ಪೇೞ. ಪುಷ್ಕಲನೆಂಗುಂ— ಕಟ್ಟಣಕದ ನುಡಿಗಾಱ! ಅಡಿಗಡಿಗೇಂ ಜಱುಚುವಯ್. ನಂಬಿದನಂ ಪೊರೆ ವೊಂದು ಕತದಿಂ ಲೀಲೆಗೆಂತಂತು ವಾಲಿಯಂ ಶ್ರೀರಘುರಾಮಂ ಕೊಂದ ನಕ್ಕುಂ. ನಿಮ್ಮನ್ನರಪ್ಪ ಕ್ಷೀಣಬಲರ್ಗೆ ಇಂತೊಂದು ಗೆಯ್ಮೆ ನಾಣ್ಗೆಟ್ಟ ಕೆಯ್ಮೆಸಕದೆಸಕಮಾಗಿ ಪರಿಣಮಿಸಿರ್ಕುಂ. ಚಿತ್ರನೆಂಗುಂ— ನಿರ್ನೆರ ಮೆಮ್ಮಂ ಪೞುವ ಬಲ್ಮೆಯಿದೇಂ? ಎಮ್ಮನ್ನರಪ್ಪಕ್ಷೀಣಬಲರೊಳಾ ರಾನುಂ ಮುತಿಗೆಟ್ಟು ತಾಂ ತನ್ನ ಕೆಯ್ವಿಡಿದ ಪಡದಿಯಂ ಪೆಱವರ್ಗೆ ಮಾಱುಗೊಟ್ಟರಂ ನೀಂ ಕಂಡು ಕೇಳ್ದುದುಂಟೆ! ಪುಷ್ಕಲಂ ಕಿನಿಸಿ ನೆಂಗುಂ— ಎಲೆಲೆ! ಬಾಯಂ ಮುಚ್ಚು ಮುಚ್ಚು! ಅಲ್ಲದೊಡೀ ಗಳ್ ಯಥೇಷ್ಟಂ ಗೞಪುವ ನಿನ್ನ ಕುಡಿನಾಲಗೆಯಂ ಸೌಳನೆ ಸೀಳ್ದು ಕುನ್ನಿಗಿಕ್ಕುವೆಂ. ಆನುಡಿಗೆ ಚಿತ್ರಂ ಕನಲ್ದು ಅಂತಿರೆನ್ನ ನುಡಿಯಂ ಲಾಲಿಸಿ ಪೊಲೆಯಾದ ನಿನ್ನ ಕೊಡಂಕೆಗಳ ಬಿಚ್ಚಬಿಸುಗೆಯಂ ಕೞಲು ವೆನೆಂದು ಮಾರ್ಗಣಂಗಳಂ ಜೋಡಿಸಿದಂ. ಇಂತುಮಾಗಲೊಡ ಮೆಚ್ಚ ಮಾರ್ಗಣಂಗಳಂ ಮಾರ್ಗಣೆಗಳಿಂ ತುಂಡಿಸಿಯುಂ ಭ್ರಾಮ ಕಾಸ್ತ್ರಂಗಳಂ ಸಂಧಿಸಿಯುಂ ಕಡುಕೆಯ್ವ ಪುಷ್ಕಲನೊಳ್ ಚಿತ್ರಂ ಚಿತ್ರ ತರಮಾಗೆ ಕೆಯ್ಗೆಯ್ಯುತಿರ್ದಂ.

ಈ ಮಾೞ್ಕೆಯಿನಾಜಿಯೊಳೋರೊಂದೆಡೆಯೊಳಿಱಿತದಿಸುಗೆಯು ಪೊಯ್ಯ ಬಡಿತದ ಕಡಿತದ ನುರ್ಗುನೂಂಕಿನ ಹಾಣಾಹಾಣಿಯು ಕೇಶಾ ಕೇಶಿಯು ಜುದ್ದಂ ಪೆರ್ಚಿರೆಯಿರೆ, ಎತ್ತಂ ಕಡಿಕಂಡದ ರುಂಡದ ಮುಂಡದ ತಂಡಮಾಯ್ತು. ಪೆಣನ ಬಣಂಬೆಯನಡರ್ದು ಬಿಸುನೆತ್ತರ ಕಾಲಸಿೞದು ಕಡಿಯೆಲ್ಲಗೊಗ್ಗಂ ಕುರ್ಕಿ ಪಂದೊವಲಂ ಬಾರ್ದುಂ ಸಾರ್ದುಂ ನಲಿವ ಕಾಗೆಗೂಗೆಗಳುಂ, ದಂಡೆಗರುಳನುಂಡು ಬಸಬಸನೆ ಸುರಿವ ಬಸೆಯು ಪೊಸಬಸೆಯಂ ಕುಡಿದೊಳ್ಪಿ ಬಗುಳ್ವ ನರಿನಾಯ್ಗಳುಂ ಪಗಲುಮಿರುಳುಂ ಕಾವಲಿರ್ದುವು. ಇಂತಾಕೆವಾಳರ ಬೀರಮುಟ್ಟಾಡೆ, ಸೊರ್ಕು ಸೋಱಿ, ಅಳವೊಳನಾಱಿ, ಚಲಂ ನೆಲಗಿಡೆ, ಬಲಂ ಬಯಲ್ಪುಗೆ, ಕೊಂಚೆ ಗೋಂಟೆ ದೂಳಿಗೋಂಟೆಯುಪ್ಪುದುಂ; ಸುಭುಜಂ ಬೆನ್ನ ಮುಂದೆಸೆ ಯೊಳ್ ಕಟ್ಟುಬ್ಬಟೆಯ ಕಾದಾಳ್ಗಳ್ ಬೆರಸಂಕೆಯಿಂ ಬೀದಿವರಿದು ನುರ್ಗಿವರ್ಪ ಸೌಮಿತ್ರಿಯಂ ನೆಟ್ಟನೆ ಕಂಡು ಕಡೆಗಾಲದ ಸಿಡಿಲ ಕಡು

ಕಾಯ್ಪಿಂ ಮಸಮಸಗಿ ಜರ್ವಿ ಜಂಕಿಸಿ ಕಱುತ್ತೆಱಗಿ ಮುಂಬರಿವ ಸೂೞಿಗಾಱನಂ ಶಕ್ತ್ಯಾಯುಧದಿನಿಟ್ಟಂ. ಆವೇಳೆಯೊಳ್ ಶತ್ರುಹಂಗೆ ಬೆನ್ನೊಳೆ ಹೊಂಚುವ ಸಂಚುವೆತ್ತಣಾವಂ ತನ್ನೊಡೆಯನಂ ಪಿಂದುೞಿಪಿ ತಾಂ ಮುಂಜರಿದು ರಥಿಕನಸಿದಿರ್ಚಿ ಪೊಯ್ವ ಶಕ್ತಿಯಂ ತುಡುಕಿ ಪುಡಿಗುಟ್ಟಿದಿಂಬೞಿಯಂ ಸುಬಾಹು ಹನೂಮಂತನೊಳ್ ನಿಂದು—ಕೆಲಸಾರೆಲೆ ಪಾೞಿಮೃಗದ ಮುದುಗೋಡಗ! ಬಯಲ್ಗೆ ಬಂದ ಕಿತ್ತಿಲಿಯನೞಿಯಟ್ಟುವ ದಿಟ್ಟದ ಗೊತ್ತಿನ ಕೊತ್ತಿಗೆ ತಡೆಯ ಹಡಲಗೆಯೇಂ ಬಲ್ವೆಟ್ಟೆ! ಮೇಣುಂ ಮೆಯ್ಗರೆವಕ್ಕಿನ ತಲೆ ದಕ್ಕುಂದಲೆಯೇ! ಇರ್ಕೆ; ತಡೆದ ನಿನ್ನ ನಡಂಗಿದ ರಾಯನಂ ಸದೆದು ಸಮಂತು ದೆಸೆವಲಿಗುಡುವೊಂದು ಬೆಡಂಗಂ ನೀಂ ಮಿಟ್ಟುವಿನರಮನೆಯ ಮೊಗಸಾಲೆಯೊಳಿರ್ದು ಕಾಣಲಕ್ಕುಮೆನುತುಂ ಬಲ್ಗಣೆಗಳಿಂ ವಾಯುಜನಂ ನೋಯಿಸಿದಂ. ಆಗಳ್ ಕೋಲ ಪೊಯ್ಲ ನಣುವನಣುವಂ ಬಗೆದು ಸುಭುಜಂಗೆ—ಕೊಲ್ವರ್ ನೀಮುಂಟು ಸಾವರಾಮುಂಟು. ಹಯಮಂ ಬಿಡಿಸಿ ಕೊಂಡುಯ್ವ ದೊರೆ ಬೇೞಿಯುಂಟು. ಅಕ್ಕುಬೆಕ್ಕುಗಳೊಂದು ಗೊಡವೆಯೆಮಗೇಕೆ? ಆದೊಡಂ ಕಾದ ಮುದುಮಂಕಡನೊಂದು ಕೆಯ್ಚಳಕಮಂ ಪರಿಕಿಪುದೆಂದು ತನ್ನಡಿಯಿನೆರ್ದೆಯನೊದೆದಂ. ಏನೆಂಬೆನಾರಾಯಂ ವೀರನೊಂದು ಪದಹತಿಗೆರ್ದೆವಡಿಪವ್ವನೆ ಪಾಱಿದಂತಾಗೆ ಕಟ್ಟಾಯಸದಿಂ ನೊಂದು ದಿಮ್ಮನೆ ತಿರೆಯೊಳ್ ಮುಚ್ಚಿಗೊಂಡಂ. ಪಡೆಯೊಳೆ ಗಲಬೆಯೆತ್ತಂ ಪೆರ್ಚಿದುದು. ಕಟ್ಟಿನ ಕೋಂಟೆಯುಂ ತೆಗೆದು ನಾಯಕರುಂ ಜೋದರುಂ ಮನಂನೊಂದು ರಾಯನೆಡೆಯೊಳ್ ನೆರೆದುಪಚರಿಸುತಿರ್ದರ್.

ಎನ್ನ ಜೀವಿತೇಶ್ವರೀ! ಇಂತಪ್ಪುದುಮಾಗಳ್ ವಾಯುಪುತ್ರನ ಪದಹತಿಗೆ ಗಾಱುಗೆಟ್ಟು ನಿಟ್ಟವೋದ ಸುಭುಜಂ ಕನಸಿನೊಳ್ ಶ್ರೀರಾಘವಂ ಮೆಯ್ದೋಱಿದುದಂ ಕಂಡನಪ್ಪುದುಂ, ತನ್ನೊಳ್ ತಱಿಸಂದ ನಿಚ್ಚಟದ ಬಕುತಿಯಿಂ ನೆನೆನೆನೆದು, "ಜಗದೊಡೆಯಂಗೆ ಗೆಲವಕ್ಕೆ! ಗೆಲವಕ್ಕೆ! ನಿಚ್ಚ ಸೊಗದ ಗಂಡುವರಿಜಂಗೆ ಗೆಲವಕ್ಕೆ! ಮಾಲಕುಮಿಯರಸಂಗೆ ಮೇಲಕ್ಕೆ! ಅಜನಯ್ಯಂಗೆ ಮೇಲಕ್ಕೆ! ಅಜನ ಮುಮ್ಮಗಂಗೆ ಮೇಲಕ್ಕೆ! ನೀನೆ ಎನ್ನೊಡೆಯಂ, ಎನ್ನ ಕಾವ ದೇವಂ! ಎಲೆ ಮಾಯಗಾಱ! ಲೋಕದ ಮಂಕುಮಾಯೆಗೊಳಗಾಗಿ ಇಂತೊಂದು

ಪೊಲ್ಲದ ಕಜ್ಜಮನೊಡರ್ಚಿದೆಂ. ಅಂದು ಮುನಿಯೊಳ್ ನಿನ್ನಂ ಪ
ದೆಂ. ನಿನ್ನಿದಿರೊಳೆನಗಾವ ಚಲಮಾವ ಬಿಂಕಮಾವುದರಸುತನಂ? ನಿನ
ರಂ ಕಾದಿದೆಂ, ತಪ್ಪೊಪ್ಪುಗಳಂ ನಿನ್ನೊಳೊತ್ತೆಯೀವೆಂ, ಕಾಯಯ್
ಎನುತೆ ಕನವರಿಸುತುಂ, ಮತ್ತಂ ಚೇತರಿಸಿ ಅಱುವುಗೊಂಡು ಮ
ತಿರ್ಪ ಸೋದರನಂ ಕುವರನಂ ಮೊನೆಯಿಂ ಕೆಯ್ದೆಗೆವುದೆಂದು ನಿಯಮಿ
ಶತ್ರುಹಂಗಮಣುವಂಗಂ ಕೆಯ್ಮುಗಿದು—ನಿಮ್ಮತ್ತಣಿನಾಂ ಪಾವನ
ದೆಂ. ರಾಘವನ ಜನ್ನಗುದುರೆಯು ಬರವಿನಿಸದೊಂದು ನೆವದಿನೆನ್ನ ನಾಡ
ಬೀಡುಂ ಬಳಗಮುಂ ಮೇಲಾಯ್ತು. ಶ್ರೀರಾಮನಂ ಕಂಡ ಮೇ
ವುದೊ ತಾಂ ಪೊಳ್ಳಕ್ಕುಂ! ರಾಮಭಕ್ತರ್ಗೇಂ ಬಾರದೊ! ಇದೆ ಮ
ತುರಂಗಮುಮಿದೆ ಚತುರಂಗಸೇನೆ ಇದೆ ಭಂಡಾರಮಿದೆ ರಾಜ್ಯ
ಪಲವಿನೇನಿದೆ, ಸರ್ವಸ್ವಂ. ನಿಮ್ಮಡಿಗಳೊಲ್ಮೆಯನೊಂದನೆ ಬೇಡು
ನೆಂದು, ಮತ್ತಮಡಿಗೆಱಗಿದಂ. ಇಂತು ಮಣಿವ ಬೇಡುವ ರಾಯನ
ಕರುಣಿಸಿ ತನ್ನರ್ಧಾಸನದೊಳ್ ಕುಳ್ಳಿರಿಸಿ ಸುಭುಜನೊಳ್—ನೀಂ ಮ
ನ್ಯಂ, ನಿನ್ನನನುಗ್ರಹಿಸಲ್ಕೆಂದೆ ಶ್ರೀರಾಮಚಂದ್ರಮನೆಮ್ಮೊಳ್ ನಿಮ್ಮೊ
ಇಂತು ಕಾಳೆಗಮನೊಡ್ಡಿದನಕ್ಕುಂ — ಎಂದು ಸಂತಮಿಟ್ಟು ಲಾ
ಪಾಲಿಸಿ ಕಪ್ಪಮುಂ ಕಾಣ್ಕೆಯುಂ ಹಯಮುಮಂ ಕೊಂಡು ಪೊಱಮಟ್ಟ
ಸುಭುಜನುಂ ತನ್ನ ಚೊಚ್ಚಲ ಮಗಂಗೆ ಪಟ್ಟಮುಂ ಕಟ್ಟಿ ತಾನ
ಪಡೆವೆರಸು ಶತ್ರುಹಂಗೆ ಬೆಂಬಲನಾದಂ.

ಎಂಬಲ್ಲಿಗೆ ಶ್ರೀರಾಮಾಶ್ವಮೇಧದೊಳ್
ಸುಬಾಹುಯುದ್ಧಮೆಂಬ ಏಕಾದಶಾಶ್ವಾಸಂ ಸಂಪೂರ್ಣಂ.

---

## ದ್ವಾದಶಾಶ್ವಾಸಂ.

### — ತೇಜಃಪುರವರ್ಣನಂ —

ಮುದ್ದಣಂ—ಓ ಎನ್ನತ್ತೆಯ ಮಗಳೆ! ಮುತ್ತಿನ ಸೆಂಡೆ!

ಮನೋರಮೆ—(ಪುಸಿಯ ನಸುಮುನಿಸಿಂ) ಬಱಿವಱಿದೆ ಬಣ್ಣಿ
ಬಣ್ಣಿಸಿ ಕರೆಕರೆದು ಕರಕರಿಸದಿರ್; ಎನಗೆ ತಲೆ ನೋವುದು.

ಮು—ಅಂತದೇತಱನರಸಿ ?

ಮ—ಅಡಿಮುಡಿಯಿಲ್ಲದ ನಿನ್ನ ಕತೆಗೆ.

ಮು—ಆಃ ! ಎನ್ನ ಬಿತ್ತರದ ಬಣ್ಣನೆಯ ನಲ್ಗತೆಯೊಳೇನಡಿಮುಡಿಯ ಕೊಱತೆ ? ಸವಿಸ್ತರಂ ನಿರವಿಸಿದೆನಲ್ತೆ.

ಮ—ಎಂತೆಂತೊ ತೊಡಂಕಿ ಬೆದಂಕಿ ಪೇೞ್ದೊಡಾಯ್ತೆ ನಿಡುಗತೆಯ ನಿಱಿಗೆಯ ಕೂಟಂ ಕೇಳ್ವರ್ಗೆ ಮನಕ್ಕೆ ಬಾರದೊಡಕ್ಕುಮೆ ?

ಮು—ಇರಿರ್ ! ಆಂ ಬಿತ್ತರಿಸಿದ ನಲ್ಗತೆಯೊಳ್ ನಿಱಿಗೆಯ ಕೂಟಂ ಮೀಟೆನಿಸದುಂಟೆ ? ನೀನೆ ಪೇೞ್.

ಮ—ಸುಭುಜಭೂಭುಜಂ ತನ್ನಂ ಮುನ್ನಮೊರ್ವ ಮುನಿ ಪೊಯ್ದನೊ ಬಯ್ದನೊ ಎಂದು ಶತ್ರುಹನೊಳ್ ಗೊಣಗಿದನಲ್ತೆ.

ಮು—ಮುನಿ ಪೊಯ್ದನೆಂದಲ್ತು, ಬಯ್ದನೆಂದೆ ಪೇೞ್ದನಕ್ಕುಂ.

ಮ—ಏಕೊ ಪೇೞನೆ ? ·

ಮು—ಆನಱವೆನೆ, ಕತೆಯೊಳಿರ್ಕುಂ.

ಮ—ಅದನೆ ನಿರವಿಸು.

ಮು—ಓ ! ಓ ! ಇನಿತೊಂದು ವಿಷಯಮಂ ಪೇೞಿದುದಱಂ ಬೇಸಱಾಯ್ತು. ಈಗಳೆ ಬಿತ್ತರಿಸೆಂ. ಈಧರಣೀಮಂಡಲ........

ಮ—ಬಣ್ಣನೆಯ ಧರಣೀಮಂಡಲಂಗಳೇಕೆ ? ಒಂದುೞಿಯದಂತು ತಿರುಳನೆ ಕೂಡಿ ಪೇೞಿಯ್.

ಮು—ಆಯ್ತಾಯ್ತು. ಮುನ್ನಂ ಮುತ್ತ ದಿನಂಗಳೊಳೊರ್ವ ಸುಭುಜರಾಜಂ ಆದಿದೈವದಿರವನಱವೊಂದು ಬಯಕೆಯ ಬೆಮೆಯಿಂ ಪೊಱಮಟ್ಟು ಮುನಿಗಳೋರೊಂದೆಡೆಯ ಪುಣ್ಯಾಶ್ರಮಂಗಳೊಳ್ ತೊೞತೊೞಲ್ದಂ ಗಡ! ಅಂತು ಪೋಪೋಗುತುಂ ಮುಂತಿರ್ಪ ತಪೋವನದೊಳಸಿತಾಂಗನೆಂಬೊರ್ವನಂ ತವಸಿಯುಂ—ದೇವರ್ಕಳೊಳ್ ಪಿರಿಯನಾವನೆಂದು ಬೆಸಗೊಂಡಂ. ಆಗಳ್ ಮುನಿಪಂ—ಶ್ರೀರಾಮನೆ ಜಗದದೇವರ ಗಂಡನೆಂದು ಕುಱುಪಿಟ್ಟು ಪೇೞ್ದುದುಂ ; ರಾಯಂ—ಮಾನಸರೆಂತಂತು ಬಸಿಱಿಳ್ ಪುಟ್ಟಿಯುಂ, ಬವಣೆಗರೆಂತಂತು ಕಾಡಂ ತೊೞಲ್ದುಂ, ಪಾಪಿಗಳೆಂತಂತು ಬಲ್ಬನ್ನದೊಳ್ ತೊಡರ್ದುಂ, ಬಾೞ್ವ ರಾಮಂ ದೇವನೆ ! ಚೀಃ ! ಬಿಡುಬಿಡೀ ನಿನ್ನ ಗನ್ನಗತಕದ ನುಡಿಯಂ. ಅಂತು ರಾಮನನೊ

ಲ್ವೊಡೆ ನಿನ್ನಂತಿರಾಂ ಗಾಂಪನೆ? ಎಂದು ರಾಮನಂ ಮೇಣ್ ಮುನಿ ಯುಂ ತೆಗಟ್ದಂ. ಆನುಡಿಗೆ ಕರಂ ಕನಲ್ದು ಮುನಿಪಂ ರಾಮಭಕ್ತಿ ಯೊಳ್ ಬೆಂಗೊಟ್ಟೆರೆಂದು ಶಪಿಸಲೊಡಂ ಪೂರ್ವಸಂಚಿತದೊಂದಱಿವಿನೆ ಟ್ಟಱಿಂ ತನ್ನೊಂದು ಕುತ್ತಮಂ ಬಗೆದು ಮುನಿಗೆ ಕಾಲ್ಗೆಱಗಿ ತಪ್ಪಂ ಕ್ಷಮಿಸಿ ಕಾವುದೆಂದು ಬೇಡಿದಂ. ಆಗಳಸಿತಾಂಗಂ ರಾಯನಂ ಪಾಲಿ ಪೊಂದು ಭಾವದಿಂ-ಎಂದಿಂಗೆ ರಾಮಭಕ್ತಂ ನಿನ್ನಂ ಕಾಲಿನೊದೆವನಂದಿಂಗೆ ನಿನ್ನೊಳ್ ಭಕ್ತಿಯೊಗೆತರ್ಕೆ! ಎಂದು ತಿಳಿಪಿ ಕಳಿಪಿದಂ. ಇಂತೆಂದೆ ಸುಬಾಹು ಮುನಿಯ ಬಯ್ಗುಳನಾಗಳ್ ನೆನೆದು ಶತ್ರುಹಂಗೆ ತನ್ನಿರವಂ ಕೇಳಿಸಿದನಕ್ಕುಂ.

ಮನೋ—ಈಗಳಱಿತೆಂ. ಮುಂತಣ ಕತೆಯುನಱಿಯೆ ಪೇಳ್.

ಮುದ್ದು—ಎನ್ನ ಬಿತ್ತರದ ಚಿತ್ತರದ ಬೊಂಬೆ! ರಂಬೆ! ಈ ಪರಿ ಯೊಳ್ ಸುಮಿತ್ರಾಪುತ್ರಂ ಚಿತ್ರಚಿತ್ರಾಂಗದರಂ ಮಿತ್ರಭಾವದೊಳೊಪ್ಪು ಗೊಂಡುಂ, ಸುಭುಜಸುಧ್ವಜರೊಳೊಡಂಬಟ್ಟುಂ, ದಮನನಂ ಸಂತವಿ ಟ್ಟುಂ ಮುಂಬಟ್ಟು ಪಡೆವೆರಸು ಹಯದ ಬೆನ್ನೊಳೆ ನಡೆಯುತಿರೆಯಿರೆ;

ಬಟ್ಟೆಯೊಳ್ ಕರ್ನೆಲದೆ ಕೊರ್ವಿ ಬೆಳೆದ ಕರ್ವಿನ ತನಿರಸಕ್ಕೆ ಪೆರ್ಮರನ ಪಾಱುಗೊಂಬಿನೊಳ್ ಪೊಡೆಯ ತೆಳ್ಪೊಟಲೊಳೊತ್ತುಗಟ್ಟಿದ ಕಿಱುನೊಱನ ಸವಿಜೇನ ಸಜ್ಜಿನಿಂಬನಿಯುನೆೞಿದು ಪಾಲ್ಗೋಡಿನ ಜೋ ಲ್ಗೆಚ್ಚಲ ತೋರಮೊಲೆಯ ಎಳಗಂದಿ ಕರ್ದುಱುವಿನ ತೊೞಿದ ತಂಬಾ ಲಂ ಬೆರೆದು ಹನಿಸಿ ಕೊನೆನಾಲಗೆಯೊಸಱಿ ಬಾಯ್ಗೆನಿದಿನಿದಾಗೆ ಸವಿವ ಸ ವಿಯಂ ಲೋಗರಱಿವಂತು ಪೆಱತೊಂದು ಮಾಱಿಕ್ಕೆಯಿಂ ಮೂಗಿನುಣ್ಬಂ ತು ತುಂಬುವಂ ಪವನನೆನೆ—ಬಿಸಿಲ ಜಳಕ್ಕೆ ಬಾಡದೆ ಬೆಳ್ದಿಂಗಳ ಹಿಮಕ್ಕೆ ಕೋಡದೆ ಪಗಲೆನ್ನದೆ ಮರ್ಬೆನ್ನದಾಗಳಾಗಳುಳ್ಳಲರ್ದ ಕೊಳಡ ಬನದ ಬಿಱಿಮುಗುಳ ತನಿಗಂಪಂ, ಪಾವಡರದೆ ಪಕ್ಕಿ ಸೋಂಕದೆ ತುಕ್ಕುಡಿದ ಸೆಕ್ಕೆಯೊಡೆದ ಚನ್ದನದ್ರುಮಂಗಳ ನಱುಗಂಪಿನೊಳ್ ತೆತ್ತಿಸಿ, ಪಸು ರ್ಮಾಯದ ತಣ್ಪಾಱದ ಮೆಲ್ಪುಗುಂದದ ಮರುಗದ ದವನದ ಪೊಸಗಂಪಂ ಪತ್ತಿಸಿ, ಪೋಪ ಬರ್ಪ ಬಟ್ಟೆಗರ ಮೂಗಿನಂಡೆಯೊಳ್ ತುಱುಕುವ ಬನ ಗಾಳಿಯಂ ಬಱಿಗೊಂತು, ಕಡಲಿಂ ಬಾಂಬರಂ ನೆಗೆದ ಕರ್ಮುಗಿಲೊ ಡ್ಡಿಂ ಪಗಿಲ್ತು ಕೊಳನ ನೀರುಣಾಲ್ದೆಂದು ತೇಂಕಿ ವರ್ಪ ಕಿಱುಮುಗಿಲೆಂಬಂ

ತಿರೆ ನೆರೆದುರ್ಬಿ ಪರ್ಬಿ ಪಜ್ಜೆವಿಡಿದೀಸಿ ಪರಿವೆಣ್ಣೆದೊಡೆದ ಸೇಱಿಲ ಪಣ್ಗೆ ಬಣ್ಣಂಬಳಿದ ಕರ್ಮಣಿಗೆ ತಣ್ಣೀರೊಳಟ್ಟಿದ ತನಿಗೆಂಡಕ್ಕೆ ದೊರೆವರ್ಪ ಬವರಿಗಳ ಗಾವರಕ್ಕೆಚ್ಚಿತ್ತು ಗೂಡನುೞಿದು ಕೋಡುಗೊಂಬಿನಡರ್ದು ಕೂಡಿ ಪಾಡಿ ಕಾಡ ಪಣ್ಗಳಂ ನಾಡ ನೆಲ್ಗಳನಾಯ್ದು ಬೇಡಿ ಕಾಡುವ ಪಿಳ್ಳೆಗಳ್ಗೆ ರೂಡಿಸಿದ ಮಮತೆಯಿನೂಡಿ ನಲಿವ ಪಕ್ಕಿಗಳ್ಗೆ ಬೀಯಪ ಪಣ್ಣಂ ಮಾಗದ ಮಿಡಿಯಂ ಬೀಯಮಾಗದ ತಳಿರಂ ಆವಗಮೊದವಿಪ ಮರಂಗಳಿಂ ಬೞಿಸಿ ನಿಚ್ಚವೊಸರ್ವ ಪೆರ್ಚುಗೆಯುಬ್ಬರದಿಂ ಕರೆಗಣ್ಮಿ ಪರಿದು ಬನಸಿರಿಯ ಜೀವದ ಗೊತ್ತಿನಂತೊಪ್ಪುವ ನೀರ್ಗೊಳಂಗಳಿಂ ಮನೋಜ್ಞಮಾದಾರವೆಯ ಮುಂದೆಸೆಯೊಳ್ ದಿನದಿನಕ್ಕೆ ತನಗೆ ಬಿರಯಿ ಮಿಗಂಗಳ ಬೇಂಟೆಗೆ ಬೇೞ್ಪವೇೞ್ಪ ಎಲ್ಗಳ್ ದೊರೆಕೊಳ್ವಂತು ನಸೆಗಾಱನೊಸೆದು ಬೆಳೆಯಿಸಿದನೆನಲ್ಕೆಸೆವ ಕರ್ಬಿನ ತೋಂಟದ ಗೊಂಟಿನೊಳ್ ಬಿತ್ತೊಂದರ್ಕೆ ಐವತ್ತಱಿಂ ಪೊಲಿವರ್ಪ ಕದಿರ ಬೆಳೆಯ ತನ್ನೊಂದು ಪೆರ್ಮೆಯಿಂ ಬಣ್ಣವೆರ್ಚೆ ನಳನಳಿಸಿ ಬೆಳೆದ ಕೆಯ್ವೊಲಮನಣಕಿಸಿ ತಲೆನಾಗಿಸಿ ತೂಗಿಸಿ ನೂಱುಮಡಿ ಮಿಗುವ ಬಿತ್ತಂ ಪೊತ್ತು ನಿಗುರ್ದು ನಿಂದ ರಾಗಿವೊಲದೊತ್ತಿನೊಳ್ ಕೆಸಱ್ಕೊಳಾಗದ ಬಸಿಱ್ಕೊಳ್ ಪುಟ್ಟಿದಾಣಿಮುತ್ತುಗಳಿಂ ಬಿಗಿದು ದೂವೆಯ ಕುಸುಱಿಂ ಪುದಿದು ಬಣ್ಣಂಗುಂದದಂತು ಬೆಳ್ವಟ್ಟೆಯಂ ಪೊದೆದೊಡಲಿಚಂ ತನ್ನ ಬೆದೆಗಾರ್ತಿಯ ಚೂಳಿಯ ಸಿಂಗರಕ್ಕೆಂದು ಸಮೆದು ಬಯ್ತಿಟ್ಟ ಕುಂದಣದ ಗೊಂಡೆಯೆನೆ ತಾವರೆಯ ಕೋಶದಂತಿರೆಸೆವ ಜೋಳದ ಪಾೞಿಯಂ ಸಾಲ್ಗೊಂಡು ಮೊಳೆತ ಬೆಳ್ಸುೞಿವಿಟ್ಟ ಕೊನೆಯಿಕ್ಕಿದ ಕಾತ ಪಣ್ತ ಪೊಂಬಾೞೆಯ ಚೆಂಬಾೞೆಯ ರಂಗುಬಾೞೆಯ ತೋಂಟದಿನೊಳಗೊಳಗೆ ಬಾಂಬಟ್ಟೆಗರ್ ಪೊೞಲ ಸೊಬಗಂ ನಿರುಕಿಸಲ್ಕೆಂದು ಆಗಳಾಗಳೇಱುತಪೊರ್ಡೆಂದು ಕಟ್ಟಿದೊಂದು ಸರಣಿಯೆನೆ ಮುಗಿಲೊಳೊಂದಿದ ನಾಡ ಪೊಱಗೋಂಟೆಯುಗಳ್ ಸೊಗಯಿಸಿದತ್ತು.

ಇಂತು ಪೊೞಲ್ಗೆ ಪೊಱಮೊಯ್ಯ ಸುಲ್ಲ ಸನ್ನಣದಂತೆ ಕೆಂಕಮಾಗೆಸೆವ ಜಾದುಗಲ್ಲ ನಿಡುಗೋಂಟೆಯಿಂದೊಳಗೆ ಚೆಂಗದಿರನ ತೇರ ಸೂೞಗೆತ್ತಂ ಮಿಳಿರ್ದಂ ಮುಂಚೆ ಪರಿವೇೞಿಂಕುದುರೆಗಳ ಖುರಪುಟದ ಪೊಯ್ಲಿಂಗಿರದಡರ್ದು ಮುಸುಂಕುವ ಕೆಂದೂಳಂ ಬೀಸಿ ಜಾಡಿಸುತುಮೋ

ಕಣಂಬಿಡಿದ ಪಟಯಿಗೆಗಳಿಂ ಮನೋಜ್ಞಮಾಗಿ, ನೆಱೆವೆಱೆಯಿರುಳೊ ಳ್ ತಾಂ ತವಗಿಱಿತಂದು ಬಿನದದಿಂ ವಿಹರಿಪಚ್ಚರಸಿಯರ ನೆಲೆಯ ಸಿಂಗರದ ಮಾಟದ ಬೆಳ್ಳಿವೆಟ್ಟುಗಳ ತಟ್ಟಿಲ್ಗಳೆಂಬಂತಿರೆ ಪಗಲ್ಗೆ ಪಾಲಿನೆ ಱೆದಂತುಮಿರುಳ್ಗೆ ಜೊನ್ನದಿಂ ಸಮೆದಂತುಂ ತೋರ್ಪ ಸೌಧಂಗಳಿಂ, ಮತ್ತಂ ಪೊತ್ತಿದ ಹೋಮದೆತ್ತಿದ ಧೂಪದ ಪೊತ್ತಿದ ದೀಪದ ಸುತ್ತಿದ ಕರ್ಪೂರಗೆ ಮೇಲ್ವೆಗೆಯುತೆ ಬಿತ್ತರದಿಂ ಮುಗಿಲೊಡ್ಡನೊಡ್ಡೆ ಮರಕತ ಕಳಶದ ತನಿವೆಳಗು ಮೇಘಮಂಡಲದೊಳ್ ಬೆರೆಯುತೆ ಬಳ್ಳಿಮಿಂಚನಾ ಗಿಸೆ ಗೋಪುರಂಗಳ ಮಿಸುನಿಯ ನೆಲೆಮಾಡದ ಚೆಂಬೆಳಗು ಬಾಂದಳದೊ ಳ್ ಪಳಂಚುತಿಂದಿರವಿಲ್ಲನೊಡರ್ಚೆ, ಆಗಳಾಗಳ್ ಮೊಱೆಗುವ ಭೇರಿಯೊ ನ್ದು ಬಿಱುಸರಂ ಕಾರ ಗುಡುಗಂ ಪುಟ್ಟಿಸೆ ತುಂಬುಗೊಳನೊಳೆಂಬುಗೊಂಡ ಮುದ್ದಂಚೆಗಳ್ಗೆ ಜಲಕ್ರೀಡೆಗೆ ಮನಮಂ ನೀಟ್ಟಿರಿಸುವ ದೇಗುಲಂಗಳಿಂ, ಮತ್ತಮೋದನೋದುವ ಶಾಸ್ತ್ರಮಂ ಕಲ್ವ ಪುರಾಣಮಂ ಕೇಳ್ವ ಇತಿಹಾ ಸಂಗಳನಱಿವ ವೇದಾಂತಮಂ ಬಗೆದು ಭಾವಿಸುವ ತರ್ಕಿಸುವ ವಿಪ್ರರ ಅಗ್ರಹಾರಂಗಳಿಂ, ಮತ್ತಂ ಕ್ಷತ್ರಿಯರರಮನೆಗಳಿಂ ಮತ್ತಂ ಪರದರಂಗ ಡಿಗಳಿಂ, ಮತ್ತಂ ಕೀಱರ ಗುಡಿಗಳಿಂ—ಊರು ಚೆಲ್ವಾಗೆ ಕಣ್ಗಂ ಮನಕಂ ಬಂದುದು.

ಇಂತಿಂತು ನೆಱೆ ಮೆಱೆದೊಪ್ಪುವ ತುಂಬಿದೂರ ಕೇರಿಗಳೊಳೋ ರೊಂದೆಡೆಯೊಳ್—ಅಂದು ಮೀಂಬಟಯಿಗೆಯಂ ಜೋಗದ ಜೋಹದ ಸಾಂತನನಿದಿರ್ಚುವ ಪದನೊಳ್ ತನ್ನೈದುಂ ಕಣೆ ಕಾದಿ ಗೆಲ್ವ ಕೈಗುಣ ಕ್ಕೆ ನೆರಂ ಬಾರದೆಂದು ತಱಿಸಂದು ಪಲವೆಡೆಯಂ ತಂದಂದಮಾಗೆ ಕೊ ಡಿಟ್ಟ ಕೋಲ ಮೂಡಿಗೆಯ ಕೂಡಿಗೆಯೆನೆ ನೂಱುಱುವಗೆಯ ಪೂಗಳಿಂ ಬಾಗೆ ಎತ್ತಿಪಿಡಿದಂಗೆಯ್ಯ ನಸುಗೆಂಪಿಂ ಕಡೆಗಣ್ಣ ಕುಡುನೋಟದರೆಗ ರ್ಪಿಂ ಮೊಗದ ಬೆಳ್ನಗೆಯಚ್ಚವೆಳ್ಪಿಂದೊಪ್ಪಂಬೂಸಿ ಬಣ್ಣಂಬಳಿದಂತುಂಟಾ ಗಿಸಿ ಬಿಡುಸರದ ಪೊಸಗಂಪಿಂಗವ್ವಳಿಸಿ ಮುಸುಱಿ ಮೊರೆವ ದುಱುದುಂಬಿ ದುಂಬಿಗಳ ಕಾಟಕ್ಕಳ್ಕಿ ಬಳ್ಕಿ ನೋಟದ ಬೇಟದ ಬೆಡಂಗನೊಲ್ದು ತೋ ಱಿ ಪಣಕಂ ಖಣಕಂ ಮಾಱುವ ಮಾಲೆಗಾರ್ತಿಯರ ಪೂವಿನಂಗಡಿಯಿಂ; ಮತ್ತಂ ತಲೆಯೊಲೆಯೆ ಮುಂಗುರುಳ್ಗಯ್ಯಲಾತೆ ನಡುನೋಟದ ನಿಮಿ ರ್ದ ಕಂಗಳೆನಸುಂ ಚಳಿಸೆ ಮೊಗಂ ಬೆಮರಿಡೆ ಬಲ್ಮೊಲೆಗಳ್ ಕದಕ್ಕದಿಸೆ

ಮುತ್ತಿನ ಗೊಂಡೆನಾವುಲಿ ತೊಂಗಲ್ಗೊಂಗೆ ಕೆಂಬರಲೋಲೆ ಮಿಱುಗೆ ಬಳೆ ಘಲ್‌ಘಲ್ಲೆನುತುಲಿಯೆ ಅಸುವೆಯೊಳೊತ್ತೊತ್ತಿ ಪನಿನೀರನೆಱೆದೆಱೆದು ಪಚ್ಚೆಗಪ್ಪುರದ ಪುಡಿಯಂ ಸುರಿಸುರಿದು ಸುಯ್ಯೆಲರ ನಱುಗಂಪಸೊರೆದೊರೆದು ಬಾವನ್ನವಿಡಿಯಂ ತೀವ ಘಟ್ಟಿವಳ್ತಿಯರ ಗಂದಿಗವಸರದಿಂ ; ಮತ್ತಂ ಬಿಡುಮುತ್ತಿನ ಪಚ್ಚೆವರಲ ಕೆಂಬರಲ ಕರ್ಮಣಿಗಲ್ಲ ಬಜ್ಜರಗಟ್ಟಿಯ ಚೆಂಬವಳದ ಸರದ ಪರಪಿದ ಪೊಂದಟ್ಟೆಗಳಿಂ ರಂಜಿಸಿ ಬೆಲೆವಣಿಗಾಗರವೆನೆ ತೋರ್ಪ ರನ್ನವರದರಂಗಡಿಯಿಂ ; ಮತ್ತಂ ಲೆಕ್ಕಿಗರ ಲೆಕ್ಕದಂತು ಸೊನ್ನೆಯಿಂ ಕಣ್ಗೊಪ್ಪಿಯುಂ, ಗಗನದಂತು ಬೆಳ್ಳಿಯಿಂ ಮೆಱೆದುಂ, ಕೆಯ್ಯೊಲದಂತು ಕರ್ವೊನ್ನಿಂ ಸೊಗಯಿಸಿಯುಂ, ಪಲ್ಲವಾಧರೆಯ ಕೆಂದುಟಿಯ ರಂಗಿನಂತು ಕಿಸುರಿಂ ರಂಜಿಸಿಯುಂ, ಬೊಂದಿಯಂತು ಸೀಸಕದಿನೊಂದಿಯುಂ, ದಿಟ್ಟೆಯ ಬಟ್ಟೆಗೆಯ್ತರ್ಪ ಲೋಹಕಾರರ ಮನೆಯಿಂ ; ಮತ್ತಂ ಹಚ್ಚಡದ ಪೂವಿನಂಗಿಯ ಪಟ್ಟುಡೆಯ ಕಾಂಗಿನ ರಂಗಿನ ಚೆಂದಿರಗಾವಿಯ ಮಿಸುನಿಗಚ್ಚಿನ ಬಣ್ಣಸೀರೆಯ ದೂಸಿಗವರದರ ಮುಱಿಗೆಯಿಂ ; ಮತ್ತಂ ತಿಸುಳಿಯಂತೆ ಮುಕ್ಕಣ್ಣನುಂ ತೊವಲ್ವೊದೆಯನುಂ ಮುಗಿಲಂತೆ ನೀರೊಡಲನುಮೆನಿಪ ತೆಂಗಾಯಿಂ, ಮತ್ತಂ ಹರನೆಂತಂತು ಜಟಾಧರನುಂ ಹರಿಯೆಂತಂತು ಪೀತಾಂಬರಧಾರಿಯುಮಾಗಿರ್ಪ ನೀರುಳ್ಳಿಯಿಂ, ಮತ್ತಂ ಜೀರಿಗೆಯಿಂ, ಕೊತ್ತುಂಬರಿಯಿಂ, ಮೆಣಸಿಂ, ಗುಳದಿಂ ಶರ್ಕರೆಯಿಂ ಚೆಲ್ವಾದ ಕೇರಿಯಂಗಡಿಯಿಂ ; ಮತ್ತಮಿರ್ಕುಱಿಯ ತಂಡಸದ ಕರ್ತರಿಯ ಸುತ್ತಿಗೆಯ ಕೈನಾರದ ಕಂಬಚ್ಚಿನ ಕೊಟಿವೆಯುಡಗಲ್ಲ ಅರನ ಮುಟ್ಟೊಟ್ಟಯಿಸಿರೆ ಕೊಟ್ಟಂ ಕೆಟ್ಟನೆಂಬೊಂದು ಸನ್ನೆಯ ಸಬುದವೊಗೆನಂತಿರೆ ಬಡಿವ ಸೊನ್ನೆಗಾಱರ ಸಾಲೆಯಿಂ ; ಮತ್ತಂ ಕೊಡಲಿಯಿಂ ಕಡಿವ ಉಳಿಯಿಂ ಕೀಸುವ ಕತ್ತಿಯಿಂ ಕೆತ್ತುವಾಣಿಯಿಂ ಬೆಟ್ಟುವ ಕರಗಸದಿಂ ಕೊಱೆವ ಬಡಗಿಯರೆಡೆಯಿಂ ; ಮತ್ತಂ ಕಾಯಿಸುವ ಕರಗಿಸುವ ಎಱೆವ ತಿದಿಯೊತ್ತುವ ಉರ್ದುವ ನೀರ್ಗುಡುವ ಬಡಿವ ಬಿಸುವ ಮಸೆವ ಸಣ್ಣಿಸುವ ನುಣ್ಣಿಸುವ ಸಾಣೆವಿಡಿವ ಕಮ್ಮಱರ ಮುಂಗುಡಿಯಿಂ—ಪುರಂ ಕಣ್ಗೆಂಬಾದುದು.

ಇಂತು ಸೊಬಗಿನ ಬೀಡಿನಂತೆ ಸಿಂಗರದ ನಾಡಿನಂತೆ ಸೊಗದ ನೆಲೆಯಂತೆ ಸೊಗಸಿನಾಗರದಂತೆ ಮಂಗಳದ ಮನೆಯಂತೆ ಸಲೆ ಸಂದು

ನಾಡ ಪೆಣ್ಗಳ ಚೆಂದಳಿರಡಿಯ ಮೊಲ್ಪೊಗರಿಂ ತೊಳಗಿ ಬೆಳಗುವ ಕೇರಿ ಯ ಬೀದಿಗಳಿಂ ; ಪೊಱಲ ಸೊಬಗೆಯರ ಕಳಿವೆರ್ಚಿದ ನಗೆಮೊಗದ ಕಾಂತಿಯಿಂ ಬೆಳರ್ತು ಮಿಱುಗುವ ಹರ್ಮ್ಯಂಗಳಿಂ ; ಪುರದ ಪುರಂಧ್ರಿ ಯರ ಪೊಂಬಚ್ಚದೊಚ್ಚತಂ ತಳಿತಳಿಪ ಹಱೆಯ ಪರ್ಬುಗೆಯಿಂ ಚಳ ಚಳಿಸುವ ನಲ್ನೆಲೆಯಿಂ—ರಾಜಿಪ ನಗರಮಂ ಕಣ್ದಣಿಯೆ ಕಂಡು ಶ್ರುತ ಕೀರ್ತಿಮನೋಹರಂ ನಿಜಸಚಿವನೊಳಿಂತಿದಾವ ನಾಡೆಂದು ಕೇಳ್ದೊಡೆ- ಕೂರಾಳ್ಗಳ ಕಟ್ಟೊಡೆಯ ! ಇಂತಿದು ಕಣಾ ! ಗೋಪೂಜಾಫಲದತ್ತಣಿಂ ಸಂತಾನಮಂ ಪಡೆದ ಋತಂಭರರಾಜನಾಳ್ವ ತೇಜಃಪುರಮೆಂದು ಕೇಳಿ ಸಿದಂ.

ಆನುಡಿಗೆ ಸೌಮಿತ್ರಿ ಬಿಸಮಂದಂಗೊಂಡು—ಎಂತು ಆರಾಯಂ ಗೋಸೇವೆಯತ್ತಣಿಂ ಮಗನಂ ಪಡೆದಂ ? ಧೇನುಮಾಹಾತ್ಮ್ಯಮನಿ ತೊಂದು ದೊಡ್ಡಿತೇಂ ? ನೀಂ ಬಲ್ಲಂತು ಪೇೞಿಂಬುದುಮಿಂತು ವಚಿಸಿ ದಂ ಸಚಿವನದೆಂತೆನೆ :—

ಅಯ್ಯ ! ಮುನ್ನಮೀನಾಡೊಡೆಯಂ ಋತಂಭರನೆಸರಿಂ ಪೆಸರ್ವೆ ತ್ತ ಭೂಭುಜನುಂಟು. ಬೋೞಯರೋಜನ ಜಾಣ್ಮೆ, ಚುಕ್ಕಿಯಚೆ ವ್ವು, ಜವನ ಜವ್ಟು, ಜಕ್ಕರರಸನೈಸಿರಿ ತನ್ನೊಳೊದವೆ ಮನುವಿನ ಮಾ ರ್ಗದೆ ನಡೆಯುತೆ ಮೆಯ್ಗಣ್ಣನೋಲಗದ ಸೊಂಪಿಂಗಿರ್ಮಡಿ ಮಿಱುಪ ಪೆಂಪಿಂ ಮೆಱೆದಂ. ಆದೊಡಮೀತಂಗೊಗೆತನದ ಗುಣ್ಪಿಂಗೆ ನೇರ್ಪ ಡುವೊಂದು ಬೞಿಯ ಬಳವಿಯ ಪುಟ್ಟೆನೊಂದು ಸೊಗಂ ತಾಱದುದು.

ಮಡಲಿಱಪ ಬಾಳ್ವಳ್ಳಿಯ ಚೆಂಗುಡಿ ಸುರುಂಟಿದಂತೆ, ಸೊಗಸಿನ ಸೊಬಗಿನ ನೆಲೆವನೆಯ ಮುಂಗುಡಿ ಮುರುಂಟಿದಂತೆ, ತುಂಬಿ ಪರಿವ ಕಾಳ್ಪುರದ ಕಾಲ್ ಮುಱಿದಂತೆ, ಇಂಬಿನೊಡಲ ಪೊಸಜವ್ವನಂ ಸರಿ ದಂತೆ, ಇನ್ನೆಬರಂ ಕೊನೆವರಿದು ನೀಳ್ಪರಿಸಿದ ಬೞಿಯ ಬೞಿಯಿಗಳ್ ತನ್ನೊಳ್ ತಡೆದುದೆಂಬೊಂದು ಬಾಗುಳ ಪೆಱಸಿನಗವಟ್ಟಗಳುಮೀಕತ ದೊಳೆ ಬಗೆಗೆಟ್ಟಿರ್ಪ ರಾಯನೋಲಗಕೊರ್ವ ಜಾಬಾಲಿಮುನಿಪಂ ಬಿಜ ಯಂಗೆಯ್ದಂ. ಆಗಳರಸನೆಯ್ತಂದ ಮುನಿಯಂ ಯಥೋಚಿತಮಾಗತಸ್ವಾ ಗತಂಗಳಿಂ ಕುಶಲಮಂ ಬೆಸಗೊಂಡು ತಱುವಾಯಿಂ ಕಟ್ಟಿನ ನುಡಿಗತೆ ಯ ಪೊಟ್ಟಿನೊಳ್—ಕಿತ್ತಡಿಗಳ ಬಿತ್ತಿಗ ! ಪಣ್ಣಿಲ್ಲದ ಮರನ ಬಾೞ್ತೆ,

ತಣ್ಣೀರೊಸರ್ ಕುಂದಿದ ಕೊಳನ ನೆಗೞ್ತೆ, ಚಂದವನಿಲ್ಲದಿರುಳ ಗಗನದ ಚೆಂದಂ, ಕಂದಂ ಪುಟ್ಟಿ ಮೆಱೆದೊಪ್ಪದ ಬೞಿಯುಂದಂ, ಸಂಡ ಜಗದ ತೊಱೆಹಕ್ಕೆಡೆಗುಡದೇಂ ಪೋಕುಂ ! ಅಂತುಮಲ್ಲದೆಯುಂ ಮಗನಂ ಪೆಱದಂಗೆ ಸಗ್ಗಿಗರ್ ಬಾಗಿಲಂ ತೆಱೆಯರೆಂಬರಲ್ತೆ ! ನಲ್ಮೆ ಮಿಗೆ ಪೆತ್ತ ಕುಮರನ ಬಾಲಲೀಲೆಯಂ ಕಾಣದ ಕಣ್ಗಳಿವು ಪೀಲಿಯ ಕಣ್ಗಳಾಗವೆ ? ಅಕ್ಕಟಾ ! ಮಗನಂ ಪಡೆಯದೆ ನರಕಮಂ ಪುಗುವೊಂದು ಭಾಗ್ಯಮಂ ಬಿದಿಯೆನ್ನೊಳೊಡರ್ಚಿದುದೇ ! ನೂಱುನೇಂ ? ಇಹಕಂ ಪರಕಂ ಪೆಱಗಾದ ಬೂತಾದೆಂ. ಅಯ್ಯ ! ಮುಂತೇಂ ಬಟ್ಟೆ ! ಸುಟ್ಟೆಸಿ ತೋಱ ! ಎಂದು ನಿಜನಿಟಿಲತಟಸಂಘಟಿತಕರಸಂಪುಟನಪ್ಪುದುಂ ; ಮುನಿಪನೊಲ್ಮೆಯಿಂ-ರಾಯ ! ನೀನಿಂತು ಮಱುಗಲೇನಕ್ಕುಂ ? ನಿನ್ನುರದದವೞಲಂ ಕೇಳ್ವ ನರರೊಳರೆ ? ನಂಬಿದ ದೈವಕ್ಕೆ ಕೇಳಿಸು ! ಆದೊಡಮೆನ್ನೀಬಗೆಗೆ ನೀಂ ಗೋವಂ ಸೇವಿಸಿದೊಡೆ ನಿನ್ನಭೀಷ್ಟಂ ಸಿದ್ಧಮಕ್ಕುಮೆಂದು ತೋಱುಗುಂ. ಮುನ್ನಂ ಮುತ್ತರಾಯರ್ಗಿಂತು ಸುರಭಿಯೊಲ್ದುದುಂಟು-ಎಂದು ಸಂತಯಿಸಿದಂ. ಮಗುಳ್ದಾ ರಾಯಂ ಮುನಿಗೆ—ಗೋಮಾಹಾತ್ಮ್ಯಯಂತುಟೇಂ ಪಿರಿದೆ ? ತನಗೊರೆ, ಎಂಬುದುಂ ; ಜಾಬಾಲಿಯಿಂತು ಕಥಿಸಿದಂ:—

ಎಲೆ ಮಾರಾಯ ! ಗೋಮಾಹಾತ್ಮ್ಯಯಂ ಬಣ್ಣಿಪೊಡೆನಗಮಳವೆ ! ಮೆಯ್ಯ ನವಿರ್ಗೞಿಯೊಳೆಲ್ಲಾ ದೇವರ್ಕಳೋರೊಂದು ನೆಲೆ ; ಬಸಿಱೊಳೊಡಲೊಳೆಲ್ಲಂ ವಿಶ್ವದೋರೊಂದು ತಾಣಂ. ಇಂತಿರ್ಪಿನಂ, ನೀನೆ ಬಗೆ. ಆವನೊರ್ವಂ ನಿಚ್ಚಂ ಬಿಸಿಲೊಳ್ ಬಾಯರ್ತ ಹಸುವಿಂಗೆ ನೀರನೆಱೆವನವಂಗೈಸಿರಿ ವರ್ಕುಂ ; ಮೇವಿತ್ತು ಕಾವಂಗೆ ಪಾಲ್ಮೊಸರುಣಿಸಿನ ಪುಣ್ಯಲೋಕಮಕ್ಕುಂ ; ಮೆಯ್ಯ ನೊೞನಂ ಸೋವ, ಶೃಂಗಂಗಳೆಡೆಯಂ ತುಱಿಪ ಮನುಜಂಗೆ ಬಂದ ಬಿಯದಿ ತಪ್ಪುಗುಂ ; ಮತ್ತಮೆತ್ತಾನುಂ ಮೇವಾವಂ ನಿವಾರಿಪ ನರಂ ನರಕಮಂ ಪೋಕುಂ. ಇದಕೊರ್ಂದಿತಿಹಾಸಮುಂಟೆಂತೆಂದೊಡೆ :—

ಮುನ್ನಿನ ದಿನಂಗಳೊಳೊರ್ಮೆ ಜನಕರಾಜಂ ಸಗ್ಗಿಗರ ನಾಡಂ ಕಾಣ್ಬೊಂದು ಬಗೆಯೊಳ್ ಯೋಗದೊಂದು ನೆರವಿನ ಮೈಮೆಯೊಳೊಡಲನುೞಿದು ಬಂದ ನಡೆಮಾಡಮನಡರ್ದು ಪೋದಂ ಗಡ ! ಇಂತಿರೆ ಪೋಪ ಬಟ್ಟೆಯೊಳ್ ತನತನಗೆ ನರಲ್ವ, ಪೊರಳ್ವ, ಮುೞುಗುವ, ಬೇನೆ

ಪಡುವೊಡೆದಾಡುವ, ಉಬ್ಬಸಂಬಡುವ, ಬೇವ, ಪೊತ್ತುವ, ಕುದಿವ, ಸೀಕರಿವೋಪ, ಕೊೞವ, ಸಾಱುವ, ಸೋಱುವ, ಕಾಱುವ, ನಮೆವ, ಸವೆವ, ಕಾಲ್ಮುರುಂಟಿದ, ಕೆಯ್ಸುರುಂಟಿದ, ತಲೆಬಿರಿದ, ಕೀಲ್ ಮುಱಿದ, ಕಣ್ಣೞಿದ, ಮೆಯ್ಯೞಿದ, ಸೂಲದ ಮೊನೆಯೊಳೇಱಿದ, ಕಲ್ಲಾಲೆಯ ಬಸಿಱೞೊಳ್ ಸಿಲ್ಕಿದ, ಪರ್ದುಕಾಗೆಗಳ ಬಾಯೊಳಾದ, ಕೀವಿನ ಮಡುವಿನೊಳ್ ಬಿೞ್ದು, ಕೂರ್ವಾಳ ತುದಿಯೊಳ್ ಜೋಲ್ದು, ತನಿಗೆಂಡದ ಬೇವಿನುರ್ಕಿನ ಪುತ್ತೞಿಯುಪ್ಪರಿಗೆಯ ತೞ್ಕೆಯೊಳಿರ್ದ, ಪೇಸಿಕೆಯ, ಱೋಡೆಗರ, ಪಾಪಾತ್ಮರ ಬಾೞ್ವನೆಯೆನಿಪ್ಪ ಯಮಲೋಕಮಂ ಮುಟ್ಟೆಯಿಸಿ ಬರ್ಪುದುಂ; ಪಾವನಮೂರ್ತಿಯೆನಿಪ್ಪ ರಾಯನತ್ತಣಿಂ ಬೞಿಸಿವರ್ಪ ಗಾಳಿಯ ಸೋಂಕಿಂ ನಾರಕಿಗಳೆನಸುಂ ಚೇತರಿಸಿ ತಣ್ಪುಗೊಂಡು ಕಟ್ಟುಬ್ಬರದ ಬೇನೆಯುಂ ಸೈರಿಪಂತಿರಾಗೆ, ಮುಂತು ಸಮಂತು ದಿಟ್ಟಿಸಿ ಎಯ್ದುವರ್ಪ ನಡೆಮಾಡಮಂ ಕುಱಿತು ಕೂಗಿಕ್ಕಿ—ಎಲೆಲೆ! ಸೈಪಿನರಮನೆಯೆ! ಎಲೆಲೆ ಪುಣ್ಯವಂತನ ನೆಲೆವೀಡೆ! ಪೋಪೋಗದಿರ್. ಇನಿತೊಂದು ವೇಗಮೇಂ? ನಿನ್ನತ್ತಣಿಂ ತೀಡುವ ಗಾಳಿ ಸೋಂಕಲೊಡಮೆಮ್ಮ ನೋವುಂ ಬೇವುಂ ಪಿರಿದುಂ ಸರಿದುದು. ಇಂತಿರೆಮ್ಮ ನೋವದೆಮ್ಮ ಬಿನ್ನಪಮನಾಲಿಸದೀಕುತ್ತದ ತಱಿಪಕ್ಕೇನಾನುಂ ಮರ್ದನೀಯದೆ ಬಿನ್ನನೆ ನಡೆವ ಬಲ್ಮೆಯಿದೇನೊ! ನಿನಗಾನುಮೆಮ್ಮೊಳ್ ಮಱುಕಂ ಪುಟ್ಟದೆ? ಹರಹರಾ! ಎಂದು ಕೆಯ್ಯೆತ್ತಿ ಕರೆದರ್. ಆಗಳ್ ರಾಯನಿಂತೀತೆಱನ ಮೊರೆಯುಂ ಕೇಳ್ದು ಬಿಸವಂದಂಗೊಂಡು ವಿಮಾನಮಂ ತಡೆದು ಪಿಂತಿರುಪಿ ಮುಟ್ಟೆಯಿಸಿ ಬಂದು ಶೈಮಿನೀಪುರದ ಮುಂಬಾಗಿಲೊಳಿೞಿತಂದು ಎತ್ತಂ ನೋೞ್ಪನ್ನಂ-ಧರ್ಮರಾಜಂ ತಳ್ವದೆಯ್ತಂದಿದಿರ್ಗೊಂಡು ತಗುವಂತು ಸಮ್ಮಾನಿಸುತುಂ ಮತ್ತಮಭಾಗ್ಯತನೊಳ್—ಏನಯ್ಯ ಎತ್ತಣಿಂ ಬರವಾಯ್ತು? ನಿಮ್ಮನ್ನರ್ಗೆಮ್ಮೀನಾಡೊರ್ಗದಲೇ! ಏಂ ಬಟ್ಟೆದಪ್ಪಿ ಬಂದಯ್? ಆವಗಂ ನಮೆವ ಪಾತಕಿಗಳ ಯಾತನೆಯ ನರಕಮಿತ್ತಲಿತ್ತಲ್. ಪೆಱರ ಸಿರಿಯಂ ಕವರ್ವ, ಪೆಱರ ಪೆಂಡಿರ್ಗಳುಪುವ, ಪೆಱರಂ ಕೀೞ್ಮಾಡುವ, ಪೆಱರೊಡವೆಯುಂ ಕಿಡಿಸುವ ಕಡುಕೂೞರ್ಗೆ ನೆಲೆವೀಡು. ಆವಂ ಕೊಲ್ವ, ಪಾರ್ವರಂ ಪಗೆವ, ಪೞಿನುಡಿಯುಂ ಪೞಿವ, ಜನ್ನಕ್ಕೆಡರ್ಗೆಯ್ವ, ಪೆತ್ತರಂ ಪತ್ತುವಿಡುವ, ಗುರುಗಳ

ನೋಡಿಸುವ ಪಾಪಿಗಳ್ಗೆ ಬಾಟ್ಟನೆ. ಇಂತಿದಂ ನೀಂ ಪುಲಗಕ್ಕುವೆ? ಕಾಣಲಕ್ಕುವೆ? ಎಂದಾಡಿದಂ. ಅಂತಪ್ಪುದುಂ ಜನಕಂ ಜವನೊಳ್— ಎಲೆ ಧರ್ಮರೂಪ! ಇಂತೀಪೊಲ್ ನರಕವೆಂದಱತೆನಿಲ್ಲ ಪೆಱತೇನಾನುವುಕ್ಕು ವೆಂದೇ ಬಗೆದೆಂ. ಅಂತಾಂ ಬಗೆವಿನಂ ಲೋಗರ್ಗಿಂತೆಂತೊ ಬನ್ನಬೇನೆಗಳೊದವಲೊಡಂ ನರಲ್ದೊಂದು ಮೊರೆಗೇಳ್ದು ಬಂದೆಂ. ನೋೞ್ಪೊಡಿಂತಿದು ದುಸ್ತರಂ ನರಕಂ! ಎಲೆಲೆ! ನೀನುಮಂತಿವರೊಳೇಂ ಮುಳಿಕಂಗೊಳ್ಳಿಯು! ಚಿಃ! ಪೋಕೆ! ಇವರಂ ಕೊಂಡೇಂ ಕಜ್ಜಂ? ಇನ್ನಾನುಂ ಬಿಡ! ಎಂದು ನುಡಿವುದುಂ; ಯಮಂ— ಓ! ಬಿಟ್ಟೆಯಾಳ್ಗಳಂ ಬಿಟ್ಟಂತಾಗದೆ! ಎಂತೀತಂಗಳ್ ಪೋಗಲಾರ್ಪರ್? ಇನ್ನುಂ ಪಾಪಂ ಮುಗಿದುದಿಲ್ಲಮೀಗಳೇವೆಂ! ಇದೆ ಕೊಳೀತಂ ಮುನ್ನಮೊರ್ವನಂ ಪಾರ್ವನಂ ಕೊಂದ ಬೊಮ್ಮೇತಿಗಾಜಂ; ಈಗಳಿದೆ ಎರೆಯಾದಂ. ಈತಂ ಪೆಱನಂ ನಂಜನೂಡಿ ಮಡಿಸಿದಂ; ಅಂತದಱನಿಲ್ಲಿ ಕಾಳೋರಗಂಗಳ್ಗೆ ತುತ್ತಾದಂ. ಮೋಣೀತಂ ಪರಕಾಂತೆಯಂ ಕಾಮಿಸಿದನಂತದುಕಾರಣದಿಂ ಕಾದುರ್ಕಿನ ಪೆಣ್ಬೊಂಬೆಯ ತೞ್ಕೆಯೊಳಾದಂ. ಮತ್ತಮೀತಂ ಪಗಲ್ಗಳ್ಳನೀತನಂ ಸಮ್ಮಕಂಕರಿಯಿಂ ಬಡಿವರೆಂದು ಬೇಱಪೇಱ ತೋಱದಂ. ಅದರ್ಕಾರಾಜಯೋಗಿ ಈ ನರಕಿಗಳೆಂತಾನುಂ ಮುಕ್ತರಾಗರೆ! ಅಕ್ಕಟ! ಇಂತಿವರ ಬಾೞ್ಕೇಡಂ ಕಂಡು ಮೆಂತಾಂ ಪೋದೆನೋ! ಏನಾನುಮೊಂದುಪಾಯುಮಂ ತೋಱಲಾಱಾ! ಎಂಬುದುಂ; ಸೂರ್ಯಸುತಂ—ಅಂತಪ್ಪೊಡೆ ನೀನಿನ್ನೆಬರಂ ನಿಚ್ಚಂ ಶ್ರೀರಾಮನಂ ಮೂವಗೆಯ ನಿಚ್ಚಟವಕುತಿಯಿಂ ತುತಿಸಿದ ಹೂಣ್ಯದರೆಯನಿತ್ತೊಡೆ ಇವರ್ ಮುಕ್ತರಪ್ಪರ್, ಸಂದೆಯಂ ಬೇಡವೆಂದಂ. ಒಡನೆಯೆ ಜನಕಂ ತನ್ನ ಪುಣ್ಯದೊಳಡ್ಡಮಂ ಧಾರೆಯನೆಱೆವುದುಂ, ಪಾಪಿಗಳೆಲ್ಲರ್ ಬಿಗಿವಟ್ಟ ನರಕಬಾಧೆಯಿಂ ಬಿಡುವಟ್ಟು ಸಂತಸದಿಂ ಶ್ರೀರಾಮನಂ ಪಾಡುತುಂ, ಜನಕರಾಜನಂ ಪೊಗೞುತುಂ, ಜವನಂ ನೆನೆಯುತುಂ, ಬರ್ದಿಲರ ನಾಡಂ ಪುಗುತಂದರ್.

ಕೇಳೆಲೆ ರಾಯ! ರಾಮನಾಮಸ್ಮರಣೆಯೊಂದು ವ್ಯೆಮೆಗೆ ಬೆಱಗುವಟ್ಟ ಮಿಥಿಲೆಗೊಡೆಯಂ ಜೈಮಿನಿಯೊಡೆಯನೊಳ್—ಪಾಪಿಗಳಲ್ಲ ಪುಣ್ಯಾತ್ಮರ್ ನರಕಕ್ಕೆಯ್ದುಪರ್ಗರಿರರೆಂದಾಗಳೆ ಪೇೞ್ದಯಲ್ತೆ. ಅಂ

ಪುಣ್ಯಾತ್ಮನೆಂಬೆಯಂತಿರೆಯುಮಿಲ್ಲಿಗೇಕತದಿನೆಯ್ತಂದೆಂ ಪೇೞೆಂಬ ರಾಯಂಗೆ ನಸುನಗೆಯೊಳ್—ನೀಂ ಪುಣ್ಯಾತ್ಮಂ ಸಾಜಮಾದೊಡಂ ಪೂರ್ವದೊಳೊರ್ಮೆ ತಾಂ ತನಗೆ ಮೇವ ಪಸುವಂ ನಿವಾರಿಸಿದಯ್. ಅದು ಕಾರಣದಿಂ ನಿನಗಿಂದು ಎಮ್ಮ ಪುರದರ್ಶನಮಾಯ್ತು. ಇಂತುಟಲೆ ಧರ್ಮಸೂಕ್ಷ್ಮಂ. ಗೋಮಾಹಾತ್ಮ್ಯಮಂ ನೀನಱಿಯಾ ಎಂದು ನುಡಿದಂ. ಆನುಡಿಗೆ ತಲೆಯನೊಲೆದು ಕೆಯ್ಮುಗಿದು ಮುಂ ತೆರಳ್ದಂ ಗಡ!

ಇಂತು ಮಱೆದೊರ್ಮೆಯಾದೊಡಂ ಗೋವನೆಬ್ಬಿಟ್ಟದ ಜನಕರಾಜಂಗಂ ನರಕದರ್ಶನಮಾದುದೆಂಬೆಡೆಯೊಳ್—ಆಕಳಂ ಕೊಲ್ವ ನೋಯಿಸುವ ಕೀೞ್ಗೇನಾಡ ಬಾೞ್ಕೆಯೊ? ಮೇಣ್ ಭಕ್ತಿಯಿಂ ಧೇನುವಂ ಸೇವಿಪ ಭಾವಿಪ ಮಾನವರ್ಗೆ ಮನೋರಥಂ ಸಿದ್ಧಿಪುದೇಂ ದೊಡ್ಡಿತೊ? ಮನುಕುಲದ ಮುನ್ನಿನ ರಾಯರ್ ಗೋಪೂಜಾಪ್ರಭಾವದತ್ತಣಿಂ ಪುತ್ರರಂ ಪಡೆದುದುಂಟು. ನೀಂ ಕವಲ್ಮನಮನುೞಿದು ಗೋವಂ ಪೂಜಿಸೆಂದು ವಿಧಿಯನೇರ್ಪಡಿಸಿ ಜಾಬಾಲಿ ತಾಂ ಬೀೞ್ಕೊಂಡಂ.

ಶತ್ರುಘ್ನ! ಇಂತು ಜಾಬಾಲಿಯೊಂದುಪದೇಶಮಂ ಗುರೂಪದೇಶಮೆಂದೇ ಬಗೆದಂದು ಋತಂಭರಂ ದೈವನ್ಯಸ್ತನಿಜಭಕ್ತಿಭರಂ ಸುಲಕ್ಷಣಲಕ್ಷಿತಮಾದ ಆವನಾಗಳುಂ ಸೇವಿಸುತುಮಿರ್ದಂ. ಕಟ್ಟಕಡೆಯೊಳ್ ಸಲ್ಗೆಯ ಸುರಭಿ ರಾಯನ ಭಕ್ತಿಗೊಲ್ದು "ಪುತ್ರವಾನ್ ಭವ" ಎಂದು ದೇವವಾಣಿಯಿಂ ಪರಸಿ ತನ್ನ ಧೇನುಲೋಕಮಂ ಸಾರ್ದುದು.

ಮತ್ತಮಾರಾಯಂ ತನ್ನಂ ಪರಸಿದ ಧೇನುವಿನೊಲ್ಮೆಯಂ ನೆನೆನೆನೆಯುತಿರ್ದಿಂಬೞಿಯಂ ಕೆಲವಾನುಂ ದಿನಕ್ಕೆ ತನ್ನರಸಿಯೊಳ್ ಸತ್ಯಮಂ ತನೆಂಬೊರ್ವ ಮಗನಂ ಪಡೆದು ಕೃತಕೃತ್ಯನಾದಾರಾಯಂ ಪೊಸಜವ್ವನದ ಮುದ್ದುಗುವರನೊಳ್ ರಾಜ್ಯಭರಮನೊಪ್ಪಿಸಿ ತಾಂ ತಪಸ್ಸಾಮ್ರಾಜ್ಯಮಂ ಸೂಱೆಗೊಂಡಾಳುತುಮಿರ್ದಂ.

ಎಳನೇಸಱ ಪೊಸವೆಳಗಿಂಗೆ ಸೊಂಪೇಱ ನಳನಳಿಪ ತಾವರೆಯಂತೆ, ಕಡುಸುಗ್ಗಿಯ ಭರಕೆ ಕೈವಂದು ಕೊನೆವೆರ್ಚುವ ಮಾಮರನಂತೆ, ತಕ್ಕಿನ ಸೋನೆಯ ಮೆಲ್ಸರಿಂಗೆ ಸುೞಿವಿಟ್ಟು ಚಳಚಳಿಪ ಪೊಂಬಾೞೆಯಂತೆ, ಕುವರಂ ನವಯೌವನದೊದವಿಂಗೆ ನೆಱೆವೆಱೆಯುತಿರೆ ತುಂಬಿ ತೀರಿದೊಂದು ಮೆಯ್ಸಿರಿಯಿಂ ಸೊಗಯಿಸಿದನಪ್ಪುದುಂ; ಜೆನ್ನಿಗ

ರಾಯನಂದದ ಸಿಂಗರದ ಗಾಡಿಗೆ ಸೋಲ್ತು ಬೀರಸಿರಿ ತಾಂ ತೋಳನೇ ಱವಂದಳ್. ಇಂತಿರೆ ಸತ್ಯವಂತಂ ತನ್ನ ಪೆಸರಂ ಪೋಲ್ವಂತು ಸತ್ಯ ಧರ್ಮದಾಂಕೆಯೊಳೆ ನಿಂದು ಶೇಷನ ತಲೆವೊಱಯ. ತಿಣ್ಣದ ತಿರೆಯ ನೊಂದೆ ಪೆಗಲೊಳಾಂತು ಗೆಲ್ಲವೆಣ್ಣಂ ಬಾಳ ಮೊನೆಯೊಳಿರಿಸಿ ತನ್ನೊಂ ದೇಱುಂಜಸದ ಪೆರ್ಚುಗೆಯ ಬೆಳ್ಪಿಳಗಿಂ ಬಾಂಬಟ್ಟೆಯ ತುಂಬುವೆಱ ಯುಂ ಕಂದಿಸಿ ಕುಂದಿಸಿದಂ.

ಎಲೆ ಅರಸ! ಈ ಮಾಟಿಕ್ಕೆಯಿನೊಪ್ಪುವ ತೇಜಃಪುರದ ರಾಜ ನಾಗಳುಂ ಶ್ರೀರಾಮನನಾದಿದೈವಮೆಂದೇ ಬಗೆದು, ಸೀತಾನಾಯಕನನೆ ಭಕ್ತಿಯಿಂ ಭಜಿಸಿ, ರಘುವರನ ಲೀಲೆಯನೆ ಕೇಳ್ದು, ರಾವಣಾಂತಕನಂ ಕಣ್ಣಾಱ ನೋಟಿಕ್ಕೊಂದು ಬಯಕೆಯೊಳೆ ಇರ್ದಂ. ಇಂತಿದು ಗೋ ಪೂಜೆಯ ಮಾಹಾತ್ಮ್ಯಯನತ್ತಣಿನೊದವಿ ಬಂದ ಭಾಗ್ಯಂ.

ಕಾಂತೆ! ಅಂತು ತಂತಮ್ಮೊಳ್ ನುಡಿಯುತಿರ್ಪುದುಂ; ಮುಂದೆ ಸೆಯೊಳ್ ನಡೆವ ಹಯಮೂರ ಕೇರಿಯ ಜನಂ ಬೆಱಗುವಡೆ ನೆಟ್ಟನೆ ಪುರಮಂ ಪುಗುತಂದುದು. ಆಗಳ್ ಪೊಱಲ ಕಾಪಿನಾಳ್ಗಳ್ ಪೊಱ ನಾಡ ಕುದುರೆಯಂ ಪಿಡಿದು ತಮ್ಮಾಣ್ಮಂಗೊಪ್ಪಿಸಿದರ್. ಅಂತಾಗೆ ಸತ್ಯವಂತಂ ಬಂದು ಬಂದಿಯ ತುರಂಗಮದ ಪಣೆಯ ಪತ್ರದೊಳ್ ಬರೆದ "ರಾಮ" ಎಂಬೆರಡಕ್ಷರಂಗಳನೋದಿಯುಂ ಸಂಸತದ ನವಿರ್ ಗುಡಿ ಗಟ್ಟಿ ಹಯದ ಬೆಂಬಱಯೊಳ್ ಬಂದ ಶತ್ರುಘ್ನನಂ ಕಾಣ್ಬೊಂದು ತನ ಕದಿಂ ತನ್ನವರ್ವೆರಸಿ ಚಾವಡಿಯಿಂ ಪೊಱಮಟ್ಟು ಇದಿರ್ಗೊಳಲ್ಕೆಂದು ನಡೆತಂದಂ. ಇಂತು ಪಗಲ ಕೆಯ್ದೀವಿಗೆಯ, ಮಕರತೋರಣದ, ಟಿಕ್ಕೆಯದ, ಬೆಳ್ಗೊಡೆಯ, ಪೊಂಗಟ್ಟಿಗೆಯ, ಪುಲಿಮೊಗದ, ಚಾಮರಿಯ, ಬಿಜ್ಜಣಿಗೆಯ, ಹಡಪದ, ಜವಳಿಮದ್ದಳೆಯ, ಕಾಳೆಯ, ಪಂಚವಾದ್ಯದ, ಬಿರುದಿನ ಬಾವುಲಿಯ ಸಡಗರದಿಂ ಬಂದು ಶತ್ರುಘ್ನಂ ಮುಂತಪ್ಪರ್ಗೆ ಕಾಣಿಸಿಕೊಂಡು ಮೆಲ್ನುಡಿಯಿನುಪಚರಿಸಿ ಬಿಡದೆ ಅವರಂ ತನ್ನರಮನೆಗೆ ನಡೆಯಿಸಿ ಸನ್ಮಾನಿಸಿ ಮತ್ತಮಡಿಗಡಿಗೆ ಶ್ರೀರಾಮಕಥಾವಿನೋದಂಗಳಂ ಕೇಳ್ದು ತನ್ನ ನಾಡಂ ರಾಘವಂಗೊಪ್ಪಿಸಿ ಸರ್ವಸ್ವಮುಮಂ ಉಡುಗೊಱ ಯನಿತ್ತು ತನ್ನ ಪಡೆವೆರಸು ಹಯರಕ್ಷಣಾರ್ಥಂ ಶತ್ರುಹಂಗೆ ನೆರವಾಗಿ ತೆರಳ್ದಂ.

ಇಂತಪ್ಪುದುಂ ಲವಣಾಂತಕಂ ರಾಯುಗುವರನ ಭಕ್ತಿಗಂ ಬಗೆಗಂ ಬಗೆವಿಗೆ ಮೆಚ್ಚಿ ನಾಡೊಡೆತನಮನಾತನ ಪುತ್ರಂ ರುಕ್ಮನೊಳಿತ್ತು ಕಾಣ್ಕೆಯಿಂ ಕೆಯ್ಕೊಂಡು ಸಸೈನ್ಯಂ ಸಮಾಹಿತ ಸರ್ವವೈಭವಂ ಪೊಱಮಟ್ಟಂ.

ಎಂಬಲ್ಲಿಗೆ ಶ್ರೀರಾಮಾಶ್ವಮೇಧದೊಳ್
ತೇಜಃಪುರವರ್ಣನಮೆಂಬ ದ್ವಾದಶಾಶ್ವಾಸಂ ಸಂಪೂರ್ಣಂ.

---

## ತ್ರಯೋದಶಾಶ್ವಾಸಂ.

## — ಅರಣ್ಯಕಮುನಿದರ್ಶನಂ —

ಎಲೆ ಎನ್ನ ಮೋಹದ ಗಿಳಿಯೆ ! ಅಲ್ಲಿಗಲ್ಲಿಗೆ ಅಡಿಗಡಿಗೆ ಬಂದೆಱಗುವಱಕೆಯ ಬಲ್ಲಾಳ ಸಾವಂತರಾಯರ ಮುಂದಲೆಯುಚ್ಚ ಪೊನ್ನ ಪೊಚ್ಚ ಪೊಸಬಾಸಿಗದ ಮುತ್ತಿನ ಗೊಂಡೆಯ ತುಱುಗುವೆಳಗಿಂ ಪೊರೆಯೇಱಿದ ತನ್ನಡಿದಾವರೆಯ ಮೆಲ್ಪೊಗರಿನವರವರರವೆಂಡಿರ್ಕೈದೆದಾಳಿಯುಂ ಬಣ್ಣವೆರ್ಚಿಸುತುಂ, ತನ್ನೊಳ್ ಕೇಣಿಗೊಂಡ ಗೆಲ್ಲವೆಣ್ಣೆ ಪುರುಡಿಂ ಮೀಱಿ ಮೋಪ ಜಸವೊಸಜವ್ವನೆಯ ಪಾಱುಗೆಯ್ತ್ತದಿರವಂ ತೋಱುತುಂ ಬರ್ಪ ಶತ್ರುಹನ ಮುಂದೆಸೆಯೊಳ್ ನಡೆವ ಪೊನ್ನ ಜಾಳಿಗೆಯ, ರನ್ನದ ಬೊಕ್ಕಸದ, ಸಾಯಿರಸಾಯಿರ ಲೆಕ್ಕದ ಹೇಱಾಟದಾನೆಗಳೊಟ್ಟಿಗಳೆಟ್ಟುಗಳ ಸಾಲ ಮುಂಗುಡಿಯೊಳ್ ತಂತಮ್ಮ ಸೇನೆವೆರಸೆಯ್ದೆ ವರ್ಪ ನಾಡ ನಾಡ ರಾಯರನೊಡಗೂಡಿ ಪುಷ್ಕಲಾದಿಸುಭಟರ್ ಕುದುರೆಯ ಬೆಂಬಱಿಗೊಂಡು ನಡೆಯುತಿರಲೊಡಮಾಗಳ್—

ನೀಲಮೇಘಂ ಸುರಿವಂಜನವೃಷ್ಟಿಯೊಬ್ಬುಳಿಯೋ, ಅಂದಂದು ದೇವರ್ಕಳೊಳಿದಿರ್ಚಿ ಮಣ್ಮುಱಿವೋದ ರಕ್ಕಸರೊಳವಗೆಯ ಪಾಪದ ಮೊತ್ತಮೋ ಎನೆ ತಾಂ ತನಗೊರ್ಮೊದಲೊಳೆತ್ತಂ ಪರ್ವಿ ಕರ್ಗತ್ತಲೆ ಮುಸುಂಕಿದತ್ತು. ನಡೆಗೆಟ್ಟುವು ಕರಿ ; ಬಟ್ಟೆಗೆಟ್ಟುವು ಹಯಂ ; ಮುಂದುಗೆಟ್ಟುದು ಪದಾತಿಗಳ್ ; ದೆಸೆಗೆಟ್ಟುವು ರಥಂಗಳ್ ; ಕಣ್ಗೆಟ್ಟುವು ಚೂಣಿಯ ರಾಯುದಟಿಂ ; ಮತಿಗೆಟ್ಟರ್ ಪಡೆವಳ್ಳರೆಲ್ಲರ್.

ಅನಿತಱೊಳೆ ಕವಡುಗಟ್ಟಲೆ ಮಾಸಲೊಡಂ ಮುಸುಂಕಿದ ಲೋಕದ ಮರುಳ್ಬೆಮೆಯುಡಂಗಿದ ಜೋಗಿಯ ಮನದ ನಿಮ್ಮಳಿಕೆಯುಂ ತಿರೆ ದೆಸೆಯೆತ್ತಂ ನಿರ್ಮಲಮಾದುದು. ಆಗಳ್ ನಿದ್ರೆಯಿನೆಚ್ಚಱಾದಂತು ಕಣ್ಗಟ್ಟುಂ ಪೆಱಗಪ್ಪುದುಂ, ಪೊಲಂಬುಗೆಟ್ಟು ಕಣ್ಬಿಟ್ಟು ಬೆಬ್ಬಳೆವೋಗಿ ತಂತಮ್ಮೊಳ್ ಮಾಯೆಯ ಮಾಟಮಂ ಮಾತುಗುಡುತೆ ಜನ್ನಗುದುರೆಯುಂ ಕಾಣದಿರೆ, ಬಿಸವಂದಂದಾಳ್ದು ಮತ್ತಂ ಪಚ್ಚೆಪಚ್ಚೆಗೆ ತಕ್ಕಱಿದು ಬಗೆಗುಂದಿ ಕಂಡರಂ ಬೆಸಗೊಳುತುಮುಂಡಲಿದು ದೆಸೆದಿರಿಯುತುಮಿರ್ಕೆಲನೊಳಱಸುತುಂ, ಸಂದಿನೊಳ್ ಪುಡುಕುತುಂ, ಗೊಂದಿನೊಳ್ ನೋಡುತುಂ. ಪೞುವಂ ಪುಗುತುಂ, ಕೊಳನಂ ಕದಡುತುಂ, ಕಂಡುಂ ಕಾಣಿಸದಿರೆ ಕರಂ ಕನಲ್ದು ಶತ್ರುಹಂ ಶ್ರೀರಘುಕುಲವಾರ್ಧಿಪೂರ್ಣಶಶಾಂಕನ ಶ್ರೀರಾಮಚಂದ್ರಮನ ಯಜ್ಞೀಯತುರಂಗಮಂ ಕಳ್ದುಯ್ದವನಾವನಾತನನೀಗಳೆ ಅಱನರಮನೆಯಂಗಣಕ್ಕೆ ಮೆಂಟೆಯನಾಗಿಸುವೆನೆನುತೆ ಹೂಂಕರಿಸುತೆ ಬಿಲ್ಗೊಂಡು ಬೀದಿವರಿಯುತೆ ಪೊಱಮಟ್ಟಂ. ಅನಿತಱೊಳೆ ಲವಣಾಂತಕನ ಪೆಂಪಿನ ಕೆಂಪಿನ ಬೀರದ ಜರ್ವಿಗೆಂದೆ ಕಣ್ಗೆಟ್ಟು ಅಂಬರದತ್ತಣ್ಗೆ ಸಂದ ಪುಸಿಯ ಕಳವಿನ ಬಲ್ಪಡೆಯೆನೆ ತೋರ್ಪ ಮಾಯಾವಿಡಂಬನದಿಂ ಕುದುರೆಯುಂ ಕಳ್ದುಯ್ವ ವಿದ್ಯುನ್ಮಾಲಿವೆಸರ ರಕ್ಕಸನ ಪೆರ್ವಡೆ ತುಬ್ಬಾದತ್ತು. ಇಂತಾಗಲೊಡಂ ಬಲ್ಪಿನ ತೋಳ ತೋಟೆಯ ಪಡೆವಳರೆಲ್ಲರ್ ತಂತಮಗೆ ಹೂಂಕರಿಸಿಯುಂ, ಬೊಪ್ಪರಿಸಿಯುಂ, ನಡೆಮಾಡಮನಡರ್ದು ಹಯಮನುಯ್ವ ಮುರ್ಬಿಗನಂ ತಱುಬಿ ಅಱಿವಡೆಯುಂ ಬಱಿಕೆಯ್ವ ಪವಣರಾಯನ ಕಟ್ಟಾಣತಿಯುಂ ಪಾರುತಿರ್ಪುದುಂ ; ಮಧುಪುತ್ರಶತ್ರು ತನ್ನವರಂ ಕಂಡು ಎಮ್ಮವರೊಳಿಂತಪ್ಪ ಮಾಯೆಗಾಱನಂ ಮೇಣ್ ಕುದುರೆಯುಂ ಮುಗುಱ್ಚುವ ಮೆಯ್ಗಲಿಯಾವನೆನ್ನಿದಿರ್ಗೆ ಬರ್ಕೆ ! ಎಂದು ಕೇಳಿಸಿದಂ.

ಆಗಳವರೊಳೊರ್ವಂ ಮೇಲಱಿಕೆಯ ಕೈದುಕಾಱರ ಬೀರಂ ಪುಷ್ಕಲಂ ಶತ್ರುಹಂಗೆ—ಬೊಪ್ಪ ! ತಪ್ಪದರಿನಿಶಾಟನಂ ಸಮಂತು ಚುಕ್ಕಿಯ ಕವಡುಮಾಯೆಯ ಪೊಲನ ರಕ್ಕಸವಡೆಯನಿದಿರ್ಚೆ ಬಾರಿಸದೆ ಬೆಂಗೊಟ್ಟೆನಾದೊಡೆ ಪೞಿನಾತಂ ಪೞಿವ ಕೂೞಿನೊಂದು ಗತಿ ತನ್ನೊಳಕ್ಕೆ, ಎಂದು ಪೂಣ್ದಂ. ಅನಿತಱೊಳೆ ಸಿಂಗನೆರ್ದೆಯ ಸಂಗರರಂಗದ ಪ್ರತಾ

ಪಾಗ್ರ್ಯಂ—ಅಯ್ಯ ಮಾರಾಯ ! ಇಂದು ಬಂದು ಸಂಧಿಸಿದ ದಾನವ
ನೊಳ್ ಪೊಣರ್ದು ಜಡಿದು ಸೊಪ್ಪುಸೊವಡಪ್ಪಿನೆಗಂ ಬಡಿದೆಬ್ಬಿಟ್ಟದೆ
ಮಾಣ್ದೆನಾದೊಡೆ ಕಳ್ಳ, ಕಳ್ಗುಡಿವ, ಸಟೆದಟಮುಟಿಸಿ ಪೆಱವರೊಡಮೆ
ಯುಂ ಕವರ್ವ ಪಾತಕಿಯೊಂದು ನಿಟ್ಟುರದ ಕಟ್ಟುಬ್ಬಸದ ಬವಣೆ ತನ
ಗಕ್ಕೆ ಎಂದು ಸೂರುಳ್ದಂ. ಮತ್ತಮಾಗಳ್ ನೆಲನಗಲದಗಲದ ಚಲದ
ಚಲದ ಬಲದ ಬಲದ ಗಂಡುಗಲಿ ಲಕ್ಷ್ಮೀನಿಧಿ—ಭಾವ, ಪುಷ್ಕಲನಿರ್ಕೆ,
ಪ್ರತಾಪಾಗ್ರ್ಯನಿರ್ಕೆ, ಭೂಭುಜಂ ಸುಭುಜನಿರ್ಕೆ, ಮಿಕ್ಕಿನ ತಕ್ಕಿನ
ಕೂರ್ವಾಳ ಪಟುಭಟರಿರ್ಕೆ ; ಈಸೂಟಿ ಪೊರ್ದುಗೆಯ ಗುರ್ದಿನಾಟದೊ
ಳುರ್ವ ಕೊರ್ವಿನ ಕೇಡಾಳಿಯುಂ ಕೆಡಪದೊಡಾತನ ಸೇನೆಯುಂ ಕೇಱಿ
ತುಪ್ಪುೞಿಂ ತೂಱಿದೊಡೆ ಮತ್ತಂ ಹಯಮಂ ಮರಳ್ಚದೊಡೆ ಎಮ್ಮ
ಜನಕಂ ಜನಕಂಗಂ ಜನಕಂ ಮುನಿಜನಕಂ ಸಮಂತು ನಡೆದ ತೋಱಿದ
ಸಜ್ಜನಿಕೆಯುಂ ಕೊಱಚಾಡುವಣಕದ ದುರ್ಜನದ ಬಾರ್ತೆಗೆಟ್ಟ ಬಾೞ್ಕೆ
ತನಗಕ್ಕೆ ! ಎಂದು ಕೆಯ್ವೊಯ್ದಂ. ಆಪೊೞ್ತಿಂಗೆ ಬಲ್ಮೆಯ ಸಾಸಿಕೆಯ
ಕಡುಗಲಿಯಣುಮಂ ಕೆಯ್ಮುಗಿದು ಕೊನೆನಾಲಮನಲುಗಿಸುತೆ ಮೆಯ್ವೆರ್ಚಿ
ರಾಯನನೆಂಗುಂ:—ಜೀಯ ! ರಕ್ಕಸರ್ಗಮೆಮಗಮೆಣ್ಣೆಸೀಗೆ. ನೀಮಲ್ತು
ದೇವರ್ಕಳಲ್ತು, ನಾಗರಲ್ತು. ಇಂದಿನೀವಿಸಸನದೊಳಾೞಿಯ ಜತ್ತುಕದ
ನಿಶಾಟನುಬ್ಬಿನದ ಬಲಮಂ ಗೋಣ್ಮುಱಿದು ಗುಟ್ಟೆಗಟ್ಟುವೊಡಾನೆ
ಸಾಲ್ವೆಂ. ಕಾಡೊಳೆ ಬಳೆದ ನೀಳ್ಪಿನ ಕೈಯ ನಿಡುಗೋಡ ಪೇರಾನೆಯ
ಕುಂಬತಳಮಂ ತನ್ನೊಂದೆ ಕೆಯ್ಯ ಪೊಯ್ಲಿಂ ಸೀೞ್ವಿ ಪೋೞ್ವಿ ಪಂಚಾನ
ನಂಗಮೆನಗಂ ಪೆಱರ ಕೆಲಚಕ್ಕುಮೆ ? ಮಾತೇಂ, ಸುತ್ತೇಂ ? ನೋೞ್ಪೊ
ಡಿಂದಿನ ಮುಂದಿನ ಖಲನ ಪೊೞಿಕು ಪೆೞಿಕಪ್ಪಿನೆಗಂ ತುಱಿಪದೆ ಕಾದಿ
ಗೆಲ್ದು ಹಯಮಂ ತಾರದುೞಿದೆನಾದೊಡೆ, ಶ್ರೀರಾಮರಂ ಮೊಕ್ಕಳಂ
ತನ್ನೊಂದು ಹಂಹದೞಿವಗ್ಗಿನ ಬೆಸಗೆಯ್ಮೆಯಿಂ ತೆಗಳ್ವಿ ಕೀೞಿನ ದುರ್ಗ
ತಿಗೞ್ವೆಂ.

ಇಂತಿರಣುಮನ ಬಲಕಂ, ಜನಕಜನ ಚಲಕಂ, ಪ್ರತಾಪಾಗ್ರ್ಯನ
ಬೀರಕಂ, ಪುಷ್ಕಲನ ಗಂಡುಗಲಿತನಕಂ, ಮಿಕ್ಕುೞಿದ ರಾಯರ ಪೂ
ಣ್ಕೆಗಂ, ಜೋದರುಬ್ಬಟೆಗಂ ಮನಮೊಲ್ದು ಶತ್ರುಘ್ನನವರವರನುಚಿತೋ
ಕ್ತಿಯಿಂ ಮನ್ನಿಸಿ, ಅನಿಬರ್ಗಮೊಂದಾಗಿ ವೀಳೆಯಮನಿತ್ತು ರಕ್ಕಸನನಿದಿ

ರ್ಚವೊಂದು ಬೆಸನದೊಳ್ ಕಳಿಸಿದಂ. ಅನಂತರಮಾಱುಕೆಯ ಕಟ್ಟಂಕದ ತೋಳ್ಬಲನ ಸಾಸಿಗಳೆಲ್ಲರ್ ತಂತಮ್ಮ ಸೇನೆವೆರಸು ತಳರ್ದು ಮಿಕ್ಕುಮೀಱಿ' ಪೋಪ ತೇರಂ ಸುತ್ತುಂ ಮುತ್ತಿ ಕೋಲ್ಮೞೆಯುಂ ಸುರಿವುದುಂ ; ರಕ್ಕಸವಡೆ ಕಣ್ಗೆಟ್ಟು ಕಣ್ಮಾಯಮಾಗಲೊಡಂ ; ತಡೆಗೊಂಡ ನಡೆಮಾಡದೊಳ್—ಪಲ್ಗಳೆಡೆಯೆಡೆಯ ಕಲ್ಗಳಾಗೆ, ಸೋಱುವ ಜೊಲ್ಲೊಸರರ್ಬಿಯ ವೊದಲಾಗೆ, ಜಿೞೊಬ್ಬೆಯ ನೀಟದ ತಳರ್ನಾಲಗೆ ಕೇಱುಲಾಗೆ, ಕಿಸುವೆಟ್ಟಿನ ಗವಿಯನನುಕರಿಪ ಬಾಯುಂ ತೆಱೆದು ಕೆಮ್ಮೀಸೆಯ ಪೊದರ್ದಲೆಯ ಬಟ್ಟಚ್ಚೆಯ ಕಟ್ಟುಱಿದ ಡಗೆಯ ಪೇರೊಡಲ ಗೋರರೂಪಿನ ದಾನವಂ ದಿಗ್ಭಿತ್ತಿಗಳ್ ಬಿರಿವಿನಂ, ದಿಗ್ಗಜಂಗಳಳ್ಕುವಿನಂ, ದಿಗಧೀಶರ್ ಬೆರ್ಚುವಿನಂ ಬೊಬ್ಬಿಱಿದು ಪೈಮುರಿದು ಪರಿದು ಸರಿದು ಬಲ್ಗಣೆಗಳಂ ಪೂಡಿಯುಂ ಮಾರ್ಗಣೆಗಳಂ ಕಡಿದುಂ ಕಟ್ಟಳವಿಯ ಹರಿಬಂನುರ್ಗುನೂಂಕಪ್ಪಿನೆಗಂ ತನಗಂ ತೇರ್ಗಂ ಕಾಪಿಟ್ಟು ಮುಟ್ಟಿಯಿಪ ಪ್ರತಿಭಟರಂ ತಡೆದು—ಇರಿಮಿರಿಂ. ಹರಣಂ ಜೋಕೆ! ಎನ್ನ ಪೋಗಂ ತಡೆಗಟ್ಟಿಯುಮೆನ್ನಂ ಗೆಲ್ದುಂ ಬಾಳ್ವ ಗಂಡರುಮೊಳರೆ! ಎಂತೆಂತೊ ಜಳಿಕರಕ್ಕಸರಂ ಗೆಲ್ದೊಂದು ಟಕ್ಕಿನ ಬಲ್ಮೆಯನ್ನೀತೋಳ್ವಲಕೇಂ ಬಾರ್ತೆಯೆ? ನಿಮ್ಮನ್ನರ್ಗೇಕೆ ಚಲಂ, ಬಲಂ, ದಿಟಂ, ಹಟಂ, ಸಾಸಂ, ಮೋಸಂ, ಬೀರಂ, ಗೀರಂ. ಕೆಲಸಾರಿಂ : ಅಲ್ಲದೊಡೆ ಬಿಡೆನೀಗಳೆ ಕೊಂದು ಪೋಱಿಸಿ ತಾಳಿಸಿ ಗಮ್ಮನೆ ನಿಮ್ಮನೆಮ್ಮ ಮಾಲಿನಿಯರ್ಗೆ ಬಲಿಗುಡವೆನಲ್ಲದೊಡಾನೆ ನೆತ್ತರಂ ನಂಜಿ ಕೊಟ್ಟಸಮನಗಿದು ಕರುಳಂ ನುಂಗಿ ನೆಣನಂ ಸವಿದು ಮೆಂದಳಸುಂಡು ನಲಿವೆನಂತುಮಲ್ಲದೊಡೆ ಸತ್ತ ಪುತ್ತಯ್ಯನ ಪೈತಿಗೆಯನಿಂದೆ ಸಡ್ಡೆಯಿನಾಗಿಸಿ ಬಂದ ಬೊಮ್ಮರಕ್ಕಸಿಯರ್ಗೆ ನಿಮ್ಮಡಗಿನೆಡೆಗೆಯ್ವೆಂ ಎಂದಂ. ಅದರ್ಕಾಮುಱುವಕ್ಕದ ಜೋದರ್ ಕಿನಿಸಿಂ ಮಾರ್ಕೊಂಡು ಕೋಲ್ಗಳಿಂ ಪೂಟ್ಡು—ಎಲೆಲೆ ಸಮ್ಮಂಗುಂದಿದ ಪುಚ್ಚಱಿಯ ಬಾಳ್ಸಬಮೆ ! ನರಿಯಂತೆ ನಾಯಂತೆ ಊಱಿದ್ದೊಡೆ ಬಗುಳ್ದೊಡಕ್ಕುಮೆ ! ಕಲಿಯಂತೆ ಗಂಡರಂತೆ ಕೆಯ್ಗುಣಮುಂ ತೋಱವೇಡಾ ! ಓ ನೀನುಮೇಗುವಯ್ ! ಆಱಿಯ ಕೇಱಿಯ ನಿಮ್ಮನ್ನರ್ಗೀ ಆಳ್ತನಂ ಪುಗುತೆಯಿರ್ಕುಂ. ಅಂದಿನ ಮಹಿರಾವಣರಾವಣಕುಂಭಕರ್ಣಾದ್ಯರ ಸೊರ್ಕುಂ ಜೆರ್ಕುಂ ನಿಮ್ಮವರ ತರಣದ ನೆಲೆಯುಂ ಪೇಱವೆ! ಚೀ !

ಮರುಳೆ! ರಾವಣಂ ಮುಂತಪ್ಪ ದೆಸೆಮುಟ್ಟಿನ ಜಸದ ದೈತ್ಯರಂ ಜಱಿಪ್ಪಿ ಸೊಪ್ಪಿ ಸೋವಿದ ಶ್ರೀರಾಮಂ ಬೇಳ್ವ ಜನ್ನದ ಹಸುವಂ ಕಳ್ದುಯ್ದುಂ ಬಾೞ್ವನೆಂದು ಬಗೆವ ನೀನಾವೊಂ? ಮತ್ತಮಾದಿನದ ಪೆಣ್ಗಳ್ಗನೇ ನಾದನೆಂದೀದಿನದ ಹಸುಗಳ್ಗಂ ನೀಂ ಬಗೆಯಲ್ವೇಡಾ! ಎನುತೆ ಜಱಿದರ್. ಆಗಳಸುರಂ ಕಟ್ಟಾಸುರಂ ಕುಂದದ ಕೋಲ್ಗಳೆಸುಗೆಯ ಕೆಯ್ಚಳಕದಿಂ ಪಗೆಗಳಂ ಘಾತಿಸಿ ಭೀತಿಸಿ,—ಆನಱಿಯೆನೆ ಎಮ್ಮ ನಿಮ್ಮ ಸಾಹಸ ದಿರವಂ! ಗೞಪಿದೊಡೇಂ ಬಾೞ್ತ್ರಯೊ! ಕೊಡಲಿಯ ಕಾವೆ ಕುಲಕ್ಕೆ ಕೇಡಾದುದಲ್ಲದೆ ಜಗದಳ್ಕೆಯ ಗಂಡನಂ ರಾವಣನಂ ಗೆಲ್ವ ಕೊಲ್ವ ಮಾನವರುಂಟೇ? ಏಂ! ಕಿಱುದಂಗೆ ಶೂರ್ಪಣಖೆ ದೂದವಿಯೊಂದು ಪಿಸುಣಾಡಿ ಕೊಂದಳಲ್ಲದನುಜವಿಭೀಷಣಂ ಚಿದ್ರದಿಂ ತಾನೆ ಕೊಂದನಲ್ಲ ದುಂಡೊಱಗನುಱುಗಿ [ಕುಂಭಕರ್ಣಂ] ಸೋಂಬಿಂ ಕೊಂದನಲ್ಲದಾ ತನ್ನ ನೊಸಲಕ್ಕರದೋದೆ ರಾವಣನಂ ಕೊಂದುದಲ್ಲದೆ, ಪೋ, ರಾಮಂ ಕೊಂದನೆ! ನೂಱೇಂ? ಗಾಡಿಯ ಮೋಡಿಯ ಕವಡುವಲೆಯನೊಡ್ಡಿ ಮಿಡುಕಿನ ಸಡಕುಗಾರ್ತಿ ಜಾವಳಿ ಸೀತೆ ತಾನೆ ತನಗೊಲ್ದ ನೀಱನಂ ರಾವಣನಂ ಕೆಯ್ಯಾಱಿ ಕೊಂದು ಕುಡಿದಳಲ್ಲದೀಕುಱುಮಾನಸರೀಮುದಮಂಕಡರೀ ಬಾನ ಬನ್ನದ ಕುನ್ನಿಮೂೞರ್ ಬೋೞರ್, ಆಃ! ಚೀಃ!, ಕೊಂದರೆ! ಅಂತಿರೆಯುಂ ತಾಂ ತಾನೆ ಪೊಂದಿದ ರಾವಣನಂ ಕೊಂದೆವೆಂದೆ ಬಗೆದು ಮಾತನ ಬರ್ದುಗೆಯ ಶಾಂತಿಗೆಂದಾತಗೆ ಮಾೞಯುಮೆನೆ ನೀಂ ಮಾೞ್ಪ ಜನ್ನದ ಹಸುವಂ ಪಿಡಿವೊಡೆ ನಿಮಗೆ ಮುನಿಸಾಯ್ತು! ಬೇಡ! ಮಾಣಿರೆ! ಇನಿತುಂ ಬವಣೆಯೇಕೆ! ಅಂತುಟೊದವಿದ ದೋಸಕ್ಕೆ ನಿಮ್ಮನೆ ಕೊಂದು ಕೊಲೆಗೆ ಕೂಱಿಕ್ಕುವೆಂ. ಎನ್ನ ಕೆಳೆಯನಂ ಕೊಂದ ನಿಮ್ಮವರಂ ಬಿಡುವೆನೆ! ಎಂದಾರ್ಭಟಿಸಿದಂ. ಮತ್ತಮನಿತಱಕೂೞಾತನಂ ಪ್ರತಿಭಟಿಸಿ ಪುಷ್ಕಲಾದ್ಯರ್ ಬಾಯ್ಗೊರ್ವಿನ ಸೊರ್ಕಿನ ದಾನವಂಗೆ—ಎಲೆ ಮೊಯ್ಗಳ್ಳ! ನಿನ್ನ ಕೆಳೆಯನೆಂತೆಂತೊ ಸತ್ತು ಮಿತ್ತುವಿನೂರ ಚಾವಡಿಗೆ ಸಂದು ಬಲದೊಳ್ ಗದ್ದುಗೆಗೊಂಡರಸಾಳ್ವನಂತಿರೆ ನೀನೀ ಇಸ್ಸಿ! ಪಾೞ್ಗಿಟ್ಟ ನಾಡೊಳಿರಲಕ್ಕುಮೆ! ಪೋ, ನಿನ್ನನುಮನಾಪೊೞಲ್ಗೆ ಚಿಕ್ಕರಸು ತನಕ್ಕಟ್ಟುವೆವೆಂದಕ್ಷಯಬಾಣಂಗಳಂ ಶರಾಸನದೊಳ್ ತೊಟ್ಟರ್. ಇಂತಾಗಲೊಡಂ ವಿದ್ಯುನ್ಮಾಲಿ ತೇರಿನಿೞಿದು ಮಾಱಾಂತ ಮಿತ್ರಭಟರ

ಕೋಲ್ಗಳನನಿತುಮಂ ತಾನೊರ್ವನೆ ತಡೆದುಂ ಪಿಡಿದುಂ ಕಡಿದುಂ ಪ್ರಳಯಭೈರವನಂತಿರಾಜಿಯೊಳ್ ಕಡುಕೆಯ್ದು ಅಡಿಗಡಿಗೆ ಗುಡುಗುಡಿಸಿ ಬೀದಿವರಿಯುತೆ ಸುರರ್ ಬೆಕ್ಕಸಂಬಡುವಿನಂ ಪಾೞಿಯಿಂ ಪರಸೈನ್ಯಮಂ ಕೋಳುಗೊಂಬುದುಂ—ಒರ್ದೆಸೆಯೊಳ್ ಪುಷ್ಕಲನಿಸುಗೆಯ ಕೋಲ ಸೋನೆ, ಮೇಣೊಂದೆಡೆಯ ಲಕ್ಷ್ಮೀನಿಧಿಯ ಪೊಯ್ಯ ಗದೆಯ ಬಿಱುಗಾಳಿ, ಮತ್ತಮೊಂದೆಡೆಯೊಳ್ ಪ್ರತಾಪಾಗ್ರ್ಯನ ಬೀಸಿನ ಸುರಗಿಯ ಮಿಂಚು, ಪೆಱತೊಂದೆಡೆಯೊಳಣುವನ ನೀಡಿನ ಕಲ್ಗಳ ಕಲ್ಮೞೆ, ಬೞಿಕ್ಕಮೊಂದೆಡೆಯೊಳ್ ಸುಭುಜಸುಮುದಪ್ರಭೃತಿ ವೀರರಾರ್ಭಟೆಯ ಸಿಂಹನಾದದ ಮೊೞಗು ಮುಂಗಾರಂ ಕೇೞ್ಮಡಲೊಡಂ ; ಶತ್ರುಹನ ಬಲದ ಬೀರದ ಜೋದರ್ ಕಳನೊಳ್ ಕಳನೊಳ್ ತಾಗಿದರ್. ಅಂತಿರ್ಕಡೆಯುಂ ಬೆರಸೊಳಗೊಳಗೆ ಪಳಂಚುತಿರೆಯಿರೆ ರಕ್ಕಸನ ಕೆಯ್ಯ ಕೋಲುಂ, ಮೆಯ್ಯ್ಯವುತೆಯುಂ, ತಲೆಯ ಸೀಸಕಮುಂ ಕಡಿವಡೆದುದು ; ಮೊಗದ ಕಳೆ ಪಗಲ ಪೆಱೆಯ ಕಳೆಗೆ ದೊರೆವರೆ, ಬಗೆಯ ಕಾಯ್ಪು ಕಡೆವಗಲ ಮುತ್ತ ನೇಸಱ ಕಾಯ್ಪಿಂಗೆ ಪಾಸಟಿಯಾಗೆ, ತೋಳ ಬಲಂ ಪುರನ ತೋಳ ಬಲಕ್ಕೆ ಪೋಲ್ತಿರೆ, ರಕ್ಕಸಂ ಸೋಲ್ತು ಸುಣ್ಣದೊಳಾದಂ.

ಈತೆಱನೊಳ್ ರಕ್ಕಸನ ಹರಿಸಂ ತರಿಸಮಾಗೆ ತಱಿಸಂದು ಮನದೆ ಮಾಯೆಯಂ ಬಗೆದು ಕವಡುಬಿಜ್ಜೆಯನೊಡ್ಡಿ ನಿಲ್ವುದುಂ, ಪುಷ್ಕಲಂ ನಾರಾಯಣಾಸ್ತ್ರದಿಂ ಸೆಳೆದಿಸುವುದುಂ, ಮಾಯುಂ ಕಣ್ಮಾಯಮಾದತ್ತು. ಆಗಳ್ ರಕ್ಕಸಂ ಬಕ್ಕಂಬಯಲೊಳಾಗೆ ಅಣುವನ ಗುರ್ದೊಂದು ಜನಕಜನ ಗಜೆಯ ಬಡಿಯೆರಡು ಪ್ರತಾಪಾಗ್ರ್ಯನ ಬಾಳ ಕಡಿತಂ ಮೂಱು, ಭಾರತಿಯ ಬಿಱುಗಣೆಯ ಪೊಯ್ ನಾಲ್ಕು, ಮಿಕ್ಕ ರಾಯರ ಇಟ್ಟಿಯ ಕೊಂತದಿಱಿತವೈದು ಇವಱಿನ್ನೈದಱಿಂ ರಕ್ಕಸಂ ಪಂಚತ್ವಮನೆಯ್ದಿದಂ. ಸುರದುಂದುಭಿನಿನಾದಂ ದಿಗ್ಗಜಂಗಳ ಬೃಂಹಿತಂ ಸಪ್ತಶರಧಿನಿರ್ಘೋಷಂ ಮೂವಡಿಯಿಂ ಪೆರ್ಚಿದುದು; ಸುರರುಂ ಕಿನ್ನರರುಂ, ನರರುಂ, ವಾನರರುಂ ಪೊಗರೇಱಿ ಕಳಿವೆರ್ಚಿದರ್.

ಎನ್ನರಿವೊಡಲ ಮುದ್ದುಮೊಗದ ಸಿಂಗಾರಿ ! ಎನ್ನ ಪೊನ್ನಪದಗದ ರನ್ನದಾರದ ಬಚ್ಚಳೆ, ನೀಱೆ ! ಇಂತಿನಿತೊಂದು ಮಾೞ್ಕೆಯಿಂ ಮಡಿದಾಂಗೊೞಗೆಂತಂತು ಪೋೞ್ದುರ್ಕಡಿವೋಗಿ ರಣದೊಳ್ ಕೆಡೆದ ದಾನವ

ನೊಡಲಂ ಕಾಗೆಗೂಗೆಗಳ್ ನರಿನಾಯ್ಗಳಾರಯ್ಯುತಿರ್ಪುದುಮಿತ್ತಲ್ ಹತಶೇಷರಪ್ಪ ರಕ್ಕಸರ್ ರಣಕ್ಕೆ ಬೆಂಗೊಟ್ಟೋಡಿ ತಮ್ಮೆಡೆಯಂ ಪೊರ್ದಿದರ್.

ಮತ್ತಮಾಗಳ್ ತಮ್ಮನೆ ಒಲ್ದೊಲಿಲ್ದು ಬೆಂಬಿಡಿದೆಯ್ದುವರ್ಪ ವಿಜಯಶ್ರೀಯುಂ ತಳ್ಕೈಸಿ ನೋಡಿ ಕೂಡಿ ಹಯಂಬೆರಸು ಜೋದರೆಲ್ಲರ್ ಶತ್ರುಹನೊಂದಾಣತಿಯೊಳನುವಱಿತು ಬಡಗದೆಸೆವಿಡಿದು ನಡೆಯುತುಮಿರ್ದರ್. ಆಕಾಲದೊಳ್—

ಗೊಜ್ಜಿಗೆಗೆಳಜವ್ವನಂ, ಮಲ್ಲಿಗೆಗೆ ಮೊಳೆಜವ್ವನಂ, ಸುರಯಿಗೆ ನೆರೆಜವ್ವನಂ, ಪಡ್ಡಳಿಗೆ ತುಂಬುಜವ್ವನಂ, ಕೋವಳೆಗೆ ಮೀಂಟುಜವ್ವನಂ, ತಾವರೆಗೆ [ಏಱುಂ]ಜವ್ವನಮೊದವಿತ್ತು. ಮತ್ತಂ ಗೋಣಿಗೆ ಪಣ್ಣಂ, ಮಾಮರಕ್ಕೆ ಪೂವಂ, ಬಕ್ಕೆವಲಸಿಂಗೆ ಕಳಿಕೆಯುಂ, ತೆಂಗುಕೌಂಗುಗಳ್ಗೆ ನಿಡುಗೊನೆಯುಂ ಪತ್ತಿಸಿ ತೆತ್ತಿಸಿ ಬೀಸುವ ಪಡುವಲಗಾಳಿ ಕೞಿತು ಚಳಿತು ಬೆಂಗುಡುವಿನೆಗಂ ನುರ್ಗಿ ತಳ್ಪೊಯ್ದು ಪಳಂಚಲೆದುದು. ತಳ್ತ ಬಡಗಣ ಕುಳಿರ್ಗಾಳಿ ಅಗಳೊತ್ತಿನಿಂದ ಕೊಳನ ನೀರ್ಗೆ ಬಿಸುಪುಂ, ಪೊತ್ತಿಪೊಗೆವ ಕಿಚ್ಚಿನ ಜಾಲೆಗೆ ತಣ್ಪುಮೊರ್ಮೊದಲೊಳೆ ತಲೆದೋಱಿದತ್ತು. ಮೇಣುಂ ಬಂದು ಬಂದಿಗೊಂಡ ಕಡುಚಳಿ ನಾಡಿಗರಂ ಪಿಡಿದುಂ ಜಡಿದು ಮುಳುಕಿಸಿಯುಂ ನಡುಗಿಸಿಯುಂ ತಲೆನಾಗಿಸಿಯುಂ ಗುರ್ದಿಯುಂ ತಿರ್ದಿಯುಂ ಕೆಡೆಪುವುದುಂ, ಸುಗಿದು ಸುರುಂಟಿ ಮುರುಂಟಿ ಮರವಟ್ಟು ಮೂಗುವಟ್ಟು ಮೆಯ್ಗೆಟ್ಟು ಬಸವಱಿದಸಕಳಿದರೆಲ್ಲರ್. ಪೊಸವರೆಯದ ಜವ್ವನಿಗರ್ ತಂತಮ್ಮ ಕಾದಲೆಯರ ತೋಳ ತಳ್ಕೆಯೊಳೆಸೆದರ್ ; ಮುದುಪರಂದು ಸುಡುಗಿರ್ಚಿನ ಮುಱಿಯಂ ಸಾರ್ದು ಗುಱುಗುಮ್ಮನಿರ್ದರಿರುಳುಂ ಪಗಲುಂ.

ಅಂತುಮಲ್ಲದೆಯುಮ್ಮೆಕಿಲ್ಗಂಜಿ ನಂಜುಂಡಂ ಅಸವಸದಿಂ ಪೊತ್ತ ಪೊಱಿಯುಂ ಪೆಱಿಯುಂ ಬಾಸ್ಗಿಟ್ಟು ನೆತ್ತಿಯ ಗಂಗೆಯುಂ ನೆಲಕಿೞಿಪಿ ತಾಂ ಪಣೆಯ ನಡುಗಣ್ಣ ಕಿಚ್ಚನುಜ್ಜಳಿಸಿ ಸಜ್ಜಿನ ಬೆಂಬೂದಿಯುಂ ಮೆಯ್ಗೆ ಪೂಸಿ ದಟ್ಟಿದೊವಲಂ ಪೊದೆದಗಜೆವೆರಸು ಬೆರೆವೊಡಲೊಳಿರ್ದಂ. ಚಳಿಗಾಱದೆ ನಾರಾಯಣನುಂ ಲಕ್ಷ್ಮಿಯ ಬಲ್ಮೊಲೆಗಳ ಬಿನ್ನಗಳೆಡೆಯ ಬಿರಿಕಿನೆಡೆಯೊಳ್ ಬಿನ್ನನಡಂಗಿ ಬೆಳ್ವಟ್ಟೆಯ ಮುಸುಂಕಿನೊಳಿರ್ದಂ. ಪೆರ್ಚುಗೆಯ ಕಡುಹಿವದ ಕೋಡಿಂಗಗಿದು ಭಾಸ್ಕರಂ ತನ್ನ ನಚ್ಚಿನ

ಕಮಲಿನಿಯುಂ ನೀರ್ನಾನಸೆಯುಂ ಬಿಟ್ಟು ಕೈಗೆಟ್ಟು ದೆಸೆಗೆಟ್ಟು ತುರಿಪದಿ ನೋಡಿ ನೋಡಿ ಪಡುವೆಟ್ಟಿನ ಕೊಂಬಿನ ಗುಹೆಯುಂ ಸಾರ್ದು ಸೇರ್ದು ಪಂಚೆವೆಣ್ಣ ಪೂಸಕೂಟದೊಳ್ ಪಿರಿದುಮಿರ್ದಂ.

ಇಂತು ಬಂದೊದವಿದ ಚಳಿಗಾಲದೊಳ್ ರಾಘವನ ಯಜ್ಞತುರಂಗಮುಂ ಅರಣ್ಯಕನೆಂಬೊರ್ವಂ ಕಿತ್ತಡಿಯ ಪುಣ್ಯಾಶ್ರಮಮುಮಂ ಪುಗುತರ್ಪುದಂ ಕಂಡು ಶತ್ರುಘ್ನಾದ್ಯರ್ ಮುನಿಯ ದರ್ಶನಕೆಂದೊಳಪೊಕ್ಕು ಮುನಿಗೆಱಗಿದರ್. ಆಗಳರಣ್ಯಕನಭ್ಯಾಗತರಂ ಮನ್ನಿಸಿ ಸರ್ವರನಾತಿಥ್ಯದಿಂ ಸತ್ಕರಿಸಿ ಶ್ರೀರಾಮಸತ್ಕಥಾವಿನೋದಗೋಷ್ಠಿಯೊಳ್......

ಮನೋರಮೆ—ಎನ್ನ ಚೆನ್ನಿಗ ! ಆತಿಥ್ಯಮೆಂದೊಡೇಂ ? ಬಱದೆ ಬಾಯುಪಚಾರಮೆ ?

ಮುದ್ದಣಂ—ಅಲ್ತಲ್ತು ; ಬಾಯ ಉಪಚಾರಮಲ್ತು, ಬಂದರ್ಗೆ ಕೆಯ್ಗೆ ಕಾಲ್ಗೆ ನೀರಿತ್ತು ಕುಳ್ಳಿರಿಸಿ ಸವಿಗೂಟನಿಕ್ಕಿ ಪೂವಿಂ ಸಿಂಗರಿಸಿ ಬಾವನ್ನದಿಂ ಸೊಗಸುಗೆಯ್ದು ಒಡಸಿರ್ದು ನುಡಿದು ನಡೆದು ಮನ್ನಿಪುದು.

ಮನೋ—ಅಂತಿರ್ಪುದುಂ, ಶತ್ರುಹನ ಸಾಯಿರ ಸಾಯಿರ ಲೆಕ್ಕದಿಸಿವಿರಿದು ಪಡೆಗರಣ್ಯಕಂ ಕೂಟ್ನೀರಿತ್ತು ಸಮ್ಮಾನಿಸಿದನೆ ?

ಮುದ್ದ—ಅಪ್ಪುದಪ್ಪುದು. ಅನಿಬರುಮಂ ಯಥೇಚ್ಛಂ ಮೃಷ್ಟಾನ್ನಭೋಜನದಿಂ ತಣಿಪಿದಂ.

ಮನೋ—ಎನಗಿದಚ್ಚರಿ. ಎಂತುಟೂರ್ತಂ ?

ಮುದ್ದ—ಏಂ ! ಮುನಿಗಳೊಂದು ಜಪದ ತಪದ ಮಂತ್ರದ ಬಲ್ಮೆಯೇಂ ಕಿಱಿದೆ ! ಬೇಡಿದ ಪುರುಳನುಱದಿಂ ತಂದೀಗುಂ.

ಮನೋ—ಅಂತುಟೇಂ ಗನಂ ! ಆವುದೊ ಮಂತ್ರಂ ?

ಮುದ್ದ—ಆವುದೇಂ ! ಏಕಾಕ್ಷರಿ, ದ್ವ್ಯಕ್ಷರಿ, ತ್ರ್ಯಕ್ಷರಿ, ಚತುರಾಕ್ಷರಿ, ಪಂಚಾಕ್ಷರಿ, ಷಡಕ್ಷರಿ ಮುಂತಪ್ಪ ಪ್ರಸಿದ್ಧಮಂತ್ರಂಗಳೊಳವಲ್ತೆ.

ಮನೋ—ಇವಱಿಂ ಜಪಿಸಿದೊಡೇನಕ್ಕುಂ ?

ಮುದ್ದ—ಈಮಂತ್ರಂಗಳಂ ಬಿಡದೆ ಜಪಿಸಿ ಸಿದ್ಧಿವಡೆದೊಡೆ ತತ್ತದಭಿಮಾನಿದೇವತೆಗಳ್ ಮೆಯ್ದೋಱಿಯುಮೆಳಸಿದರ್ಥಮನಿತ್ತುಂ ಪೋಕುಂ.

ಮನೋ—ಓ ! ಇನಿತೊಂದು ಜಪದ ಬಲ್ಮೆ ನೆರಮಿರ್ಪಿನಂ ಪೆಱ

ತೊಂದಱ ಗೊಡವೆಯಿಲ್ಲದಿರ್ಕುಂ ತಾಪಸರ್.

ಮುದ್ದ—ಅಪ್ಪುದಪ್ಪುದು ; ತಪ್ಪೇಂ ?

ಮನೋ—ಅಂತದಿರ್ಕೆ. ನಿನ್ನನ್ನರಪ್ಪ ಕಬ್ಬಿಗರ್ ಮನೆವಾೞ್ತೆಯೊಳಿನಿಸೊಂದಂ ಗೊಡವೆಗೊಳ್ಳದೆ ಕೆಮ್ಮಕೆಮ್ಮನೆ ಪಾೞ್ಗಿತೆಯ ಕಬ್ಬದೊಳೇವೊೞ್ತುಂ ಬೆಮೆಗೊಂಡಿರ್ಪರಲೇ ! ಅವರ್ಗೇಂ ಬಟ್ಟೆಯೊ ? ಉಣಲೇಂ, ತಿನಲೇಂ ? ಅಂತಿರೊಂದು ಜಪಮಂ ಪಿರಿಯದವಸಿಗಳತ್ತಣಿನುಪದೇಶಂಗೊಂಡೊಡಾಗದೆ !

ಮುದ್ದ—(ಮುಗುಳ್ನಗೆಯಿಂ) ಏಂ ! ಎಮ್ಮವರೊಂದಿರವಿಗೆ ನಗುವಾ ? ಆಃ ! ಎಮ್ಮನ್ನರಪ್ಪ ಕಬ್ಬಿಗರ್ಗೇಂ ಕೊಱತೆಯೊ ! ತಾನೆ ಬಯಸಿದೊಡಮೆಯನಾಗಳೆ ತಂದೀವ ಮಂತ್ರದ ಜಪದೊಂದು ನೆರಂ ತಮ್ಮೊಳೊಂದಿರದೊಡಲ್ತೆ ಕಾಡ ಜೋಗಿಗಳತ್ತಣಿನುಪದೇಶಂ. ನಾಡಂ ಕಾಡಂ, ಕಾಡಂ ಬೀಡಂಗೆಯ್ವೊಂದು ಪೆರ್ಮೆಯ ಬಲ್ಮೆಯ ಕಬ್ಬಿಗರೇಂ ಕಕ್ಕುಲಿತೆಯ ಮುದುದವಸಿಗಳತ್ತಣಿಂ ಪಿರಿಯರಾಗರೆ ! ನುಡಿವರೇನದುವೆ ಪುರುಳ್, ಪಿಡಿವರೇನದುವೆ ತಿರುಳ್ ! ಪಲವೇಂ, ಕೆಲವೇಂ ? ತಮ್ಮೊಂದೆ ನುಡಿಯ ಬಲ್ಪಿಂ ಮೂಜಗಮುಮನಱಿಯಿಸುವುಱಿಯಿಸುವ ಪೊಗೞ್ತೆಗೞ್ವೆ ಕೊಳ್ವಾಳ್ವ ತಾಳ್ವ ತೂಳ್ವ ಪೂೞ್ವೆ ಪೇೞ್ವೆ ಬಾೞ್ವೆ ಸಿಂಗರದ ಬಣ್ಣಗಬ್ಬಿಗರೆಮ್ಮ, ತೆಱನನಿನ್ನುಂ ನೀನಱಿಯಯ್.

ಮನೋ—(ಬಿಸವಂದಂಗೊಂಡು) ನಿಮ್ಮವರ್ಗಮಂತಿರೆ ಮಂತ್ರಂ ಸಿದ್ಧಿವರ್ಕುಮೆ ?

ಮುದ್ದ—ತಡೆಯೇನಳ್ಕೇಂ !

ಮನೋ—ನಿನ್ನೊಳಮೊಳವೆ ?

ಮುದ್ದ—ಎನ್ನೊಳಿಂತಿದು ಪಾಸುವೊಕ್ಕು.

ಮನೋ—ಆಃ ! ನೀನುಂ ಬಲ್ವಮೆಗಾಱಂ. ನಿನಗಾರತ್ತಣಿನೆಂದುಪದೇಶಮಾಯ್ತು ?

ಮುದ್ದ—ಗುರುವತ್ತಣಿನಂದೆಳವೆಯೊಳೆ.

ಮನೋ—ಎನ್ನೆಱೆಯ ! ಅದಾವುದೊ ಮಂತ್ರಮೆನ್ನೊಳುಸಿರ ?

ಮುದ್ದ—ಆಃ ! ಆಃ ! ಒಳ್ಳಿತೊಳ್ಳಿತು !! ಮಂತ್ರಂ ಗಡ ! ತನಗೊರೆವುದು ಗಡ ! ಚಿಃ ! ಚಿಃ ! ಪೆಣ್ಗಳ್ಗೀಮಂತ್ರೋಪದೇಶಂ ಸಲ್ವುದೆ ?

ಮನೋ—ಅನಱಿಯೆನೆ ! ನಿನ್ನತ್ತಣಿನುಪದೇಶಂಬೇಡುವೆನೆ ! ನೀನಾಗಳಿಂದ ಮಂತ್ರಂಗೊಳಾವುದದಱ ಪೆಸರೇನೆಂದೆ ಕೇಳ್ದಿಂ.

ಮುದ್ದ—ಆಗಳಿಂದ ಮುನಿಗಳ ಮಂತ್ರಂಗಳೊಳಲ್ತು. ಎಮ್ಮ ಮಂತ್ರಂಗಳ ಬಗೆ ಬೇಱೆ, ಮೂಱೆರಡಕ್ಕರದ ಮಂತ್ರಂಗಳೆಮಗಕ್ಕುಮೆ ! ಎಮ್ಮತಂತು ಕಿಱಿದಲ್ತು ಬಲ್ಪಿರಿದು. ಒಂದಕ್ಕರಮಲ್ತೆರಡಲ್ತು ಮೂಱಲ್ತು, ನಾಲ್ಕೈದಲ್ತು, ಆಱುಮಲ್ತು ; ಏೞಕ್ಕರದ ಬೀಜಮಂತ್ರಂ. ಅಂತದಱಿಂ ಸರ್ವಮಂತ್ರಂಗಳ್ಗೆ ತಲೆಯೊಳಿರ್ದು ಮೇಲೆನಿಪ್ಪ ಸಪ್ತಾಕ್ಷರೀಮಂತ್ರಮೆಂದು ಪೆಸರ್.

ಮನೋ—ಹಾಹಾ ! ಆಮಂತ್ರಕ್ಕಭಿಮಾನಿದೇವತೆಯಾವುದು ? ಮುನ್ನಮಾರಿದಂ ಜಪಿಸಿ ಸಿದ್ಧಿಗಂಡರ್ ?

ಮುದ್ದ—ಪೋಪೋ ! ಇಂತಿವಱಿಂ ಕೊಂಡೇಂ ಕಜ್ಜಂ ?

ಮನೋ—ಇರ್ಕೆ, ಕೇಳ್ವೆಂ.

ಮುದ್ದ—ಅಂತಾದೊಡೆ ಕೇಳ್ ಪೇೞ್ವೆಂ. ಇಂತೇರ್ಪಟ್ಟ ಮಂತ್ರದಧಿದೇವತೆ ಜ್ಯೇಷ್ಠೆ. ಮುನ್ನಮೀಶ್ವರಂ ತನ್ನೊಂದು ಲೀಲೆಯೊಳ್ ಜಪಿಸಿ ಸಿದ್ಧಿಗೊಂಡನಂತದಱಿನಾತನೆ ಋಷಿ.

ಮನೋ—ಓಓ ! ಇಂತುಟೆ ಮಂತ್ರದೊಂದು ಮೈಮೆ ! ಎಲೆ ರಮಣ ! ನಿನ್ನಡಿಗಳ್ಗೆಱಗುವೆಂ. ಎನ್ನತಿನಿತೊಂದು ಬಿನ್ನಪಂ. ಅಂತು ಸಂದ ಸಿದ್ಧಿಯ ಮಂತ್ರಮಾವುದೊ ಕೂರ್ಮೆಯಿಂ ತಿಳಿಯೆ ಪೇೞ್.

ಮುದ್ದ— ಆಗಳೆ ಪೇೞ್ದೆನಲ್ತೆ ಸಪ್ತಾಕ್ಷರೀಮಂತ್ರಮೆಂದು.

ಮನೋ—ಅಂತು ಪೆಸರನಲ್ತು, ಮೂಲಮನೆ ಕುಱಿತೆನ್ನೊಳಾಡಿ ತೋಱ.

ಮುದ್ದ—ಅಬ್ಬಾ ! ಪೆಣ್ಣೇಂ ಗಡುಸುಗಾರ್ತಿಯೊ ! ಆಗಳ್ ಪೆಸರೇನೆಂದಳ್, ಈಗಳ್ ಮೂಲಮಂ ಕೇಳ್ವಳ್ ; ಇನ್ನೇವಳೋ ? ಮೂಱೆೞೆಯ ಜನ್ನದಾರದಾಣೆ ! ಉತ್ತರಿಗೆಯಾಣೆ ! ಆಗದಾಗದು. ಕೇಳ್ವುದರ್ಕೆ ಪೇೞ್ವುದರ್ಕೆ ನಿಮಗಧಿಕಾರಮಿರದು. ಕಣ್ಗೆ ಕಾಲ್ಗೆ ಕೇಡು !

ಮನೋ—ಕಿವಿಯಿಂ ಕೇಳ್ವುದಱೊಳೇಂ ದೋಸಂ ? ಅಂತೇರ್ಪಟ್ಟ ವೇದಮನಾದೊಡಮೋದುವೆಡೆಯೊಳ್ ಕೇಳದೆ ಪೆಣ್ ? ನಿನ್ನೊಳಮೇಂ ಜಂಬಮೊ !

ಮುದ್ದ—ವೇದಮಂತ್ರದ ಬಗೆ ಬೇಱು. ಇದಱ ಪರಿ ಬೇಱು. ಅಜಗಜಾಂತರಂ. ಅದಱಿಂದಮೊಳಂ "ಗೂಢಾದ್ಗೂಢತರಂ ಮಂತ್ರಂ" ಎಂದು ಪೇೞ್ದುದುಂಟು. ಅದುಕಾರಣಂ ನಾಂ ಪೇೞಲಾಗದು ; ನೀಂ ಕೇಳಲುಮಾಗದು. ಮುಂತಣ ಕತೆಯಂ ಕೇಳ್. ಮತ್ತಮರಣ್ಯಕಂ ಶತ್ರುಘ್ನಾದ್ಯರೊಳ್......

ಮನೋ—ತೆಗೆ ತೆಗೆ! ನಿನ್ನ ಮುಂಗತೆಯುಂ ಏತೆಯುಂ. ಅದೇಂ ಮಂತ್ರಮೊ ಕೇಳ್ವೆಂ. ಕೊರಲಾಣೆ, ಉಂಗುರದಾಣೆ, ಪೇೞ್ದಲ್ಲದೆ ಬಿಡೆಂ—ಎಂದು ಮೊಯ್ಯಿಕ್ಕುವಳ್.

ಮುದ್ದ—ಏಂ ಚಲಮೊ ಚಪಳೆಗೆ! ಪೇೞ್ವೆನೆಂದೊಡೆ ಕೇಳಳ್. ಆಃ! ಪೆಱರೊಳೊರೆದೆಮ್ಮಾ ಬೀಜಮಂತ್ರಮನೆಂತು ಪೊಲೆಗಿಡಿಪೆನೊ! ಚಿಃ! ಎಳವೆಂಡಿರ ಕೆಯ್ಯೊಳಿರ್ಪ ಕಬ್ಬಿಗರ ಬಾೞ್ಕೆಯೆ ದೂಷ್ಯಂ. (ಎಂದು ನೀಡುಂ ಭಾವಿಸಿ) ಎಲೆ ಪೆಣ್ಣೆ! ನೀನಾರೊಳಮೊಂದೆಂದಿಂಗುಮುಸಿರಲ್ಬಾರದು, ಜೋಕೆ!

ಮನೋ—ಎಂದುಮೊಂತುಮುಸಿರೆನಾಡೆಂ.

ಮುದ್ದ—ಅಂತಾದೊಡಿಂತಿದು, ಕೇಳ್. "ಭ-ವ—" ಪೆಱರೊಳಾಡೆನೆಂಬ ನಂಬುಗೆಯಂ ಪೊಯ್.

ಮನೋ—ಇದೆ, ಪಿಡಿ ನಂಬುಗೆಯಂ, ನಿನ್ನಾಣೆ, ಕುಲದೈವದಾಣೆ! ಎಂದುಂ ಪೆಱವರೊಳೊರೆಯೆಂ.

ಮುದ್ದ—ಉಂ! "ಭ ವ ತಿ ಭಿ—" ಪೆಣ್ಗಳಂ ನಂಬಲಾಗದೆಂಬರ್ ಬಲ್ಲರ್. ನೀನೆಂತೊ ಮಱವೆಯೊಳ್ ಪೆಱರೊಡನುಸಿರ್ದುದು ಗುಟ್ಟಂ ಬಿಟ್ಟೊಡೆಮ್ಮನ್ನರ ಬಾೞ್ ಪಾೞಕ್ಕುಂ.

ಮನೋ—ಆನೇಂ ಮೋಡೆಯೆ! ಪೋ! ತನ್ನಾಣೆ! ಕಣ್ಣಾಣೆ! ಕೇಳ್ವೆಂ.

ಮುದ್ದ—(ಎಕ್ಕಟೆಯೊಳ್) "ಭವತಿ ಭಿಕ್ಷಾಂ ದೇಹಿ" ಎಂಬುದಿದುವೆ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತಾಕ್ಷರೀಮಂತ್ರಂ. ಆರೊಳಾನುಮುಸಿರದಿರ್.

ಮನೋ—(ಅರೆಮುನಿಸಿಂ) ಪೋ ಮಾಣೆಲೆ ರಮಣ! ನಿನ್ನ ನುಡಿಯುಂ ಸಾಜಂ ನಿಕ್ಕುವಮೆಂದೇ ಬಗೆದೆಂ. ಈತೆಱನ ಮಾಟದ ಕವಡುನುಡಿಯ ಕೊಂಕೆಂಬುದನಱಿಯದಾದೆಂ. ನೀಂ ಕಬ್ಬಿಗನೊ, ಸಬ್ಬ

ವಕಾಜನೊ ? ನಿನ್ನೀಕಬ್ಬದ ಸೊಗಸನೆಮ್ಮನ್ನರಪ್ಪ ಜಾಣಿಲಿವೆಣ್ಗಳೆ ಕೊಂಡಾಡುವರಲ್ಲದೆ ಬಲ್ಲರೇನೊಲ್ವರೆ ?

ಮುದ್ದ—ಸಾಲ್ಗುಮೀಪರಿಹಾಸಂ, ಮುಂಗತೆಯುಂ ಕೇಳ್.

ಇಂತೀ ಮಾಬಿಶ್ಕಯಿನರಣ್ಯಕಂ ಶತ್ರುಘ್ನಾದಿವೀರರನುಪಚರಿಸಿ ಕುಳ್ಳಿರಿಸಿ ಮತ್ತಂ ಶ್ರೀರಾಮಗುಣಾನುವಾದದೊಳ್—ಏನೆಂಬ ಮಾಟ ದಾಟಮೊ ! ತಾನೆ ಯಜ್ಞಪುರುಷನಿರೆ ಬೇಳ್ವ ಜನ್ನಮೇವುದೊ ! ಜಗದ ಮಾಯೆಗಿಂತಿದಂ ತೋಱುವನಕ್ಕುಂ. ರಕ್ಕಸಗೊಲೆಯತ್ತಣಿಂ ತನಗೊಂದು ಪಾತಕಂ ಗಡ ! ಶಾಂತಿ ಗಡ ! ಕುದುರೆ ಗಡ ! ಕಾಣ್ಕೆ ಕಪ್ಪಂ ಗಡ ! ಬಡರಾಯರೊಳ್ ಪೋಣರ್ಕೆ ಗಡ ! ನಾಡ ಮಾನಸರ ಪಾಂಗಿನೊಂದು ನಡೆವಱಿಯು ರಾಮನಿರವಿಗೇನೆಂಬೆನೋ ! ಏನಾನಱಿಯೆನೆ ಮುನಿ ಪೇೞನೆ ಜಗದ ದೈವವೆಂಬುದನೆಂದಂ. ಇಂತೆಂಬ ಮುನಿಯ ನುಡಿಗೆ ಸಂತಸಂಗೊಂಡು ಶತ್ರುಘ್ನಾದ್ಯರ್—ಆವಂ ಮುನಿ, ಏವಗೆಯೊಳೆಂದನೆಂದು ಬೆಸಗೊಳಲೊಡಮರಣ್ಯಕನಿಂತು ಕತೆಗೆ ಮೊದಲ್ಗೆಯ್ದನ ದೆಂತೆಂದೊಡೆ :—

ಜಗದ ಜಂಜಡದ ಕವಡುಮಾಯೆಯ ಬಿಗುಗಟ್ಟಂ ಕಟ್ಟುವಡೆದಾಂ ಮುನ್ನಮಾಗಳಾಗಳ್ ಪಲದಿನದ ಪಿರಿಯ ಮುತ್ತ ಜಾಣ್ಮೆಯ ಬಲ್ಲಿದರ ನೆರೆಯ ಮಱೆಯ ನೆರವುಂ ಪಾರುತುಮಿರ್ಪೊಡಾದೆಂ. ಅಂತವರೊಳಜ್ಜಂ ಲೋಮಶನೊರ್ವನಪೂರ್ವಂ ಗುರುವೊಲ್ದಿರ್ಕುಂ. ಇಂತಿರ್ಪುದು ಮಾತನ ಸನಿಯದೊಳೆ ಕೇಳ್ದಂ ಬಾೞ್ದುಮಿರೆಯಿರೆ ದೈವದತ್ತಣೊಂದು ಜಾಣ್ಮೆ ದಿನದಿನಕೆ ಮನಕೆ ನಣ್ಪಾಗಲೊಡಮಾತನಂ ಬಗೆಮಿಗೆ ಮತ್ತಂ ಮತ್ತಂ ಜಗದ ದೈವದಿರವಂ ಬೆಸಗೊಳುತುಮಿರ್ದೆಂ. ಆಗಳ್ ಕೂರ್ಮೆಯಿನೆನಗೆ ಬಿತ್ತರಿಸಿದನಿಂತು. ಕೇಳೆಲೆ, ಶಿಷ್ಯೋತ್ತಮ ! ಆದಿಮಧ್ಯಾಂತಂಗಳಿಲ್ಲದ ಮಾಯೆಗೆ ಮರುಳಾಗದ ಪರಮಾತ್ಮಂ ದೈವಮಕ್ಕುಂ. ತನ್ನೊಂದಾಣತಿಯೊಳೆ ಜಗಮುಂ ಪುಟ್ಟಿಕುಂ ಪಾಲಿಕುಂ ಸುಡುಗುಂ. ಇಂತುಮಾತನಯ ಲೀಲೆ. ಈಮಾಬಿಶ್ಕಯಿನಾಗಳುಂ ಬಗೆವಗೆಯ ತನ್ನೊಂದು ಲೀಲೆಯೊಳ್ ಬಿನದಿಪಂ. ಆತನೆ ನಾರಾಯಣಂ ಈಗಳಿದೆ ರಾಮವೆಸರಿಂ ತಿರೆಯೊಳ್ ಪುಟ್ಟಿರ್ಪನೆಂದಂ. ಅದರ್ಕೆ ಆಂ ಅಂತೇಕೆ ಪುಟ್ಟಿದನೆಂಬುದುಂ ಸವಿಸ್ತರಂ ಸೊಗಯಿಪಂತಿರೆನಗೊರೆದನದೆಂತೆನೆ :—

ಎಲೆ ಮಗನೆ ! ಆದಿನಾರಾಯಣನ ಪರಬ್ರಹ್ಮನ ಪರಮೇಶನ ಗಱಿಗೆಗಱಿಗೆಯು ಪೊಸತೆನಿಪ್ಪ ಲೀಲೆ ಎಮ್ಮನ್ನರ್ಗೆ ದುರ್ಜ್ಞೇಯಂ, ಅಂತಿರೆಯುಂ ಬಲ್ಲಂತೊರೆವೆಂ ಕೇಳ್. ಮುಮ್ಮೈಯ್ಯ ದೋಸದೆಸಕದು ಪಟಳದ ತಾಮಸರ್ ಲೋಕಕಂಟಕರಾಗೆ ರಕ್ಕಸರೆನಿಸಿ ಮಱುಮೆಯ್ಯೊಳೊಗೆದು ಹವ್ಯಕವ್ಯಂಗಳ್ಗಿಡರ್ಗೆಯ್ದು ಬಡವುಬಱುವಾನಸರಂ ಕೊಂದು ತಿಂದು ಬಿರ್ಕುಳಿಸಿ ಪೆರ್ಕುಳಿಸಿ ತಿರೆಗೆ ಪೊಱೆಯಾದರ್. ಇಂತು ಬಂದಿ ಗಾಱರತ್ತಣಿನೊಂದು ಪಾಟಿಲ್ಗೆ ಮೆಗೇಡಂ ಸೈರಿಸದೆ ಸುರರೆಲ್ಲರ್ ನಾರಾಯಣಂಗೆ ದೂಱಲೊಡಮಾತಂ ಶರಣ್ಬೊಕ್ಕ ದೇವರ್ಕಳಂ ಸೈತಿಟ್ಟು ತಾಂ ತಿರೆಯೊಳವತರಿಸಿ ಕೂಱರ ಕುತ್ತಮುಂ ಪತ್ತುವಿಡಿಸಿ ಕಾವೆನೆಂದು ನಂಬಿಸಿ ಕಳಿಪಿದಂ. ಮತ್ತಂ ತನ್ನೊಳ್ ತಱಿಸಂದು ಪೊಡಮಿಗಿಱಿತಂದು ಅಯೋಧ್ಯೆಯೊಳ್ ದಶರಥಂಗೆ ರಾಮನೆಸರಿಂ ಮೆಯ್ವೆತ್ತು ಪುಟ್ಟಿ ಮುನಿಯ ಯಾಗಮಂ ಕಾವೊಂದು ಬಗೆಯಿನೆಳಮೆಯೊಳೆ ಪೊಱಮಟ್ಟು, ಕಾಟದ ತಾಟಕೆಯಂ ಕೊಂದು, ಮಾರೀಚನಂ ಮಾರಿಗೆ ತುತ್ತಿಸಿ, ಮತ್ತಿನ ಪರಿಣಯದೊಳ್ ಸೀತೆಯಂ ಮದುವೆನಿಲ್ದು, ತನ್ನ ಮಡದಿಯ ಕತದಿಂ ರಾವಣಕುಂಭಕರ್ಣಾದಿರಾಕ್ಷಸರಂ ಮಡಿಪಿ, ಸುರರ್ಗಂ ನರರ್ಗಂ ನಿಚ್ಚಸೊಗಮನಾಗಿಸಿ, ಮೇಣೀಗಳಯೋಧ್ಯೆಯೊಳ್ ಸೋದರರ್ವೆರಸು ಪೊಡಮಿಯನಾಳ್ಗಂ. ಕೆಲವಾನುಂ ದಿನಕಶ್ವಮೇಧದೊಂದು ನೆವದಿಂ ತೆರಳ್ದು, ನಾಡಂ ದಾಱಿಟ್ಟು, ಒಳ್ಳಿದರಂ ಪೊರೆದು, ಕೂಱರಂ ತತ್ತಱಿದು ಱಿದುಂ, ಬರ್ಕುಮಾತನಡಿಯಾಣತಿಯೊಳೆ ಸೇನೆ. ಆಗಳ್ ನೀನವರಂ ಕಂಡು ಮನ್ನಿಸಿ, ಬೞಿಯಂ ಸತ್ಯಾವತಿಗೆ ಪೋಗಿ, ರಾಮನಂ ಕಂಡು, ನಿನ್ನೀಸಂಸೃತಿಯ ಬಲ್ಪೊಱೆಯನಾತನೊಳೊಪ್ಪಿಸೆಂದು ಮುನಿ ನುಡಿದಂ. ಇಂತಿದು ಪೂರ್ವವೃತ್ತಾಂತಂ. ಅಂತದುಕಾರಣದಿಂ ನಿಮ್ಮವರಂ ಕಂಡು ಪೊಂಪುಱುವೋದೆಂ. ಇನ್ನೆಮ್ಮ ನಿಮ್ಮ ಪೆಂಪಿನ ಕೂಟಮಯೋಧ್ಯೆಯೊಳಕ್ಕೆ ! ಎಂದು ಶತ್ರುಹರಂ ಮನ್ನಿಸಿ, ಮುಂತಣ ಪಯಣಮಂ ಬಳೆಯಿಸಿ, ತಾನಯೋಧ್ಯೆಯುತ್ತಲ್ ಮನೋವೇಗದಿಂ ನಡೆದಂ.

ಎಂಬಲ್ಲಿಗೆ ಶ್ರೀರಾಮಾಶ್ವಮೇಧದೊಳ್
ಅರಣ್ಯಕಮುನಿದರ್ಶನಂ ತ್ರಯೋದಶಾಶ್ವಾಸಂ ಸಂಪೂರ್ಣಂ.

## ಚತುರ್ದಶಾಶ್ವಾಸಂ

### — ದೇವಪುರ ವರ್ಣನಂ —

ಬೆಳತಿಗೆಗಣ್ಣ ಪೆಣ್ಣೆ ! ನನೆಯಂಬನ ಕೊಂಬಿನ ನಾಡೆ ! ನಾಡೆ ನಿಕ್ಕುಳಿಸಿದ ಕೆಯ್ಯ ಮೆಯ್ಯ ನಱುಗಂಪಿನ ಸೊಂಪಿನ ಚೆಲ್ಲಗಾರ್ತಿ ! ಕೇಳ್.

ಮತ್ತಮಾಗಳ್ ಶತ್ರುಘ್ನಪುಷ್ಕಲಲಕ್ಷ್ಮೀನಿಧಿಸುಗ್ರೀವಪ್ರಭೃತಿವೀರಾಗ್ರಗಣ್ಯರ್ ಅರಣ್ಯಕನನಯೋಧ್ಯಯತ್ತಣ್ಗೆ ಬೀೞ್ಕೊಟ್ಟು ತಾಂ ಮುಂದೆಯ್ದುವಪ್ಪುದುಂ ; ಹಯಂ ತಾಂ ತನಗೆ ತೂಪಿಱಿದ ಕೂರ್ಪಿನ ಪೆರ್ಮೆಯಿಂ ಸೊಮ್ಮುವೆರ್ಚೆ ದೊಮ್ಮಳಿಸಿ ಕಿಚಿಕಿಲ್ದು ಬಿಮ್ಮನೆ ನಡೆದು ಬೞಿಯ ಪೊೞಿಯುಂ ಮಿಕ್ಕು ಪೊಕ್ಕು ದಿಕ್ಕುಗೆಟ್ಟು ಮುೞುಂಗಿ ಕಣ್ಮಾಯಮಾಯ್ತು. ಅನಿತಱೊಳಾಹಯದ ಬೆಂಬೞಿಯ ಕಾಪಿನಾಳ್ಗಳಿಂತಪ್ಪ ಕಣ್ಗಟ್ಟನಿರವಂ ಕಂಡಡಿಗಡಿಗಂಡಲೆದು ಕಂಗೆಟ್ಟು ಬೆದಱಿ ತಳವುಳಂಗೊಂಡು— ಜೀಯ ! ಬಿನ್ನಪಂ ಬಿನ್ನಪಂ. ನೀರ್ಪೊಕ್ಕ ಕುದುರೆಯೆತ್ತವೋದುದೋ ಕಾಣೆವು. ನೋೞ್ಪೊಡಿಂತೀಪೊಚ್ಚಮುರಿಗುದುರೆಯನೊಳಕೊಂಡ ಕಡಲ ಗುಣ್ಪಿಂದೆಸೆಗುಂ. ಪುಗಲೆಮಗಂ ಬಸಮಲ್ತು. ನೀಮೆ ನಡೆತಪ್ಪುದೆಂದು— ದಾಶರಥಿಗೆ ತಿಳಿಸಲೊಡಂ ; ಪಗೆಗಳ ಪಗೆಯುಂ ಕಟ್ಟುಚ್ಚರಿಯಿಂ ಬೆಬ್ಬರಿಸಿದ ಮನದಿಂ—ವಾಜಿ ನೀರೊಳಾಯ್ತೆ ! ಹಾ ! ಕೆಟ್ಟುದು ಕೆಟ್ಟುದು ಸಜ್ಜಿನ ಕಜ್ಜಂ. ರಾಘವನ ಜನ್ನಕ್ಕೆಡರಿಂದಿಂಗೆ ಬಂದುದೇ ! ಮುಂತೇಂ ಬಟ್ಟೆ ದೈವಮೇ !-ಎಂದು ಸುಮತಿಯುಂ ಮಂತಣಂಗೇಳ್ವುದುಂ ; ಸಚಿವಸಿಂತೇಂ ಕಳವಳಂ ! ಜಗದ ದೈವದ ಜನ್ನದ ಬನ್ನದ ಮಾತುಂಟೆ ! ಪೋಗದು ಪೋಗದು ಸಾಜಂ ವಾಜಿ ! ಏಂ ಪೊಚ್ಚವೆಣ್ ತಾನೆ ಬಯ್ತಿಟ್ಟುದೋ ? ಅಲ್ಲದೊಡೆ ಕಿನ್ನೆಲದ ನಾಗರೇಂ ಕೊಂಡುಯ್ದು ಕಟ್ಟಿದರೋ ? ಅಂತದುಕಾರಣಂ ತಳ್ವದೆ ನೀನುಂ ಭಾರತಿಯುಂ ಮಾರುತಿಯುಂ ತೊಱೆಯ ಬಸಿಱಂ ಪೊಕ್ಕಱಿಸಿಂ. ನಿಮಗಿದು ಸಾಧ್ಯಮೆಂದಱಿಪಿದಂ. ಅನಂತರಂ ಸುಮತಿಯೆಂದುದನೊಪ್ಪುಗೊಂಡು ಶ್ರೀರಘುವರನ ಪದಯುಗಮಂ ಜಾನಿಸಿ ಜಲದೇವತೆಯಂ ಭಾ

ವಿಸಿ ತಾಂ ಮೂವರುಂ ದುಮ್ಮಿಕ್ಕಿ ಮಡುವಿನ ನಡುವಣ ತಡಂಗುಂ ಡಿಯ ತಳವಮಂ ಸಾರ್ದರ್. ಇಂತಿಱಿತಂದೆತ್ತಂ ನೋೞ್ಪುದುಂ, ನೀ ರೊಳೊಳಗೊಳಗೆ ಪೊಸತೆನಿಪ್ಪ ನಾಡ ಗೋಹುರಂ ಕಣ್ಗೊಳಿಸಲೊಡ ಮಚ್ಚರಿಯಿಂ ನಟ್ಟಾಲಿಯಿಂ ದಿಟ್ಟಿಸಿತುಂ ಪೊೞಲ ಬಾಗಿಲೆಡೆಗೆಯ್ತಂ ದರ್. ಅಲ್ಲಿ ಪಡಿಯೆಡೆಯ ಪಡಿಯಱತಿಯರ್ ತುಂಬಿಗುರುಳ ಬಿಂಬಾ ಧರದ ಕಂಬುಕಂಧರದಂಬುಜನೇತ್ರೆಯರ್ ಕೆಯ್ಯ ಕಂಬಿಯೊಳ್— ನಾಣ್ ಮಾಣಿಮೆಂದು ಗದಱಲೊಡಮಾಂಜನೇಯಂ ಕಿನಿಸಿಂ—ಇಂತು ವೊಂದು ಪಡಿಬಂದಮೇಂ ? ಕೇರಿಯ ಮಂದೆಯ ಪಂದಿಯಂ ಜರ್ವಿ ತಡೆವಂತಿರೆಮ್ಮಂ ಜಡಿದು ಮಾಣಿಪ ಕೀೞ್ನಾಡ ಪೆಣ್ಗಳ್, ನಿಮಗೆ ಮೂ ಱುರ್ದೆವೇಡಾ ! ಪೋ ! ರಘುರಾಮನ ಬಂಟರಂ ತಾಂಟಲ್ ಬಗೆವ ದಿಟ್ಟೆಯರಂ ಪುಟ್ಟಿಸಿದ ಗಾಂಪಿನ ಬಿದಿಯೆ ತಲೆವೋೞಕಂ ಎಂದಂ. ಆಗ ಳೂೞಿಗವೆಣ್ಗಳೊಳೊರ್ವಳೊಳಪೊಕ್ಕು ತಮ್ಮೊಡತಿಗೀಪರಿಯಂ ವಿವರಿಪು ದುಂ ; ಜೋಗಿಣಿ ಬರವೇೞ್ಱಂಬುದುಂ ; ಬೀಡಂ ಬೀರರ್ ಪುಗುತಪ್ಪು ದುಮೊರ್ವೊದಲೊಳಾಯ್ತು. ಇಂತು ಬಂದೆಱಗಿ ತಮ್ಮಿರವಂ ಕೇಳಿಸಿದ ಮೂಜಗದ ಮುಂದಾಳ್ಗಳಂ ಮನ್ನಿಸಿ ನರೆತ ನವಿರ ಬಱತ ಮೆಯ್ಯ ತವ ಸಿಣಿ-ನಿಮ್ಮಿಬಲ್ಮೆಯ ಜಂಕಣೆಗಂ ಕಣೆಗಂ ಚಳಿತು ಮೆಯ್ಗಿಡುವರಾಗ ರೀನಾಡ ಪೆಣ್ಗಳ್. ದೇವಿಯೊಂದು ನೆರವಿಂತುಟು. ಆದೊಡಂ ನೀಂ ಕೋದಂಡದೀಕ್ಷಾಗುರುಗೆ ಬಂಟರಪ್ಪಿನಂ ನಿಮ್ಮೊಳೆಮಗೆ ಮನಂ ಬಾರದು. ಇದೆ ಬಂದ ಹಯದ ಬಂದಿಗಳೆವರ್. ಅಂತದುಕಾರಣಂ ನಿಮ್ಮಾಕು ದುರೆವೆರಸು ಮರಲ್ದು ತಿರೆಯುತ್ತಲ್ ಪೋಗಿಂ. ಶ್ರೀರಘುವರಂಗೆಮ್ಮ ಬಕುತಿಯಂ ಪೇೞಿಮೆಂದು ಜೇಂಕರಿಸಿ ನುಡಿವುದುಂ—ಶತ್ರುಘ್ನಂ ಮುಂ ತಪ್ಪ ಬಲ್ಪಿನ ಜಗಜಟ್ಟಿಗಳ್ ದೈನ್ಯಮಂ ತೋಱೆ—ಮುತ್ತಬ್ಬೆ ಜೋ ಗಿಣಿ ! ಇಂತೇರ್ಪಟ್ಟ ನಿನ್ನ ಮೈಮೆಯಃಂ ಬಗೆಯದಱವುಗೇಡಿಂ ನಾಡೆ ನಿಮ್ಮವರಂ ಚಾಳಿಸಿದೆವು, ಎಂತುಂ ಮನ್ನಿಸಿ ಕಾವುದೆಂದು—ಮೇಣಃಂ ತಲೆವಾಗಿ ನಿಂತಿರ್ದರ್. ಆದರ್ಕಾಜಕ್ಕಿಣಿ ಲಾಲಿಸಿ, ಪಾಲಿಸಿ— ನಿಮ್ಮೊಳೆನಸುಂ ತಪ್ಪಿಲ್ಲ, ಮೆಯ್ವೞಿಗಿದು ಸಾಜಂ, ಎಂದು ಸೈತಿಟ್ಟು ಬಗೆವಗೆಯ ಕೋಲ್ಗಳಂ ಬೇಱಱವೇಱಱ ಮೆಚ್ಚನಿತ್ತು ಕಳಿಪಿದಳ್. ಮತ್ತ ಮಾಬೀರರ್ ಹಸಾದಮೆಂದು ಪೞಮುದುಪಿನ ಜೋಗಿಣಿಯಂ ಬಲ

ವಂದು ಬಲಂಗೊಂಡು ದೇವಿಯ ಪೆರ್ಮೆಯುಂ ಭಾವಿಸುತುಂ ಹಯದೊಡಗೂಡಿ ಮುನ್ನಿನೆಡೆಗೆಯ್ತಂದು ಸರ್ವಗರ್ವೀಕತೆಯಂ ಬಣ್ಣಿಸಿ ಪೇೞ್ದು ಸಂತಸದಿಂ ಮುಂತೆಮುಂತೆ ನಿಚ್ಚವಯಣದಿಂ ಪಯಣಂಬೋದರ್.

ಇಂತೆತ್ತಿ ನಡೆವ ಪಡೆಗೆ ಮುಂದೆಸೆಯೊಳೊಂದು ಪೊೞಲ್ ಪೊೞಲರಸಿಂಗೆ ಪೊಸಕೞಲೆಂಬಂತಿರೊಪ್ಪುವ ಪುೞಿಲೊಟ್ಟಲಿಂ ಬೞಿವಿಡಿದ ತಣ್ಣೀರ್ಗೊಳದಿಂ, ಬಿಡುಜಡೆಯೆನೆ ಪರಿವ ಕಾಲ್ವೆಯಿಂ ಪುರರಮೆಯ ಪಸುರುಡೆಯ ಮಾೞ್ಕೆಯಿಂ ರಾಜಿಪಾರವೆಯಿಂ, ನಿಡುಮೊಲೆಗಳೆನೆ ತೋರ್ಪ ಮಾಡುವೆಟ್ಟಂಗಳಿಂ ಕಣ್ಗೆವಂದು, ಬಿಂಜದ ನಿಗರಂ ಮಂಜಿನ ಬೆಳ್ಪು ನಂಜುಂಡನ ಭೂತಿ ರಂಜಿಸಲೊಡಮೆಸೆವ ಹರ್ಮ್ಯಂಗಳಿಂ ಚೆಲ್ವಾಯ್ತು. ಇಂತು ದೇವಪುರಂಬೋಲ್ ಪೆರ್ಮೆವೆತ್ತ ದೇವಪುರಮಂ ವೀರಮಣಿವೆಸರ ವೀರಮಣಿಯೊರ್ವನರಸಾಳ್ಗುಂ. ಈತಂಗೆ ರುಕ್ಮಾಂಗದನೆಂತಂತು ಹರಿಭಕ್ತಿಗಿಂಬಾಗಿ ಸೊಬಗುಸಿರಿಯ ನಳಿದೋಳ್ಗೆ ರುಕ್ಮಾಂಗದಮೆನೆ ಸಲ್ವ ರುಕ್ಮಾಂಗದನೆಂಬ ಸೀಮಂತಪುತ್ರನುಂಟು. ಇತ್ತಲಾಗಳೀತನಂತವುರದ ಸೊರ್ಕುಂಜವ್ವನದ ಕನ್ನೆವೆಣ್ಗಳೊಡವೆರೆದು ವನವಿಹಾರದೊಳಿರ್ದಂ.

ಆಗಳ್ ಬಡನಡುವಿನ ಪಿಡಿನಡೆಯ ಕಾಂತೆಯರ್, ಬಿಡುಜಡೆಯ ನಿಡುಬಾಸೆಯ ಜೋಸೆಯರ್, ನಳಿದೋಳ ಸುೞಿವೊರ್ಕುಳ ಚೆಲ್ವೆಯರ್, ರಂಗುದುಟಿಯ ಬಿಂಗಗೆಕ್ಕೆಯ ಜಾಣೆಯರ್, ಅಗಸೆಗಿವಿಯ ಸೊಗಸುನುಡಿಯಂಗನೆಯರ್, ಮೆಲ್ಲಡಿಯ ಚೆಲ್ಗೆಗಂಗಳ ಚೆಲ್ಲಗಾರ್ತಿಯರ್, ಸಂಕುಗೊರಲ ಕೊಂಕುಗುರುಳ ನೀಱೆಯರ್, ತಳಿರ್ಗೆಯ್ಯ ಬೆಳರ್ಮೆಯ್ಯ ಬಾಲೆಯರ್, ಸೆಂಡುಮೊಲೆಯ ದಿಂಡುದೊಡೆಯ ವಿಂಡಿಯರ್, ಬಂಡುಣಿವೆದೆಯನ ದಂಡಾಳ್ಗಳೆನೆ ಪಿಂಡೆೞ್ದಿಲ್ಲಿಗಲ್ಲಿಗೆ ಸಂಚರಿಸಿ ಮೆಲ್ಲಡಿಯೊದೆಯಿಂ ಚೆನ್ನಸುಗೆಯುಂ ತಳಿರ್ಚಿಯುಂ, ಮುದ್ದುಮೊಗದ ಬೆಳ್ನಗೆಯ ಪರ್ಬುಗೆಯಿನರೆಮುಗುಳನಲರ್ಚಿಯುಂ ಚಂಚಳಿಪ ಕಡೆಗಣ್ಣೋಟದ ಕೂರ್ಪಿಂ ನನೆಗೆ ಕೊನೆಗೆ ಮೊನೆವೆರ್ಚಿಸಿಯುಮೋರೊಂದೆಡೆಯ ಚೆಂದಳಿರಂ ಚಿವುಡಿಯುಂ, ಬಿರಿಮಲರ ಗೊಂಚಲಂ ಮುರಿದೊಟ್ಟಿಯುಂ, ನೆಲನೊಳುದಿರ್ದ ಕೞಿವೂವನಾಯ್ದು ಮೊಱೆಯನೊಡಗೂಡಿ ತಿರಿದರ್.

ಇಂತು ನಲ್ಮೆ ಮಿಗೆ ಬಿನದಿಪ ಕಾಮಿನಿಯರ್ಗೆ ಕಂಜೊಡರೆನಸುಂ

ತಾಱಿ ಮೊಗಂ ಬಾಡೆ ನೊಸಲೊಳ್ ಬೆಮರ್ ಪನಿಯೆ ತೆಳ್ಗದಂಪು ಕೆಂಪಡರೆ **ಎರ್ದೆ** ದಡದಡಿಸೆ ಸುಯ್ ಪೆರ್ಚೆ ನಡೆ ತಡೆವಡೆ ಬಿಸಿಲ ಜಳಕಂ ನೆಲಕಂ ಬೞಲ್ಕೆ ತಲೆದೋಱಲೊಡಂ ಮುಂತೆಸೆವ ತಿಳಿಗೊಳನಂ ಕಂಡು ನೀರಾಟಕ್ಕೆಳಸಿದರ್. ಅನಂತರಮಾಕಾಂತೆಯರ್ ಸರಸ್ಸಿಗಿೞಿತಂದು ಪಾಸಿನೊಸರ್ಗಲ್ಲ ಮೇಲೆ ತಿಱಿತಂದ ಪೂಗಳಂ ಬೈತಿಟ್ಟು ಚೆಂದಳಿರಂ ಮುಚ್ಚಿ ನಿಚ್ಚದಲ್ಲದ ರನ್ನವಚ್ಚಮಂ ತೆಗೆದಿಟ್ಟು ಮುಱುಮುಱುಗುವ ಪಟ್ಟುಡೆಯಂ ಸಡಿಲ್ಚಿ ಸಾಜದ ರಂಗುಸೀರೆಯನುಟ್ಟು ಜಲಕೇಳಿಗೆ ಮೇಳವಿಸಿದರ್. ಅವರೊಳೊರ್ವಳ್ ಲಿಕುಚಕುಚದ ನಸೆಗಾರ್ತಿ ಕಣ್ಮಿರೆ ಕನ್ನವುರಂ ಸೂಸೆ ಕೆಯ್ವಳೆಯುಲಿಯೆ ಕೌಂಕುೞಿ ಮೊದಲ್ ತೆಱಂಬೊಳೆಯೆ ತನ್ನೊಂದು ಬೆಡಂಗಿನ ಬಾವುದಿಂ ಬಳ್ಕಿ ಬಾಗಿ ಕುಪ್ಪಸಮಂ ಸಡಿಲ್ಚಿದಳ್. ಮತ್ತಮೊರ್ವಳಟ್ಟಸದ ಜಗದಿಟ್ಟೆ ಸೋರ್ಮುಡಿಯಂ ತುಱುಬಿ ಕೞಲಂ ಕೞಚ್ಚಿ ಮುತ್ತಿನೆಕ್ಕಸರಮಂ ಕೆಲಕಿಟ್ಟು ಮೇಲುದುಮಂ ನಡುವಿನೊಳ್ ಬಿಗಿದು ದಿಮ್ಮನೆ ನೀರನಿೞಿದಳ್. ಪೆಱಳೊರ್ವಳ್ ಗಾಡಿಯ ಸಿಂಗಾಡಿಯ ಪುರ್ಬಿನ ಗರುವೆ ಮೊಲ್ಲೆಯ ಚೊಲ್ಲೆಯುಮಂ ನೀಡಾಡಿ ಹಿಣಿಲಂ ಬಿದಿರ್ಚಿ ಕಿಱುವೆರಲ ಪರಲುಂಗುರಮಂ ತೆಗೆದಿಟ್ಟು ಉಡೆಯಂ ಬಿಟ್ಟು ಚಲ್ಲಣಮನುಟ್ಟು ಮೆಯ್ಗೊಟ್ಟು ಕೊಳನಂ ಪುಗುತಂದಳ್. ಆಗಳ್ ರುಕ್ಮಾಂಗದಂ ಬಾಸಿಗಮಂ ತೋಳ ಬಂದಿಯಂ ಕೊರಲ ಪದಗಮಂ ನೇವಳಮುಮನೆತ್ತಿಟ್ಟು ದೇಸಿಯ ಗಂಡುಡಿಗೆಯನುೞಿದು ಲೇಸಿನುಡೆಯನಳವಡಿಸಿ ತೊಟ್ಟನೆ ಕೆಳದಿಯರೊಡಗೂಡಿ ನೀರೊಳಾಟಂ ಬೊಕ್ಕಂ. ಸೀರ್ಪನಿ ಸಿಡಿಯೆ ತೆರೆ ಮಸಗೆ ಕೊಳಂ ತಳಮಳಮಾಗೆ ಮೀಂಗಳ್ ಮೆಯ್ಗರೆಯೆ ದೞಂಬೞನೆ ಕೈಕಾಲ್ಗಳೊಳೀಸುವ ಕಾವನ ಪಟ್ಟದಾನೆಗಳೆಂಬೋಲಾಡಿದರ್ ಬಾಲೆಯರ್. ದುಮ್ಮಿಕ್ಕುವ ಮುೞುಂಕುವಟ್ಟುವೊಗೆವ ನೆಗೆವಾಟಮೆ ನೀರೊಳಳುಂಬಂ. ಮತ್ತಮೊರ್ವರ್ಗೊರ್ವರ್ ನೀರಂ ಸೂಸಿಯುಂ ಪೂಸಿಯುಂ ಮುಕ್ಕುಳಿಸಿಯುಂ ಜಕ್ಕುಳಿಸಿಯುಮೊರ್ವರನೊರ್ವರ್ ಪಿಡಿದುಮೆತ್ತಿಯುಂ ನೂಂಕಿಯುಮಡರ್ದುಂ ಪೊಯ್ದುಮೊಯ್ದುಂ ಬಯ್ದುಂ ಕೊಳನೊಳಾಡಿದರ್.

ಇಂತು ಕಾಂತೆಯರ್ ನಡುಕಂ ತಲೆದೋಱಿ ಮೆಯ್ ಬೆಳ್ಪೇಱಿ ತುಟಿ ಬಣ್ಣಂಗುಂದೆ ಕಣ್ಗಳ್ ರಾಗಮನೊಂದೆ ಮೊಗಂ ಕಳೆಗೆಡೆ

ಮನಂ ದಣಿಯೆ ಚೊಕ್ಕಳದಿಂ ನೀರೊಳಾಡಿ ಮಿಂದು ಬಂದು ತಡಿಯ ನಡರ್ದು ನನೆಗಪ್ಪಡಮನುೞಿದು ಪೊಸಸೀರೆಯಂ ನಿಱಿವಿಡಿದಿಟ್ಟು ಕಂಚುಕಮಂ ಬಿಗಿದು ಬೈತಲೆಯಂ ತಿರ್ದಿ ಮುಡಿಯರ ಗುಗ್ಗಳದಿಂ ಪೊಗೆದಾಱಿಸಿ ಪೂವಂ ಸೂಡಿ ಪಣೆಗೆ ಪುೞಿವಚ್ಚೆಯ ಬೊಟ್ಟನಿಟ್ಟು ಕಣ್ಗೆ ಕಜ್ಜಲಮಂ ತೊಡೆದು ಕಪೋಲದೊಳ್ ಮಗರಿಗೆಯಂ ಬರೆದು ಮೆಯ್ಗೆ ಬಾವನ್ನಮಂ ಪೂಸಿ ಅಡಿಗಲತಿಗೆಯಂ ಲೆಪ್ಪಂಬೞಿದು ಬಗೆವಗೆಯ ಪೊಂದೊಡವುಗಳಿಂ ಪಸದನಂಗೊಂಡು ಮೀಂಬೞಿಯಿಗೆಯನ ಕುಲದೇವಿಯರೆನೆ ಕಣ್ಗೆಂಬಾದರ್. ರಾಯಗುಮರನುಂ ಸಡಗರದಿಂ ಜಳಕಂಬೊಕ್ಕು ಪೊಱಮಂದು ಕೈಗುಣದ ಕಾಮಿನಿಯರಿಂ ಸಿಂಗರಂಗೊಂಡು ಕಪ್ಪುರವೀಳೆಯುಮಂ ಸವಿದು ಬಳ್ಳಿವನೆಯ ಚೆಂದಳಿರ ನಲ್ಪಾಸಿನೊಳ್ ಪೆಣ್ಬಡೆವೆರಸು ತೆಂಗಾಳಿಗೆ ಮೆಯ್ಯನೊಡ್ಡಿ ಗಾಡಿಯಿಂ ಕುಳ್ಳಿರ್ದಂ.

ಎಲೆ ಸುಭಗೆ! ಆಪೊೞ್ತಿಂಗೆ ಸೀತಾರಮಣನ ಯಜ್ಞತುರಂಗಮುಂ ಪಲನಾಡುಗಳಂ ತೊೞತೊೞಲ್ದಾವನಮನೆಯ ಪುಲ್ಗೆಳಸಿ ಪೊಕ್ಕುವಂದುದು. ಆಗಳಂತದಂ ಕಂಡೊರ್ವೆ ಚಟುಲನಯನದ ಕುಟಿಲಕುಂತಳೆ ತಮ್ಮಾಳ್ದಂಗೀವಿವರಮನಱಿಕೆಗೆಯ್ವುದುಂ ರುಕ್ಮಾಂಗದನಚ್ಚರಿದಾಳ್ದಿವಾಹಮಂ ಬರಿಸಿ ನೊಸಲೊಳೆಸೆವ ಒಲೆಯಿರೆ ಕೊಂಡಿಂತು ವಾಚಿಸಿದನದೆಂತೆನೆ :—

ಲೇಸಿನ ನೇಸಱ ಬೞಿಯೊಳೊಗೆಯೆ ಪೆರ್ಚಿದ ಕಾಯ್ಪಿಂ ಮೇಲೆನಿಪ್ಪ ಮನುಕುಲದ ರಾಯರ ಪಟ್ಟವಣೆಯನೇಱಿ ಬೞಿಸಂದಱಿಮುಂ ತನ್ನೊಳೊಪ್ಪೆ ದಶರಥರಾಮಂ ತನ್ನಂ ನಿಚ್ಚಮೋಲೈಪ ಸಕಲಸಾಮಂತಸಂದೋಹಕ್ಕೆ ತನ್ನಯ ಕೂರ್ಮೆಗಡಲೆಡೆಯೊಳ್ ಮಱಿಗೊಟ್ಟು ಸಾಕೇತಪುರಮನಾಳ್ಗುಂ. ರಾವಣಕುಂಭಕರ್ಣರ್ ಮುಂತಪ್ಪ ಬೊಮ್ಮರಕ್ಕಸರಂ ಕೊಂದು ಬಂದೊಂದು ಬೊಮ್ಮೇತಿಯ ಶಾಂತಿಗೆಂದು ಮುನಿಯಾಜ್ಞೆಯಿಂ ಜನ್ನಮಂ ಕೈಕೊಂಡು ತಾಂ ದೀಕ್ಷೆಯೊಳಿರ್ದು ಸೋದರನ ಲವಣಾಂತಕನ ಕಾಪಿನೊಳೆ ಹಸುವಂ ತಿರೆಗೆ ಬಿಟ್ಟಿರ್ಕುಂ, ಎತ್ತಾನುಂ ಪೆರ್ಗಳಿಕೆಯ ಗಂಡರಿರೆ ಕಟ್ಟುವುದು ಕಾದುವುದು ಮೊನೆಯೊಳ್ ಶತ್ರುಹಂ ಗೆಲ್ಗುಂ ಕೊಳ್ಗುಂ. ಕಟ್ಟಲಾಱದ ಕಾದಲಾಱದ ಬಣಗುಗಳ್ ಕಾಣ್ಕೆಗೊಟ್ಟಿಮ್ಮವರಂ ಕಂಡು ಬಾೞ್ವುದು.

ಮುದ್ದ—ಕಮಲನೇತ್ರೆ! ಕಮನೀಯಗಾತ್ರೆ! ಇಂತು ಬರೆದೊಕ್ಕಣೆಯಂ ವಾಚಿಸಿ ಬೆರಲ ಮೂಗಿನೊಳ್ ತಲೆದೂಗಿ ಶೌರ್ಯಾಟೋಪದಿಂ ರುಕ್ಮಾಂಗದಂ ಮೇಳದ ಪೆಣ್ಬಡೆಯಂ ದಿಟ್ಟಿಸಿ—ಆಃ! ಮನುವಿನ ಮಾರ್ಗಂ, ಭಾನುವಿನ ತೇಜಂ ತಕ್ಕುದೆ ಬಱಸಲ್ವಿನನಿನಿತೊಂದು ಪೆರ್ಮೆಗಡಪರ್ಾದನಕ್ಕುಂ ರಾಮಂ. ಏಂ ದೆಸೆದೆಸೆಯ ಬಾಳ್ಕೆಟ್ಟ ಕೀಱರಸುಗಳ್ ಖೋಡಿಗಳಾಗರೆ? ತಾನೊರ್ವನೆ ಜಗಕ್ಕೆ ಗಂಡಂ, ಮಿಕ್ಕುಳಿದರಸುಗಳೆಲ್ಲರ್ ಬಾಂಬರೆಂದೆ ಬಗೆವಂ ರಾಮಂ; ಅಲ್ಲದೊಡೇಂ ಕೊರ್ವೊ? ಏಂ ಪನ್ನತಿಕೆಯೊ? ಏಂ ಜಂಬವೊ? ತಾಂ ಗಡ! ರಕ್ಕಸವಗೆಯಂ ಗಡ! ಪಾತಕಂ ಗಡ! ಯಜ್ಞಂ ಗಡ! ಇಂತೊಂದು ನೆವದಿಂ ಪಣದಾಸೆಗೆ ಈಹಸುವನಾಡಿಸಿ ಬೇಡಿಸಿ ಕೂಡಿಸುವ ಗಾರುಡಿಗತನಮಂ ಕಂಡೊರೆದ ಜೋಗಿಯೆ ಜಾಣಂ. ಅಕ್ಕೆ, ಮೊನೆಯೊಳ್ ಗೆಲ್ವ ಬೀರರ್ ಬರ್ಕೆ. ಅನ್ನೆವರಮೆಮ್ಮ ಸಾಲೆಯೊಳ್ ಕಿಱುಕುಳದ ಬಡವುಕುದುರೆಗಳ ಸಾಲೊಳ್ ಕಟ್ಟುವೆನೆಂಬ ನಿಚ್ಚಯದಿಂ ಪಿಡಿದು ಸ್ತ್ರೀಜನಂಬೆರಸು ಪುರಕೆ ನಡೆತಂದಯ್ಯನೊಳೀಹದನನುಸಿರ್ದಂ.

ಆಗಳ್ ವೀರಮಣಿನೃಪವರಂ ಕುವರನಾಡಿದ ಪೊಸಪರಿಯುಗ್ಗಡದ ಕಾಳೆಗದ ಕಟ್ಟೆಸಕದ ಮಾತಂ ಕೇಳ್ದು ತನ್ನೊಳಾಲೋಚಿಸಿ ತನಗೆ ಮನೆಯಳಿಯನೆನಿಪ್ಪ ಮಾದೇವನೊಳೀಪವಣಂ ಮಂತಣಂಗೊಂಡಂ.

ಮನೋರಮೆ— ಎಲೆ ಜಾಣ! ಅಂತೇಂ! ಮಾದೇವಂ ರಾಯಂಗೆಂತಳಿಯನಾದಂ?

ಮುದ್ದಣಂ—ಕೇಳಾರಾಯಂಗೆ ಇಕ್ಷುಮತಿವೆಸರೊಳೊರ್ವೆ ಮಗಳುಂಟು. ಈಪೆಣ್ಮಣಿಯೆಳವಯೊಳೆ ಪರಮೇಶ್ವರನ ಮೈಮೆಯಂ ಕೇಳ್ದು ತನಗಾತನೆ ರಮಣನಾಗಲ್ವೇಳ್ಕುಮೆಂದು ಬಗೆದು ನಿಚ್ಚಂ ಶಿವನಂ ಜಪಿಸುತಿರ್ದಳ್. ಇಂತಿರ್ಪುದುಮೊಂದುದಿನಂ ಬಾಲೆಯ ಬಾಲಭಕ್ತಿಗೊಲ್ದು ಕಪರ್ದಿ ಕನಸಿನೊಳ್ ಬಂದು ನಾಳಿನ ಪಗಲೊಳ್ ತಾನೆ ವಿಪ್ರವೇಷದಿಂ ಬಂದು ನಿನ್ನಂ ವರಿಪೆನೆಂದೊರೆದಂತರ್ಹಿತನಾದಂ. ಇಂತೀ ವಿವರಮನಯ್ಯಂಗಱುಪುವುದುಂ ಮಱುದಿನಂ ಕನಸಿನೊಳೆಂದಂತಿರೋರ್ವ ನುರಿಗಣ್ಣ ಪಾರ್ವಂ ರಾಯನೋಲಗಕೆಯ್ತಂದು ಕನ್ಯಾರ್ಥಿ ತಾನೆಂದಂ. ಆಗಳರಸನೀತನೆ ಸಾಕ್ಷಾದೀಶ್ವರನೆಂದು ಬಗೆದು ಮಗಳಂ ಮದುವೆಯೊಳ್

ಕೊಟ್ಟಂ. ಇಂತು ಮದುವೆನಿಲ್ವುದುಂ ಶಿವಂ ರಾಯನ ದೃಢಕ್ಕೆ ಮೆಚ್ಚಿ ತಾಂ ಮೆಯ್ದೋಱು ವರಮಂ ಬೇಡೆಂದನದರ್ಕೆ ರಾಯಂ ನೀನೊಲ್ದೆ ಯಪ್ಪೊಡೆ ಮನೆಯಳಿಯನಾಗಿರ್ದು ಎಮ್ಮ ನಾಡಂ ಬೀಡಂ ಕಾವುದೆಂದು ಬಿನ್ನಯಿಸಲೊಡಂ, ಶಿವಂ "ತಥಾಸ್ತು" ಎಂದು ತನಗದೆರಡನೆಯ ಕೈಲಾಸಮೆನೆ ದೇವಪುರದೊಳ್ ನೆಲೆಗೊಂಡಂ.

ಮನೋ—ಓ! ವೀರಮಣಿಯಂತುಟೊಂದು ಸ್ಥೈಪಿಗಡರ್ಪಾದನೆ!

ಮುದ್ದ—ಸಾಜಂ, ರಾಜಂ ಸಕುಟುಂಬಂ ಮುಕ್ಕಣ್ಣನ ಮಱಿಯೊಳಂದಿಂದಿಂಗುಂ ಪದುಳಂ ಬಾಳ್ವಿಂ.

ಮನೋ—ಮುಂತೇಂ ಮುಂತೇಂ?

ಮುದ್ದ—ಇಂತು ನೃಪಂ ಕಟ್ಟುಬ್ಬರದ ಹರಿಬಮಂ ಬೆಸಗೊಳ್ವುದು ಮಿಾಶನಿನಿಸುಂಬೊಬ್ಬು ಜಾನಿಸಿ ರಾಯಂಗೆ—ಆಃ! ಲೇಸಿನ ಮಂತ್ರಮಂ ನೆನೆದಯ್! ಪರಕೆ ಪರನೆನಿಪ ದೈವದೊಡನಿಂದು ಪಗೆಗಟ್ಟಿದನೆ! ಹಯಮಂ ಕಟ್ಟಿದನೆ! ಯಜ್ಞಕ್ಕೆಡರ್ಬಂದನೆ! ಏನೆಂಬೆನೀತರುವಲಿ ತನದ ನಿಮ್ಮ ನುಡಿಗಂ ನಡೆಗಂ. ಶ್ರೀರಾಮಂಗಂ ನಿಮಗಂ ಚಲಮೆ! ಪುಸಿ ಪೊರ್ದದ ತನ್ನೊಂದು ಬಾಣದಿಸುಗೆಯಿಂ ರಾವಣಕುಂಭಕರ್ಣ ಮಾರೀಚಸುಬಾಹುಪ್ರಭೃತಿದಾನವರಂ ತತ್ತಱದಱದ ರಾಮನೇಂ ಗಾವಿಲನೇ? ಈಗಳಾತನ ಸೇನೆಯನಿದಿರ್ಚುವನಾವನೋ? ಉಃ! ಪೋಕೆ! ಎಂತಾನುಮವರೊಳ್ ಸಂಧಿಗೊಡಂಬಟ್ಟು ಹಯಮಂ ಬಿಟ್ಟು ಕಾಣ್ಕೆಗೊಟ್ಟವರಂ ಕಟ್ಟುವುದೊಳ್ಪಿತಯ್. ಕುವರನುಱವಣೆಗೆ ಮರು ಳ್ಗೊಂಡು ನಿರ್ನೆರಂ ಸತ್ತು ಮಿತ್ತುವಿಗೆ ತುತ್ತಾಗದಿರ್, ಸಾಱಿದೆನೆಂ ದಂ. ಆನುಡಿಗೆ ರಾಯಂ—ಎಲೆ ದೇವ! ಇಂತುಮೆಂಬರೆ! ಕಟ್ಟಿದ ಕುದುರೆಯಂ ಕೊಟ್ಟು ಮಱಿವಾಳ್ವಿ ಬಾಹುಜರೊಳರೆ? ಇಂದಕ್ಕೆ ಸಾವು, ಮೋಣಿನ್ನೆಂದಾದೊಡಮಕ್ಕೆ! ತನ್ನ ಕುಲಕಂ ಚಲಕಂ ಮುಂದಿಟ್ಟು ಕುಂದನೊಂದಿದ ದಂದುಗದೊಳ್ ಕೂಂಟಿ ನಡೆವ ಕಲಿಯುಂ ಕಲಿಯೇ! ರಾಮನಕ್ಕೆ ಸೋಮನಕ್ಕೆ ಸಾಮುವನೊಲ್ಲೆಂ. ಅದಱಿಂ ನಿನ್ನೊಳ್ಮೆ ಯೊಂದಿರೆ ಮೊನೆಯೊಳೆಮ್ಮ ಚಲಮಂ ಬಲಮಂ ತೋಱಿ ಕಾದುವೆವು ದಿಟಂ. ಇದಱಿಳೊಳ್ ನೀನಳ್ಕದೆ ಕೆಯ್ದೋಱುವುದೆಂದು ವಿನಯದೊ ಳೆಂದಂ.

ಅದರ್ಕಾ ಧೂರ್ಜಟಿ—ನೀಂ ಕ್ಷತ್ರಿಯರುಂಟು. ನಿಮಗಕ್ಕುಮೀ ಬೆಸನಂ. ಎನಗೆ ಬಡಗೊರವಂಗೇಕೆಯೊ ಕಾದಾಳ್ತನಂ ? ಅಂತುಮ ಲ್ಲದೆಯುಂ ಎನ್ನ ಕುಲದೈವದೊಳ್ ಪಗೆಗೊಂಡಿರಲಕ್ಕುಮೆ ! ಬಾರೆ ನಾಱಿನೀಹರಿಬಕೆ, ದೂಱದಿರೆನ್ನನೆಂಬುದುಂ ; ನೃಪತಿಲಕಂ ಫಣಿಭೂ ಷಣನಂ—ಎಲೆ ಮಾದೇವ- ನೀನೆ ಗತಿಯೆಂದಿನ್ನೆಬರಂ ನಂಬಿದರನೀಪೊ ೞ್ತಿಂಗಿಂತು ಪೊಱನೂಂಕಲಕ್ಕುಮೆ ! ಏಂ ಗೊಡ್ಡಾಟವೊ ! ಎಮ್ಮೊಳ್ ವಾತ್ಸಲ್ಯಮೇಂ ಪೋಯ್ತೆ ! ಬಾಂಬೊೞಲಂ ಗೆಲ್ದದಟೆಂದೆತ್ತವೋದು ದೋ ! ಇನ್ನೆಮಗಾರೊಳರ್? ಕಾವರಾರ್ ? ಎಮಗಮೀವಿಧಿಯಾಯ್ತೇ ! ಏವೆಂ ? ಅಟ್ಟೆಯೊಳುಸಿರುಳ್ಳನ್ನೆಬರಂ ಮೊನೆಯೊಳ್ ಕಾದಿ ಮೋದಿ ಸಾವೆ ನಲ್ಲದೆ ಪಗೆಗಳ್ಕಿ ಕಟ್ಟಿದ ಕುದುರೆಯುಂ ಬಿಡೆಂ, ಕುಡೆಂ, ನಿಕ್ಕುವಮೆಂದು ದಿಟ್ಟನಾದಂ. ಆನುಡಿಗೆ ಗಂಗೋತ್ತಮಾಂಗಂ ಮನವೊಲ್ದು—ಅಂಜ ದಿರೆಲೆ ನೃಪತಿ, ನಿನ್ನೊಂದು ಬಗೆಯ ಬಗೆಯುಂ ಕಂಡೆನಲ್ಲದೆ ಕೊಳು ಗುಳಕಳ್ಕಿ ಬಳ್ಕಿ ನುಡಿದೆನಲ್ತು, ರಾಘವಂ ತಾನೆ ಮೆಯ್ದೋಱುವನ್ನೆ ಬರಮಣುವಗಿಣುವರಂ ಗೆಲ್ದು ಮೋಹರಮಂ ದೆಸೆಗಿಡಿಪೆನೆಂದು ಬೋ ೞಯಿಸಿದಂ.

ಆಗಳ್ ಕಾಳೆಗವಱೆಗಳ್ ಸೂಳಯಿಸಿ ಸಾಱಿದುವು. ಪಡೆವಳ್ಳ ರೊಂದಾಣತಿಗೆ ಕಾಲಾಳ್ಗಳ್ ಮೇಲಾಳ್ಗಳುಱವಣಿಸಿ ಯುದ್ಧಸನ್ನದ್ಧಮಾ ಯ್ತು. ಗಜಂಗಳ ವಾರುವಂಗಳ ರಥಂಗಳ ಮೋಹರಂ ಗಜಬಜಿಸಿದತ್ತು. ಅಂತಿರ್ಪುದುಮತ್ತಲ್ ಕಾಪಿನಾಳ್ಗಳ್ಗೆ ಹಯಂ ಕಣ್ಮಱೆಯಾಗೆ ನಾಲ್ದೆಸೆ ಯೊಳಮಱಸಿಯುಂ, ರಾಘವಾವರಜನೊಳೀಬಗೆಯುಂ ಕಥಿಸಿದರ್. ಅನಂತರಂ ಚಿಂತಿಸಿ ಶತ್ರುಘ್ನಂ ಸುಮತಿಯೊಳ್—ಅಯ್ಯ ಮುತ್ತದಿನದ ಸಚಿವ ! ಐವತ್ತಾಱಱೊಳಂ ನೀಂ ನೋಡದ ನಾಡಿಲ್ಲಕ್ಕುಂ. ಪಲವುಂ ಸೂೞಯ್ಯನ ಜನ್ನಗುದುರೆಯುಂ ಬೞಗೊಂಡು ಬಂದೊಡೀ ಅಱವು ನಿನ್ನೊಳಾಯ್ತು. ಸಾಜಂ. ಮುಂತುಗಳೆಂತಿರವೇಡಾ ! ಲೇಸು ಲೇಸು. ಆಳ್ದನ ಕಜ್ಜಕ್ಕೆನಿತ್ತೊ ನೆರಂ. ಕೇಳಾದೊಡಾತೋರ್ಪ ಪೊೞಲನೆಮ್ಮ ಕುದುರೆ ಪೊಕ್ಕುದೆಂದು ಚರರ ನುಡಿಯಿಂದಱವೆನಾನಾಡಾವುದಯ್ ? ಒಡೆಯನಾವಂ ? ಹಯಮಂ ಕಟ್ಟುವನೆ ? ಪೇೞೆಂಬುದುಂ ; ಸುಮತಿ ರಾಯಂಗೆ—ಇದೆ ಇದೆ ದೇವಪುರಂ, ವೀರಮಣಿ ಆಳ್ವಂ. ಬಲ್ಪುಳ್ಳ ಕಡು

ಸಾಸಿ. ಅವನಂ ಮುಕ್ಕಣ್ಣನಳಿಯನಿರ್ದು ಪಾಲಿಸುವಂ. ಎಮಗೆ ಸಂಗರಂ ಕಡಿದಕ್ಕುಮಂತದುಕಾರಣಂ ತಳ್ವದೆ ಪಡೆಯನೆಟ್ಟಿಱಿಸಿ ಪುರಮಂ ಮುತ್ತಿ ಕೋಳುಗೊಂಬುದುಚಿತಮೆಂದು—ತಿಳಿಪುವುದುಂ; ಕಲಿಗಳೆಲ್ಲರ್ ಮೆಯ್ವೆರ್ಚಿ ತಾಂ ಮುನ್ನಮಾಂ ಮುನ್ನಮೆಂಬೊಂದಹಮಹಮಿಕೆಯಿನೆತ್ತಿ ನಡೆದು ಪುರಮಂ ಮುತ್ತಿ ಬೊಬ್ಬಿಱಿದು ಸನ್ನೆವಱೆಗಳಿಂ ಕಾಳೆಗಕರಿರಾಜರಂ ಕರೆದರ್.

ಇಂತು ನಾಡ ಕೋಂಟೆಯುಂ ಬಾಗಲ್ಗಟ್ಟಿ ಮುಂಬಱಿವ ಪಡಿಬಲದಿರವನಱಿತಾಗಳಣಿಯಿರ್ದ ರಾಯಮನೋಹರಂ ಮುಂದೊತ್ತಿ ತಾಗಿ ಕೋಲ್ಮಱೆಗಱೆದು ದೆಸೆಗಿಡುವಿನಂ ಕಾದುವುದುಂ, ಗಾಜುಗೆಟ್ಟು ತರಹರಿಪ ತಮ್ಮವರಂ ನಂಬಿಸಿ ನಿಗುಂಬಿಸಿ ಪುಷ್ಕಲಂ ಶರಧಿಯೊಳ್ ಪೆರ್ಚಿ ಮೇಲ್ವರಿವಂಬಿನ ಸೀವರಮೆನೆ ಕೋಲ್ಗಳಂ ಮೊಗೆಮೊಗೆದಿಸುತ್ತೆ ನುರ್ಗಿ ವಂದಂ. ಆಗಳ್ ರುಕ್ಮಾಂಗದಂ ತೆಕ್ಕನೆ ಸೂಟಿಯಿಂ ತನ್ನ ಪೊಂದೇರಂ ನೂಂಕಿ ಪಗೆಯಂ ತಾಗಿ ಹುಂಕರಿಸಿ ಮೂಂಕರಿಸಿ—ಎಲೆ ಬಣಗು! ತೊಲಗು! ಇಂದಿಂಗೆ ಬಱಿದಾಯ್ತು ನಿಮ್ಮಾಳುಂ ಬಾೞುಂ; ಕಾೞಾಯ್ತು ಗಂಡಗರ್ವಂ, ಪಾೞಾಯ್ತು ಜಸಂ. ಇನ್ನೆಬರಂ ತಮಗೆ ಜಗಂ ತೋಡಾಗದೆಂದು ಸೊರ್ಕಿನುರ್ಕಿಂ ಬಱುಗೊಂಡೆ ಪಂದೆರಾಯರಂ ಕಾಡಿಬೇಡಿ ಕೂಡಿದ ಜಾಳಿಗೆವೊನ್ನಂ ಕೋಳುಗೊಂಬೆನಲ್ಲದೊಡೆ—ಎಂದಂ.

ಆನುಡಿಗೆ ಪುಷ್ಕಲಂ ಕಡೆಗಾಲದ ಮುಕ್ಕಣ್ಣನೊಂದು ಪೊಡರ್ಪಿಂ ಕೆಂಗಣ್ಣನಾಗಿ ಮೊತ್ತಮೊದಲ್ ಕೋಲ ಸೋನೆಯಂ ಕಱೆದು ಬೞಿಬೞಿಕಂ ಜಂಕಿಸಿ ಕೊಂಕಿಸಿ— ಆಃ! ಮಂಕು! ಅಂಕವರಸುಗಳೆಂಬ ಸಂಕೆಯಿಲ್ಲದೆ ಬಿಂಕದಿನೆಮ್ಮ ಕುದುರೆಯುಂ ಕಳ್ಳರೆಂತಂತು ಕೊಂಡುಯ್ದು ಕೂಟ! ಎಮ್ಮನಣಕಿಪೊಂದು ಬಲ್ಪಾಯ್ತೆ! ಎಲೆ ಮರುಳೆ! ನೀಂ ಗಾಂಪಂ ನಿಕ್ಕುವಂ. ಪೋ! ಜಗದ ದೇವರ ಹಸುವಂ ಕಟ್ಟಿಯುಂ ಸೆಣಸಿಯುಂ ಬಾೞ್ಕ್ವೆನೆಂಬ ನೀಂ ಜಾಣನೆ? ಕಾಣೆನೆ ನಿಮ್ಮನ್ನರಂ ದಟವುಟಿದ ಕೊಳುಗುಳದೊಳಟಿದ ದೆಸೆಗೆ ಬಿಟ್ಟ ರಾಯರಂ! ಎಲೆ ಪಸುಳೆ! ನಿನ್ನೊಳ್ ಕಾದಿ ಗೆಲ್ದುಮೆನಗೆ ಗೆಲ್ಲಮಲ್ಲಂ, ಸೋಲ್ದುಂ ಸೋಲಮಲ್ಲಂ. ನೀನಱಿಯಯ್. ನಿನ್ನಯ್ಯನೊಳಿಂತಿದಂ ಕೇಳ್ದುಂ ಪೇೞ್ದುಂ ರಣಕಟ್ಟಲ್ಲದೊಡೀಗಳೆ ನಿನ್ನಂ ತಲೆಗಡಿದು ದೆಸೆವಲಿಗುಡುವೆಂ, ನೋಡೆನ್ನ

ಕೆಯ್ಗುಣಮನೆಂದಂ. ಆಗಳ್ ರುಕ್ಮಾಂಗದಂ ಪಗೆಯಂಬಂ ಕಡಿದು
ಪಡಿಸರಲನಾರ್ದೆಚ್ಚು— ಎಲೆಲೆ ! ಮೊನೆಯೊಳೊಡ್ಡಿ ನಿಂದುಂ ಹಯಮಂ
ಬೇಡುವ ನೀನಾವ ನಾಡ ಗಂಡುಗಲಿಯೊ ? ಆರ್ಪೊಡೆ ಕಡುಕೆಯ್ದು
ಗೆಲ್ವುದು. ಅಲ್ಲದೊಡೆ ಹಯದ ಪಂಬಲನುೞಿದು ಕೆಮ್ಮನೆ ಪೋಪುದು.
ಪಸುಳೆಗಿಸುಳೆಯೆಂದು ತೆಗೞ್ವ ನೀಂ ಮೇಣಾವ ಮುದಿಗೂಗೆಯೊ !
ಪಸುಳೆತನಂ ಕೋಲ್ಗೊಳವೆ ! ಅಯ್ಯನಂ ಬರಿಪುದು ಗಡ ! ನಿಮ್ಮಂ
ಬಾರಿಸಿ ಕ್ರೈಮಿನಿಗೆ ಸೇರಿಸಿದಿಂಬೞಿಕ್ಕಂ—ಎಂದಾಡಿದಂ.

ಅನಿತಱೊಳ್ ಭಾರತಿ ಮುನಿಸಿಂ ರುಕ್ಮಾಂಗದನ ಸರಿಸದೊಳೊತ್ತಿ
ಪತ್ತಂಬುಗಳಿಂ ಹಯಮನೇೞಂಬಿಂ ಸಾರಥಿಯನೈದಂಬುಗಳಿಂ ರಥಮ
ನೆರಡಱಿಂ ಧ್ವಜಮಂ ಮುಱಿದು ಬೊಬ್ಬಿಱಿದು ಕೂರಂಬಿನಾತನಯೆ
ಬಿಲ್ಲಂ ಮುಕ್ಕಡಿಗೆಯ್ದಂ. ಅನಂತರಮರಮಗಂ ಪಡಿದೇರನೇಱಿಯುಂ
ಪೊಸಂಬನಂ ತೇರಾಳನೇರ್ಪಡಿಸಿಯುಂ ಪೊಸತೆನಿಪ್ಪ ಬಿಲ್ಲಂ ಕೊಂಡಳ
ವಟ್ಟು ಜೇವಡೆದು ಮಾರ್ಕೊಂಡು ಕನಲ್ದೆಲೆಲೆ ಮೂಟ ! ಅಂತುಟೇಂ
ಸೊರ್ಕು ! ತೇರುಂ ಸಾರುವಮುಂ ಪೋದೊಡೇಂ ಬಿಲ್ಮುಱಿದೊಡೇಂ,
ಪಡಿದೇರಿರದೆ ! ಸಾರಥಿ ಬಾರನೆ ! ನಿನ್ನಂತಿರಾಂ ದೇಸಿಗನೆ ! ತೋಳ
ಬಲ್ಪಿಂಗೇವೆಯೊ ?—ಎಂದು ಕಿಡಿಗೆದಱುವ ಪೊಂಗಱಿಯ ಕೋಲ್ಗಳಂ
ಪಗೆಗೆಚ್ಚಂ. ಇಂತೆಚ್ಚಂಬುಗಳಂ ಕೊಚ್ಚಿ ಪುಷ್ಕಲಂ ಮೇಣೊರ್ಮೆಯುಂ
ವರೂಥಮಂ ಮುಱಿದು ಸಾರಥಿಯಂ ತಱಿದಂ. ಅಂತಪ್ಪುದುಮೀತೇ
ರೇವುದೆಂದು ನೆಲಕಿೞಿತಂದು ಬೇರಿಗನನಪ್ಪಳಿಸುವೆನೆಂದೆ ಕೋಲ್ಗಳಂ
ತಿರುವಾಯ್ಗೆ ಪೂಡಿ ಕಾದಿದಂ. ಆಗಳ್ ಪುಷ್ಕಲಂ ತಾನುಂ ತೇರನು
ೞಿದು ಧರೆಗೆ ದುಮ್ಮಿಕ್ಕಿ ಮಾಱಾಂತ ಕೈದುಗಾಱನೊಳ್ ಪೊಣರ್ದಂ.

ಇಂತಿಂತೋರೊಂದು ಪಗಲುಮಿರುಳುಮುಗಿಬಗಿಯಾಗೆ ಕಣೆಗಳಿ
ನಿರ್ವರುಂ ಕಾದುತಿರ್ಪುದುಂ ಕಾಳೆಗಂ ಕಡಿದಾಯ್ತು. ಇಂತಿರಲೊಡಂ
ರುಕ್ಮಾಂಗದಂ ದೊಣೆಯುಂ ಕಣೆಯುಂ ಕೞಿದು ಗದೆಗೊಂಡು ಮೋದು
ವುದುಂ, ಮಱುವಕ್ಕದ ಬೀರಂ ಪೆಱದೆಗೆದೆಡಕಂ ಬಲಕಂ ತಿರಿಗಿ ತನ್ನೊಂ
ದು ಪೊಸಮಸೆಯ ಬಾಣದಿಂ ಕಡಿದಂ. ಮತ್ತಂ ಗಜೆ ಮುಱಿಯೆ
ಕೂರಸಿಯಿಂ ಕತ್ತರಿಸಲಾಟಿಪ ರಾಯಗುವರನಂ ನೋಯಿಸಿದಂ. ಅರ
ಮಗನಿಂತೊಂದು ಮೂರ್ಛೆಯಿಂ ನೊಂದು ಗಾಱುಗೆಟ್ಟು ಜೋಂಪಿಸಿ

ಮೆಯ್ಮಱೆವುದುಂ, ಬೆಂಬಱಿಯ ಸೇನೆ ಬೆಂಗುಡುವುದುಂ, ಆನೆಕುದುರೆಗಳ್ ದೆಸೆಗೆಟ್ಟು ಚದರಿದುವು; ಹಾಹಾರವಮೊತ್ತಂ ಮಾರ್ಬಲನೊಳ್ ಮಾರ್ದನಿಗೊಂಡುದು. ಈಯೆಡೆಯೊಳೀವಿವರಮಂ ಚರರ್ ವೀರಮಣಿಗಱಿಕೆಗೆಯ್ವುದುಂ, ಪಾವಡರ್ದಂತೆ ಸಿಡಿಲೆಱಗಿದಂತೆ ನಂಜೇಱಿದಂತೆ ಸಂಜೆ ಕಾವಳಿಸಿದಂತೆ ರಾಯಂ ಮುಂದುಗೆಟ್ಟು ಕಂಗೆಟ್ಟು ಬಗೆಗೆಟ್ಟು ಬಟ್ಟೆಗೆಟ್ಟು ಬಸಗೆಟ್ಟು ನಡೆಗೆಟ್ಟು—ಎನ್ನರಗಿಳಿಗೇನಾಯ್ತು ! ಎನ್ನ ಪಲ್ಲಮಱಿಗೇನಾಯ್ತು ! ಎನ್ನ ಚಿಂತಾಮಣಿಗೇನಾಯ್ತು ! ಎನ್ನ ಬಗ್ಗಿನ ಬಿತ್ತಿಗೇನಾಯ್ತು ! ಎನ್ನ ಐಸಿರಿಯ ಸಿರಿಗೇನಾಯ್ತು ! ಎನ್ನ ಬಾೞ್ವಲಕೇನಾಯ್ತು ! ಎನ್ನ ಸಂತಸದ ಸುಗ್ಗಿಯ ಮಱಿಗೋಗಿಲೆಗೇನಾಯ್ತು ! ಎನ್ನ ಮುಟ್ಟಿನ ಕಣಿಗೇನಾಯ್ತು ! ಎನ್ನ ಪುಟ್ಟಗುವರಗೇನೆಡರಾಯ್ತು ! ಎಂದು ಕಡುದುಗುಡದಿಂ ತಾನೊರ್ವನೆ ಪೊಱಮಟ್ಟು ರಣಕೆಯ್ದುವಂದಂ. ಅರೆಮುಗಿದ ಕಣ್ದಾವರೆಯ ಕಂದಿದ ಪೆಱೆಮೊಗದ ಮುದ್ದುಗುವರನಂ ತೋಳದಿಂಬಿನೊಳ್ ಕಂಡು ತಾನುಂ ಹಮ್ಮೈದಂಬೋಗಿ ಕದಂಪಿನತ್ತಣಿ ನಿಱಿತರ್ಪ ಕಣ್ಣೀರ ತಣ್ಪಿನಿಂದೆಂತಾನುಂ ಚೇತರಿಸಿ ಸಸಿಯುಮಂ ಸಾರ್ದು ತಳದಿನೆತ್ತಿ ಪೊಡೆಯೊಳೊತ್ತಿ ತೊಡೆಯೊಳಿಟ್ಟು ಪಣೆಗೆ ಪಣೆಗೊಟ್ಟು ಮಱುಮಱುಗಿ ಗುಣಮಂ ನೆನೆನೆನೆದು— ಹಾ ! ಎನ್ನ ಕಂದ ! ಸೊಗದ ಪೆರ್ಚುಂಬಗೆಯದುಕ್ಕಂದ ! ಈಬಗೆಯೊಳೆನ್ನನುಱಿವ ಬಗೆ ನಿನಗಾಯ್ತೇ ! ನಿನ್ನೊಂದು ಪೆಂಪಿನ ಬೀರದತ್ತಣಿನಿನಿಬರುಂ ಸಾವಂತರ್ ಆಳವಿನ ಪಿಡಿಯೊಳೆಡೆಗೊಂಡು ಕಪ್ಪಮನೀಗುಂ ಮಱೆನಾೞ್ಗಂ ನೆರವಕ್ಕುಂ. ಇನ್ನೆನಗಾರೊಳರ್ಪೈ ! ಇನ್ನೆಮಗೇವುದೊ ಚಲವೇವುದೊ ಬಲವೇವುದೊ ಪೂಣ್ಕೆಯೇವುದೊ ಮೊನೆಯೇವುದೊ ಪನ್ನತಿಕೆಯೇವುದೊ ಐಸಿರಿಯೇವುದೊ ನಾಡೇವುದೊ ಪಾಡು, ನೋಡಿರೆ ದೇವಾ ! ಜಸಮುಂಟು, ಸಕಲ ಸೌಭಾಗ್ಯಮುಂಟು, ಸಂತಸದುಕ್ಕೆವಮುಂಟು, ಕಡುಪುಂಟು, ಮಾನ್ಯಮುಂಟು, ಹೊನ್ನ್ಯಮುಂಟು, ಪಣಮುಂಟು, ಗುಣಮುಂಟು, ನೀನುಳ್ಳೊಡುಂಟು ಪೆಱರುಳ್ಳೊಡುಂಟೆ ಪೇೞಿಲೆ ಮಗನೆ ! ಜಗದ ರಾಯರೆನ್ನಂ ಪುಲ್ಗೆ ಲೆಕ್ಕಿಸರೆ ! ಚೂಣಿಯ ಜೋದರಿರೆ ಕಟ್ಟಂಕದ ಸಾದಿಗಳಿರೆ ರಥಿಕರಿರೆ ಬಾಹತ್ತರದ ಗೋಟಾಯ್ಲರಿರೆ ಬೆಂಬಲಮಿರೆ ನಿನ್ನನೊರ್ವನನೆ ಮಿೞ್ತು ವಾಯ್ದಳೆ ಕುವರಾ ! ಹಾ ! ಹಾ ! ಇನ್ನೀನಿನ್ನ ಪೆಂಡಿರ್ಗೇಂ ಬಟ್ಟೆಯೊ !

ಪೆತ್ತಬ್ಬೆಯೆಂತೊಡಲ್ವಿಡಿದಿರ್ಪಳೊ ! ಎನಗೇಂ ಗತಿಯೋ ಪೇಟಿ ಬಾಳ ! ಅಕ್ಕಟ ! ಪಗೆಗಳ್ ನಲಿವಂತು, ಬಳಗಮುಬ್ಬಸಂಬಡುವಂತು, ಸಾಮಂತರ್ ಸೊರ್ಕುವಂತು ಆನಟಿಲ್ವಂತು ದಟಿಂ ಕಣ್ಗಿಡುವಂತು ಮಾಡಿ ಪೋದಯ್ ಮಗನೇ ! ಎಂತು ತಾಳ್ವೆನೊ ! ಎಂತು ಬಾಟ್ವೆನೊ ! ಎಂತು ಕಾದುವೆನೊ ! ಎಂತು ಗೆಲ್ವೆನೊ ! ಎಂದು ಕುವರಂ ಮಡಿದನೆಂದೇ ಭ್ರಾಂತಿಯಿಂ ಪಲವಗೆಯೊಳಟಿಲುತುಮಿರ್ಪುದುಮತ್ತಲ್ ಪುಷ್ಕಲನೊಡ್ಡಿ ಬಂದು ನಿಂದು ರಾಯನೊಳ್ — ಎಲೆ ಮರುಳೆ ! ಕಾದುವೊಂದು ಬೆಸನದಿಂ ಬಂದೀಗಳೀಪೆಣನಂ ಕಂಡು ಮಱುಗುವ ಗಂಡಂ ಷಂಡಂ. ಚೀ! ಪೋ! ಬಿಲ್ಗೊಂಡೆನ್ನೊಳ್ ಕಾದು. ಅಂತಾಱದೆಯಪ್ಪೊಡೆ ಕುದುರೆಯಂ ಬಿಟ್ಟೆಮ್ಮಂ ನಂಬಿ ಬಾಟೆಂದು—ಜಱೆವುದುಂ; ಪೊತ್ತಿದಗ್ಗಿಯೊಳ್ ನೆಯ್ಯನೆಱೆದಂತುಂ ಕತ್ತಿದ ಕಡಿಯೊಳುಪ್ಪಂ ಲೆಪ್ಪಿಸಿದಂತುಮುರಿವ ಕಣ್ಣೊಳ್ ಸುಣ್ಣಮನಿಟ್ಟಂತುಮಾಗಿ ಕೋಪಶಿಖಿ ದಳ್ಳಿಸೆ ಕಿಡಿಕಿಡಿವೋಗಿ ಉರಿದು ಮುಱಿದೆರ್ದು ಪಗೆಯೊಳ್ ಮಾಱಾಂತು ತಱುಬಿ ಕಱುಬಿ ಮಾಱಂಬುಗಳಿನೆಚ್ಚು ಕಾದಿದಂ. ಆಗಳ್ ಬೆಟ್ಟು ಜರಿವಂತೆ ಕಾರೊಡಲ ಪೇರಾನೆಗಳುರುಳ್ದುವು. ಗಾಳಿಗೆ ಬಾಟೆ ದಿಂಡುಗೆಡೆವಂತೆ ಕಾಲಾಳ್ಗಳ್ ಕೆಡೆದುವು. ಬಲ್ಲಾನೆಯ ಮೆಟ್ಟಿನಡಿಯು ತೆಂಗಿನ ಕಾಯಂತೆ ರಥಂಗಳ್ ಜಜ್ಜರಿವೋದುವು ಪಡಿದಟಿದೊಳ್. ಇಂತಪ್ಪುದುಂ ಪಗೆಯತ್ತಣಿಂ ಗಾಱುಗೆಟ್ಟೆ ತಮ್ಮವರ್ಗೆ ಕೈದೋಱೆ ತಾಂ ನುರ್ಗಿ ಕಿನಿಸಿಂ ಪುಷ್ಕಳಂ ಪುಷ್ಕಳಂ ಶರದಿನೇಸಾಡಿ ಪಗೆಯೊಳ್ ಬೀರದಿಂ ಪೊಣರ್ದಂ. ಇಂತೀಮಾಟ್ಕೆಯಿನೇಟುರುಳುಂ ಪಗಲುಂ ಕಡುಕೆಯ್ದು ಕಡೆಯೊಳ್ ವೀರಮಣಿಯು ಬಾಣಹತಿಗೆ ಮುಚ್ಚೆವೋಗಿ ಪೊಡವಿಯೊಳೆಡೆಗೆಡೆದಂ. ಆಗಳ್ ಶತ್ರುಹನ ಸೇನೆಯೊಳ್ ಹಾಹಾಕಾರಂ ಪರಬಲದೊಳ್ ಭಾಂಕಾರಮುಱೆ ಪೆರ್ಚಲೊಡಂ ತಾಂ ತಮಗೆ ಬೆಕ್ಕಸಂಗೊಂಡು ಸುಬಾಹುಮುಂತಪ್ಪ ವೀರರ್ ನಡೆದರ್. ಶತ್ರುಘ್ನಾದ್ಯರುಂ ಕೈದುಗೊಂಡು ಮುಂಬರಿದು ವೀರಮಣಿಯಂ ತಾಗಿದರ್.

ಆವೇಳೆಯೊಳಿತ್ತಲೀಶ್ವರಂ ಭಕ್ತನಂ ಕಾವೊಂದು ಬಗೆಯಿಂ ಪೊಱಮಟ್ಟು ತನ್ನ ಪ್ರಮಥಗಣಂಬೆರಸು ರಣಕೆ ಪೋಪವಸರದೊಳ್ ತಱಿವಿಂಡಿಯಪ್ಪ ತನ್ನಯ ಮಡದಿಯುನಿಕ್ಸುಮತಿಯಂ ಕಂಡು ನೇಹದಿಂ—

ಎಲೆಗೆ ಜಾಣೆಯರರಸಿ ! ಕೇಳ್ ಇದೆಕೊಳಿಂದು ನಿಮ್ಮಯ್ಯಂಗೆ ಕಡುಪಿನ ಪಗೆರಾಯರೊಳ್ ಕುದುರೆಯೊಂದು ನೆವದಿಂ ಸಂಗರಂ ನೇರಿಟ್ಟುದು. ಅಂತದುಕಾರಣನೂತಂಗೆ ಮಾವಂಗೆ ಬೆಂಬಲಮಾಗಿ ಪೋದಪೆನೀಗಳಿ ನೀನಟಲದಿರ್, ಸೊಗದೊಳರಿಗಳಂ ದೆಸೆಗಿಡಿಸಿ ಬರ್ಪೆನೆಂದಂ. ಆ ನುಡಿಗೆ ಬೆಕ್ಕಸಂಗೊಂಡು—ಅಂತಪ್ಪೊಡೆ ತಳ್ವದೆ ನೀಂ ಪೋಗಿ ಕಾದಿ ಕಾದೀವುದೆಮ್ಮಯ್ಯನನಣ್ಣನನೆಮ್ಮ ಬಳಗಮನೆಮ್ಮ ದಟಿಮನೆಮ್ಮನೆಲ್ಲರ ನೆಂದು ತಡಂಬಡದಯ್ಯನ ನೇಹದಿಂ ತಾಂ ಮಱುಗದೆ ಬಗೆಗುಂದದೆ ಕಾಂತನಂ ರಣಕೆ ಬೀಟಿಳ್ಕೊಟ್ಟಳ್. ವೀರಪತ್ನಿಯರ್ಗಿದು ಸಾಜಂ. ಇಂತಾ ಹೊನಹುಗಾರ್ತಿ ಬಾಂಗುರುಳನ ಮುಂಗುರುಳನೊಪ್ಪದಿಂ ಸಯ್ತು ನೇವ ರಿಸಿ, ಮುಡಿಜಡೆಯುನ ಕಡ್ಡಣಮುಂ ಚೊಕ್ಕಳಂ ತುಱುಬಿ, ಪೆಱಸೂಡಿ ದನ ನಡುನೆತ್ತಿಯು ಬಟಲ್ಮುಡಿಗೆ ಬಂದುಗೆಯು ಪೂಸರಮುಂ ಮುಡಿಸಿ, ತೊಱದಲೆಯುನ ಮುಂದಲೆಗೆ ಸೀಸಕವನಳವಡಿಸಿ, ಫಣಿಕುಂಡಲನ ಕರ್ಣಕ್ಕೆ ಮಕರಕುಂಡಲಮುನಿಟ್ಟು, ಕಂದುಗೊರಲನ ಬೆಳ್ಗೊರಲೊಳ್ ಜಾಗವರಲ ಮಲಕನಮುರ್ಚಿ, ಪಂದಲೆವಚ್ಚಂಗಚ್ಚಸರಮುಂ ತುಡಿಸಿ, ಬಗ್ಗದೊವಲುಡೆಯುಂಗೆ ಪಟ್ಟಣಿಗೆಯುನುಡಿಸಿ, ಬೂದಿಬಡಿಕನ ಮೆಯ್ಗೆ ಬಾವನ್ನಮುಂ ತಿಮಿರ್ದು, ಬೆಳ್ಳಡಿಯು ಬೆಳ್ಳಡಿಗೆ ಮಿಸುನಿವಾವುಗೆಯುನೊ ಪ್ಪಿಸಿ, ತಿಸುಳಿಯು ಕೆಯ್ಗೆ ಬಿಲ್ಗಣೆಗಳನಿತ್ತು, ನೊಸಲ ಕಣ್ಣ ಮಾದೇವನ ಮಿಸುಪ ನೊಸಲೊಳ್ ಬೀರಸೇಸೆಯುನಿಟ್ಟು, ಐಮೊಗನ ಮೊಗಸಿರಿಯಂ ಕಂಡೊಂದಲಂಪಿಂ ತಾನೆ ಮುದ್ದಿಟ್ಟು ಕಳಿಪುವುದುಮೆಲರುಣಿವೆದೆಯಂ ಬೀರಂ, ಬಿಗುರ್ವರಿಜಂ, ಹಳಿಗಂ, ಕೊಂಡಂ, ಗುಳಿಕಂ, ಮುಂತಪ್ಪ ಭೂತವೇತಾಳಂಗಳ ಮುರುಳ್ವಡೆವೆರಸು ಅಗ್ಗಿಗೆ, ಬೆಂಗದಿರಂಗೆ, ಮುನ್ನೀ ರ್ವಂಕೆಗೆ, ಸಿಡಿಲ್ಗೆ ನೂರ್ಮಡಿಯಿಂ ಕಾಯ್ದುಂ ಮಾಮುಸಕಂ ಮಸಗಿ ಕೊಳುಗುಳಕೆ ನಡೆತಂದು ಕಡೆಗಾಲಕೆಂತಂತು ಜಡಿದಾರ್ದು ಪಗೆಯೊಳ್ ಕಾದುವ ರಾಯುಂಗೆ ಬೆಂಬಲನಾದಂ. ಮತ್ತಮಾಗಣಂಗಳುಂ ಬೊಬ್ಬಿ ಱದು ಮರ್ಕಟಸೇನೆಯುಂ ತಱುಬಿದುವು. ತಱುವಾಯಿಂ ಶತ್ರುಹ ನೊಳ್ ಮೊನೆಗೆ ನಿಂದ ರಾಯುನಂ ಪಿಂದೊತ್ತಿ ಪಣೆಗಣ್ಣಂ ತಾನೊಡ್ಡಿ ನಿಲ್ವುದುಮುಣಮಂ ಸಿಡಿಮಿಡಿಗೊಂಡಸವಸದಿಂ ದಪ್ಪಗವಗೆಯುನಂ ಕೆಯ್ಯ ಪೆರ್ಮ್ಮರನೊಳ್ ಸೆಲೆಯೊಳ್ ಮಲೆಯೊಳ್ ಮಲೆದು ತಾಗಿದಂ. ಸುರ

ರಳ್ಳಿ ದಿಗಿಭಂಗಳ್ ಬಳ್ಳಿ ಕಮಠನ ಕೊರಲ್ ಕುಸಿಯೆ ಭೋಗಿಪನ ಭೋಗಂ ನಸಿಯೆ ದೆಸೆಗೊಡೆಯರ್ ಸರಿಯೆ ಬೆಟ್ಟುಗಳ್ ಜರಿಯೆ ಕಡಲ್ ಮೊಗೆಯೆ ಔತ್ಪಾತಕಮೊಗೆಯೆ ಸಬ್ಬನಬ್ಬರಂ ಕಡಿದಾಯ್ತು. ಬೊಮ್ಮಾಂಡದೋಡು ಬಿರಿವಂತು ದೆಸೆಮೂಲೆಗಳ್ ಪಳಂಚಿ ಮಾರ್ದನಿಗುಡುವಂತು ಕಡಲ ಸಬುದಮಡಂಗುವಂತು ಸಿಡಿಲ ಪೊಡರ್ಪು ತೆಕ್ಕುವಂತು ಗುಡುಗುಡಿಸಿ ಗುಡುಗಿ ಬೊಬ್ಬಿಱಿದಂ ಕಲಿಯಣುಮಂ. ಜವನಂ ಜವಗಿಡಿಸಿದ ಮರ್ಬಿಗನಂ ತಱುಬಿದ ಗಜಾಸುರನಂ ಗೆಲ್ದ ಜಲಂಧರನಂ ಗೋಣ್ಮುಱಿಗೊಂಡ ಬಾಂಬೊಱಲ ರಕ್ಕಸರಂ ಗಾಱುಗಿಡಿಸಿದ ತನ್ನೊಂದದಟಿಂದಣುಮನನಿದಿರ್ಚಿದಂ ಫಣಿಭೂಷಂ. ಮುಂಬರಿದ ಸಿಂಬಿಣಿಯನಣೆದುಂ ನೊಣೆದುಂ ಕಟ್ಟಂಕೆಯ ಲಂಕಿಣಿಯಂ ಕೊಂದುಂ ತಿಂದುಂ ಅಕ್ಷಯಕುಮಾರನಂ ತೂಳ್ದುಂ ಪೋಟ್ದುಂ ಮಹಿರಾವಣನಂ ಕಡಿದುಂ ಕುಡಿದುಂ ಕಾಲನೇಮಿಯಂ ಜಡಿದುಂ ಬಡಿದುಂ ಸಂದ ತನ್ನ ಪನ್ನತಿಕೆಯಿಂ ಪೊಣರ್ದಂ ರಾಮಭೃತ್ಯಂ. ನಸೆಮಸೆಯ ತಿಸುಳಂ ಬೆಳಬೆಳಗೆ ಉರಿಗಣ್ಣ ಜಾಲೆ ದಳ್ಳಿಸೆ ನಿಚ್ಚವಚ್ಚದ ಪಂದಲೆ ತೊಂಗಲಾಡೆ ಸಿರದ ಹುರಂ ಸೀಱುಂಬುಳಾಡೆ ನೇವಳದ ಪಾವಳವಿಂ ಬುಸುಗುಟ್ಟೆ ಮಾರುತಿಗೈಮೊಗಂ ಮುಮ್ಮೊಗನಾಗಿ ಜಡಿದಂ. ತುಱುಗುಗೊಂದಲ್ ಕೊಕ್ಕರಿಸೆ, ಕೊನೆನಾಲಮಿನಿಸುಂ ನಿಮಿರ್ದು ಸಂಚಳಿಸೆ, ಮೈ ಪೆಟ್ಟುವೆರ್ಚೆ, ನಿಡುಮುಸುಡ ಕಡುಮುಳಿಸು ಪೊಱಪೊಣ್ಮೆ ಮುಂಬರಿದಣ್ಮಿ ಪೋಲ್ವಾಯ್ದು ಕಪರ್ದಿಯೊಳ್ ಕೈದೋಱಿದಂ ಮರುತ್ಸಂಜಾತಂ.

ಮುದ್ದಣ—ಎಲೆಗೆ ಸೊಬಗೆ! ಇಂತೊಂದು ಮಾಟಿಕ್ಕೆಯಿಂ ಕಾಮಾರಾತಿಯುಂ ಮಾರುತಿಯುಂ ತಂತಮ್ಮೊಳ್ ಪಾಡುಪಂತದಿಂ ನೆಱೆದ ಬಿನ್ನಣದಿಂ ಕಚ್ಚಿಱಿದ ಕಿನಿಸಿಂ ಸರಿಸಾಟಿಯಿಂ ಪಾಟಿಯಿಂ ಸೂಟಿಯಿಂ ಸೆಣಸುತಿರಲೊಡಮತ್ತಲೋರೊಂದೆಡೆಯೊಳ್ ಶಿವಗಣದ ಕೋಡಗರ ಕಾಳೆಗಂ ಬಿಮ್ಮನಾಯ್ತು. ಜನ್ನವಗೆಯಂಗೆ ಸುಗ್ರೀವಂ, ಬಿಗುರ್ವರಿ ಜಂಗಂಗದಂ, ನಂದಿಗೆ ನೀಲಂ ಮಸಗಿ ಮಾಱಾಂತರ್. ಎತ್ತಂ ಬಡಿಯ ಕಡಿಯ ಕುಡಿಯ ಮರನೊಟ್ಟಿಲ್ ಬೆಟ್ಟಾಯ್ತು. ಇಟ್ಟೆಯ ಬಟ್ಟೆಗೈದಿನ ಕೊಡಲಿಯ ಮುದ್ಗರದ ಸೂಲದ ಕತ್ತಿಯ ಕೂರಂಕುಸದ ಶಿವಗಣರ ಕಡುಗಲಿತನದ ಪೊಣರ್ಕೆ ಬೆಟ್ಟಿತ್ತಾಯ್ತು. ಇಂತಿರಾರಣಾಂಗ

ಣಂ ಬೊಬ್ಬಿಱುವ ಗಂಡರಱಚುವ ಶಿವಗಣಂಗಳ ಪರ್ಚುವ ಪುಂಕಡ ರಾರ್ವ ಮಾಲಿನಿಯರ ೞುಟ್ವಿ ಬಳ್ಳುಗಳ ಗೀೞುಡುನಾನೆಗಳ ಕಿಚಿಕಿಲ್ವ ಹಯಂಗಳ ಕುಣಿವ ಮರುಳ್ಗಳ ನಲಿವ ಬೇತಾಳಂಗಳ ಕೋಲಾಹಲಂ ಬಿಱುಸಾಗಲೊಡಂ ಮುಱಿದಟ್ಟೆಯು ಸುರಿದ ಕರುಳ ನೆರೆದ ಕೆನ್ನೀರೆಡೆ ಯೊಳಿತ್ತ್ರಂ ಕಾಕಂ ಘೂಕಂ.

ಮತ್ತಂ ಪೆಱತೊಂದು ತಾಣದಲ್ಲಿ ವೀರಮಣಿಗಂ ಶತ್ರುಹಂಗಂ ತುಮುಲಯುದ್ಧಂ ಸಮತಳಿಸಲೊಡಂ ಬಲ್ಪೊಟ್ಟುಮೋಱಿಸೊಡಲ ಎಕ್ಕ ಲವುಲಿಗಳಂದದಿಂ ಮಸಗಿ ಪೊಣರುತುಮಿರ್ದರ್. ತುತ್ತತುದಿಯೊಳ್ ರಾಘವಾವರಜಂ ತಾಂ ಕೈಸೋಲ್ವುದುಂ, ಪಡೆ ಬಡವಪ್ಪುದುಂ, ಮಿಡು ಕಿನ ಬೆಂಬಲಂ ಪಜ್ಜೆಗೆಟ್ಟು ಬೆಂಗುಡುವುದುಂ, ಕಟ್ಟುಬ್ಬರದುಬ್ಬಸದಿಂ ಮುಟ್ಟುಮುಱಿದು ದಿಟ್ಟಿಗೆಟ್ಟು ಇಂದಿಗೆಮಗರಿಯೊಳ್ ಸೋಲವಾ ಯ್ತೆಂದು ತಱಿಸಂದು ಬೞಿಕ್ಕಂ ಮುಂದುಗಾಣದೆ ಶ್ರೀರಾಮಚಂ ದ್ರಮನ ಪದಕಮಲಮನೆ ನೆನೆನೆನೆದು ಪಲುಂಬಿದಂ. ಆಗಳಿಗೆಗ ಯೋಧ್ಯೆಯೊಳ್ ದೀಕ್ಷೆಯೊಳಿರ್ದ ಕಾವ ದೇವರ ದೇವಂ ಸೋದರಂಗೆ ಮೆಯ್ದೋಱಿಯುಮನಿತೊಂದು ಬನ್ನಮಂ ಕೇಳ್ದುಂ ತನ್ನವನಂ ಸಂತ ಮಿಟ್ಟುಮಿಪ್ಪುದುಮಾಗಳ್ ತ್ರ್ಯಂಬಕಂ ತನ್ನೊಡೆಯಂ ತಾನೆ ತಮ್ಮನು ಮಂ ಸಮಂತೆಮ್ಮನುಮನುದ್ಧರಿಸಲ್ಕೆಂದು ಬಿಜಯಂಗೆಯ್ವನೆಂದು ಬಗೆದು ಮಾರುತಿಯೊಳ್ ಕದನಮನಿನಿಸುಂ ಬೊಟ್ಟುಮುೞಿದು ರಾಘವನ ದರ್ಶನಕೆಯ್ತಂದಂ. ರಾಮಭೃತ್ಯನುಮೀವಿವರಮನಱಿತು ಪಲವುಂ ದಿನದೊಂದಗಲ್ಕೆಯ ಬೇಸಱಿಂ ತಿಳಿದು ತಾನುಮೊಡೆಯನೆಡೆಯೊಳ್ ಬಂದು ನಿಂದಂ. ಮತ್ತಮನಿತಱೊಳ್ ಸುಗ್ರೀವಾದಿ ಮರ್ಕಟರುಂ ಸುಭುಜಭೂಜಾನಿಯುಂ ಬಂದೊದವಿದರ್. ವೀರಮಣಿಯುಂ ತನ್ನಳಿ ಯನ ಬೞಿಯೊಳಿ ಬಂದಂ. ಆವೇಳೆಯೊಳ್ ಪರಮೇಶ್ವರಂ ಜಗದೀಶ್ವರ ನಂ ಕಂಡೆಱಗಿ ಭಕ್ತರಂ ಪೊರೆವ ಪೊಱೆಯಂ ಪೊಱುವಿನಂ ತಾಂ ತನ್ನೊಡೆಯನನಿದಿರ್ಚಿದ ದೋಷಮಂ ಮಱೆದು ಕಾವುದೆಂದು ಬಿನ್ನಯಿ ಸಿದನಾಗಳ್. ರಾಜನುಮುಱಿವುಗೊಂಡು ದೇವರ ಜನ್ನದ ಹಯಮಂ ಕಟ್ಟಿದಪರಾಧಮಂ ಕ್ಷಮಿಪುದೆಂದು ಪ್ರಾರ್ಥಿಸಿದಂ. ರುಕ್ಮಾಂಗದನುಂ ಶ್ರೀರಘುಪ್ರವರನಂ ಮಱೆವೊಕ್ಕಂ. ಬೞಿಕ್ಕಮಾಮಾದೇವಂ ತನ್ನವರಿಂ

ಕಯುಮಂ ಬರಿಸಿ ಕಪ್ಪಮುಂ ತರಿಸಿ ರಾಘವನ ಚರಣಕರ್ಪಿಸಿದಂ. ಮತ್ತ ನಿಂತಿರೆ ತನಗಂ ಶಿವಂಗಮಿನಿಸುಂ ಭಿನ್ನಮಿಲ್ಲೆಂಬ ಮಾಟಿಕ್ಕೆಯಿಂ ರಘು ಪ್ರವರನೀಶ್ವರನಂ ನೇಹದಿಂದೊಡಂಬಟ್ಟುಂ, ರಾಜವರ್ಗದೊಳನಿಬರುಮಂ ಸಂತವಿಟ್ಟುಂ, ತಮ್ಮವರಂ ಸೇನೆಯುಮಂ ಕೂರ್ಮೆಯಿಂ ಸೈತಿಟ್ಟುಂ, ತಾಂ ನೆಯ್ಗರೆದು ಮಾಯುಮಪ್ಪುದುಂ ; ಶತ್ರುಘ್ನಾದ್ಯರ್ ವೀರಮಣಿಯೊಂದು ಕೆಳೆತನದಿಂ ಹರನೊಂದು ನಲ್ಮೆಯಿಂ ಮುಂತೆ ಬಿಜಯಂಗೆಯ್ದರ್.

ಎಂಬಲ್ಲಿಗೆ ಶ್ರೀರಾಮಾಶ್ವಮೇಧದೊಳ್
ದೇವಪುರವರ್ಣನಂ ಚತುರ್ದಶಾಶ್ವಾಸಂ ಸಂಪೂರ್ಣಂ.

## ಪಂಚದಶಾಶ್ವಾಸಂ.

## — ಹನೂಮತ್ಪರಾಜಯಂ —

ಎಲೆಲೆ ಕಾಮಿನಿ ! ಕಾಮಕಳಾನಿಧಾನೆ ! ಕಾಮಮದಾಂಧಗಂಧ ಸಿಂಧುರಬಂಧುರಯಾನೆ ! ಕಾಮಕಾಳೋರಗಕೇಶ......

ಮನೋ—ಎನ್ನರನ್ನ ! ಇಂದಿನಿತಿಂತೇಂ ಚೆಲ್ವಿನೊಂದು ಬಿತ್ತರದ ಭಂಗಿಯ ಪೊಸಬಣ್ಣನೆ ಮಿಣ್ಣನೆ ನಿನ್ನ ನಚ್ಚುಮೆಚ್ಚಿನ ಕಾಮನೊಂದು ಜಾನದೊಳೆ ಬೆರೆತುದು ?

ಮುದ್ದಣಂ—ಸಾಜಂ. ಈಗಳಿವಜಲ್ತೆ ಎಮ್ಮನೊಲ್ದು, ಓ ತಪ್ಪಿದೆಂ, ನಿಮ್ಮನೆ ಒಲ್ದು ಮುಟ್ಟಿನ ಕಾಮನ ಪೇರುಕ್ಕೆವದ ಗಲಬೆಯ ಪಿರಿಯ ದೆವಸಂಗಳ್. ಇದೆ ಇದೆ ಗಾಡಿಯ ನಾಡವೆಣ್ಗಳ ರೂಢಿಸಿದ ಸಂತಸ ದುಮ್ಮಹಂ ತಲೆಮಿಾಱಿ ಬೀದಿವರಿವುದು. ಅಂತದಱಿನೀಪೊಟ್ತು ಕಾಮನ ನಾಮದೊಂದು ನೆನಹು ತಾಂ ತನಗೆ ಬೇಡವೇಡೆಂದೊಡಂ ಕೊನೆನಾಲಗೆಯನೊತ್ತಂಬದಿನಡರೆ ವರ್ಪುದು. ಇದು ಮೊದಲಾಗೆ ಬಿನ್ನನೆ ನಿನ್ನನೆ ಕರೆವೆಡೆಯೊಳಂ ತಿಂಬ ಪುಟ್ಟಿಯೊಳೊಗ್ಗರಿಸಿದ ಕಡಲೆಯಂತೆಡೆಗೆಡೆಗೆ ಬಾಯ್ಗೀಱಿವಂದಪುದೈಸೆ!

ಮನೋ—ಎಲೆ ಎಲೆ ರಮಣ ! ಲೇಸುಲೇಸಯ್ ! ನಿನ್ನೀಬಣ್ಣದ ಬೆಡಂಗಿನ ಬಿಡುನುಡಿಯೊಂದು ನೆವದಿನೆನ್ನನೊಳ್ಪಗೆಯೊಳೆಟ್ಟಿಱಿಸಿದಯ್.

ಮುಗ್ಧ—ಅಂತಿದೇಂ ರಮಣಿ !

ಮನೋ—ನಾಳೆಗಲ್ತೆ ಕಾಮನ ಕಟ್ಟಾಯದ ಹಬ್ಬಂ.

ಮುಗ್ಧ—ಓ ! ಓ ! ಬಂಗಿಯುಂಡಂ ಮುನ್ನುಂಡುದಂ ಮಱಿವಂ ತಿರಾನುಮಱುವುಗೆಟ್ಟೆಂ. ಅಪ್ಪುದಪ್ಪುದು. ಆದೊಡೇಂ ; ನಾಳೆಗೆ ಪೂರಣಗಡುಬೊ, ಸೆಂಡಿಗೆಯೊ, ಮಂಡಿಗೆಯೊ, ಹೋಳಿಗೆಯೊ ಸಜ್ಜಿನ ಬಿರ್ದಿನೂಟಕೆ ?

ಮನೋ— ನಿನಗೊಂದೆ ಭೀಮಂಗೆಂತಂತು ತಿಂಬ ಬಯಕೆ.

ಮುಗ್ಧ— ಮತ್ತಮದೇಂ ?

ಮನೋ—ನಾಳೆಗೆನಗೊಂದು ನೋಂಪಿ,

ಮುಗ್ಧ—ಅಂತಪ್ಪೊಡಾನೋಂಪಿಯಿರವೆಂತು ? ಬಗೆಯೆಂತು ?

ಮನೋ— ಪಿರಿದೇಂ ಸಂಜೆಯೊಳ್ ಮಿಂದು ಮಡಿಯುಟ್ಟು ಕಲ್ಪೋಕ್ತಮಾಗೆ ಕಾಮನಂ ಪವಣಿನರ್ಚಿಪುದೈಸೆ !

ಮುಗ್ಧ—ನೀನೊರ್ವಳಯೆ ?

ಮನೋ—ನೀನುಮಾನುಂ.

ಮುಗ್ಧ—ಇದಱನೇಂ ಗುಣಂ ?

ಮನೋ—ಈಪುಣ್ಣಿಮೆಯೊಳ್ ಕಾಮನಂ ಕೂರ್ಮೆಯಿಂ ಭಜಿಸಿದೆವಪ್ಪೊಡೆ ಕಾಮೇಶನೆಮಗೊಲ್ವಂ. ಮೇಣೆನ್ನೆಗಮೆಮ್ಮನಗಲದಿರ್ಪಂ.

ಮುಗ್ಧ—ಅಂತಿರೆ ಮತ್ತಬ್ಬೆ ಪೆತ್ತಂತಿರೊಂದು ಸಂತಸಮೆನಗೀ ನೋಂಪಿಯೊಳ್.

ಮನೋ—(ನಸುನಕ್ಕು) ಆದೊಡಮಿನಿತೊಂದು ನಿಯಮಂ ಪೊತ್ತಡೆವಿಡಿದು ಬೈಗುವರೆಗಮುಪವಾಸಮಿರಲೇವೇೞ್ಪುದು.

ಮುಗ್ಧ—(ಬೆಗಡುಗೊಂಡು) ಈಗಳಾಂ ಕತ್ತರಿಯೊಳಾದೆಂ. ಕಲ್ಲೊಳ್ ಕಾಲ್ಸಿಕ್ಕಿದ ರಾಮನ ಹಯಮೆಂತಂತು ಮನಂ ಮುಂಗೆಟ್ಟಪುದು. ಅಂತಪ್ಪೊಡೀನೋಂಪಿಯನೊಲ್ಲೆಂ.

ಮನೋ—ಅಂತೇಂ! ನಡೆವ ಜನ್ನಗುದುರೆಯೆಂದು ಕಲ್ಲೊಳ್ ಕೀಲಿಪಿದುದು ಪೇೞ !

ಮುಗ್ಧ—ಅಪ್ಪೊಡಕ್ಕುಂ. ಆದೊಡಿನಿತೊಂದಂ ನಿನ್ನಂ ಬೇೞ್ಪೆಂ. ನಾಳೆಗುಪವಾಸಮನುೞಿದ ನೋಂಪಿಯನೊಂದನೇರ್ಪಡಿಸಲೆವೇೞ್ಪುದು.

ಮನೋ—ನೋೞ್ಪಂ. ಮುನ್ನಂ ಕತೆಯಂ ಬಿತ್ತರಿಸು.

ಮುದ್ದ—ಆಯ್ತಾಯ್ತು ಕೇಳ್ ! ತೞುವಾಯಿಂ ದೇವಪುರದಿಂ ತಳರ್ದು ಭಾರತಾಂತದತ್ತಣ್ಗೆಯ್ದೆ ಪೋಪ ಬೆಡಂಗಿನ ಚೆನ್ನ ಜನ್ನಗುದುರೆ ತನ್ನೊಂದು ಲೀಲೆಯಿಂ ಹೇಮಕೂಟಮಂ ಪುಗುತರ್ಪುದುಮಾಲದ ಬೇಲ ದೆಕ್ಕೆಯ ಬಿಕ್ಕೆಯ ಕಕ್ಕೆಯ ಹೊನ್ನೆಯ ಬನ್ನಿಯ ಬೇವಿನ ಮಾವಿನ ಮೞ್ತಿಯ ಮುೞ್ತುಗದ ನೆಲ್ಲಿಯ ಕಂಕೆಲ್ಲಿಯ ನೇಱಿಲ ನೆೞಲಿಂ ಕೞ್ತಲಿಸಿದ ಪೞುವೊಳೊಂದು ತೞ್ಪಲಂ ನುರ್ಗಿ ನೋಳ್ಪ ಪೊದರಂ ಪಾಯ್ದು ಮುಳ್ಗಿ ನಡೆಗೆಟ್ಟು ತಡೆವಟ್ಟು ಕೊೞಗಂ ಘೞಗದ ನೆರೆಯ ಮಱಿಯಱಿಯೊಳ್ ತಾಂಟಿದತ್ತು. ಇಂತಾಗಲೊಡಮೊಡನೆಯೆ ಕಾಲ್ ಕೀಲಂ ಬೆಟ್ಟಿದಂತೆ ನಟ್ಟು ನಾಂಟಿರ್ಪುದುಂ ವಾಜಿಯೊಂದು ನಡೆ ಕಲ್ಲ ಪಾಪೆಯೊಂದು ನಡೆಗೆ ಪಾಸಟಿಯಾಯ್ತು. ಆಪ್ಪೊೞ್ತಿಂಗೆ ಪೊಲಂಬುಗೆಟ್ಟು ಬಸಗೆಟ್ಟು ಮರವಟ್ಟ ಕುದುರೆಯಿರವಂ ಕಂಡ ಕಾಪಿನ ಭಟರ್ ಮಿಡುಕಿಂದಾರ್ದುಂ ಸೋವಿಯುಮೆೞ್ಚಿಸಿಯುಂ ಪತ್ತೆಸಾರ್ದು ಬಾಲದೊಳೆೞೆದುಂ ಗೋಣೊಳಲುಗಿಯುಂ ಕೊಡಂಕೆಯೊಳೆತ್ತಿಯುಂ ಸುತ್ತಿಯುಂ ಗತಿಯಂ ಕಾಣದೆ ಮತಿವಿಕಳರಾಗೆ ತನ್ಮೃಡಂಗಾಯ್ತುಗೀರ್ಪರಿಯಂ ಕೇಳಿಪ್ಪುದುಂ ಪಡೆವಳರೆಲ್ಲರ್ ದಿಮ್ಮನೆೞ್ದು ಬಿಮ್ಮನೆಯ್ತಂದು ತಾವುಂ ಕೆಯ್ಗೊಟ್ಟು ಕುದುರೆಯಂ ಕೀೞಲಾಟಿಸಲೊಡಮೆಳ್ಳನಿತಾದೊಡಂ ಚಲಿಸದಿರ್ದುದು.

ಇಂತೊಂದು ಮಾೞ್ಕೆಯಿಂ ಪೊಱನಲ್ಮೆಯ ಕವಡುಗಾರ್ತಿಯ ಕಲ್ಲೆರ್ದೆಯೊಳ್ ನಾಂಟಿದ ನಾಡಾಡಿ ನನ್ನಿಗ ಚೆನ್ನಿಗನ ಮನೋರಥದೊಂದು ಹಯದ ಕಾಲ್ಗಳಂತಿರೆ ಕಲ್ಲೊಳ್ ಕೀಲಿಸಿರ್ಪುದುಂ ಕಂಡು ಮಾಣದೆಯ್ದಿ ತಮ್ಮಾಣ್ಮಂಗೆ ಬಿತ್ತರಿಸಿದರ್. ಆಗಳ್ ಶತ್ರುಹಂ ವೀರರ್ವೆರಸು ಕಟ್ಟುಱದಿನಾಬೞಿಗೆಯ್ದಿ ಹಸುವಂ ಮುಟ್ಟೆ ತಟ್ಟೆ ತಮತ್ತೊಂದಾಯತಿಯಿಂ ದಾಪಿಂ ಬಿಗಿದುಮುಗಿದುಮಾಱದೆ ಬೇಸರ್ಪುದುಂ ; ಮರಂ ಮರವಟ್ಟಂತುಂ ಕಲ್ ಕಲ್ಗಟ್ಟಿದಂತೆವೊಲೊಂದಚ್ಚರಿಯಿನಣುವಂಗೆ ಮುಸುಡು ನಿಡಿದಾಯ್ತು, ಜಾಂಬವಂಗೆ ಮೆಯ್ ಬಡವಾಯ್ತು, ಸುಗ್ರೀವಂಗೆ ಕೊನೆವಾಲಂ ಮುರುಂಟಿದತ್ತು. ಇಂತಿರೆ ಪೊಸಸುಸಿಲೊಳೆ ತಮ್ಮೊಂದು ಗೆಯ್ತಕ್ಕೆ ಬಸವೞಿದು ಮೆಯ್ಸೋಲ್ತ ಜವ್ವನಿಗರಿರ್ಪಂತಿರೆ

ಬೀರರಿರವಪ್ಪುದುಂ, ರಾಯುನೆಗ್ಗಿಂ ಕುಗ್ಗಿ ಬೆಗಡುಗೊಂಡಿರೆ ಬಳಿಯಂ ಬಳಿಯ ಮಂತ್ರಿ ಕೆಯ್ಮುಗಿದು—ರಾಯ! ಏತಱಿಂದು ಬೆಗಡೊ? ಅಡಿಮುಡಿಯುಂ ಪರಿಕಿಸದೆ ನೀನುಂ ಮಾಟದ ಬೆಲಿವೆಣ್ಣ ಕೆಯ್ಮಸಕಕ್ಕೆ ಜಾವುಗೆಟ್ಟು ಕಳವಳಿಪೆಗ್ಗನೆಂತಂತು ಚಿಂತಿಪಯ್. ನೆರೆಯೊಳಿತ್ತಾನುಂ ಪುಣ್ಯಾಶ್ರಮುಮಿರವೇಟ್ಟುಂ. ಮೇಣಾರಿಸಿಗಳತ್ತಣೊಂದು ವೈಮೆಯಿಂ ಗೆಯ್ಮೆಯಿನಿಂತಾಯ್ತುಕ್ಕುಮುದಱೀಯೆಡೆಯನಱಿಸಿ ಸೋಪನಱಿವುದು ಕರವೊಳ್ಳಿತೆಂದೆತ್ತಮಾಳ್ಗಳನೇರ್ಪಡಿಸಿ ಕಳಿಪಲೊಡಮವರೆಣ್ಮೆಯ್ಯೊಳಂ ಪುಡುಕಿಯುಂ ಕಾಣದೆ ಬಳಿಕ್ಕಮೆನಸುಂ ದೂರದೊಳೊಂದು ತಾಣ ದೊಳ್—

ತಾಂ ತಮಗೋಲಾಡುವ ನೀರ್ವಕ್ಕಿಗಳ ಬಲ್ದನಿಯೊಳೊಡವೆರೆದ ಪಱಮೆವಱಗಳ ಮೆಲ್ಲುಲಿಗಸಿದು ಕಿಸಿದು ಪಿಸಿದೆಸಟ ತನಿಗಂಪಿಂ ಪೊರೆದ ಕಿಱುಗಾಳಿಯು ತೀಟಕ್ಕೆ ಕದಡುಗೊಂಡ ತಣ್ಗೊಳದೊತ್ತಿನೊಳ್ ಬನರಾಣಿಯ ಮೊಗದ ಮೊಡವಿಗಳೊಂದು ಪಾಂಗಿನಿಂದೊಪ್ಪುವ ಮುಗುಳಿಂ ರಾರಾಜಿಪ ಕಾಡುಮಲ್ಲಿಗೆಯ ಬಲ್ಪೊದಱ ಬಱಸಿನೊಳೊತ್ತಿಡಿದಪವರ್ಗ ಲಕ್ಷ್ಮಿಗೆ ನೆಲೆವನೆಯೆನೆ ಕರಂ ಸೊಗಯಿಸುವ ಪುಣ್ಯಾಶ್ರಮುವೊಂದು ಕಾಣಿಸಲೊಡಂ ಕಂಡುಂ ಮಾಣದೆ ಚೆಚ್ಚಱದಿಂ ಮುರಲ್ದು ತಮ್ಮಾಣ್ಮಂಗೀ ಪರಿಯಂ ಬಿತ್ತರಿಸಿದರ್. ಆಗಳರಸಂ ಹರಿಸದಿಂ ಹನೂಮುಜ್ಜಾಂಬವ ಪುಷ್ಕಳಾದಿವೀರರ್ವೆರಸು ಬಱಿವಿಡಿದೆಯ್ದಿವಂದುಟಜಮಂ ಪೊಕ್ಕು ಪಱನುಡಿಯ ತೊಡಂಕನಡಿಗಡಿಗೆಡವದಂತಿರೆಡೆವಿಡದೆ ಬಿಚ್ಚಱಿಸಿ ಶಿಷ್ಯರ್ಗೆ ನಿರವಿಪ ಕುಲಪತಿಯುಂ ಶೌನಕನಂ ಸಾಗ್ನಿಯಂ ಬಲನಂದು ಕಟ್ಟಿದಿರೊಳ್ ಮುಗಿದ ಕೆಯ್ಗಳಿಂ ನಿಂದಿರ್ಪುದುಂ; ಕೂರ್ಮೆಯ ಕುಡುನೋಟದಿಂ ಮಾಲಿಸಿ ಬಱಿಯಂ ಪುಲ್ಲ ನೆಲ್ವಾಸಿನೊಳ್ ಕುಳ್ಳಿರವೇಟ್ಟು ಪದುಳ ಮಂ ಕೇಳ್ದುಪಚರಿಸುತಿತ್ತಣ್ಗೊಂದು ಬರವಿಂಗೆ ಕಾರಣಮಂ ಬೆಸಗೊಳೆ ರಾಯನಾಯುದಿಂ ಜನ್ನಗುದುರೆಯ ನಡೆಗೇಡಂ ತಮ್ಮ ಬಗೆಗೇಡಂ ಕೇಳಿಸಿದಂ.

ಆಗಱಗೆ ಶೌನಕನಿನಿಸುಂ ಪೊಟ್ತು ಜಾನಂಬೊಕ್ಕು ಮೇಣಾ ಕಳಿಸಿ ಶತ್ರುಹಂಗೆ— ಎಲೆ ರಾಜ, ಇದರ್ಕೆ ಮುನ್ನಿನೊಂದಿತಿಹಾಸಮುಂ ಟೇನೆನೆ :—ಈನಾಡ ತೆಂಕಲ್ಗೆ ನಾಡರಸಿಯ ಜೀವನಾಳಮೆನೆ ಪಿರಿದು

ಮೊಪ್ಪಿ ಪರಿಯುತಿರ್ಪ ಕಾವೇರಿಯೆಂಬೊಂದು ನದಿಯುಂಟು. ಅದಱ ಪೊತ್ತಿನೊಳೊಂದು ಕೊಪ್ಪಲೊಳೊರ್ವಂ ಸಾತ್ವನವೆಸರ ದ್ವಿಜಂ ದ್ವಿಜರಾಜಧರನನೋರೊಂದು ದಿವಸಂ ನೀರುಂಡುಂ ಗಾಳಿಯುಂಡುಮುಣದೆಯುಂ ತಪಮನಾಚರಿಸುತಿರಲೊಡಂ ಕೆಲನಾನುಂ ದಿನಕ್ಕೆ ತಿಸುಳಿಗೆಯ್ಯಂ ಮೆಯ್ದೋಱಿದಂ. ಇಂತಿರೆ ವಿಪ್ರಂ ಜವನ ಮುಂಬಲ್ಗೞಿಡೆಯೊಳಾದನಪ್ಪುದುಂ ತನ್ನೊಂದು ಸುಕೃತವಿಶೇಷದಿನಂಬರದತ್ತಣಿನಿೞಿತರ್ಪ ವಿಮಾನಮನೊಂದಂ ಕಂಡನಾಗೆ ತಾನದನಡರ್ದು ಬಾಂಗೇಱಿದಂ. ಮತ್ತಮಾಗಳರೆಗೞಿಗೆಯೊಳೆ ತಾಂ ಪೊಂಬೆಟ್ಟಿನ ಕೋಡುಗಲ್ಲ ತುತ್ತತುದಿಯೊಳಿರ್ಪುದಂ ಕಂಡಂ. ಇಂತು ದೇವಲೋಕಮಂ ಸಾರ್ದು ದೊರೆಕೊಂಡ ಪೊಸಸೊಗದ ಸುಗ್ಗಿಯ ನುರ್ಗಿನೊಳ್ ಬಿಗಿವಡೆದಗ್ಗದ ಸಗ್ಗದ ಜೋಸೆಯರೊಂದು ನೆರವಿಯೊಳ್ ದೇಸಿಯಿಂ ಬೆರೆದಾಗಳುಂ ಬಿನದಿಸುತ್ತೆ ಜಲಕೇಳಿಗದೊರ್ವೆ ಮೊಗಸಿ ಪೆಣ್ಬಡೆವೆರಸು ಜಾಂಬವತೀನದಿಯಂ ಪುಗುತಂದು ಸೊರ್ಕಿನುರ್ಕಿನ ಬಿಡಿಬೇಸಱಿಂ ನೆರೆಯೊಳಘಮರ್ಷಣದೊಳಿರ್ಪ ಮುನಿಗಳಂ ಲೆಕ್ಕಿಸದೆ ತಕ್ಕೞಿದು ಮುಕ್ಕುಳಿಸಿ ಜಕ್ಕುಳಿಸಿದಂ. ಇಂತೊಂದು ಪೊಲ್ಲದ ಗೆಯ್ಮೆಯಂ ಕಂಡು ಮುನಿಗಳಾಂಗುಲಿಗೆಂತಂತು ಮುನಿದು ತಿರೆಯೊಳ್ ರಕ್ಕಸನಾಗಿ ಪುಟ್ಟೆಂದು ಬಯ್ದರ್. ಇಂತೀಬಯ್ಗಳ್ ಕೊಲೆವಿಡಿದನ ಕಣ್ಣ ಸುಣ್ಣದ ಕಜ್ಜಳವಪ್ಪುದುಂ, ನೆತ್ತಿಯ ಮತ್ತಿೞಿದ ಕಳ್ಳಣಿಗಳೆಂತಂತೞಿವುಗೊಂಡೊಯ್ಯೊಯ್ಯನಾಮುನಿಗಳೆಡೆಗೆ ಪರಿತಂದಡಿಯೊಳ್ ಪೊರಳಿ—ದೇವರೋವುದು, ಕಾವುದು. ನಿಮ್ಮಡಿ ಮುನಿವೆಡೆಯೊಳೆಮಗಾವುದೊ ಕಡೆ ! ಮುನಿಗಳೊಂದು ವೈಮೆಯೋನಿೞಿದೆ ? ಇಂತಿದನಱಿತುಂ ಇರುಳ್ ಕಂಡ ಬಾವಿಯೊಳ್ ಪಗಲೊಳ್ ಬಿೞ್ದಂತೆ ಪೊಲ್ಲಮೆಯಂ ತಗುಳ್ಚಿ ದುರ್ಗತಿಗಿೞಿದೆಂ. ನಿಮಗಂ ದುರ್ಜನನಾದೆಂ. ಪತ್ತೇಂ, ಪಲವೇಂ ? ಒಲ್ವುದುಂ ಕೊಲ್ವುದುಂ ನಿಮಗಕ್ಕುವೆಂದು-ಕಾಲ್ವಿಡಿವುದುಂ ; ಮುನಿಗಳ್ ಶಾಂತರಾಗಿ—ಆಯಾಯ್ತು. ಪೋಗೆಂದಿಂಗೆ ಬಟ್ಟೆವಿಡಿದು ಕಟ್ಟಾಯದಿಂ ಬೞಿವೋಪ ರಾಮನಧ್ವರತುರಂಗಮಂ ತಡೆದು ನಡೆಗಿಡಿಷಯ್, ಮತ್ತಮೆಂದಿಂಗೆ ರಾಮಚಾರಿತ್ರಮಂ ಮನದಣಿಯೆ ಕೇಳ್ವೆ, ಅಂದಿಂಗೆ ನಿನಗೆ ವಿಮೋಚನಮಕ್ಕೆ ! ಅನ್ನೆವರಂ ನೀನಾತೋರ್ಪ ಕಾಡೊಳ್ ಮಾಯದ ರಕ್ಕಸನಾಗಿರ್ಪುದೆಂದು ತೋಱಿ ತೊಱೆದರ್.

ಸೌಮಿತ್ರಿ ! ಇಂತಿರೊಂದು ಬಿಱುನುಡಿಗೆ ಸೊಮ್ಮುೞಿದು ಮೆಯ್ಗೆಟ್ಟು
ಪಾರ್ವಂ ಕಕ್ಕಸದ ಬೊಮ್ಮರಕ್ಕಸನಾಗಿಯುಂ ಮಾಯದೊಂದು ಪಜ್ಜೆವಿಡಿ
ದೀಕಾಡೊಳ್ ಸಂಚರಿಸಿಯುಮೀಗಳೀನಿಮ್ಮ ಕುದುರೆಯಂ ನಡೆಗಿಡಿಸಿದಂ.
ನೀಮೀಗಡೆ ಪೋಗಿ ಹಯದ ಬೞಿಯೊಳ್ ನಿಲ್ತು ಶ್ರೀರಾಮಚರಿತಮಂ
ಕೇಳಿಸಲೊಡಂ ಬಾಡಬಂಗಂ ಬಾಡಬಕ್ಕಂ ವಿಮೋಚನಮಕ್ಕುಮೆಂದು
ಪೇೞ್ದನಂ ; ರಾಯನಣುಮಂಗೀಬಗೆಯಂ ಬೆಸಸಿ ಕಳುಪಿದಂ. ಆಗಳ್
ರಾಮಭೃತ್ಯಂ ಕುದುರೆಯೆಡೆಗೆಯ್ದಿ ಪೋಗಿ ತಾನಱಿತಂತು ರಾಮಕಥೆ
ಯಂ ಬಣ್ಣಿಸಿ ಬಣ್ಣಿಸಿ ಪೇೞ್ವುದುಂ ; ತಾಂ ತನಗೆ ಹಯಂ ತಡೆವಿಟ್ಟು
ಪಾವೆಂತಂತು ನಡೆವಟ್ಟು ತನ್ನಿಚ್ಛೆಯಿಂ ಪೋಗೆ ಕಂಡು ಸಾಲಿಗಂ ಮೂ
ಲಿಗನಾದೊಂದು ಸಂತಸದಿನಾಣ್ಮನೆಡೆಗೆಯ್ದೀವಿವರಮಂ ಬಿನ್ನಯಿಸಿದಂ.
ಶತ್ರುಹನಾವಿವರಮಂ ಮನದೆಗೊಂಡು ಸುಮತಿಯ ಸುಮತಿಗಂ ಮುನಿ
ಯಱಿತಕ್ಕಮಣುವನ ಸಾಹಸಕ್ಕಂ ಹಯದ ಬಗೆಗಂ ಕಟ್ಟುಚ್ಚರಿದಾಳ್ದು
ವುದುಂ ; ಮುನಿ ಭೋಂಕನೆ ಪುಷ್ಪಕಮನೇಱಿ ಪೋಪಾವಿಪ್ರನಂ ನಿಮ್ಮ
ತ್ತಣ ರಾಮಕಥಾಶ್ರವಣದಿಂ ಪಾವನನಾಗಿ ಮುನ್ನಿನ ಪುಣ್ಯಲೋಕಕ್ಕೆ
ಪೋಪನಿದೆ-ಎಂದು ತೋಱಿದಂ. ಅದರ್ಕಾರಘುಜಾವರಜಂ ನಯದಿಂ-
ಎಲೆ ದೇವ! ಜೀವಿಗಾದಿಯೊಳಾಪುಣ್ಯಲೋಕಾವಾಸಮೆಂತೊಡರ್ಚಿದುದು,
ಮತ್ತಮಾಗಳೇತರ್ಕಾಯ್ತು ಶಾಪಂ? ಈಗಳ್ಮೇಣೋರ್ಮೆಯುಂ ಮುನ್ನಿನ
ಸದ್ಗತಿಯೇತಱಿಂ ದೊರೆಕೊಂಡುದು ? ಪೇೞೆನಲೊಡಂ ; ಶೌನಕಂ-ಪಿರಿ
ದೇಂ ? ಮುಮ್ಮೆಯ್ಯ ಕರ್ಮಫಲಮಂತುಟು. ಅದಱಿನೀತಂಗೀವಿಧಿ
ಯಾಯ್ತು. ಜಗದೆ ಜೀವಿಗೆ ಪೂರ್ವಕರ್ಮವರ್ಮಮೋಗೆಯ್ದುಂ ಪಡಿ
ಲದು ; ಸುಖದುಃಖಂಗಳ್ಗಿದು ತವರ್, ನಿರಯಕ್ಕೆಱೆವೆಟ್ಟು. ಅಡಿ
ಗಡಿಗೆ ಬರ್ಪ ಕುತ್ತಕೆತ್ತಂ ಬಿತ್ತೀಕರ್ಮಮೆನುತೆ, ಕರ್ಮಿಗಳ್ಗೆ ನೇರಿ
ಡುವ ಮಱುವುಟ್ಟುಗಳಂ ನರಕಂಗಳಿರವಂ ಬಿಯದಿಗಳಂ ಬನ್ನಂಗಳಮಿನಿ
ಸುೞಿಯದಂತು ಸಮಂತು ನಿರವಿಸಿದಂ. ಶತ್ರುಹಂ ಮುನಿಯನೆಱಗಿ
ಬೀೞ್ಕೊಟ್ಟು ಸೇನೆವೆರಸು ಹಯದ ಬಟ್ಟೆಯೊಳೆ ತೆರಳ್ದಂ.

ಮುದ್ದ—ಎನ್ನ ಕಣ್ಮಣಿಯೆ! ಪೆಣ್ಮಣಿಯೆ! ಮಱುಗೊಂಡ ಕುತ್ತಮ
ಡಂಗಿ ಪದುಳಮಿರ್ಪ ತೋಟಿಯ ತೋಳ್ವಲನ ನರದ ಹಿಂಡಿಗೆಯ ಬಳ್ಪಿಂ
ತಂತೊಂದು ಬಳ್ಪಿಂ ಮೆಯ್ವೆರ್ಚಿ ತನ್ನಿಚ್ಛೆಯಿಂ ಮುಂತೆ ಮುಂತೆ ಪೋ

ಪೋಪ ಕುದುರೆಗೆ ತಿಂಗಳೆಂಟಾಗಲೊಡಂ ಅಂಗವಂಗಾದಿದೇಶಂಗಳ್ ಕಂಗೆಟ್ಟು ಕಪ್ಪಂಗೊಟ್ಟು ಪಿಂಬಟ್ಟೋಲಯಿಸುತ್ತೆ ಬರುತುಮಿರ್ಪುದುಂ ; ಮುಂದೆಸೆಯ ಕುಂಡಲಪುರಂ ಮಲೆದು ನಿಂದುದು. ಸುತ್ತೇಂ ಸುರ್ಕೇಂ ? ಶ್ರೀರಾಮಚಂದ್ರಮನಂ ಕಣ್ಣಾಱೆ ಕಾಣ್ಬೊಂದು ಬಯಕೆ ಬೆಟ್ಟಿತಿರ್ಪಿನಮಾಗಳುಮಾಲಿ ಪೀಲಿಯುಪ್ಪಿನೆಗಂ ಬಿಡದೀಪಂಬಲಿಂ ಬೆಂಡಾಗಿ ಕಂದುವಗೆಯಿಂ ನಂದಿ ಪೊಂದುಗುಂದಿರ್ಪ ಪುರದಧಿರಾಜಂ ಸುರಥರಾಜಂ ತಾನೋಲಗದೊಳಿರ್ಪನ್ನೆಗಮೊರ್ಮೆ ರಾಜನೊಂದು ಭಕ್ತಿಯಂ ಪರಿಕಿಸವೇೞ್ಕುಂದೆಂದು ಜವಂ ಜವದಿಂ ಕಿಱುವರೆಯುದೆಳದವಸಿಯೊಂದು ರೂಪಂದಾಳ್ದಿ ಬಿಮ್ಮನರಮನೆಗೆಯ್ತಂದಂ. ಅರೆಗೆಂಪಿಡಿದ ಮುಡಿದ ಜಡೆಮುಡಿ ಬಾಂಗೂಂದಲನ ಕಪರ್ದಮುಂ ಕೀೞ್ಮಾಡೆ, ಪಲಗೆವಣೆಯ ಬಾಮದ ಕೊಂಕಿನ ಭಸಿತಲೇಖೆ ಬೆಳ್ವಕ್ಕದ ಬಿದಿಗೆಯ ಚಂದವನೊಂದಂದದ ತಿಳಿದ ಕಳೆಯನಿಱಿಕೆಯ್ಯೆ, ತುಂಬಿ ತುಳ್ಕುವ ಮೊಗದ ಮೊಗಂಬಡೆದ ಸೊಬಗು ಪದ್ಮಸದ್ಮನಮೊಗಸಿರಿಯನೆಡವುತೆಡಂಮಾಡೆ, ಪೊದೆದ ದುಗುಲಂ ರಣನಿಶಾಟಗಣದಿಶಾಪಟಮಲ್ಲನ ಚೆಲ್ವಿನ ಬೆಳ್ಪಟ್ಟೆಯಂ ಪೞಿಯೆ, ನಿಱಿವಿಡಿದುಟ್ಟ ಪಟ್ಟುಡೆಯಂದಿನ ತ್ರಿವಿಕ್ರಮಮೂರ್ತಿಯ ತೆಳ್ಪಿನ ಪೊಗರ ನಿಗರದೊಳ್ಕುಡೆಯಂ ತಟ್ಟಿಗಿಸಿ ಕಟ್ಟಿಗಿಸಿ ಮುಟ್ಟಿಗಿಸೆ, ಕೊರಲೊಳೊಪ್ಪುವಚ್ಚಪೊಚ್ಚಚ್ಚಸರಂ ಮುಕುತಿವೆಣ್ಣ ಸಿರಿಗೊರಲ ಕರ್ಮಣಿಸರಮನಡಿಗೊತ್ತೆ, ತನ್ನೊಂದು ತೇಜಮೋಜೆಯಿನೋಲಗಸಾಲೆಯೊಳ್ ಪಳಂಚಲೆಯೆ ಬಂದ ಕಪಟವಟುವಂ ವಟುವಂ ಕಂಡಿರದಿದಿರೆೞ್ದು ಬೞಿಸಾರ್ದು ಕಾಲ್ವಿಡಿದು ಕೆಯ್ವಿಡಿದು ಕರೆದುಯ್ದು ತನ್ನ ಪೊನ್ನಗದ್ದುಗೆಯೊಳ್ ಕುಳ್ಳಿರಿಸಿ ವಿಧಿಯಿಂ ಪೂಜಿಸಿ ಮತ್ತಂ ದೈನ್ಯದಿಂ—ಅಪೂರ್ವಂ ನಿಮ್ಮಡಿ ಬಿಜಯಂಗೆಯ್ದಿರೇಂ ನಿರಪಿಪ್ಪದೆಂದು—ಬೆಸಗೊಳ್ವುದುಂ ; ಕವಡುದವಸಿ— ಎಮ್ಮಂದಿಗರೇನೆತ್ತಮಿರ್ಕುಂ ಪೋಕುಂ. ಮನಮೊಲ್ದೆಡೆಗೆಯ್ದಿ ಸದ್ಧರ್ಮಮಂ ಬೋಧಿಸಿ ಹಿತೋಪದೇಶಮನಱಿಯೆ ಪೇೞ್ವುದೊಂದೆ ನೇಮಮೆಮಗಂತದುಕಾರಣಂ ನೀನೆಮಗೆ ನನ್ನಿಯ ನೇಹಿಗನಿರ್ಪಿನಂ ನಿನಗಮಂತಿರೆ ಧರ್ಮರಹಸ್ಯಮನೊರೆವೊಡೆಂದೆ ಬಂದೆನೆಂದಂ. ಆನುಡಿಗೆ ಸುರಥಂ— ಏಱಿದರ್ಗಿಂತುಟೊಂದು ಮೈಮೆ ಗಡ ! ಏನೆಂಬ ಕೂರ್ಮೆಯೊ ಲೋಗರೊಳ್ ! ಅಜಮೆ ತಾನಿಂತೊಂದು ಮೆಯ್ವೆತ್ತು ಬಂದುದಾಗದೆ ! ಇಂದಿಂಗೆ ವಲಂ

ಧನ್ಯರಿವು. ಆದೊಡಮಿಂತಟಮಟಿಸಿ ನೋಯಿಪೊಂದು ಪುಟ್ಟುೞುವೞಿ ವೆಂಬೀಕೋಟಲೆಯಿಂ ಮುಕ್ತನಪ್ಪಂತಿರೆನಗೆ ಬಟ್ಟೆಯಂ ತೋಱು !— ಎನೆ ; ಮಾಯದ ಜವನಿಕೆಯ ಜವಂ ಕಿಱುನಗೆಯಿಂ—ಎಲೆ ನಾಡೆಱೆಯ ! ಪುಟ್ಟದೆ ಪೊಂದದೆ ಸುಖಮೆಂತಿಹಪರಂಗಳೊಳ್ ದೊರೆಕೊಳ್ಗುಂ? ಮುಕ್ತಿಯೊಳೇನುಂಟು ? ಲೋಕಮಿಂತೀಬೆಮೆಯಂ ನಿರ್ನಿಮಿತ್ತಮಗ್ಗದ ಸಗ್ಗದ ಸೊಗಮಂ ಪಾೞ್ಗಿಡಿಸಿ ಕೊಳ್ಗುಮದಱಿಂ ನಿಮಗೆ ಪೇೞ್ದ ಧರ್ಮಂ ಕರ್ಮಂ. ಕರ್ಮದಿನೆ ಇಂದಿರಂ ದೇವರ್ಕಳೊಡೆಯನಾದಂ, ಬೊಮ್ಮಂ ಪೂರ್ವೋರ್ಕಟಿನ ಗಂಗಾವರ್ತಸನಾಭಿಯೊಳ್ ನಾಭಿಯೊಳ್ ಪುಟ್ಟಿಯುಂ ಸತ್ಯಲೋಕಕ್ಕೊಡೆಯನಾದಂ, ತಗರ್ದೇರಂ ನೇಣ್ಗೆಯ್ಯುಂ ಮುಂತಪ್ಪರ್ ದೆಸೆವಳರಾದರ್. ಪತ್ತೇಂ, ಪಲವೇಂ? ಸರ್ವರುಂ ತಂತಮ್ಮ ಸತ್ಕರ್ಮದಿಂ ಸೊಗಮನುಂಬರ್. ನೀನುಂ ಸಡಗರದಿಂ ಜನ್ನಂಗಳನೆಸಗಿ ಸತ್ಪಾತ್ರದಾನಂಗಳಿನಿಲ್ಲಿ ದೆಸೆಮುಟ್ಟೆ ಜಸದಿಂ ಪೆರ್ಮೆವಡೆದಲ್ಲಿ ದುರ್ಲಭಸ್ವರ್ಗಸುಖಲಾಭಮಂ ಪಡೆವುದೊಳ್ಳಿತು—ಎಂಬುದುಂ ; ರಾಜಂ—ಜೀಯ ! ಇಂತಿದೆನ್ನ ಮನಕೆ ಸೇರದು, ಬಾರದು. ಕರ್ಮಂಗಳತ್ತಣಿಂ ದೊರೆಕೊಳ್ವ ಸುಖಂ ಭಂಗುರಮಲ್ತೆ. ಇಂದ್ರಂಗಂ ಕರ್ಮಫಲಾನುಭವಂ ಮುಡಿಯಲೊಡಮೊಡನೆಯೆ ಪತನಮಿರ್ಕಮುಂತಿರೆ ಬೊಮ್ಮಂಗಂ. ಅದಱಿನಿದಾಗದಾಗದು. ಮುಕ್ತಿಯನೆ ಬಯಸುವೆಂ—ಎಂದುಸಿರ್ದಂ. ಅದರ್ಕಾತಾಪಸಂ—ನೀನುಂ ಬಱಿದೆ ಬೆಮೆಗೊಳ್ಳದಿರ್. ಮರುಳರ್ಗಕ್ಕುಮೀಬಗೆಯ ಜಾನಂ, ನಿನ್ನನ್ನರ್ಗೆ ಸತ್ಕರ್ಮಫಲಮೆ ಫಲಂ ವಲಂ. ಮುನ್ನಿನ ರಾಯರ್ ಕರ್ಮಂಗಳಿಂ ನಾಕಮನೇಱಿ ಸುರಪನೊಳ್ ಬಲದೆ ಗದ್ದುಗೆಗೊಂಡು ಸುರವೆಂಡಿರಿಂ ಸೇವಿಸಿಕೊಂಡರುಂಟು. ಅದುಕಾರಣಂ ಕಣ್ಬೆಗಡಿನ ಮುಕುತಿಯ ಯುಕುತಿಯಂ ಸಾರದೆ ನಿಜದಿಂ ದಾನಧರ್ಮಂಗಳಿಂ ಸಗ್ಗದ ಮುಂಬಾಗಿಲ ಪೇರಗುೞಿಯಂ ಮುಱಿವಂತುಟಾಗಿಸೆನಲ್ಕೊಡನೆ ಜನಪಂ— ಒಡಬಡೆ ನೊಡಂಬಡೆಂ. ಈನಿನ್ನ ಕವಡುನುಡಿಗೆ ನೀನೇಮೂರ ಕೊನೆಯ ತಿರುಕದವಸಿಯೊ ? ಮುನ್ನಿನ ರಾಯರ್ ಕರ್ಮಫಲಾವಾಪ್ತಿಯಿಂ ಸಗ್ಗಮಂ ಪೊಕ್ಕರುಂಟು ; ನಿರಯಕಮಿೞಿದರುರಟು. ಪಾೞಿಕ್ಕೋದ ಕರ್ಮದಿನೇಂ ? ಶ್ರೀರಾಮನ ಧ್ಯಾನಮೊಂದೆ ಮುಂದುಂ ಪಿಂದುಮೆಂದುಮೆಂದಂ,

ಆಗಳ್ಗೆ ಮುನಿ ತಾಂ ಕಟ್ಟಚ್ಚರಿಗೊಂಡನಂತೆ—ಆವನೊರ್ವಂ ರಾಮಂ, ಆತನ ಧ್ಯಾನದಿಂ ಭಕ್ತಿಯಿನೇಂ ಮುಕ್ತಿ ? ಮರ್ತ್ಯರ ಧ್ಯಾನದಿಂ ಮರ್ತ್ಯರ್ ಮುಕ್ತರಪ್ಪರೆಂತೊ ! ನಿನಗೆಗ್ಗಂಗಿನಿತೊಂದು ಜ್ಞಾನಮಾರ್ಗಮಂ ಬೋಧಿಸಿದ ಮರುಳಂ ಪೆಱನೊರ್ವನಾವನೋ ! ಎಲೆ ರಾಯ ! ಎನ್ನಂ ಮನ್ನಿಸು ! ಎನ್ನುಪದೇಶಮಂ ಲಾಲಿಸು ! ಹರಿಯೆಂದುಂ ಹರನೆಂದುಂ ರಾಮನೆಂದುಂ ಕಾಮನೆಂದುಂ ಪುರ್ಚುಗೊಳ್ಳದೆ ನಿನ್ನ ಪೂರ್ವಜರೆಂತಂತು ಸುಖದಿಂ ಬಾಳ್ವುದು ಕರಂ ಮೇಲೆಂಬುದುಂ ; ಕಡುಮುನಿಸಿಂ ಕಿಸುಗಣ್ಣಿ—ಎಲೆಲೆ ಧೂರ್ತ ! ನೀಂ ಮುನಿಯಲ್ತು. ಎಮಗೀಬಗೆಯೊಂದುಪದೇಶಂಗೆಯಲ್ ಬಂದ ನೀನಂದಿನ ಕಾಲನೇಮಿಯಕ್ಕುಂ. ಶ್ರೀರಾಮನಂ ಪೞಿವ ನಿನ್ನೀಕೊನೆನಾಲಗೆಯುಂ ಕೂರಸಿಯಿಂ ಪೋೞಲ್ವೇಡಾ ! ವಿಭೀಷಣಾದ್ಯರಾವನೊಂದು ಜಾನದಿಂ ನಿಶ್ಚಲಪದವಿಯುಂ ಪಡೆದರೆಂದು ಬಗೆಯದ ಕಡುಕೂೞನನಿವನಂ ನೂಂಕಿ ಕಳೆಯದೇಂ ಮಾಣ್ದಿರೆಂದು ಗುಡಿಗುಡಿಸಿ ಜಡಿದು ತನ್ನಾಳ್ಗಳಂ ನೋೞ್ಪುದುಂ ; ಅಱಂ ತಾನೆ ಮೆಯ್ದೋಱಿ—ಎಲೆ ಜನಪ ! ಮೆಚ್ಚಿದೆನೀನಿನ್ನದೃಢಭಕ್ತಿಗೆ. ಆಂ ಜವಂ. ಇಂತಿವಱೊಂದು ಪಡಿಸಣದುಜ್ಜುಗದಿನೆ ಬಂದೆಂ. ನಿನ್ನಿನಾವನನ್ಯಂ ಧನ್ಯಂ ಭವದ ಭಯಂ ಪಿಂಗುವೊಡಿಂತಿದೊಂದೆ ಬಟ್ಟೆ ಲೇಸು ಲೇಸಯ್, ನಿನಗೇತಱೊಳುಂಟು ಬಯಕೆ ಪೇೞ್, ಕುಂದದೆ ಸಲಿಪೆಂ—ಎಂಬ ಧರ್ಮರೂಪನಂ ಮೂಱುಂ ಸೂೞ್ ಬಲವಂದಡಿಗೆಱಗಿ ಕೆಯ್ಗಳಂ ಮುಗಿದು—ಜೀಯ ! ಗಾವಿಲದವಸಿಗೆತ್ತೆ ನಿರ್ನೆರಂ ನಿಮ್ಮಂ ಬಯ್ದೆಂ. ದೇವರೆಂದಱಿತೆನಿಲ್ಲಂ. ಎನ್ನೊಂದು ಪೊಲ್ಲದ ಗೆಯ್ಮೆಯುಂ ಮಱೆವುದು, ಕಾವುದು. ಮೇಣೆನ್ನೊಳ್ ಕೂರ್ತಿರಪ್ಪೊಡೆ ಬರ್ದಿನ ಪೊರ್ದಿನ ಮುನ್ನಮೆ ಶ್ರೀರಘುನಾಯಕನಂ ಕಣ್ಣಾಱೆ ಕಂಡು ಧನ್ಯನಪ್ಪಂತು ವರಮಂ ಕರುಣಿಪುದು—ಎಂದು ಸುರಥಂ ಸೆಱಗನೊಡ್ಡಿ ಬೇಡಿಕೊಂಡಂ. ಈ ನುಡಿಗೆ ಯಮಂ—ನಿನ್ನಾಣೆ ನಿನ್ನಂ ಪಗೆಯೆಂ. ನೀಂ ನಿಚ್ಚಟದ ರಾಮಭಕ್ತನಿರ್ಪಿನಂ ಕಿಱುದಾನುಂ ದಿನಕ್ಕೆ ರಾಘವಂ ತಾನೆ ಬಂದು ಮೆಯ್ದೋಱೆಯುಂ ಬೇಡಿದಿಷ್ಟಾರ್ಥಂಗಳನಿತ್ತುಂ ಪೋಪನಿವಱೊಳ್ ಸಂದೆಯಮಣಮಿಲ್ಲಮೆಂದು ಸಂತಮಿಟ್ಟು ತಾನಂತರ್ಹಿತನಾದಂ ಗಡ. ಇಂತೆಂಬ ಕತೆಯುಂ ಸುಮತಿ ತನ್ನಾಣ್ಮಂಗೆ ಬಿತ್ತರಿಸಲೊಡಂ ಶತ್ರುಹಂ ತಲೆದೂಗಿ ಮುಂತಣ ಕಜ್ಜ

ದುಜ್ಜುಗಕೆ ಮಂತಣದೊಳಿರ್ಪುದುಮತ್ತಲ್ ಹಸುವಂ ಬಂದಿಗೊಂಡ ಪೊಲ ತಳವಾರಿರೊರ್ವ್ಮಗಂ ಕಟ್ಟೋಲಗದ ರಾಯನೆಡೆಗೆಯ್ತಂದು ನಾಡಂ ಪುಗುತಂದ ಬಾಡಬದಿರವನೊಕ್ಕಣಿಸಿ ಪಣೆಯೊಳೊಪ್ಪಿರ್ದೋಲೆ ಯನೊಪ್ಪಿಸಿ ತಾಮಾಣತಿಯಂ ಪಾರುತುಮಿರ್ಪರಾದರ್. ಇಂತಾಗ ಲೊಡಂ ಸುರಥಂ ತಳಾರಿತ್ತ ಕಟ್ಟೋಲೆಯಂ ತಾನೆ ಬಿಡದಾಮೂಲಾ ಗ್ರಮೋದಿ ಮೋದಂಬೆತ್ತು ತನಗೆ ತಾಂ— ಕಡುಲೇಸಾಯ್ತು. ಪುಸಿಯಾಗದಾಯ್ತಂದು ಬಂದ ಧರ್ಮರೂಪನೊಂದಮದ್ದುನುಡಿ ! ಎನ್ನಂ ಕಾವ ಬಗೆಯಿಂ ಮುಂತಟ್ಟಿದನಕ್ಕುಂ. ಏಂ ಕರುಣಾಕರನಾಗನೆ ದೇವಂ ! ಇರ್ಕೆ ! ರಘುಕುಲವಾರ್ಧಿರಾಕಾಶಶಾಂಕಂ ತಾನೆ ಮೆಯ್ದೋ ಱುವನ್ನೆಬರಂ ಕ್ಷತ್ರಿಯರ ಪಂತಮಂ ಬಿಡದೆ ಬಿಡದೆ ಹಯಮಂ ಕಟ್ಟಿ ಕಾದುವೆನೆಂದು ನೀಡುಂ ಬಗೆದು, ತನ್ನ ಪಡೆವಳರಂ ಬರಿಸಿ, ದಂಡಂ ಬಂಡಣಕನುವಪ್ಪಂತು ಸಾಱಿಸಿ, ಚಂಪಕಮೋಹಕರ್ ಮುಂತಪ್ಪ ಪದಿಂಬರ್ ಕುವರರ್ವೆರಸು ತಾನುಂ ಬದ್ಧದಿಂ ಯುದ್ಧಸನ್ನದ್ಧನಾದಂ. ಇತ್ತಲ್ ಶತ್ರುಘ್ನಂ ತಾನೆ ತನಗೆ ತಱಿಸಂದು ಬಂದು— ಅಂತಪ್ಪೊಡೆ ಮಗಾರಾಯನೊಳ್ ಕಾಳೆಗಂ ಸಲ್ಲದು ಪೊಲ್ಲದು. ತನ್ನವನಂ ನೋಯಿಸಿದರೆಂದೆಮ್ಮನಣ್ಣಂ ಮುನಿಗುಂ. ಅದಱಿನೀಬಗೆಯನೆಮ್ಮೊ ಳೊರ್ವನಂ ದೂದಟ್ಟಿ ರಾಯಂಗೆ ತಿಳುಪಿ ಹಯಮಂ ತರಿಪುದೆಮಗ ಕ್ಕುಮೆಂದು ಬಗೆದಂದು ಸುಮತಿಗೊರೆವುದುಮಾತನುಮಂತಿರೊಡಂ ಬಟ್ಟಂಗದನನಿದಱೊಳ್ ನಿಯೋಗಿಸಿ ಕಳಿಪಿದರ್.

ಅಂತಪ್ಪುದುಮಾಗಳರ್ಕನ ಸೊರ್ಕಾಳ್ತನದಿಂ ನೀಳ್ದಂಗದಂಗ ದನಂದಿನ ರಾವಣನೆಡೆಗೆಂತಂತು ಕಡುಸಡಗರದಿಂ ದೂದೆಯ್ದಿನಂದು ರಾಯಂಗೆ ಕಾಣಿಸಿಕೊಂಡು ಪಸಾಯನಮನೊಪ್ಪಿಸಿ ಮನ್ನಣೆಗೊಂಡು ಸಮುಚಿತಾಸನದೊಳ್ ಕುಳ್ಳಿರ್ಪುದುಂ; ಬಿತ್ತರದ ಬಿತ್ತರಿಗೆಯೊಳೊತ್ತರದ ಗಾಡಿಯನೊಪ್ಪಿರ್ದ ರಾಯಂ— ಎಲೆ ಬೀರ ! ಎತ್ತಣಿನೀಪಾವುದಂ ? ನೀನಾವನಾರವನೇನುಂಟೆಮ್ಮೊಳ್ ನಿನಗೆ ಕಜ್ಜಂ ? ಪೇೞಿಂದೊಡೆ— ಎಲೆ ಮಾರಾಯ ! ಮುನ್ನಂ ಕೇಳ್ದುಂಟೆ ದಶಕಂಠನ ಕಂಠನಾಳಂಗಳಂ ಕೊಳ್ಳಿಪುಳ್ಳಿಯಪ್ಪಿನೆಗಂ ಸದೆದು ಕೊಂದು ಕಳೆದ ಶ್ರೀರಾಮಾರಾಮನಂ ರಾಮನಂ ? ಆತನಡಿಯಚ್ಚುಕಾಯ್ತನಂಗದನೆಂ. ದೇವರ್ ಜಗವುಂ

ಕಾವರೆಂಬೊಂದಗ್ಗಳಿಕೆಯುಂ ಜನಕೆ ತೋಱುವ ಬಗೆಯಿಂ ಬೇಳ್ವರಕ್ಕುಂ. ಅದಱನವರ ಯಜ್ಞೀಯಾಶ್ವಂ ನಿಮ್ಮ ನಾಡಂ ಪುಗುತರ್ಪುದುಂ, ನಿಮ್ಮವರ್ ಕಟ್ಟಿದರ್ ಗಡ! ಅದುಕಾರಣಮಾಕುದುರೆಯ ಬೆಂಗಾಪಿನ ದಕ್ಕಡದ ಗಂಡುಗಲಿಗಳ ಗಂಡಂ ರಾಘವಾವರಜನೆನ್ನನಿಂತು ಪೇಳ್ದಟ್ಟಿ ದನೆಂತೆನೆ:— ನೀವೆಮ್ಮಂದಿಗರಿರ್ಪುದುಂ ರಣಕಂ ಪಣಕಮಾಸೆವಾಡದೆ ಹಯಮಂ ಬಿಟ್ಟು ಕಪ್ಪಮಂ ಕೊಟ್ಟು ನೆರೆವಾಳ್ವುದು ಕರಮೊಳ್ಳಿತ್ತು; ಬಱದೆ ದೇವರೊಳ್ ಪಗೆದು ಇಹಕಂ ಪರಕಂ ಬೆನ್ನಾಗದಿರಿಂ. ಇಂತಿದಂ ಬಗೆಯೊಳೊರೆದು ಮೇಲಣ ಕಜ್ಜಮಂ ಕಾಣ್ಬುದು ಲೇಸು— ಎಂದಂ.

ಈಪರಿಯಿಂ ಕಂಚುಮಿಂಚಾಗಿ ನುಡಿದಂಗದನ ಪೊಂಗದ ನುಡಿ ಗಳನಾಲಿಸಿ ಸುರಥಂ— ಅಪ್ಪುದಪ್ಪುದು, ಬಲ್ಲಿಂ ಬಲ್ಲೆನಾಜಗದ ದೈವಮಂ. ಪಗೆಯುಂ ಬಗೆಯೆಂ. ಕೇಳ್ವೊಡಿಂತಿದೊಂದು ಬಿನ್ನಪಂ. ದೇವರಡಿಯೊಳ್ ತಾಂ ಪೇಳ್ವಂತು ತನ್ನ ಹಯಮಂ ತಾನೆ ಬಂದು ಕೇಳ್ವೊಡಾಗದೆ! ಕಾಣ್ಕೆಯುಂ ಕಪ್ಪಮಂ ನಾಡಂ ಬೀಡಂ ವಸುವನಸು ವನೊಡಲನೊಡಮೆಯುಮನೆಲ್ಲಮುಮನೊಪ್ಪಿಸೆನೆ! ಅದೊಡೆನ್ನೆವರಂ ಶ್ರೀರಾಮಂ ತಾನೆ ಮೆಯ್ದೋಱಂ ಬಾರನನ್ನೆವರಂ ವಾಜಿಯುಂ ಸಾಜದಿಂ ದೀಯೆಂ ಬೀಯೆಂ. ಮಿಕ್ಕುಱದ ನಿಮ್ಮ ಸೊರ್ಕುಜವ್ವನಿಗರಂ ತಿಕ್ಕಿ ತೆಕ್ಕೆಯಾಡುವೆನಿಂತಿದು ದಿಟ್ಟವೆಂದಂ—ಆಗಳಂಗದಂ. ಏನ್ಗೆಯು! ಪೊಂ ದುವ ಸಂಧಿಯ ನುಡಿಗಳನಾಡದೆ ಸಲ್ಲದ ನಿಲ್ಲದ ನಾಡ ನುಡಿಗಳನೆಮ್ಮವರ್ ನೋವಂತಿರೆ ಸುಡುಮಾತುಗಳಂ ಗಱಪುವಯ್! ಏಂ ಲವಣಾಂತಕಂ ಸಾಲನೆ! ಪುಷ್ಕಲಾದ್ಯರ್ ಸಾಲರೆ! ಆಂ ಸಾಲೆನೆ! ಇದಱಂ ನಿನಗೆ ಸುಖಮಾಗಲರಿಯದು, ಅಂತು ರಾಮನನೆ ಕಣ್ಣಾಱೆ ಕಾಣಲ್ಕೆಂದು ಬಯಸುವೆಯಪ್ಪೊಡೆ ಎಮ್ಮನೊಡೆವೆರಸಯೋಧ್ಯೆಗೆಯ್ತರಲೊಡಂ ಕಂಡು ಪಾವನನಾಗಲಕ್ಕುಂ. ಚಿಃ! ಮರುಳೆ! ದೇವರ್ ನಿನ್ನೆಡೆಗೆ ಬರ್ಪು ದುಂಟೆ! ಬಾರರ್. ಅದುಕಾರಣದಿಂ ದೇವರ್ ಮುನಿಯದ ಮುನ್ನಂ ಅನುಜಶತ್ರುಹನ ಶರಹತಿಗೆ ನೋಯದ ಮುನ್ನಮುಗ್ಗದ ಪುಷ್ಕಳನ ಕವಲಂಬಿನಿಸುಗೆಗೆ ಗಾಱುಗಿಡದ ಮುನ್ನಮಣುಮನ ಸಿಂಹಗರ್ಜನೆಗೆ ಬೆಬ್ಬಳಿವೋಗದ ಮುನ್ನಮೆನ್ನ ಗುರ್ದಿಂ ಬರ್ದದ ಮುನ್ನಮೆಂತಾನುಮೆ

ಮ್ಮವರಂ ಕಂಡು ಮಱಿವಾಟ್ಟುವುದು ಮೇಲೆಂದು ಸಭೆ ಬಿಲ್ಲುಂಬೆಱ ಗಪ್ಪಂತು ಜರ್ವಿ ಬೆಸೆದು ನುಡಿವುದುಂ; ಮಾರಾಯಂ ಪಿರಿದುಂ ಕನಲ್ದು—ತೆಗೆತೆಗೆ ನಿನ್ನ ಶತ್ರುಹಗಿತ್ರುಹರಂ ! ಮುಕ್ಕಣ್ಣನೆ ರಣ ದೊಳಿದಿರಾದೊಡಂ ಬಗೆವೆನೆ ? ನಿಮಗಂ ದೇವರ್ಗಂ ನಯಕಂಜುವೆನಲ್ಲದೆ ಭಯಕಲ್ತು. ಅಂತಾಗದಂದು ನೀವೆ ಬಿಲ್ಲಾಳ ಬಲ್ಲಾಳರಪ್ಪಿನಂ ಮೊನೆಯೊಳ್ ಹಯಮಂ ಕೊಳ್ವುದು, ರಾಮನಂ ತೋಱದೆ ಸಂಧಿ ಗೊಂದೆಂ. ಬಿಣ್ನುಡಿಗೆ ಬೆಱಗಾಗೆಂ. ಇದು ಸಿದ್ಧಂ ಬದ್ಧಮೆಂದು ಪೂಣ್ದು ನುಡಿದು ಬಂದ ನಿಯೋಗಿಯುಂ ಪಿಂತಟ್ಟಲೊಡಂ ; ವಾಲಿಪುತ್ರ ನಿಚ್ಚ ಪಚ್ಚೆಯಾಗಿ ಚೆಚ್ಚಱದಿಂ ಬಂದು ತಮ್ಮಾಣ್ಮಂಗಿಂತಿದಂ ಕೇಳಿಸಿದಂ.

ಬೀರದೇಟ್ಕಿಗೆ ತಮಗಾನುಡಿಯೆ ಗುಡಿಯಾಗೆ ಆಕೆವಾಳರೆಲ್ಲರ್ ಕಲಿಯಾಗಿ ಕಣೆಯ ದೊಣೆಯ ಕಲ್ಲ ಬಿಲ್ಲ ಬೆಟ್ಟಿನ ಮುಟ್ಟಿನ ಮರನ ಗಿರನ ಪೊಱಿಯೊಳೆತ್ತಿನಡೆದು ಮತ್ತಮೆತ್ತಂ ಮುತ್ತಿ ಗರ್ಜಿಸಿದರ್. ಆ ಗರ್ಜನೆಗೆ ಮುಂಗಾರ ಸಿಡಿಲ ಗರ್ಜನೆಗೆ ಮೊರೆದು ಮುಱಿದೇಳ್ವ ಸಿಂಗ ನಂತೆ ಬೊಬ್ಬಿಱಿದುಬ್ಬೆಟ್ಟು ಸರಥಂ ಸುರಥಂ ದಂಡಂ ಕೊಂಡು ದಾ ಟಿಡುವ ದೆಖ್ಖಾಳದ ದಕ್ಕುಡಿಗರಂ ತಱುಬಿ ನಿಂದಂ. ಅನಿತಱೊಳ್ ಸಹ ದೇವ ಭೂರಿದೇವ ರಿಪುಂಜಯ ಪ್ರಮುಖ ಪುತ್ರವರ್ಗಮುಂ ಮಂತ್ರಿವರ್ಗ ಮುಂ ಮೂಲಬಲಂಬೆರಸು ಬೆಂಬಲಮಾಗೆ ಬಂದೊದವಿದರ್. ಆಗಳರ್ಕ ಡೆಯೊಳಂ ನಿಡುಗೋಲ ಬಲ್ಸರಿ, ಬೋಱಯಂಬಿನ ಸೂಟ್ಸರಿ, ನಿಡು ಗಲ್ಲ ಮೆಲ್ಸರಿ, ಬಡಿಗೋಲ ಜಡಿ, ಪೊಯ್ಮರನ ಪೊಯ್ಮಱ, ಬಟ್ಟೆಕೈದಿನ ದಿಟ್ಟಸೋನೆ ಎತ್ತಂ ಕಱದತ್ತು. ಇಂತಪ್ಪುದುಮುರ್ಕಿನ ಕೇಣಿಯ ಚೂಣಿ ಸೊರ್ಕುಂಜರ್ಕಾಗಲೊಡಂ ಕಂಡು ಮಿಂಡೆಜ್ದು ಪಡೆವಳರೆಲ್ಲರುಱವ ಣಿಸಿ ಮುಂಬರಿದೊಡ್ಡಿ ನಿಂದರಾಗೆ ಕಾದಿ ಮೋದಿ ತಾಂ ತಮಗೆ ಜವಹುರದ ಪಡಿವಳರಾದರ್. ಈಗಳರ್ವಕ್ಕದೊಳತಿರಥರ್ಗರ್ಧರಥರ್ಗ ಮಹಾರಥರ್ಗ ತಂತಮ್ಮೊಳ್ ಪೊಣರ್ಕೆ ಗಡ ! ರಿಪುಂಜಯಗೆ ವಿಮಲಂ ಸಾಟಿ, ದುರ್ವಾರಂಗೆ ಸುಬಾಹು ಸಾಟಿ, ಹರ್ಯಕ್ಷಂಗೆ ನೀಲರತ್ನಂ ಹೋಟಿ, ಬಲಮೋದನಂಗದಂಗೆಣೆ, ಸಹದೇವಂಗೆ ಸತ್ಯವಂತಂ ತೊಣೆ.

ಇಂತೋರಗೆಯಿಂ ತಾಮುರ್ಟ್ಟಾಗೆ ಕಾದುತಿರಲೊಡಮತ್ತಲೊಂದೆ

ಡೆಯೊಳ್ ತನ್ನೊಂದು ಪನ್ನತಿಕೆಯಿಂ ಪಡಿದಟಿಮನಱಿಯುತಿಱಿಯುತೆ ಬೀದಿವರಿಯುತೆ ಬರುವರುತುಮಿರ್ಪ ಚಂಪಕನನಿದಿರ್ಚಿ ಕೋಲ್ಗಱಿದು ಪುಷ್ಕಲಂ—ಎಲೆಲೆ ಗಬ್ಬದುಬ್ಬರದ ಗರುಡಿಯ ಬೀರ ! ನೀನೇವೂರ ರಾಯುಗುವರನೊ ? ಕೆಮ್ಮನಿರದೆ ಬಱಿದೆ ಪೆಱರೊಡವೆಯ ಜನ್ನದಸುವಂ ಪಸುವಂ ಕವರ್ವ ಕಿತವರೆಂತಂತು ಬಲ್ಪಿಂ ಕೊಂಡುಯ್ವ ನಿಮ್ಮವರ್ಗೆ ನೀಂ ಗಂಡನೆ ! ಬಂಡನೆ ! ನುಡಿ ನುಡಿಯೆಂದಂ. ಆಸೊಲ್ಲಂ ಪುಲ್ಲಂಬಗೆದು ಪಲ್ಲಮಱಿಯೊಂದಾಯತಿಯಿಂ ಮಿಕ್ಕುಮೀಱಿ ಪೊಕ್ಕಿಱಿದಟ್ಟಿಯುಂ ಮುಟ್ಟಿ ಮುಱಿದು ಮುಂಡಮಂ ದಿಂಡುರುಳ್ಚಿ ರುಂಡಮಂ ಸೆಂಡಾಡಿ ಕರ್ವಿನಾಲೆ ಕರ್ವನೆಂತಂತು ಪಿಟಿದು ಮುಳಿದು ಮುಂದೊತ್ತಿ ಪೋಪನಂ ಕೋಪದಿಂ ತಱುಬಿ ಮತ್ತಮೆಂಗುಂ. ಓ ! ಓ ! ಗರುವಾಯ ಬಲ್ಗಡಸುಗಾಱ ! ನುಡಿವಂಗೆ ನುಡಿಯದುಸಿಕನೆ ಪೋಪ ಪೆರ್ಮೆಯದೊಂದು ಪೆರ್ಮೆಯೆ ! ಪಡಿನುಡಿಗುಡವೇಡಾ ! ಬಲ್ಪುಳ್ಳೊಡೆನ್ನನ್ನರೊಳ್ ತೋಱದೆ ಆಱದ ಬಾರದ ಬಱುಬಡವುಬಣಗುಗಳಂ ಕೊಂದೆಂ ತಿಂದೆನೆಂದೊಡೊಂದು ಕಾದಾಳ್ತನಮೆ ! ಮತ್ತಂ ಮೇಣುಮಂತದನೊರ್ಮೆ ನಿನ್ನಂ ಕೇಳ್ವೆಂ. ನೀನಾವನೇವಂ ? ನಿರ್ನೆರಮೆಮ್ಮಂ ತಿಣುಕಿ ಕೆಣಕಿ ನೋಯದೆ ಸಾಯದೆ ಬಂದ ಬಂದಿಯ ಕುದುರೆಯಂ ಬಿಟ್ಟು ಕಾಣ್ಕೆಗೊಟ್ಟು ನೆಱೆ ಮಱೆವೊಕ್ಕುದು ಕರಂ ಲೇಸೆಂದಂ. ಆಗಳ್ ಚಂಪಕಂ ಕಿನಿಸಿಂ—ಎಲೆ ಎಲೆ ! ಕಡುಸಡಗರದ ಬಡಿವಾರದ ತೋರದೋಟಿಗ ! ರಣಕ್ಕೆ ಮೆಯ್ಯಾಂತು ನಿಂದೆನ್ನಂ ಮುನ್ನಮಾರೆಂದು ಕಿಱುಕುಳನೆಂತಂತು ಬೆಸಗೊಳ್ವ ಬೆಸೆಗಾಱ ! ನಿನ್ನ ಗರುವಿಕೆಗೆ ನಾಡೆ ನೋಡೆ ತೋಡೆ ! ಒಡ್ಡಿನಿಂದ ಗಂಡುಗಲಿಗಳ್ಗೆ ಸೊಲ್ಲ ಬಿಲ್ಲಪ್ಪಿನನೀಗಳ್ ನಿನ್ನೊಳ್ . ನುಡಿವೊಡೆಂದೆ ನಿನ್ನಂ ತಾಗಿವಂದೆಂ. ನಿನ್ನೊಳುಟಿದೆನಗಾವುದನ್ಯಂ ಜನ್ಯಂ ? ಪೆಸರೇನೆಂಬೆಯಪ್ಪೊಡೆ ನಿನ್ನನ್ನರಪ್ಪ ಸೊರ್ಕಿನ ಬಂಡುಣಿಗಳ್ಗೆ ತಲೆವೇನೆಯನೊದವಿಪ ಚಂಪಕನಪ್ಪ ಚಂಪಕಂ. ತೋಳ್ವಲಮುಳ್ಳೊಡೆ ಕಾದಿ ಕುದುರೆಯಂ ಕೊಳ್ಳೆಂಬುದುಂ ; ಪುಷ್ಕಲಂ— ಏನೆಂಬ ಪೆಂಪೊ ! ತಾಂ ಗಡ ! ಚಂಪಕಂ ಗಡ ! ಬಂಡುಣಿಗಳ್ ಗಡ ! ಏಂ ನಿನ್ನ ಪ್ರಾಣಂಗಳ್ಗೆ ದರ್ವೀಕರನಾಗೆನೆ ! ನೋಡೆಂದಂ. ಅದರ್ಕಾಚಂಪಕಂ— ನೀಂ ದರ್ವೀಕರನಪ್ಪೊಡೀಕಳಸೊಳೇ ನಡುಕಳದೊಳಡುವಳನಕ್ಕುಂ, ಭಾರತಿ

ಯೆಂಗುಂ— ಅಂತಪ್ಪೊಡೆ ತಳ್ವದೆ ತಱಿದು ಸುಂಟಿಗೆ ಪಂಟಿಗೆ ಸಲ್ವಿನಂ ನಿಮ್ಮನೆ ಬಾಣಸುಗೆಯ್ದು ಪರ್ದಿಂಗೆ ಬಿರ್ದಿಕ್ಕುವೆಂ, ನೋಡೆಂದು ಪೊಂಗ ಱಿಯ ಕವಲಂಬಂ ಚವಲಂಬವಾಡದ ಮುನ್ನವೋಡುವಿನಂ ಪೋಗೆ ಚ್ಚಂ. ಇಂತಿರೆ ಪಗೆಯ ಸವಗದೊಳೆಚ್ಚ ಕಣೆ ಬೆಚ್ಚಂತಾಗಲೊಡಂ ನಾಂಟಿದಲಗನಲಘುಭುಜಪ್ರತಾಪಂ ಎನಸುಂ ಬಗೆಯದಕ್ಷ್ಣಯಬಾ ಣಂಗಳಿಂ ಪುಷ್ಕಳಂ ಪುಷ್ಕಳನಂ ನೋಯಿಸಿದಂ. ಇಂತಪ್ಪುದುಂ ಶರ ಹತಿಗೆ ಗಾಱುಗೆಟ್ಟುಬ್ಬಸಂಬಟ್ಟು ಮೆಯ್ಮಱಿದನಾಗೆ ಬಲದೊಳೆತ್ತಂ ನಿಬ್ಬೆ ಱಗಿನ ಕಲಕಲಂ ಪಿರಿದಾಯ್ತು. ಅನಿತಱೊಳೆ ಶತ್ರುಹಂ ಭಾರತಿಗೊಂದು ನೋವು ತನಗೊಂದು ಮನಕ್ಕೆ ಜೇವಾಗೆ ಮುಂಬರಿದೊತ್ತಿಮುತ್ತಿ ಗಜಱಿ ಗೆಲ್ಲದ ಚಲ್ಲದ ಪರಿಮುಱಿಯ ಗಂಡರನೆತ್ತಂ ಪಿಂಡುಗೆಡೆಪುತಂಡಲೆದು ಬೆಂಡಾಗಿ ಮತ್ತಮುಗ್ಗದ ಪುಗ್ಗಿನ ಚಂಪಕನನಱಿಸಿ ಮಾಱಾಂತು—ಓವೊ! ಹೋಟಿಗರಿತ್ತಲಿರ್ಪರೆ ; ಬವರಿಗರ ಬಲ್ಪುಳ್ಳರ್ ನಿಮಗಮೀಗಡೆಯೆಡೆ ಯಾಯ್ತೇ! ಪೇಡಿಯುಂತುಂ ಖೋಡಿಯ.ಂತುಮಿಂತು ತಲೆಗರೆದಿರ್ಪುದಿದಾವ ರೂಢಿಯೋ ? ಕಿಱುಕುಳರಂ ತರುವಲಿಗಳಂ ತಱುಂಬಿ ಗೆಲ್ವೊಂದು ಗೆಲ್ಲಮೆ ಪೊಲ್ಲಮೆಯಾಗದೇಂ ನಿಮಗೆ ! ಇತ್ತಲಿತ್ತಲ್ ಚಿತ್ತವಿಪ್ಪುದೆನ್ನ ಸರಿಸಕ್ಕೆ ! ಆನುಂಟು ; ತೋಳ್ವಲರ್ ನೀಮುಂಟು. ಇಂತಿದೆನ್ನ ಸಜ್ಜೆನೆಟಿಗೋಲ ಸವಿ ಯಂ ಇನಿಸಿನಿಸುಂ ಕಾಣಿಮೆಂದು ಬಲ್ಗೋಲ್ಗಳಂ ತಿಱುವಾಯ್ಗೆ ಸಂಧಿ ಸುತೆಚ್ಚಂ. ಆಗಳ್ ಚಂಪಕಂ ಕಳ್ಕನೆ ಪಿಳ್ಕು ಪೆಱಗಾಗಿ ಬರ್ಪ ಶರಮುಂ ತನ್ನೊಂದಂಬಿನಿಂ ಮುಱಿದು ಮೇಣ್ ಪುಂಖಾನುಪುಂಖಮಾಗೆ ಪತ್ತಂ ಬುಗಳಂ ಗೊಲೆ ನೆಲೆದಪ್ಪುವಿನಂ ಸೆಳೆದಾರ್ದೆಸಾಡಿದಂ. ಅಂತೇಸಾಡಿ ಬರ್ಪ ಪುಣಂಬುಗಳಂ ನಡುವಟ್ಟೆಯೊಳೆ ಕೊಚ್ಚಿ ಪಡಿಸರಲಿಂ ತೇರ ಕೀಲಂ ವಾರುವದ ಕಾಲಂ ಮುಱಿದಂ. ಇಂತಾಗಲೊಡಂ ಮೂಱಡಿಯ ಪೇರಡಿ ಯೊಂದು ಪಾಂಗಿನಿಂ ಹಯಂ ಕೂಂಟೆ ನಡೆವುದುಮಾರಥಮನುಟಿದು ಮೇಣೊಂದು ಬಿನ್ನಣದ ತೇರನಡರ್ದು ಚಂಪಕಂ ನೊಂದ ಪಂದಿಯೊಂದು ಮಸಕದಿಂ ಕೆರಳ್ದಣ್ಮಿಕ್ಕೆಂದು ಮಂತ್ರಾಸ್ತ್ರಂಗಳಂ ಭರತಾವರಜಂಗೆ ಪೂಡಿ ದಂ. ಆಗಳ್ ಮಂತ್ರಮಂ ತಂತ್ರದಿಂ ತಱಿದು ಪೊಸಮಸೆಯ ವಿಶಿಖಂಗಳಿಂ ಪಗೆಯ ಬಿಲ್ಲಂ ಪುಲ್ಲಂ ಕಡಿವಂತು ಮುಕ್ಕಡಿಗೆಯ್ದು ಬೊ ಬ್ಬಿಱಿದಂ. ಚಂಪಕನೆಂಗುಂ ;—ಕಣ್ಬೇನೆಯ ಕರಡಿಯಂತೊರಲದಿರಲೆ

ಕೂಟಿ! ಚಾಪಂ ಪೋದೊಡೇನಕ್ಕುಂ. ನಿನ್ನೊಂದು ವಧೆಗೀಗಡೆ ಸಾಲದೆ? ನೋಡೆಂದು ದಂಡಂ ಖಂಡಮಪ್ಪಂತು ಪೊಯ್ದಂ. ಅನಿತಱೊಳಿಗದೆಯುಂ ಸದೆದು ಮೇಣೆರಡಂಬಿಂ ಮುಂಬಿಗನಂ ನಿರಾಯುಧನಂಗೆಯ್ದು ನಿಶ್ಚೇಷ್ಟಿತನಪ್ಪಂತು ನೋಯಿಸಿ ಕಣದೊಳ್ ಕೆಡೆಪಿದಂ. ಇಂತು ಚಂಪಕಂ ಜೋಂಪಿಸಿ ತಿರೆಯೊಳ್ ಕೆಡೆವುದುಂ ಅಱಿದುಱಿದ ಬೆಂಬಲಂ ಮುಂಬಲಮಾಗೆ ಬೆಂಗೊಟ್ಟೋಡಿ ತಮ್ಮಾಣ್ಮಂಗಿಂತಿದಂ ಕೇಳಿಸಿದರ್, ಒಡನೆಯೆ ಸುರಥಂ ರಥಮುನಾ ಎಡೆಗೆ ನೂಂಕಿ ಪಗೆಯನಸ್ತ್ರಜಾಲದಿಂ ಸೆಱೆವಿಡಿದುಯ್ವೆನೆಂಬಾವೇಳೆಯೊಳಣುಗನರಿಯುಂ ಕರಿಯನೆಱಗುವ ಬಲ್ಸಿಂಗದಂತಿರೆ ತನ್ನೊಂದಾಟೋಪದಿಂ ತಾಗಿ ತೂಗಿ ಪಿಡಿಯಿಂ ಗುರ್ದಿದನಾಗೆ ತೇರ್ ಜಜ್ಜರಿವೋಯ್ತು. ಆಗಳ್ ಸುರಥಂ ವಿರಥನಪ್ಪುದು ಮಿರ್ವರುಂ ಕಣನೊಳ್ ಸಮದಂಡಿಯಿಂ ಪೋಣರ್ದರ್. ಹಯಮುಂ ತಾರೆಂಬ, ರಾಘವನಂ ತೋಱೆಂಬ, ಕೆಲಸಾರೆಂಬ ನೀನಾರೆಂಬ, ಪೋರೆಂಬ ಬಾರೆಂಬ ಸಡಗರದ ನುಡಿಯೆ ನುಡಿ ಕೊಳುಗುಳದೊಳ್. ಸುರಥನಿಟ್ಟ ಗದೆಯನಣುವಂ ಮುಱಿದಂ; ಪೊಯ್ದ ಕೂರಸಿಯುಂ ಮುಱಿದನೆಚ್ಚಗ್ನಿ ಬಾಣಮಂ ಮುಱಿದಂ: ಗರುಡಾಸ್ತ್ರಮಂ ಮುಱಿದಂ; ಪರ್ವತಾಸ್ತ್ರಮಂ ಮುಱಿದಂ; ವಜ್ರಾಸ್ತ್ರಮಂ ಮುಱಿದಂ ಬ್ರಹ್ಮಾಸ್ತ್ರಮಂ ಮುಱಿದಂ; ವಾಯುಬಾಣಮುಮಂ ಮುಱಿದಂ; ರಾಮಬಾಣಮೊಂದೊಡೆ ಸರಿದಂ. ಏನೆಂಬ ಭಕ್ತಿಯೊ ದೇವರೊಳ್! ಅಂತು ಚಳಚಳಿಸಿ ಬೆಳಬೆಳಗಿ ತೇಂಕಿ ವರ್ಪ ಪೊಂಗಱೆಯ ರಾಮಬಾಣಮಂ ದೂರದೆ ಕಂಡಡಿಮುಡಿಯೊಂದಾಗೆ ಮಣಿದು ಕೆಯ್ಯೊಳ್ ಕೊಂಡೆರ್ದೆಗೊತ್ತಿ ತಲೆಯೊಳಿಟ್ಟು ಪೆಗಲೊಳಾಂತು ಪಟ್ಟಿಕ್ಕಿಗೆಯ್ದು ತಳ್ಕೈಸಿ ಸೊಗದಾಲಿನೀರಿಂ ಮಿಾಯಿಸಿ ನಿಜಭಕ್ತಿಯೊಂದು ಹರವಸದಿಂ ಮೆಯ್ಮಱೆದೆಳ್ಚಿಗೊಂಡು ಸಂತಸದ ಸವಿಗಡಲೊಳೋಲಾಡಿ ನೋಡಿ ಪಾಡಿ ಮತ್ತಂ ಕಟ್ಟೆದಿರೊಳಿರ್ಪ ಸುರಥನಂ ಕಂಡು—ಎಲೆ ರಾಯ! ಇಂದಿಗೆ ನೀನೆ ಗೆಲ್ದಯ್. ನಿನ್ನನೆ ದೇವರೊಲ್ದರಕ್ಕುಂ. ಎಲೆ ದೇವ! ಭಕ್ತವತ್ಸಲನಾಗೆಯೆ? ಕರುಣಾಕರನಾಗೆಯೆ? ಮೂಜಗದೊಡೆಯನಾಗೆಯೆ? ಎನ್ನೊಡೆಯನಾಗೆಯೆ? ಆಂ ಬಂಟನಾಗೆನೆ? ಮುನ್ನಿನ ನನ್ನಿಗನಾಗೆನೆ? ಎನ್ನೊಳೇನಪರಾಧಮೊ? ಏನುಪೇಕ್ಷೆಯೊ? ಪೇಱಿರೆ, ದೇವಾ! ಈಬಣಗುರಾಯನೊಳಗೆ ಜುದ್ದಂ ಕೆಯ್ಗೊಟ್ಟಪೊಡಕ್ಕುಮೆ? ನೀನೆ ಬಂದು

ಜಡಿವೊಡಕ್ಕುಮೆ! ಬಡಿವೊಡಕ್ಕುಮೆ! ಸೆಱೆವಿಡಿವೊಡಕ್ಕುಮೆ ! ನಿನಗಮೀ ಪಂದೆ ಗೊಂದೆರಾಯನೊಳೇಂ ಪಕ್ಷಪಾತಮೋ ! ಸಾಜಂ. ನಿನ್ನತ್ತಣಿನರಿಂಗ ಮುಂಜುವೊಡಾದೆಂ. ಬೆನಕನಂ ಕಂಡು ಕಿತ್ತಿಲಿಗೆ ಕುಂಬಿಟ್ಟೆಂ. ನೀ ನಿಲ್ಲದಂದೆನಗೇತಱಿ ಕೂರ್ಪು ? ಏತಱಿಂದಾರ್ಪು ? ಮೇಣೇತಱಿ ಪೊಡರ್ಪು? ಎನಗೇಕೆ ಬಂಟತನಮೇತರ್ಕೆ ಹಯದ ಬೆಂಬೞಿ—ಯೆಂದು ಪಲವಂದದೊಳ್ ಮಣಿಮಣಿದು ಪಾಡಿ ಬೇಡಿಕೊಳುತಿರ್ಪುದುಂ ; ಬಾನ ಮೀನನಿೞಿಕೆಯ್ವೊಂದುಜ್ಜಳದ ಕುಂಡಲಂ, ಬಣ್ಣಿಸಿ ನುಣ್ಣಿಸಿದ ಕರ್ಮಣಿಗಲ್ಲ ಕೈಗನ್ನಡಿಯೆಂತಂತು ತಳತಳಿಪ ಗಂಡಮಂಡಲಂ, ಮುಗಿಲ್ ಪಗಿಲ್ತಾಗಸದ ಪಸುರ್ವಣ್ಣದ ಮೆಯ್ಸಿರಿ, ತುಂಬುವೆಱೆಯ ಕಳಿಗೆ ಕೆಳೆಯಪ್ಪ ಮೊಗಸಿರಿ, ಪಲಗೆನೊಸಲಂದಂ, ನಿಱುಗುರುಳ ಚೆಂದಂ, ಕಿಱುನಗೆಯ ಗಾಡಿ, ಚೆಲ್ವಿನಲರ್ಗಣ್ಗಳ ಕಡೆಸೋಟದ ಮೋಡಿ ಬಗೆಯೊಳಿಂಬುಗೊಳಲೊಡಂ ಮಿಗಗೋಡುಂ ನಾಱ ಸೀರೆಯುಂ ತನ್ನ ಲಚ್ಚಣಮಾಗೆ ದೀಕ್ಷೆವೊತ್ತ ಕೋದಂಡದೀಕ್ಷಾಗುರುವಂ ತನ್ನಿದಿರೊಳ್ ಕಂಡಂ. ಇಂತು ಮೆಯ್ದೋಱಿದ ತನ್ನೊಡೆಯನಂ ಸುಖಾಶ್ರು ತಾಂ ತನಗೆ ಕಾಬ್ಬುರಮಾಗೆ ಸೋರ್ವಿನಂ ಎಮೆಯಿಕ್ಕದಾಲಿಸಿ ಮೇಣುಂ ಮೇಣುಂ ದೇವರಡಿಯೊಳ್ ಪೊರಳ್ದು ತನ್ನ ಬನ್ನಮುಂ ನಿರವಿಪುದುಮತ್ತಲ್ ಮಱುವಕ್ಕದ ಸುರಥಂ ತಳ್ವದೆ ಹಯಮುಮಂ ಕಪ್ಪಮುಂ ಕಾಣ್ಕೆಯುಂ ಪೊನ್ನ ಭಂಡಾರಮುಂ ತರಿಸಿ ರಾಘವನಡಿಗೊಪ್ಪಿಸಿ ತಾನುಂ ದಂಡಪ್ರಣಾಮಂಗೆಯ್ದು—ಜೀಯ ! ದೇವ ! ಎನ್ನೊಡೆಯ ! ಎನ್ನಿತಪರಾಧಮೆನ್ನಿತಪರಾಧಂ ! ಬಂದ ಹಯಮಂ ನಿನ್ನದೆಂದಱಿತುಂ ಬಿಟ್ಟೆನಿಲ್ಲಂ. ನಿನ್ನವರಂ ಪೊಯ್ದೆಂ ಬಯ್ದೆಂ. ಆದೊಡಂ ನಿನ್ನಂ ಕಾಣ್ಬೊಂದು ಬಯಕೆಯೊಳಲ್ಲ, ಗೆಲ್ಲದೊಳೆಳ್ಳನಿತಾದೊಡಮಲ್ತು. ಈಗಳ್ ಕಣ್ಣಾಱೆ ಕಂಡೆಂ, ತಣಿದೆಂ, ದಣಿದೆಂ; ಮೇಣೆನೆಗಾವುದಱೊಳಾಸೆ ? ಇದೆಕೊಳ್ ! ಹಯಂ; ಕಾಣ್ಕೆ ಕಪ್ಪಂ ನಾಡು ಬೀಡೆಮ್ಮ ಸೊಮ್ಮು ನಿನ್ನ ಚರಣಕ್ಕರ್ಪಿಸುವೆಂ. ಎನ್ನೊಡಲುಮನೊಡಮೆಯುಮಂ ಮಡದಿಮಕ್ಕಳಂ ನಿನ್ನಡಿಗೊಪ್ಪಿಸಿದೆಂ. ನೀನೋವುದು ಕಾವುದು—ಎಂದು ಸೆಱಂಗನೊಡ್ಡಿ ಬೇಡಿಕೊಂಡಂ. ಆಗಳ್ ಶ್ರೀರಾಮಚಂದ್ರಮನಿರ್ವರುಮನೆತ್ತಿ ತಳ್ಕೈಸಿ ತನಗಭಿಮಾನಮನಿರ್ವರೊಳಂ ಸಮಂತು ಪ್ರಕಟಿಸಿ ಕ್ರೋಧಮುಂ ತಿಳಿಪಿ ಕಳಿಪಿ ಮತ್ತಂ ಮುಚ್ಛೆವೋದ

ತಮ್ಮವರನೆಟ್ಟಿಸಿ ಸರ್ವರುಮಂ ಸಂತೈಸಿ ಮೆಯ್ಗರೆದಂ.

ಬಱಿಕ್ಕಮಾಶತ್ರುಘ್ನರರೆವಗಲುಪ್ಪಯಣಂಗೆಯ್ದು ಸುರಥನಿಂ ಸತ್ಕೃತರಾಗಿ ರಾಜಂಬೆರಸು ಪಡಗರದಿಂ ಮುಂತೆಮುಂತೆ ನಿಚ್ಚವಯಣದಿಂ ನಡೆದರ್.

ಎಂಬಲ್ಲಿಗೆ. ಶ್ರೀರಾಮಾಶ್ವಮೇಧದೊಳ್
ಹನುಮತ್ಪರಾಜಯಂ ಪಂಚದಶಾಶ್ವಾಸಂ ಸಂಪೂರ್ಣಂ.

---

## ಷೋಡಶಾಶ್ವಾಸಂ.

### — ಕಥೋಪಸಂಹಾರಂ —

ಎಲೆಗೆ ರಾಮಾಭಿರಾಮೆ ! ಸುಗ್ರೀವೆ ! ನೀಲಕುಂತಳೆ ! ಕುಮುದನಯನೆ ! ಪದ್ಮಗಂಧಿ ! ಕೇಸರಿಮಧ್ಯೆ ! ಅಂಗದವಿರಾಜಿತೆ !

ಅಂತು ಕುಂಡಲಪುರದಿಂ ತಳರ್ದು ಪೆಱವರ ಕೆಱವರ ಕಣ್ಣಲಿ ಮೊಗರ ಗುಡ್ಡರೋರೊಂದು ನಾಡಂ ಕಱಿಕಱಿದು ಬರುವರುತುಮಿರ್ಪುದುಮಲ್ಲಿ ಮಲ್ಲೀವಲ್ಲೀಕುಂಜಪುಂಜರಂಜಿತಮಾದೊಂದು ಮುನಿಗಳಾಶ್ರಮದ ಪೊಱವಳಯದ ತೋಂಟದೊಳಾಟದ ಕಿಱುವರೆಯದ ಕುವರರಿರ್ವರದಱಿಂ ತಡೆದು ಪಿಡಿದು ಹಯಮಂ ಕಟ್ಟಿದರ್ ಗಡ !

ಮನೋರಮೆ—(ಕೇಳ್ದೊಂದು ತವಕದಿನೆನಸುಂ ಸರಿಸಕ್ಕೆಯ್ತಂದು ನಲ್ಮೆ ಮಿಗೆ ನಲ್ಲನಂ ಗಲ್ಲಮನಲುಂಗಿ ತಳ್ತಮರ್ದಪ್ಪಿ) ಎನ್ನ ಚೆನ್ನರಸ ! ಮುನಿಗಳಾಶ್ರಮದ ತರಳರ್ಗಿಂಬಗೆಯೊಳ್ ನಾಡ ರಾಯರಂ ಜನ್ನಗುದುರೆಯುಂ ಕಟ್ಟಿ ಕಾದುವೊಂದು ಬಲ್ಪಂ ಕೂರ್ಪುಂ ನೇರ್ಪಟ್ಟುದೆಂತು ? ಆರಪ್ಪರೀಕುಮಾರರೇಂ ಗೆಯ್ದರೇನಾದರೆಂತು ಕಾದಿದರ್ ಪೇಱ ? ಅಬ್ಬಾ ! ಏಂ ಗಡುಸುಗಾಱರೊ !

ಮುದ್ದಣ—ಊಃ ! ಪೋಕೆ. ಬಾಱಿಗ್ಗಿಟ್ಟ ಮಕ್ಕಳಾರಾದೊಡಮೇಂ ? ಸಾಲ್ಗುಮೀಪಾಟ್ಗಿತೆ ; ಕತೆವೇೞ್ದು ಬೇಸತ್ತೆಂ ; ಎಂತುಂ ಯಜ್ಞಪರಿಸಮಾಪ್ತಿಗೆಯ್ವೆಂ.

ಮನೋ—ಮುದ್ದುಮೊಗದ ಚೆನ್ನಿಗರಾಯ ! ಆಗದಾಗದು, ತನ್ನಾಣೆ ! ಬಾಲಕರ್ ರಣದೊಳ್ ಸೋಲ್ತರೆ? ಗೆಲ್ದರೆ? ಪೇೞಿಯ್, ನಿನಗೇನಿಂತು ಬೇಸಱಿಖೂ ಕಾಣೆಂ.

ಮುದ್ದ—ನೀನುಡುಗೊಱೆಯನೀವುದನೇನುಮಂ ಕಾಣೆನುಂತೆ ಪೇೞಿಂದೊಡೆ ಪೇೞ್ವರೆ ?

ಮನೋ—(ಕಿಱುನಗೆಯಿಂ) ಎಱೆಯ ! ನೀನುಮೆರೆವರೆಂತಂತು ಬೇಡುವಯ್. ಇಸ್ಸಿ ! ಕಾಡಿ ಬೇಡಿಕೊಂಡೊಡೊಂದುಡುಗೊಱೆಯೆ ? ಮನಮೊಲ್ದೀವೊಡಲ್ತೆ ಮೆಚ್ಚು ?

ಮುದ್ದ—ಮೆಚ್ಚಂ ನಚ್ಚಿ ಪಚ್ಚವೋದೆಂ. ಆಯ್ತು ನೋೞ್ಪಂ. ಎಳಗುವರರೊಂದು ಕತೆ ಮುಂತಿರ್ಕೆ. ನೀಂ ಮುನಿವೆರಸು ಪೋದ ಸೀತೆಯೊಂದಿರವನಱಿತುಂಟೆ ?

ಮನೋ—(ಅಱಿವುಗೊಂಡು) ಎನಗಮೇನೊಂದು ಮಱವೆಯೊ? ಎನ್ನಬ್ಬೆ ಸೀತೆಯನಂದಾಗಳೆ ಮಱೆತೆಂ. ಅಪ್ಪುದಪ್ಪುದು. ಮುನಿಗಳಾಶ್ರಮದೊಳಿಂತಿರ್ದಳೇಂಗೆಯ್ದಳ್ ? ತಮರವರ್ ಕಡೆಗೆ ಕೊಂಡುಯ್ದರೇಂ ? ಎನಗಿದನೆ ಪೇೞ್. ಆಮುಕ್ಕಳಿರ್ಕೆ ಪೋಕೆ.

ಮುದ್ದಣ—ಅಂತಱವುಂ ನನ್ನಿಯುಂ ಬಿತ್ತುಂ ಬೆಳೆಯುಂ ಪುರುಳುಂ ತಿರುಳುಮೊಡೆವೆರಸು ಪೋಪಂತೆ ಪೋಗಿ ಬೞಿಕ್ಕೆ ಮುನಿಪನಾಶ್ರಮದ ನಟ್ಟನಡುವೆ—ಎಳವಳ್ಳಿಯ ಮೊಗವಾಡಂ, ಬೆಳ್ಳಿಲೆಯ ಮಂಡಪಂ, ಪಸುರೆಲೆಯ ನಟ್ಟವನೆ, ಸೆಳೆಗೊಂಬಿನ ಕೇರ್, ಪಣ್ಣೆಲೆಯ ಪೊದಕೆ; ಚೆಂದಳಿರ ಪೞ್ಕಿ, ಪೊಸಸುೞಿಯ ಮೂಡಾವಿ, ಅಲರ್ಜೊಂಪದ ಮೇಲ್ಕಟ್ಟು ಚೆಲ್ವಾಗೆ ಕಣ್ಗಂ ಮನಕಮಿಂಬಾದ ಪರ್ಣಕುಟಿಯನೇರ್ಪಡಿಸಿ ಬಗ್ಗನೊಂದು ಸಿರಿಯುಂ ಹದಿಟೆಗೆಯ್ವಂತು ದೇವಿಯನಿರಿಸಿ, ನೆರೆಮನೆಯ ಮುನಿಸತಿಯರಂ ನೇಹದ ನಲ್ಗೆಳದಿಯರಂ ಮಾಡಿ, ಪಾಡೞಿದು ಬೆಂಡಾಗದಂತು ತಾನಾರಯ್ಯುತಿರ್ದಂ.

ಸೀತೆ ನಿಚ್ಚಲುಂ ಪೊೞ್ತಿಡೆಗೆ ಮುನ್ನಮೆ ಶ್ರೀರಾಮನೊಂದು ನೆನಪಿನೊಳೆೞ್ಚಿತ್ತು ಮೂಡಿವರ್ಪ ತನ್ನ ಕುಲಗುರುಗಭಿವಂದಿಸಿಯುಂ, ಮಿಂದು ಬಂದು ಮಡಿಯುಟ್ಟು ಮುನಿಗಯ್ಯಂಗೆಂತಂತು ಬಲವಂದೆಱಗಿ ಪರಕೆಗೊಂಡು, ಮುನಿಪತ್ನಿಯಳಂ ಕಾಲ್ವಿಡಿದು ತಿಱಿತಂದ ಪೂಗಳನರ್ಪಿಸಿ,

ಕಿಱಿದುಂ ಬೇಗಮಿರ್ದು ಸಲ್ಲಪಿಸಿ ನಿಲ್ಲದವರಿತ್ತ ಕಂದಮೂಲಂಗಳಂ ಕೆಯ್ಕೊಂಡು. ತನ್ನ ಕಿಱುವೆರಲ ಮುದ್ರಿಯುಂಗುರದ ಶ್ರೀರಾಮಮೂರ್ತಿಗೆ ಸಮರ್ಪಿಸಿ, ಬೞಿಕ್ಕೆ ತಾನಿನಿಸಿನಿಸಂ ಕೋಡಿವರಿವ ಕಣ್ಣೀರ ಬೆನ್ನೀರೊಳುಂಡು ಕಂಡು, ಮುನಿಗಳೋದುವ ರಾಮಚಾರಿತ್ರಮಂ ಕಿವಿಯಾಱೆ ಕೇಳ್ದು, ತಾನುಂ ಪಂಬಲಿಸಿ ಕಡೆವಗಲ್ವರೆಗಮಿರ್ದು, ಸಂಜೆಯಪ್ಪುದುಂ ಸಂಧ್ಯಾದೇವಿಯುಂ ಭಾವಿಸಿ ಮತ್ತಂ ತನ್ನ ಪ್ರಾಣೇಶ್ವರನ ನಲ್ಮೆಯ ಬಣ್ಣನೆಯನೆ ನೆನೆನೆನೆದೊಂದು ಹರವಸದಿಂ ಮೆಯ್ಮಱೆವಳೊಱಗುವಳ್ ಕನವರಿಸುವಳ್. ನುಡಿಯೊಳ್ ನಡೆಯೊಳೆಡವಿನೊಳ್ ಜಡದೊಳ್ ಜಂಜಡದೊಳ್ ಅಡಿಗಡಿಗೆ ಶ್ರೀರಾಮನೊಂದೆ ನೆನಪು ಗಡ ! ಏಂ ಸಾಧ್ವಿಯೊ ! ತನ್ನೆಱೆಯನಯೆ ಪಾಡು, ತನ್ನಾಣ್ಮನಯೆ ಭಕ್ತಿ, ತನ್ನಿನಯನಯೆ ನೆನೆಪು ತನ್ನರಸನಯೆ ಸರಸಮಾಸರಸಿಜಾಕ್ಷಿಗಜಸ್ರಂ. † ಕೋಡಳ್ ಬಾಡಳ್ ಕೊಂಕಳ್ ಸಂಕಿಸಳೋಪನ ಕೋಪದ ಶಾಸನಕ್ಕೆ ಜನಕತನೂಜೆ. ತನ್ನೆಡರನೊರ್ವರ್ಗೆ ನೆನೆವಳೊರ್ವರ್ಗೆ ಮಱುಗುವಳೊರ್ವರ್ಗೆ ಅಳವೞಿವಳೊರ್ವರ್ಗೆ ತಿಳಿವಳೊರ್ವರ್ಗೆ ತಾಂ ತನಗೆ ಸಯ್ತಿಡುವಳೊರ್ವರ್ಗೆ ಬೇಡಂ ಪೊಕ್ಕ ನಾಡವೆಣ್ಣಂತಂತು ಬೆರ್ಚಿ ಬೆದಱುವಳೊರ್ವರ್ಗೆ ಮಱೆವಳೊರ್ವರ್ಗೆ ಗುಱುಗುಮ್ಮನಿರ್ಪಳಾಹದಿಬದೆ ನಿಚ್ಚಂ. ಇಂತು ತನ್ನೊಂದಿರವಿನ ನೋವನೆಂತುಂ ತನ್ನ ಮನದನ್ನನ ನೆನಪಿನೇಱಗುಡಳ್. ಮುನಿಯಾರಯ್ಕೆ ಮುನಿಸತಿಯರ ನೇಹಂ ತನ್ನೊಂದು ಪಾತಿವ್ರತ್ಯಂ † ನಿಸದಂ ದೇವಿಗೆ ಮಾವಳಸಿನ ಕಾಪಾಯ್ತು.

ಈಮಾೞ್ಕೆಯಿನಿರ್ಪ ಭೂಜಾತೆಗೆ ಸೀತೆಗೆ ತಿಂಗಳ್ ತುಂಬಿವರೆವರೆ ಮುನಿ ಕಂಡು ಸೀಮಂತಕರ್ಮಮಂ ಯಥಾವಿಧಿ ಮಾಡಿಸಿದಿಂಬೞಿಯಂ ನಲ್ಗೆಳದಿಯರ್ ಮಲ್ಲಿಕಾಸ್ಮಿತೆಗೆ ಮಲ್ಲಿಗೆಯ ಚೊಲ್ಲೆಯುಮಂ, ಕುಂದಕುಟ್ಮಲರದನೆಗೆ ಕುಂದದ ಬಾಸಿಗಮಂ, ಮಂದಗಮನೆಗೆ ಮಂದಾರದ ಬೈತಲೆಬೊಟ್ಟಂ, ಕಮಲಮುಖಿಗೆ ವಿಮಲಕಮಲದಂದುಗೆಯುಂ, ಚಂಪಕಸುನಾಸೆಗೆ ಸಂಪಗೆಯೊಡ್ಯಾಣಮಂ, ಶಿರೀಷಕೋಮಲಾಂಗಿಗೆ ಸಿರಸದ ಕಿಱುಮುಗುಳೆಕ್ಕಸರಮಂ, ಜಾತಿನಾಯಕಿಗೆ ಜಾತಿಯ ಪಿಂಡುಗಂಕಣಮಂ, ಸೀಮಂತಿನಿಗೆ ಸೇವಂತಿಗೆಯ ತೋಳ ಬಂದಿಯಂ ಸಮೆದು ಸಿಂಗರಿಸಲೊಡಂ ; ಪೂವಿನ ಪೊಸಪಸದನಂಗೊಂಡು ಅಂಗಂಬಡೆದು ಕಟ್ಟೆ

ದಿರ್ಗೆ ಜಳಕ್ಕನೆ ಬಂದು ನಿಂದ ವನದೇವಿಯೊಂದು ಪಾಂಗಿನಿಂ ದೇವಿ ಕಣ್ಗೆಡ್ಡವಾದಳ್.

ಇಂತೊಪ್ಪುವ ಸೀತೆ ಕಿಱಿದಾನುಂ ದಿನಕೆ ಮೇಣೊಂದು ಮುಹೂರ್ತದೊಳವುಳರನವುಳರಂ ಪೆಱಿನೇಸರ್ಕಳಂ ಪೂರ್ವದಿಕ್ಸುಂದರಿಯೆಂತಂತು ಪೆತ್ತು ಪತ್ತುಂದಿವಸಂಗಳ್ಗೆ ಮುನಿಪಂ ಕುಶನೆಂದುಂ ಲವನೆಂದುಂ ಕೊಂಡಾಟದ ಪೆಸರನಿಟ್ಟು ಕರೆವುದುಮಂದಿಂದಿಂಗಮವರ್ಗೆ ಕುಶಲವರೆಂಬ ಸಂದ ಪೆಸರಾಯ್ತುಳಿಗೆ. ಒರ್ವುಡಿಯ ಚೆಲ್ವಿರ್ವುಯ್ವಿತ್ತಂತುವಿರ್ವುಯ್ಯ ಸೋಮಕಾಮರ್ ಒರ್ವೊದಲೊಳೊಗೆದಂತುವೊಗೆದು ಗಾಡಿಗಾಡುಂಬೊಲಂ, ಸತ್ತಿನ ಗೊತ್ತು, ಹರಿಸದ ಸರಿಸಮೆನೆ ತೋಱೆ ದಿನದಿನಕ್ಕೇಱುಂ ಬೆಱಿಯಂತೆ ಕಳಿವೆರ್ಚುತೆ ಬಳೆಯುತಿರ್ಪಾನಿಸರ್ಗಸುಭಗರ್ ಪೆತ್ತಬ್ಬೆಗಂ ಪುತ್ತಿನ ಪುತ್ರಂಗಂ ಮುತ್ತ ಮುನಿಗಳ್ಗಮೆತ್ತಿ ನಲಿವ ಬಾಲೆಯರ್ಗಂ ಮತ್ತಮೆಲ್ಲರ್ಗಂ ಮುದ್ದುಮುದ್ದಾದರ್. ದಟ್ಟಡಿ ಬಟ್ಟಮೊಗಂ ಪುಟ್ಟಗೆಯ್ ನಿಟ್ಟಾಲಿ ನಟ್ಟನಡುವಣ ನಾಭಿ ಕಟ್ಟಾಯದ ಮೆಯ್ಸಿರಿ ನೋೞ್ಪರಂ ನಿರ್ವ್ಯಾಜಂ ಬೆಮೆಗೊಳಿಸೆ ಮೊಳೆವಲ್ಲ ಚೆಲ್ವು ಕಿಱುನಗೆಯಂದಂ ತೊದಲ್ನುಡಿಯ ಸೊಗಸು ತಳರ್ನಡೆಯ ಗಾಡಿ ಮನಂಬುಗೆ ಕಣ್ಗೆಂಬಾದರಾಲಂಬಾಲಕರ್ ಬಾಲಕರ್.

ಮತ್ತಂ ಚಲದಿಂ ಮಱುಗುವ, ಮಱಗುತಬ್ಬೆಯನಿರ್ಕೆಲದೊಳಂ ಸೆಱಂಗಂ ಸೆಳೆವ, ಸೆಳೆದೋಡುವ, ಸಮಂತೋಡಿ ಕಟ್ಟೆದಿರ ಕರ್ಗೋಡಗನಂ ಗಡ್ಡದೊಳೀಟ್ಡು ಮಱಿಸಿಂಗನ ಬಾಲಕ್ಕೆ ಗಂಟಿಕ್ಕುವ, ಗಂಟಿಕ್ಕಿ ನಗುವ, ನಕ್ಕು ಮೊಕ್ಕಳಂ ನಲಿವ, ನಲಿದು ಬಂದು ಮುನಿಯನಪ್ಪುವ, ಪಿಡಿದಪ್ಪಿ ತೊಡೆಯನೇಱುವ, ತೊಡೆಯನುಱಿದು ಪೆಗಲನಡರ್ವ, ಪೆಗಲನಡರ್ದು ಕಿವಿಯನೂದುವ, ಕಿವಿಯನೂದಿ ತಲೆಯನಲುಗುವ, ತಲೆಯನಲುಗಿ ಮುಡಿಜಡೆಯಂ ಬಿಡುವ, ಬಿಟ್ಟ ಕೆಂಜಡೆಯ ತುದಿಗೆ ಬೆಲ್ಲವತ್ತಮಂ ಪೊಲ್ವ, ಪೊಲ್ದಬ್ಬೆಗೆ ತೋಱುವ, ಅಬ್ಬೆಗೆ ತೋಱೆ ಕೆಯ್ ಪಱಿಗುಟ್ಟುವ, ಕೆಯ್‌ಪಱಿಗುಟ್ಟೆ ಬೆನ್ನೊಳ್ ಮೆಯ್ಗರೆವ, ಮೆಯ್ಗರೆದು ಗುಂಡಿಗೆಯಂ ಕಳ್ವ, ಕಳ್ದು ಬಯ್ತಿಡುವ, ಬಯ್ತಿಟ್ಟೊರ್ವಂ ಕಳ್ದನೆಂದೊರ್ವನಂ ಪೇೞ್ವ, ಪೇೞ್ದಾಡನೆ ಕಂದೀವ, ತಂದಿತ್ತಡಿಗೆಱಗುವ, ಅಡಿಗೆಱಗಿ ಪರಕೆಗೊಂಬ, ಪರಕೆಗೊಂಡು ತಾಯೆಡೆಗೆ ಬರ್ಪ,

ಬಂದು ತಮ್ಮ ಲೀಲೆಯಂ ಕೇಳಿಪ, ಚಿಣ್ಣರಾಟಂ ಮಾತೆ ಸೀತೆಯ ಕಿಱಿಮಸಕದ ಸಂತಸಗಡಲನಿರ್ಮಡಿಯುರ್ಬಿಸಿದತ್ತು.

ಅನಿತಱಿಂ ಬೞಿಕ್ಕೆ ಮುನಿಪಂ ಚೌಲೋಪನಯನಸಂಸ್ಕೃತರಾದ ಬಾಲಕರ್ಗೆ ಪಲವೋದುಗಳನೋದಿಸಿ, ಬಿಜ್ಜೆಯೊಳ್ ಬಿನ್ನಣಿಗರನಾಗಿಸಿ, ಪೞವಾತುಗಳನೆಲ್ಲಮಂ ಸಾಂಗಮಱಿಪಿ, ಶಾಸ್ತ್ರಂಗಳನೊರೆದು, ಪುರಾಣಂಗಳೊಳ್ ಪರಿಣತರಂ ಮಾಡಿ, ಗಾಣದೊಳ್ ಜಾಣರಂಗೆಯ್ದು, ಬಿಲ್ಗಾಱಿಕೆಯೊಳ್ ಬಲ್ಗೈಗಲಿಗಳನೆಸಗಿ, ಪಾಟಮಾಟಮಪ್ಪಂತು ಕಲಿಸಲೊಡಂ-ಮೋಡಮಱೆಯೆ ತಿಳಿದ ಕಳೆಗಳಿಂ ಬೆಳಗುವ ಚಂದ್ರಮನಂತೆ ಮೋಡಮಱೆಯೆ ತಿಳಿದ ಕಳೆಗಳಿಂ ಬೆಳಗಿದರ್ ಯಮಳರ್. ಪುರುಡದ ತಿರುಡದ ಪುಸಿಯದ, ಬೇಸಱದ, ಗಾಸಿಗೆಯ್ಯದ, ಬಾಸೆದಪ್ಪದ, ಬೋಸರಿಸದ, ಕಟ್ಟೆಱಕದ ಕೂರ್ಮೆ ಪೆರ್ಮೆವೆತ್ತುದು ತಮ್ಮೊಳೆಣೆಯರ್ಗೆಂದುಂ, ಮುನಿಯೊಳೊಂದು ಗುರುಭಕ್ತಿ ಮಾತೆಯೊಳ್ ದೈವಭಕ್ತಿ ಕಣ್ಬೊಲಮಾಗೆ, ತಾಪಸೊರೊಳೊಲ್ಮೆಯಿಂ ವಟುಗಳೊಳ್ ನಲ್ಮೆಯಿಂ ಸಂತಂ ಬಳೆಯುತಿರ್ದರಾಜಿತಮಾರರ್ ಕುಮಾರರ್.

ಮುದ್ದಣ—ಓ ಎನ್ನ ಪ್ರಾಣೇಶ್ವರೀ ! ಇಂತು ದಿನದಿನಕ್ಕೇೞ್ಗೆವೆತ್ತು ಬಳೆಯುತಿರ್ಪ ಬಾಲರ ಬಳವಿಯನೆ ಕಂಡು ತನ್ನ ಮುನ್ನಿನ ಬನ್ನಮಂ ಪಿರಿದುಂ ಮಱೆದು ನಲಿವ ಜಾನಕಿಯಿರವಿಂಗೆ ಕೃತಕೃತ್ಯನಾದೆನೆಂದು ಬಗೆಮಿಗೆ ಪೊಂಗಿ ಸಂತಮಿರ್ಪ ವಾಲ್ಮೀಕಿ ಕಿಱಿದಾನುಂ ದಿನಕ್ಕೆ ತನ್ನೊಂದವಸರಕೆ ಕುಶಲವರನಾಶ್ರಮಕೆ ಕಾಪಿಟ್ಟು ವರುಣಲೋಕಕ್ಕೆ ಪೋಪುದುಮಾಗಳೆತ್ತಾನುಂ ಸ್ವೇಚ್ಛೆಯಿಂ ನಡೆವ ರಾಘವನ ಜನ್ನಗುದುರೆ ಈ ಆಶ್ರಮುಮಂ ಪುಗುತರಲೊಡಂ—

ಮನೋರಮೆ—ಈಗಳಱಿತೆಂ ಹಸುವಂ ಕಟ್ಟಿದ ಬಾಲರಾರೆಂಬುದಂ. ಕುಶಲವರಾಗರೇ ? ನೀನುಮಾವ ನಾಡ ಗತಕಿಯೊ ? ಆಗಳೆ ಸೀತೆಯ ಮಕ್ಕಳ್ ಕಟ್ಟಿ ಕಾದಿದರೆಂದೊಡಾಗದೆ ! ತಾಂ ಪೇೞಂ ಗಡ ! ಮುಚ್ಚುಗಡ ! ಆಯ್ತಾಯ್ತು ! ಮುಂತಣ ಕತೆಯಂ ಪೇೞ್ ನೋೞ್ಪೆಂ.

ಮುದ್ದಣ—ಒಳವುಗೊಟ್ಟ ಕಾದಲನಂ ಮೂದಲಿಪ ಹೂಜೆಗಾರ್ತಿಯೊಂದಾಯತಿಯಂ ಮೆಱೆವ ನಿನಗೆ ನಳ್ಗೆಳದಿಗಲ್ಲದೆ ಪೆಱಳಾವಳ್ಗಿಂ ಕತೆಯಂ ಬಿತ್ತರಂ ಬಿತ್ತರಿಪಂ, ನುಡಿಗಬ್ಬದ ಗಬ್ಬದುಬ್ಬರದಿಂ ನನೆಕೊನೆ.

ವೋಗಿ ಕೊನೆವೆರ್ಚಿನ ಪುರ್ಚಿನ ಪೊಳ್ಳುಬಳ್ಳು ಮುದ್ದಣಂ. ಅಯ್ಯಾ! ಕೇಳ್. ಇರ್ವರುಮಲ್ತೊರ್ವನೆ ಕಿಱಿಯಂ ಲವಂ ತಾನೊರ್ವೆ ಸಂಗಡಿಗರ್ವೆರಸು ಆಶ್ರಮಕೆನಸುಂ ದೂರದೆ ತೋಂಟದೊಳ್ ಬಿನದಿಸುತಿರ್ಪಾ ವೇಳೆಗೆ ಬಿಂಕದಿನಲ್ಲಿಗಲ್ಲಿಗೆ ಸುೞಿದುಂ ತುೞಿದುಂ ಮೂಸಿಯುಂ ಬಾಸಿಯುಂ ಮೇದುಂ ಪಾಯ್ದುಂ ವನಮಂ ಮನಮಂತುಟಾಱಿ ಪುಡಿಗುಟ್ಟಿ ಕಿಚಿಕಿಲ್ವ ಹಯಮಂ ದಿಟ್ಟಿಸಿ ಆರ್ತದೊಂದು ದುಱುದುಂಬಿಗುದುರೆ? ಕಂಡಿರೆ ಮುತ್ತಯ್ಯನಿಲ್ಲದಂದೆ ಬಂದು ಪೊಕ್ಕು ಪೊಱದೋಂಟಮಂ ತೊತ್ತೞಿದುೞಿದು ಪಾೞ್ಗಿಡಿಕುಂ! ಪೋಪಂ! ಪಿಡಿದು ಕಟ್ಟಿ, ಬಂದೊಡೊಡನೆ ಮುತ್ತಮುನಿಗೊಪ್ಪಿಸುವಮೆಂದು ತಾಂ ಮುಂತೆ ತಳರಲೊಡಂ ಮಿಕ್ಕಿನ ಬಟುಗಳ್ ಪಿಡಿ ಪಿಡಿ ಎಂದಾರ್ದು ಸೋರ್ವುದುಂ; ಲವಂ ತಾನೆ ಮುಂಬರಿದುತ್ತರಿಗೆಯಿಂ ಕೊರಲಂ ಬಿಗಿದು ಕೆಲನ ಕಿಱುಗೋಣೆಯ ಕಿೞ್ತುಂಬಿನೊಳ್ ಕಟ್ಟಿ ನೊಸಲೊಳೆಸೆವ ಬಿರುದಿನೋಲೆಯುಂ ಕಂಡು ಕೊಂಡು ಮಾಣಿಗಳಿದಿರೊಳಿಂತು ವಾಚಿಸಿದಂ :—

ನೆಗೞ್ತೆವಡೆದ ನೇಸಱ ಬೞಿಯೊಳೊಗೆದು ಪೊೞ್ತುಪೊೞ್ತುಂಗೇೞ್ಗೆವೆತ್ತು ಪಲವುಂ ಪಗಲರಸುಗೆಯ್ದು ಪಂತಿವೇರವೆಸರ ರಾಯಂ ಮುನ್ನೊರ್ವನುಂಟು. ಆತಂಗೆ ಪಿರಿಯಳರಸಿ ಕೌಸಲ್ಯೆಯೊಳಱಮುಂ ಬೀರಮುಂ ನನ್ನಿಯುಂ ಬಲ್ಪುಮೊಂದಾಗಿ ಮೆಯ್ವೆತ್ತಂತೆ ಪುಟ್ಟಿ ಜಸಂಬೆತ್ತ ಶ್ರೀರಾಘವಂ ಜನ್ನಮುಂ ಬೇಳ್ಗುಂ. ಅಂತಿರಾತಂ ಗೆಲ್ಕ್ಕೆ ವಾಜಿಯುಂ ಸೋದರನಾರಯ್ಕೆಯೊಳ್ ತಿರೆಗೆ ಕಳುಪಿದಂ. ಆರಾನುಮೆತ್ತಾನುಂ ತೋಳ್ವಲದೊಂದು ಪೆರ್ಮೆಯಿಂ ಜವನ ಬಾೞ್ಗೆ ಪೋಗಲ್ಬಗೆವ ಕಲಿಯುಂ ಕಟ್ಟಿ ಕಾದುವುದೆಮ್ಮವರೊಳ್, ಮೇಣುಮಂಜಿ ಪಿಂಜರಿವಂ ಕಾಣ್ಕೆಗೊಟ್ಟಿಮ್ರೊಳ್ ಮಱೆವಾೞ್ವುದು.

ಬೞಿಕ್ಕಮಿಂತು ವಾಚಿಸಿಕೊಂಡು—ಉಂ! ಇಂತುಟಲೆ ಬೀರರೊಂದು ಪೆರ್ಮೆವಡೆದೇೞ್ಗೆ[ ತಾಂ ಕೌಸಲ್ಯೆಯೊಳ್ ಪುರುಳುಂ ಲಕ್ಷ್ಮಣಮುಂ ಒರ್ಮೆಯ್ವೆತ್ತುದೆಂಬಂತಿರೊಗೆದನಕ್ಕುಂ! ಇಂತಿರಂತದಂ ಬಿಚ್ಚಳಿಸಿ ತೋಱಿಪೊಡೆಮ್ಮಣ್ಣನೆ ಸಾಲ್ಗುಂ. ನೋೞ್ಪಂ ಮಾರಿಗೆ ಬಾೞ್ಗಾರೆಂಬುದಂ; ಅಲ್ಲದಂದು ಪಂದೆಗಳಾಗೆವೆ? ಹಯಮಂ ಮರಲ್ಚುವೊಡಿಂದು ಸೋದರಂ ಸಾದರಂ ಬರ್ಕೆ. ಅನಿತೊಂದು ಬೇಗದಿನೆಮ್ಮಣ್ಣಂ

ಗಿಂತಿದನಱಿಪಿ ಕೂಡಿವರ್ಪೆಂ—ಎಂಬನಿತಱೊಳ್ ಮಿಕ್ಕುೞಿದ ಬಾಲರೆನಸುಂ ಬೆರ್ಚಿ—ನಿನಗೇನೆಲೆ ಸೊರ್ಕು ! ಬಲ್ಪುಳ್ಳ ನಾಡ ರಾಯರ ಜನ್ನಗುದುರೆಯುಂ ಕಟ್ಟಿ ಚಲದಿಂ ಕಾದುವೆನೆಂಬ ನೀಂ ಮರುಳಾಗ[ ಸೆಣಸಾಟಮಾಟಮೆ! ಪಾಟಮೆ! ಬಾಲಂ ನೀನೆತ್ತಮುಳಿವಿಗೞಿದ ಕೂರ್ಪಿನ ಕಾಲಾಳ್ಗಳೆತ್ತಂ ! ಪೋ ಮಾಣ್ ! ಅರಿಗಳ್ಗಱಿನಾಗದ ಮುನ್ನಮೆ ಕಟ್ಟಿದ ಹಯಮುಂ ಪೋವಿಟ್ಟು ಮನೆಗೆ ಪೋಪಂ. ಅಜ್ಜನಾಣೆ ! ದುಡುಕಿ ಪೋಗದಿರೆಂದು ಗದ್ದಿಪುದುಮವನವರ್ಗಳಂ ಗದಱಿ—ಚಿಃ ! ಚಿಃ ! ಕಣ್ಗಟ್ಟಿನ ತಪದ ಬವಸಿನ ಮುದುಗೂಗೆಯ ಪಿಳ್ಳೆಗಳ್ ಪೋಪೋಗಿರೆ ! ಆಂ ತರುವಲಿ ಗಡ ! ಪಗೆಗಳ್ ಕಡುಗಲಿಗಳ್ಗಡ ! ಆಂ ಕಿಱಿಯನಾದೊಡೇಂ ; ಅಣ್ಣಂ ಪಿರಿಯಂ ಸಾಲನೆ ? ರಟರಟವೊದಱುವ ಕಾರ ನೀರ ಪೆರ್ಗಪ್ಪೆಗಳಂತಿರೇಗಳುಮಾಗದ ಪೋಗದ ಪೞನುಡಿಗಳನೋದುತುಮೊದರುತುಮಿರ್ಪ ನಿಮಗೆ ರಣದ ಗೊಡವೆಯೇಕೆ ? ನಿಲ್ಲದೆ ಗುಡಿಗೆಯ್ದು ಕೊಂಡದ ಬೂದಿಯನೂದಿಮಲ್ಲದೊಡೆ ಸವುದೆಯನೊಟ್ಟಿಮುಂತುಮಲ್ಲದೊಡೆ ಪರಿದ ಸಮ್ಮಮುಂ ಕೆಮ್ಮನೆ ಪೊಲ್ಲಿಮೆಂದು ಮಾಂಕರಿಸಲೊಡಮತ್ತಲ್ ಬೆಂಬೞಿಯ ಕಾಪಿನಾಳ್ಗಳ್ ಹಸುವನಱಸುತುಂ ಬರೆವರೆ ಕಟ್ಟಿದಿರೊಳ್ ಬಾಲಕರುಮಂ ಮರನ ಮೊದಲೊಳ್ ಹಯಮುಮಂ ಕಂಡು—ಕಟ್ಟಿದರಾರೆಂದು ಜರ್ಬಿಂ ಮಸಗಿ ನುಡಿವುದುಂ ; ಮಿಕ್ಕ ವಟುಗಳ್ ನಡುನಡುಗಿ—ಆಮಲ್ತಮಲ್ತು. ಈ ಪೊಸಮಾಣಿಯಾಗಲ್ವೇೞ್ಕುಂ. ಬೇಡವೇಡೆಂದೊಡಂ ಚಲದಿಂ ಪಿಡಿದು ಕಟ್ಟಿ ಮಿಣ್ಣನಿರ್ಪನೆಂದು ಲವನಂ ತೋಱಿ ತಾಂ ಮೆಲ್ಲಮೆಲ್ಲನೆ ಪಿಂಜರಿದು ಮರನ ಮಱೆಯೊಳಾದರ್. ಅಂತಪ್ಪುದುಮಾಳ್ಗಳಾಲವನಂ ಮುತ್ತಿ,—ಪಳ್ಳಿಯ ತುಱುವಳನಂತಿರೆ ಹಸುವನೇನೆಂದು ಕಟ್ಟಿದಯ್? ಹಯಮುಮನೆಮ್ಮನುಮಂ ನೋಡದೆ ನಾಡ ರಾಯರೆಂದು ಸಂಕಿಸದೆ ಕದನಕ್ಕಂಜದೆ ಜೀವದಾಸೆಯಿಲ್ಲದೆ ಕಟ್ಟಿ ನಿಂದ ನಿನಗೆ ಕಣ್ಮೊಱಿರವೇಡಾ ! †ನೆಲನಂ ಕಿನ್ನೆಲನಂ ಬಾನಂ ತಾನಂತುಟೊಂದು ಮೆಯ್ಮೆಯಿಂ ಕಾವ ದೇವಂ ಬೇಳ್ವ ಜನ್ನದ ಮಾನ್ಯದ ಹೂನ್ಯದ ಕುದುರೆ ಕಣಾ ! ಅಬ್ಬಾ ! ಏಂ ಸೊರ್ಕೋ ? ಸೆಳೆಯ ಸವಿ ಬೇಱೆ, ಪೊನ್ನ ಪಿಳುಕಿನ ಬಲ್ಗಣೆಯ ಸವಿ ಬೇಱೆ. ಪೋ ! ಪೋ! ಕಾಡ ಕೋಡಗವಸುಳೆ[ ಎಂದು ಸೊಪ್ಪಿಂ ಱೆಪ್ಪೆವೋದರ್. ಅನಿತಱೊಳ್ ಮಾರ್ಕೊಂಡಾ

ಕುಱಿವಿಂಡಂ ಪುಗುವ ಮಱಿಸಿಂಗನೊಂದಾಟೋಪದಿಂ ಕಾವಲರ ಪಡೆಯುಂ ನುರ್ಗಿ ಸರಲ ಸೋನೆಯುಂ ಕಱೆದು ಘಾತಿಸಿ ಭೀತಿಸಿ ಬೊಬ್ಬಿಱಿದು,—ಕಂಡಿರೆ ಕಾಡ ಕೋಡಗವಸುಳೆಯ ಕೈಚಳಕಮಂ ! ಎನಗೆ ಸೆಣಸಾಟಂ ಸಲ್ವುದೇ ? ಸಾಲ್ವುದೆ ನಿಮಗಿಂದಿನ ಗೆಲ್ಲಮೆಂದು ಮತ್ತಂ ಮತ್ತಂ ಕೋಲ್ಗಳನೆಚ್ಚು ಎನಸು ದೂರಕಱೆಯಟ್ಟಿದಂ. ಬೞಿಕ್ಕಮವರಾತಂಗಮಾತನೊಂದು ತದೆಗಂ ಬೆಂಗೊಟ್ಟಂತುಮಿಂತುಮೋಡಿ ತಮ್ಮೊಡೆಯಂಗಿಂತಿದಂ ಪೇೞ್ವುದುಮಾತಂ ಮಾತಂ ಮಾಣಿಸಿ ಸುಮತಿಯೊಳಾರ್ತೀವನಮಂತಪ್ಪ ಬಾಲನೇನಿರ್ಕುಂ ? ನೀಂ ಕೇಳ್ವುಂಟೆ, ಪೇೞೆನಲೊಡಂ;—ಇಂತೀವನಂ ಮುನಿಗಳಾಶ್ರಮಮೆಂಬುದಂ ಬಲ್ಲೆಂ. ಬಾಲನಾರೆಂಬುದನಱಿಯೆನೆಂದಂ. ಅದರ್ಕಾಶತ್ರುಹನಾಱಾದೊಡೇನಾಯ್ತುತ್ರಿಪೋಪಮೆಂದು ಸೇನೆವೆರಸೆಯ್ದೆವಂದು ಕುದುರೆಯನಣ್ಣನೆಡೆಗುಯ್ವ ಲವನಂ ತಡೆದು ತಾಗಿದನಾಗಳ್. ಅನಿತಱಿಂ ಮೇಲೆ ಮನೆಗೆಂದು ಪೋಪ ಲವಂ ಪಲವಂ ರಾವುತವಡೆಯುಂ ತೇರ ವಂಗಡಮುಂ ಕರಿಘಟೆಯುಂ ಕವಿತರ್ಪುದಂ ಕಂಡು ಮಾಣ್ದು ನಾರಿಯಂ ಬಿಲ್ಗೆ ಬಿಗಿದು ಬೆನ್ನ ಮೂಡಿಗೆಯಿಂ ಕೋಲನುಗಿದು ಸಂಧಿಸಿ ಬಂಧಿಸಿದ ಕುದುರೆಯ ಕೆಲನೊಳಿರ್ಪುದುಮಾತನೊಂದು ಬಿಂಕಮುಮಂ ಸೆರಗಂ ಪಾಱದ ಬೀರಮುಮಂ ಕಂಡು ರಾಘವಾವರಜಂ ತಾನೆ ತೇರಂ ನೂಂಕಿ ಬಾಲಂಗಿದಿರಾಗಿ—ಎಲೆ ಮಾಮಿಡಿಯ ತೋರದ ತೋಱದ ಪೆರ್ಕಳಿಕೆಯ ತರಳ ! ಮೊಟ್ಟೆಯೊಳೆ ಕೆಲೆವೊಂದದಟು ನಿನಗೆತ್ತಣಿನಾಯ್ತು? ನೀನಾವಂ? ಹಯಮನೇನೆಂದು ಬಗೆದು ಕಟ್ಟಿದೆಯೊ ? ಕಟ್ಟಿಳವಿಯೋಂ ? ನಿನಗೆ ಸೊಗನಾಯ್ತು ! ಬಿಡು ಬಿಡು ಮರುಳೆ ! ಆಟದ ಕೂಟದ ನಿನ್ನನ್ನರೊಳ್ . ಪೊಣರ್ವಂದಂ ಕದನಮಲ್ಲೆಂದು ಗದಱಿ ಮರಲ್ಚುವೊಂದು ಬಗೆಯಿಂ ಹಯಕೆ ಸಸಿಯುಂಬೋಪುದುಂ; ಲವಂ ಕಿಸುಗಣ್ಚಿ ಕಣೆಯನೆಚ್ಚು ಪಗೆಯಂ ನೋಯಿಸಿ ಕಡೆಯೊಳ್—ಪ್ರಾಯಂ ಕೂಸಾದೊಡೇನೀಸಾಯಕಂ ಕೂಸಕ್ಕುಮೆ ! ಜಗದೆ ನೀವೆ ಬಲ್ಪುಳ್ಳರಾಂ ನಡೆವೆತ್ತ ಸೀರ್ಪುೞಾಗೆವೆ ! ಅಲ್ಲದೊಡೇಂ ಪೆರ್ಕಳಿಕೆಯೊ ? ಆಮೆ ಜಗದ ಗಂಡರ ಗಂಡರ್, ಪೆಱರ್ ಪಂದೆಗೊಂದೆಗಳ್ ! ಹಯಂ ಬರ್ಪುದುಮೊಡನೆ ಮುಱೆನಾಟ್ವುದು ! ಕಪ್ಪಮನೊಪ್ಪಿಸುವುದು ಗಡ ! ನಿರ್ಧನರಪ್ಪಿನಂ ಮೊಗಸಿರ್ದ ಜನ್ನಕ್ಕೆ ಪಣಮಂ ಕುಡಿಮೆಂದು ಬೇಡಿದೊ

ಡಾಗದೆ ! ಲೇಸುಲೇಸು ನಿಮ್ಮನ್ನರಪ್ಪ ನಾಡ ರಾಯರೊಂದಾಯತಿಯೆಂದು ಹಂಗಿಸಿ ನುಡಿದಂ. ಆನುಡಿಗೆ ಶತ್ರುಘ್ನನಿನಿಸುಂ ಖತಿಗೊಂಡು ಮೇಣೊಂದಂಬಿನಿಸಲೊಡಂ ಮಾರ್ಕೊಂಡು ಮುಱಿದು ತಾನ್ಸೈದು ಕೂರ್ಗಣೆಗಳಿಂ ತೇರಂ ಬಿಲ್ಲ ನಾರಿಯುಂ ತುಂಡಿಸಿ ಹುಂಕರಿಸಿದಂ. ಮತ್ತಂ ಶತ್ರುಹಂ ನವ್ಯಭವ್ಯರಥಮಂ ಪೊಸಬಿಲ್ಲುಂ ಕೊಂಡು ಬಾಲಕನಂ ಶರಂಗಳಿಂ ಮುಸುಂಕಿದಿಂಬೞಿಯುಂ ಕೋಲ್ಗಳುಱುಬೆಗೆ ಗಾಱುಗೆಟ್ಟು ಬಾಯೊಱಿ ಬನ್ನವಟ್ಟು ಮುಚ್ಚಿವೋದ ಲವನೊಂದು ಗಂಡುಗರ್ವಕ್ಕೆ ಮೆಚ್ಚಿ ಕೊಂಡಾಡಿ ನೇಹಂ ಮಿಗೆ ತಾನೆ ತೋಳೊಳೆತ್ತಿ ತೇರೊಳಿಟ್ಟು ಹಯಮಂ ಬರಿಸಿ ಪುರಕೆ ಪೋಗವೋಪುದುಂ ; ಮಿಕ್ಕ ಮಕ್ಕಳಿಂತಿದಂ ಕಂಡು ಬೆದಱಿ ಕಟ್ಟುಱಿದಿಂ ತಮ್ಮಾಶ್ರಮಕ್ಕೆ ಬಂದು ಬೆಟ್ಟುಸಿರಿಂ ಇನಿವೊಟ್ತುಂ ಬಾರದೆ ನಿಂದ ಮಕ್ಕಳ ಬರವನೆ ಪಾರುತುಮಿರ್ಪ ಸೀತೆಯುಂ ಕಂಡು— ಅಬ್ಬೆ! ಪೋಪೋ ! ಈಗಡೆ ಲವನಂ ಬಿಂಕದ ರಾಯರ ಕುದುರೆಯುಂ ಕೊಂಡನೆಂಬೊಂದು ಕತದಿಂ ಬೇಡವೇಡೆಂದೊಡಂ ಕೇಳದೆ ಪಗೆಗಳ್ ಪಿಡಿದುಯ್ದರಯ್ಯೋ ! ಕುಶನಾವೆಡೆ! ಮುತ್ತಯ್ಯನೇಂ ಬಾರನಿನ್ನುಂ ! ಕೆಟ್ಟುದು ಕಜ್ಜಂ. ನಡೆನಡೆ, ಪೋಪಂ ಪೋಪಂ ತಳ್ವದಿರೆಂದು ತಾಮುಂ ಕೆಯ್ಯೊಳ್ ದಂಡಂಗೊಂಡು ಪೊಱಮಟ್ಟರ್.

ಮುದ್ದಣ—ಎನ್ನೆಱಿತಿ !- ಇಂತಾಡಿದ ಮಕ್ಕಳ ಮಾತಂ ಕೇಳ್ದು ಸೀತೆ ಮನಮುಱುಗಿ— ಹಾ ಹಾ ! ಎನ್ನ ಕಣ್ಮಣಿಯುನಾರುಯ್ದರೆನ್ನ ಚಿಂತಾಮಣಿಯುನಾರ್ ಪಿಡಿದರೆನ್ನ ಸಂಜೀವನಮುನಾರ್ ಕೊಂಡರೆನ್ನರಗಿಳಿಯುನಾರ್ ಕಂಡರಕ್ಕಟ ! ಹಾ ಎನ್ನ ರನ್ನ! ಎನ್ನ ಚೆನ್ನ! ಹಾ! ಹಾ! ಎನ್ನ ಸುಕುಮಾರ ! ನೀನೇನಾದಯ್ ! ಎತ್ತವೋದಯ್ ಮಗನೇ ? ನಿನಗೇತರ್ಕೆ ವಾಜಿ ? ಏತರ್ಕಾಜಿ ಪಗೆಗಳೊಳ್ ? †ಜಡಿವರೊ ಬಡಿವರೊ ಸೆಱೆವಿಡಿ। ದಿಡುವರೊ ಮೇಣಲ್ಲದಂದು ಶೂಲದ ಮೊನೆಗೇ ॥ ಱುಡುವರೊ ಕಡಿವರೊ ಬಱಿದೇಂ। ಬಿಡುವರೊ ಹಾ ಕಂದ ! ನಿನ್ನ ನಱುಗುಲಿರಾಯರ್? ॥ †ಆಃ ! ಅರಿಗಳ ಬಾಯ್ಗೊಂದೆ ಪೆತ್ತೆನೆ ಮಗನೇ ? ಎಂತೊಡಲಂ ಪಿಡಿದಿರ್ಪೆನೊ ? ಎಂತು ಸೈರಿಪೆನೊ?— ಎಂದು ಪಲುಂಬಿ ಪಳಯಿಸುತಿರ್ಪಾವೇಳೆಗರಿಗಜಾಂಕುಶಂ ಕುಶಂ ಕುಶಸಮಿತ್ಫಲಪುಷ್ಪಂ

---

†ಗದ್ಯರೂಪವಾಗಿ ಬರೆದ ಸಂಪೂರ್ಣವಾದ ಕಂದಪದ್ಯವಿದು.

ಗಳಂ ಪೊತ್ತು ತೊಟ್ಟನೆ ಬಂದು ಪೊಱೆಯನಿೞಿಪಿ ಮಱುಗುವ **ಮಹಾಸತಿಯು** ಪೊರೆಯೊಳ್ ನಿಂದು—ಎನ್ನಬ್ಬೆ! ಇಂತೇನೞಲಾರಿನಾಯ್ತು? **ನಿನಗೇಂ** ಜಡಂ! ಪೞವಾನಿಸರಾತವಸಿಗಳೇಂ ಕೊಱಚಾಡಿದರೆ? ನೆರೆ **ವನೆಯ** ಕಿಱಿಯಬ್ಬೆ ನಿನ್ನಂ ಬೆನ್ನೊಳೇೞಿಸಿದಳೆ! ಈಗಾಳುವಮೂಳ **ಬಾಳರೆತ್ತಾನುಂ** ಭಂಗಿಸಿದರೆ? ಏಕೆ ಮಱುಗುವೌ? ಎನ್ನಂ **ನೋಡು,** ಮಾತಾ**ಡು**—ಎಂದೆನಸುಂ ಪತ್ತೆಸಾರ್ದು ಕೊರಲನಮರ್ದಪ್ಪಿಯುಂ ಗಲ್ಲಮನಲುಗಿಯುಂ ಒಱೆವ ಕಂಬನಿಯಂ ತೊಡೆದುಂ ನುಡಿಯಿಸುವ ಬಾಲಕಂಗೆ ಮಱುನುಡಿಗುಟ್ಟಲಾಱದಂದು ಬೞಿಯ ಮಕ್ಕಳ್—ಪಗೆರಾಯರ ಜನ್ನಗುದುರೆಯುಂ ಬಂದಿವಿಡಿದುದಂ, ಮೇಣ್ ಕಾದಿ ಸೆಱೆವೋದುದಂ ಕುಶಂಗೆ ಕೇಳಿಸಿದರ್. ಇಂತೆಂಬ ವಟುಗಳಂ ಗದಱಿ ಬೆದಱಿ ಪೋಪಂತು ಮಾಡಿ ತಾಯುಂ—ಎನ್ನಾಣೆ! ಮಱುಗದಿರೌ, ಜವನಕ್ಕೆ; ಉರಿಗಣ್ಣ ಭವನಕ್ಕೆ; ಬೆಟ್ಟನ ತಿಟ್ಟನ ಮಾಧವನಕ್ಕೆ; ಎಮ್ಮ ಲವನಂ ಕೊಂಡುಯ್ದುವನಂ ಸೊರ್ಕು ಸೆರ್ಕಪ್ಪಿನೆಗಂ ಬಡಿದು ಪಿಡಿದಸುವೆರಸು ನಿನ್ನಡಿಗೊಪ್ಪಿಸದಿರೆ, ನಿನ್ನ ಮುದ್ದಿನ ಕಂದನೆ! ನೋಡೆನ್ನದಟನೆಂದು ಪೂಣ್ದು ಮಾತೆಯುಂ ಸಯ್ತಿಟ್ಟು, ಮುನ್ನಂ ಮುನಿ ತನಗಿತ್ತ ಸವಗಮುಂ ಸೀಸಕಮುಂ ಕಣೆಯುಂ ದೊಣೆಯುಂ ಬಿಲ್ಲನೆಲ್ಲಮುಂ ಕೊಂಡು ತಾಯ್ಗೆ ಪೊಡೆಮಟ್ಟು ಪರಕೆಗೊಂಡಂದಿನಱುವೊಗನೊಂದು ಪನ್ನತಿಕೆಯಿಂ ಬೆಂಬತ್ತಿ ನಡೆದು ತಡೆದರಿಸೇನೆಯನಿದಿರ್ಚಿ—ಎಲೆಲೆ ಬಣಗುಗಳಿರಾ! ರಣದೆ ಮೆಯ್ಸೋಲದ ಸಾಲದ ಬಾಲನೊರ್ವನಂ ಬಳ್ಳಿಪಿಳ್ಳೆಯನೆಂತಂತು ಕೊಂಡುಯ್ವುದಿದಾವ ನಾಯಂ? ಸೆಣಸಾಳ್ಗಳ್ ನಿಮ್ಮಂ ಗೆಲ್ಲವೆಣ್ಣಂತೊಲ್ವೆ! ಬಲ್ಪುಳ್ಳೊಡೆನ್ನೊಳ್ ತೋಱುಮೆಂದು ತನಿವೆಳಗಿನ ಪೊಸಮಸೆಯಲಗಂ ತೆಗೆದೆಚ್ಚು ಚೂಣಿಯುಂ ಘಾತಿಸಿದಿಂಬೞಿಯುಂ ದೆಸೆಗೆಟ್ಟ ತಮ್ಮ ದೞಮುಂ ಕೆಯ್ವೀಸಿ ಸಯ್ತಿಟ್ಟು ಪುಷ್ಕಲಂ ಬಂದ ಬವರಿಗಂಗೆ ಮಾಱಾಂತು. †ಎಲೆ ತರಳ! ನಿನ್ನ ಬಿಂಕದ। **ನೆಲೆಯೇಂ?** ಕಟ್ಟುಱದ ಬಱದ ಬಾಯಾಯ್ತುರಿಯುಂ॥ **ಗೆಲಲಾರ್ಪೊಡೆ ಪೋರ್ಪೊಡೆ** ಮೆ। ಯ್ಗಲಿಗಳ್ ನಾಣಿಲಿಗಳಂತು ಜಂಕಿಪರೊಳರೇ?॥ **ಸೆಱೆವಿಡಿದುಯ್ವೊಡಾಗದು** ಗಡ! ಗಂಡರ ಗಂಡವರ್ಗಕ್ಕೆ ತಗದು ಗಡ! **ನಾಯುಂ ನಾಯುಂ** ಕೇಳ್ವರೆ? ಅಲ್ಲದಂದಾಬಡತರುವಲಿಗೇಕೊ ನಾಡ

ಮನ್ನೆಯರ ಜನ್ನಗುದುರೆಯೊಂದು ಗೊಡವೆ ! ಕಾದುವ ಬೆಸನಂ ! ನೀನ
ವಂಗೆ ಸೋದರನಕ್ಕುಮದಱಿಂ ಕಡುಕೆಯ್ದೊಡೆ ನಿನ್ನುಮಂ ಸೆಱೆಗೊಂಡು
ಕೊಂಡು ಪಿಂಡಮರ್ದನಂಮಾಡದೆ ಬಿಡುವೆನೆ, ನೋಡೆಂದು ಪೊಂಗಱಿಯ
ಕೂರಂಬುಗಳನಾರ್ದೆಚ್ಚಂ. ಅಂತಿರೆ ಗುಱಿಗೊಂಡು ಬರ್ಪ ಬಾಣಮಂ
ಕಾಣದಂತು ಕಡಿದು ಪಡಿಸರಲಿನೇಸಾಡಿ—ಕೂಸಾಡಿದ ನುಡಿಗಿಂತಿದೇಂ
ಮುನಿಸು ! ನೀಂ ಮಾನ್ಯರ್ ಹೂನ್ಯರ್; ಆಮುನ್ಯರ್ ವನ್ಯರ್ ಸಾಜ
ಮಾಗವೆ ! ನೋೞ್ಪೊಡೆ ನಿಮ್ಮ ಗಂಡುಗಲಿತನಕಂ ಮನಕಮೊಪ್ಪಿರೆ
ಮುಚ್ಚೆಯಿಂ ಪೆಚ್ಚೆವೋದ ಕಿಱುದಮ್ಮನಂ ಬಂದಿಗೊಂಡಿರಕ್ಕುಂ. ಈಗ
ಳೆನ್ನಂ ಮುನ್ನಂ ಬನ್ನಂಬಡದನ್ನಂ ಬಾೞ್ದಲೆವಿಡಿಯಿಂ. ಅಲ್ಲದೊಡಿಂತು
ಆಃ ! ಕಾಡ ಮರೆಯ ಕಿಱುವಱಿಯನಟ್ಟಿ ಪಿಡಿವ ನಾಡ ನಾಯ್ಗಳೆಂತಂ
ತೆನ್ನಣುಗದಮ್ಮನಂ ಪಿಡಿದೆವು ಜಡಿದೆವೆಂದೊಡೊಂದು ಪನ್ನತಿಕೆಯೇ !
ಈಗಳೆ ನಿಮ್ಮನುಗಿದುಂ ಬಗಿದುಂ ದೆಸೆವಲಿಗುಡುತುಮೆನ್ನ ಚಿನ್ನ ತಮ್ಮ
ನಂ ಕೊಳ್ವೆನೆಂದು ನೋಯಿಸಿದಂ. ಇಂತಿರೆ ಪುಷ್ಕಲಂ ಶರಹತಿಗೆ
ಗಾಱುಗೆಟ್ಟು ಬಾಯಾಱಿ ಕೀಱಿ ನೆಲಕುರುಳ್ದು ಇನಿವೊೞ್ತುಂ ತೆಪ್ಪ
ಱದಿರೆ ಕಂಡು ಲವಣಾಂತಕನಂತಕನಂತೆ ಕನಲ್ದು ತೇರನೇಱಿ ಬಂದು
ಕಟ್ಟಿದಿರ ಪೂಣಿಗನಂ ಕಂಡು—ಅಬ್ಬಾ! ಕಂಡಿರೆ ಮರೆಗೊಣಸು ಪಲ್ಲಮಱಿ
ಯಂ ಕೊಣಕಿ ಕೆಣಕುವೊಂದಚ್ಚರಿಯಂ: ನೀರೊಳ್ಳಿ ಪುತ್ತಿನ ಪಾವಂ ನುಂಗ
ಲಾಟಿಪೊಂದಂದಮಂ. ಕಾಲ ತುೞಿತಕ್ಕೆ, ಪೊಗೆವ ನಂಜಿನುರಿಜಾಲೆಯ
ಸುಯ್ಗೆ ಜಜ್ಜರಿಯಾಗಿ ಸೀಕರಿವೋಪುದಂ ಲೆಕ್ಕಿಸದಿರ್ಕುಮೆಂದು ಬೆಂಗೆ
ಐದಂಬುಗಳನೆಚ್ಚೊಡಾಸರಲ್ ಕೂಟದ ಕಾದಲರನೆಚ್ಚೊಡಲಿಚನ ಪೂಸ
ರಲವೊಲಾಯ್ತು ಸರಲಂ. ಆಗಳ್ಗೆ ಕುಶಂ ಪಗೆಯ ಕಣೆಯಂ ಸದೆದು
ಮೇಣೆರಡಱಿಂ ಕರದ ಕೋಯಂಡಮುಂ ಮುಱಿದಂ. ಇಂತು ಬಿಲ್
ಬೆಸೆಯಾಗೆ ಕಂಡು ಶತ್ರುಹಂ ಪೆಱತೊಂದು ಬಿಲ್ಲಂ ಕೊಂಡು ಕಣೆಯಂ
ಪೂಡಿ— ಎಲೆಲೆ ಮಟ್ಟುಮೀಱಿದ ಮಾಯದ ಬಾಲಕ ! ನೀಂ ದಿಟ್ಟಂ.
ದಿಟ್ಟಮಾದೊಡೆನ್ನೀಕಟ್ಟಿಸುಗೆಯ ಕೋಲಂ ಮುಟ್ಟೆ ಮುಱಿವುದೆಂದು
ಕಿವಿಮುಟ್ಟೆ ಸೆಳೆದಿಟ್ಟಂ. ಅನಿತಱೊಳೆ ಕುಶಂ ತನಿಗಿಡಿಯಂ ಕಾಱಿ
ವರ್ಪ ತೋರಗಣೆಯಂ ನಡುವಟ್ಟೆಯೊಳೆ ಪಡಿಗೋಲಿಂ ಬಡಿಗೋಲಿಂ
ಕರಡಮಂ ಸದೆವಂತೆ ಸದೆದು ಮತ್ತಮಾಱಱಿಂ ಕೆಯ್ಯ ಪೊಸಬಿಲ್ಲಂ

ಮೆಯ್ಯ ಸವಗನುಂ ತುಂಡಿಸಿ, ತೇರಂ ವಾರುವಮುಂ ಕಡಿದು, ರಥಿಯುಂ ಸಾರಥಿಯುಂ ಸಮಂತು ಗಾಱುಗಿಡಿಸಿದಂ. ಅಂತಪ್ಪುಗ್ರಮಿಳಿಗಿಱಿತಂದು ಗದೆಗೊಂಡು ಪೊಯ್ಯಲೊಡಂ ಕುಶನೆಂತುಂ ಮುಯ್ಯ್ಮುದುಡಿ ಪುಟನೆಗೆದು ತನ್ನೊಂದು ಕಣೆಯಿಂ ಶತ್ರುಹನನಿಱಿದಂ. ಆಗಳೇನೆಂಬೆನೊ! ಬೆಟ್ಟದ ನಿಡುಮರಂ ಬಿಱುಗಾಳಿಯ ಪೊಯ್ಲಿಂಗೆ ಬೇರುಡಿದು ಬೀೞ್ವಂತೆ ದಿಮ್ಮನೆ ಗದೆವೆರಸು ತಿರೆಗೆ ಕೆಡೆದಂ. ಮೊಱೆಯಿಟ್ಟುದು ಸೇನೆ; ಮುಂದುಗೆಟ್ಟುದು ಯೋಧರೊಂದು ನೆರವಿ; ಗಜಬಜಿಸಿದರ್ ಮಹಾರಥರ್. ಇಂತಾಗಲೊಡಮೆತ್ತಂ ಸುಭುಜಂ ಲಕ್ಷ್ಮೀನಿಧಿ ಮುಂತಪ್ಪ ವೀರರುಂ ಸುಗ್ರೀವಸುಷೇಣರಾದಿಯಪ್ಪ ಮರ್ಕಟನಾಯಕರುಮಿರ್ತಂಡದಿಂ ಮಂಡಳಿಸಿ ಕಾದುವುದುಮೊರ್ವನೆ ಬಾಲನಸಿಬರಂ ಮಱಿಸಿಂಗನಾನೆವಿಂಡನೆಂತಂತು ಮಾಮಸಕದಿಂ ದೆಸೆಗಿಡಿಸಿದಂ. ಕೆಲರಂ ಕಡಿದಂ; ಕೆಲರಂ ಬಡಿದಂ; ಕೆಲರನುಗಿದಂ; ಕೆಲರಂ ಬಗಿದಂ; ಕೆಲರಂ ಕುಱಿದಱಿದಱಿದಂ: ಕೆಲರಂ ಬಿಗಿದಂ; ಕೆಲರನಿಟ್ಟಂ: ಕೆಲರಂ ಬಿಟ್ಟಂ ಮೊನೆಯೊೞ್.

ಇಂತು ಸಂಗ್ರಾಮಕೋಲಾಹಲಂ ವಿರೋಧಿವರೂಥಿನಿಯುಂ ಸದೆಬಡಿದು ಕಾಲದ ರಂಗತ್ರಿಣೇತ್ರನಂತೆ ಮೆಱೆಯುತಿರ್ಪುದುಮಾವೇಳೆಗೆ ಮುಚ್ಚಿಪೋದ ಲವಂ ಕಿಱಿದುಂ ಬೇಗಮೆಟ್ಟಿತ್ತು ತನ್ನ ಬಂದಿಗೆ ಬೆಱಗುವಟ್ಟಿತ್ತಂ ನಿಟ್ಟಿಸಿ ಪಗೆಯೊಡ್ಡು ಬಕ್ಕಂಬಯಲಾದುದಂ ನೀಡುಮೆಣಿಸಿ ಮುಂದೆಸೆಯೊಳಱಿದುಱಿದ ಜೋದರೊೞ್ ಪೊಣರ್ವಗ್ರಜಾತನಂ ಕಂಡು ತಾನುಂ ಕೈದುಗೊಂಡಾತನಂ ಕಿಚ್ಚಂ ಗಾಳಿಯೆಂತಂತು ಕೂಡಿದಂ. ಹತಶೇಷರೊಳಮೀಗಳ್ ಪಲಂಬರ್ ಗತಾಸುಗಳಪ್ಪುದಂ ಕಂಡು ಕಂಠಗತಾಸುಗಳೆಂತುಂ ರಣಕೆ ಬೆಂಗೊಟ್ಟೋಡಿ ಕಟ್ಟುಱದಿಂ ಪೊೞಲ್ಗೆ ಬಂದು ರಾಘವಂಗೀವಿವರಮನಱಿಕೆಗೆಯ್ವುದುಂ; ತನ್ನವರ ಪರಿಭವಕ್ಕೆ ಮನಮುಱುಗಿಯುಂ ಪಗೆದ ಮಕ್ಕಳಿರ್ವರ ಏೞ್ಗೆವೆತ್ತ ಬಲ್ಪಿಂಗೆ ಬೆಱಗಾಗಿಯುಂ ದೀಕ್ಷೆಯೊಳಿರ್ದ ರಾಘವನನುಜಂಬೆರಸು ತಾನೆ ಪೊಱಮಟ್ಟಂ. ಇಂತು ಕಡುವೇಗದಿಂ ಪಡೆಗೂಡಿ ನಡೆದು ಕಾಡನೆತ್ತಂ ಕವಿದೊತ್ತಿ ರಾಮಲಕ್ಷ್ಮಣರೋರೊಂದು ದೆಸೆಯೊಳಿರ್ದು ದೞನೊಡ್ಡಿ ಮಕ್ಕಳಂ ಪಿಡಿಯೆ ಬರ್ಪುದುಮಾಪೊಡ್ಡು ಗಾಳಿಯೊಡ್ಡಿನ ಮುಗಿಲೊಡ್ಡಾಯ್ತು ಬಾಲಕರಿ

ದಿರೊಳ್. ಇಂತೊಂದು ಮಾೞ್ಕೆಯಿಂ ಸುರಿಗೆಯು, ಜವದಾಡೆಯು, ಕಕ್ಕಡೆಯು, ಮುಸುಂಡಿಯು, ಕಡಿಗತ್ತಿಯು, ಕೊಡಲಿಯು, ಇಟ್ಟಿಯು, ಬಟ್ಟಕೈದಿನ, ಕೈದುಕಾಱರ ದೞಂ ತಂತಮಗೆ ದೞದುೞದಿಂ ಕುಶಲವರಿಸುಗೆಯಿಂ ಸತ್ತುಂ ಮುತ್ತುಂ ಕೞಿದುಮೞಿದುಂ ಪೋಪುದುಂ ಅೞಿದುೞಿದ ದಂಡಂ ತಂಡತಂಡದಿಂ ಪಿಂಡನಾಗಿಸಿ ಚಂಡಭಂಡನಕ್ಕೆ ನೂಂಕಿ ತಾಮಿರ್ವರುಂ ತೇರನೇಱಿ ಬರ್ಪ ಗಂಡುಗಲಿಗಳಂ ಕಂಡು ಗಂಡಗರ್ವದಿಂ ಲವನಗ್ರಜಂಗೆ—ಕಂಡಿರೆ ಅಣ್ಣ! ಮೊನೆಯೊಳಾಗಳೆ ಮಿತ್ತಿಗೆ ತುತ್ತಾದ ತಮ್ಮವರ ಬೆಂಬಲಕೆಂದು ಬಂದ ಬಲ್ಲಿದರಿರ್ವರುಂ ಬೇಱೆವೇಱಾಗಿ ರಥಮನಡರ್ದು ಎಮಗೆ ಮುಮ್ಮೊಗವಾಗಿ ಟೇವಿಯಿಂ ಬರ್ಕುಂ. ಈಗಳಿಮಗೆ ಸಮರಂ ಸಾಟಿಯಾಯ್ತು. ಕಾಡ ದೆವ್ವಂಗಳ್ಗೆ ಬಲಿಯೀವಂ. ಕಿಱಿಯನೊರ್ವನೆನಗೆ; ಪಿರಿಯಂ ನಿಮಗೆ. ಮಿಕ್ಕಿನ ಪಡಿಬಲಮೆನ್ನ ನಿಮ್ಮ ಕೋಲ್ಗೆಂದು ಪಸುಗೆಗೆಯ್ದು ಮುಂದೊತ್ತಿ ಬರ್ಪ ರಾಮಲಕ್ಷ್ಮಣರ್ಗೆ ಕಟ್ಟಿದಿರಾಗಿ ನಡೆದರ್.

ಇಂತು ಸಂಕೆಯಿಲ್ಲದೆ ಬಿಂಕದಿಂ ಮುಟ್ಟಿವರ್ಪ ಮಕ್ಕಳ ಬಲಕಂ ಚಲಕಂ ನಿಬ್ಬೆಱಗಾಗಿ ರಾಘವಂ ಲಕ್ಷ್ಮಣಂಗೆ—ಎಲೆ ತಮ್ಮ ! ನಾಡೊಡೆಯರ ಮಕ್ಕಳ್ಗಮೀವಗೆಯ ಪೆಂಪುಂ ಕೆಂಪುಂ ನೋೞ್ಪೊಡರಿದು ಗಡಾ! ಪಾಡುಗೆಟ್ಟ ಕಾಡ ತರುವಲಿಗಳ್ಗಿಂತುಟೊಂದು ಬೀರಮೆತ್ತಣ್ತು ! ಇವರೊಳೆನಗೇನೊ ಮಮತೆ ಪುಟ್ಟುಗುಂ ; ಮುನಿಸು ಬಾರದು. ಆರೆಂಬುದನಾರಯ್ದು ಪೇೞಯ್,—ಎಂಬುದುಂ ; ಲಕ್ಷ್ಮಣಂ ತೇರನಣೆದು ನೂಂಕಿ ಬಿಲ್ಲ ಕೊಪ್ಪಿಂಗೆ ನಾರಿಯನಳವಡಿಸುತೆ ಕೋಲಂ ಸಂಧಿಸುತೆ ನುರ್ಗಿವರ್ಪ ಬಾಲರಂ ತಡೆದು—ಎಲೆ ಮಕ್ಕಳಿರ ! ನೀಮಾರ್ ? ಹಯಮಂ ಕಟ್ಟಿದಿರೇಕೆ ? ಎಮ್ಮವರನಿದಿರ್ಚಿದಿರೇಕೆ ? ಪೋಪಿರೆಲ್ಲಿಗೆ ? ತಡೆಯುಮೆಂದು ಬಿಲ್ಲನೇಱಿಸಿದಂ. ಆಗಳ್ಗೆ ಲವಂ—ಎಲೆಲೆ, ಕಟ್ಟೊತ್ತಾಯದ ರಾಯ ! ಮೊನೆಗೊಡ್ಡಿ ಬಂದು ನೀವಾರೆಂದು ಬೆಸಗೊಳ್ವುದಿದಾವ ನಡತೆ ? ಸಲ್ವೊಡೆ ಕಾದು, ಮೋದು. ಆಱಿಯಪ್ಪೊಡೆ ಪಲಾಯನಮನೊಂದು. ಆದೊಡಂ ನೀಂ ಕೇಳ್ವಿನಂ ಪೇೞ್ವೆಂ. ಎಮ್ಮನಬ್ಬೆ ಪೆತ್ತಳಜ್ಜಂ ಸಾಕಿದಂ. ಛಲದಿಂ ನಿಮ್ಮ ಹಯಮಂ ಕಟ್ಟಿದೆವು ; ಇದಿರ್ಚಿದೊಡಿದಿರ್ಚಿದೆವು. ಮೀಸಲಿರ್ಪ ನಿಮ್ಮ ಜೋದರ ಸಮ್ಮುಖಕ್ಕೆ

ಪೋಪೆವು. ತಡೆದೊಡೆ ತಡೆವೆವೆಂದು, ಕಟ್ಟಿ ನುಡಿವುದುಂ ; ಲಕ್ಷ್ಮಣಂ—ಕೊರ್ವಿನ ಕೊಂಕುನುಡಿಗಿದು ಪೊೞ್ತಲ್ತು. ನೀಮೆಳೆಯರ್, ಗೆಲ್ದ ಗೆಲ್ಲಂ ಸೋಲ್ತ ಸೋಲಂ ಬೀರರ್ಗೆಮಗೆ ಬಾರದು. ಸವಿನುಡಿಯಂ ಲಾಲಿಸಿ ಕೊಳುಗುಳಮುಂ ಹಯಮುಂ ಕಡುಚಲಮುಂ ಬಿಟ್ಟು ಪೋಗಿಂ. ಈನುಡಿ ನಿಮಗೆ ಸೊಗಸಾಗದೆ ಪೋಗೆ ನಿಮ್ಮೊಡಲುಮಂ ಬಿಟ್ಟು ಪೋಪಿರಿದು ನಿಕ್ಕುವಂ—ಎಂದು ಮೂಡಿಗೆಯಿಂ ಕಣೆಯನೆತ್ತಿ ಬಿಲ್ಗೆ ಪೂಡಿದಂ. ಅದರ್ಕಾಲವಂ ಲವಂ ಬೆರ್ಚದೆ—ಎಲೆ ! ಕೊಱಚಾಡುವೆಯೋಂ ? ಆಮೆಳೆಯರಾದೊಡೇಂ ಕೋಲ್ಗೊಂದೆಳಮೆಯುಂಟೆ ? ಪಂದಿಯಂತುಂ ಗೊಂದೆಯಂತುಂ ಸೊರ್ಕಿ ಕೊರ್ವಿ ಬಳೆದೊಡಾಯ್ತೆ ! ಮಱಿಸಿಂಗನಂತು ಕಡುಪುಂ ಬಲ್ಪುಮಿರವೇಡ ! ಪೋ ! ಕೂಸಾಗಿಯುಮುಂದು ಪದ್ಮನಂ ಕೊಂದ ಸಂದ ಗುಹನಳವಿ ಗಹನಮಾಗದೇಂ ಮನಕೆ ?—ಎಂದು ಸಡಗರಿಸಿ ಕಣೆಯೆರಡಱಿಂ ಲಕ್ಷ್ಮಣನ ಧನುವಂ ಮುಱಿದಂ. ಅನಿತಱೊಳೆ ಮಗುೞ್ದೊಂದು ಬಿಲ್ಲಂ ಕೊಂಡು ಕಿನಿಸಿಂ ಮೆಯ್ವೆರ್ಚೆ ಕೋಲ್ಗಳನುರ್ಚೆ ಬಾಲಕಂಗಿಸುವುದುಮಂತವರಂ ನಿಲ್ಲದೆ ನುಚ್ಚುನುಱಿಮಾಡಿದಂ. ಎನಿತ್ತನಿತ್ತಂ ಲಕ್ಷ್ಮಣನಿಸುವನನಿತ್ತನಿತ್ತಂ ಕೊಚ್ಚುದಱಿವಂ ಲವಂ. ಇಂತು ಪಿರಿದುಂಬೊೞ್ತು ಸೆಣಸುತಿರಲೊಡನುತ್ತಲ್ ಮೋಣೊಂದು ದೆಸೆಯೊಳ್ ಸೂಟಿಯಿಂ ಪೋಪ ಕುಶನಂ ತಡೆದು ರಾಘವಂ—ಎಲೆ ಪಸುಳೆ ! ನೀನಾವಂ ? ಹಯಮನೇನೆಂದು ಕಟ್ಟಿದಯ್ ? ಎನ್ನಾಣೆ ! ನಿನ್ನೊಳೆ ನಗಟ್ಟಿಱುಂಟು. ನೀಂ ಗೆಯ್ದ ದುಱುದುಂಬಿತನಮುಂ ಪೊಲ್ಲದ ಕಜ್ಜಮುಂ ಮಱೆತೆಂ. ಇದೆಕೊಳ್ ನಿನ್ನಂ ಕಾವೆಂ. ನಿಮಗಿನಿತ್ತು ಬಲ್ಪೆಂತುಟಾಯ್ತು ? ಬಿಲ್ಲೋಜನಾವಂ ? ಪುಟ್ಟಿದಿರೆಲ್ಲಿ ? ಪೇೞಿಂಬುದುಂ ; ಕುಶಂ—ಕೇಳೆಲೆ ರಾಯಾ! ನಿನ್ನ ಹಯಮುಂ ಗಿಯುಮುಂ ನಾಂ ಕಟ್ಟಿದೆನಿಲ್ಲ. ಕಿಱಿಯನಱಿಯದೆ ಕಟ್ಟಿದನಕ್ಕುಂ. ಮೋಣೆನ್ನೊಳಾವುದುಂ ದುಱುದುಂಬಿತನಂ ಬಾರದು. ನಿಮ್ಮವರಾತನಂ ಬಱಿದೆ ನೋಯಿಸಲೊಡಮೆನಗೆ ನಿಮ್ಮೊಳ್ ಮುನಿಸಾಯ್ತು. ಈಗಳ್ ನಿಮ್ಮನಿದಿರ್ಚುವೊಡಾಡೆಂ. ಎಮಗಜ್ಜಂ ಬಿಲ್ಲೋಜಂ. ಕಾಡೊಳೆ ಪುಟ್ಟಿದೆವು. ಅಬ್ಬೆಯ ಪರಕೆ, ಮುತ್ತಯ್ಯನ ಕಾಪು, ಕೆಳೆಯರ ನಲ್ಮೆ, ಪಿರಿಯರೊಲ್ಮೆ, ಎಮಗೀವಗೆಯ ಬಲ್ಪನೊಡರ್ಚಿದತ್ತು—ಎಂದಾಡಿದಂ. ಆನುಡಿಗೆ ರಾಘವಂ ತಲೆದೂಗಿ—

ಕಿಱುಗೂಸುಗಳ್ ನಿಮಗೆಮಗೆ ಜುದ್ದಮಕ್ಕುಮೆ ? ಬಱಿದೆ ಕಾದಿ ಬೞಲದಿರಿಂ. ಕೊಂಡ ಹಯಮಂ ಬಿಟ್ಟು ಸಂತಂ ಪೋಗಿಂ ಪೋಗಿಮೆಂದು ಉಸಿರ್ದಿಂಬೞಿಯಂ ಕುಶಂ ನಿನ್ನೀಕೊರ್ವಿನ ನುಡಿಯಂತಿರ್ಕೆ ! ಕಟ್ಟಿದ ಹಯಮಂ ಕೊಟ್ಟು ಬಾೞ್ವ ಮಾತುಂಟೆ ? ಅಬ್ಬೆ ಜಱೋಡಿಸಳೆ ? ಅಜ್ಜಂ ಪೞಿಯನೆ ? ಕೆಳೆಯರೇಡಿಸರೆ ? ಚಲಕಂ ತೋಳ್ವಲಕಂ ಕುಂದಾಗದೆ ? ಎನ್ನ ಮೇಣೆನ್ನ ಪೊನ್ನ ಪಿಳುಕಿನ ಕೋಲ ಬಾಲಿಶಮಂ ನೋಡೆಂದು ಜಡಿದು ನುಡಿದೊಡನಯ್ಯನಂ ಪಿಡಿದು ಬಡಿವ ಕಲಿಯುಗದೞಿವಾೞ್ಕೆಯ ಕೂೞ ಮಕ್ಕಳೊಂದು ಮಾೞ್ಕೆಯಿಂದಾರ್ದು ಪೊಯ್ದಂ.

ಆಃ ! ಏತೞೊಂದು ಬಿದಿಯ ಬದಸಾಟಮೊ ! ತನಗಯ್ಯನೆಂದಱಿದನಪ್ಪೊಡೆ ಕುಶಂ ವಿಶಿಖಮನಿಸುವನೆ ? ಪೊಣರ್ವನೆ ? ಬಯ್ವನೆ? ಪೊಯ್ವನೆ ? ತಂದೆಮಕ್ಕಳೊಂದು ಪುರುಡಿಗಿದುವೆ ಮೊದಲಾಯ್ತೇ ! ಅನಿತಱೊಳೆ ರಾಘವಂ ಕೂರ್ಗಣೆಯಂ ಮಾರ್ಗಣೆಯಿಂ ತುಂಡಿಸಲೊಡಂ ತರಳಂ ಮೇಣೊಂದು ಮಾರ್ಗಣಮಂ ಸೆಳೆದಿಟ್ಟಂ. ಮತ್ತಮೊಂದಂ ಮಗುಳ್ದುಮೊಂದಂ ಪೆಱತೊಂದಂ ಬೇಱೊಂದಂ. ಇಂತು ರಾಘವನೊಡಲನಿಸುಗೆಯಿಂ ತಳೆರ್ತಸುಗೆಯಂಗೆಯ್ವುದುಮೆನಸುಂ ಕೋಪದಿಂ ಚಾಪಮಂ ತುಡುಕಿ ಸಂದ ಬಾಣಮಂ ಸಂಧಿಸುವುದುಮಾಬಾಣಂ ಮಾಣದೆಯ್ದಿ ಗುಱಿಗೆಟ್ಟು ಬಂದತ್ತು. ಏನೊಂದಚ್ಚರಿಯೊ ! ದಿವಿಜದನುಜಮನುಜರೊಳಂ ಮೊನೆಯೊಳಳ್ಕದ ಬಳ್ಕದತಿಕಾಯನಂ ಹತಕಾಯನಂಗೆಯ್ದಂಗೆ ತನ್ನೊಂದೞ್ಕೆಯಿಂ ಬರ್ದಿಲಮಂ ತಳಮುಳಂಗೆಯ್ದು ಬಿಡುಗಣ್ಣರೊಡೆಯನ ಪಡೆಯಂ ದೆಸೆಗೆಡಿಸಿದುಬ್ಬರದಬ್ಬರದಿಂದ್ರಾರಿಯಂ ಮಾರಿಯ ಬಾಱಿಗನಂ ಮಾಡಿದಂಗೆ ಲಕ್ಷ್ಮಣಂಗೆ—ಕೊರೆವ ಸಬುದಮಂ ಸಿಂಗದ ಗರ್ಜನೆಗೆತ್ತು ಗಜಂಗಳಳಱಿ ಸುಯ್ವ ಸುಯ್ಲ ಸುೞಿಗೆ ನೆಲೆಗೆಟ್ಟು ಮುಱಿಮುಱಿಯಾಗಿ ನಿಡುಗಂಬಂಗಳ್ ತೇಂಕೆ ತಿರೆಯೊಳಂದೊಱಗಿದ ಬಿಂಜಮೆಟ್ಟಿನೆ ಬೆಟ್ಟನೊಱಗಿವ ಕುಂಭಕರ್ಣನೊರ್ಮೆಯುಂ ಮೆಯ್ಮುಱಿದೆೞ್ದಗ್ರಜನ ಪರಿಭವಕ್ಕೊಳಱಿ ಕಡೆಗಾಲದ ಬಿಗುರ್ವರಿಜನೊಂದಾಟೋಪದಿಂ ಮೊನೆಯೊಳಿದಿರ್ಚಿದೊಡವನಂ ಜವನಂದಿಗನನಾಗಿಸಿದ ರಕ್ಕಸದಲ್ಲಣಂಗೆ, ಈರೇೞುಂ ಲೋಕಮಂ ಗೆಲ್ಲಂಗೊಂಡು ಭುಲ್ಲವಿಸಿ ಬಲ್ಲಿದನೆಂಬ ಗಂಡಗರ್ವದಿಂ ಪೊಣರ್ವ ದಶಾನನನೊಡಲಂ ಕಡಲ

ಮೀಂಗಳ್ಗಿರೆಯನಾಗಿಸಿ ಮೆಱೆದಾಹವಮಲ್ಲ ರಾಮಂಗಿಂದು ಚಿಣ್ಣರಾಟದ ಕೂಟದ ಪಸುಳೆಗಳತ್ತಣಿಂ ಸೋಲಂ ಗಡ ! ಲಕ್ಷ್ಮಣನಸಿ ದಸಿಯಾಯ್ತು ಗಡ ! ರಾಮಬಾಣಕ್ಕೆ ಮಣಿಯರ್ ಗಡ !

ಮುದ್ದಣಂ—ಎನ್ನ ಕಣ್ಣೇ ! ಪೆಣ್ಣೇ ! ಇಂತು ಕುಶಲವರ್ ಬಾಂಬಟ್ಟೆಗರೊಟ್ಟಯಿಸಿ ನೆರೆದು ಬೆಱಗುವಡುವಿನಂ ರಾಮಲಕ್ಷ್ಮಣರೊಳ್ ಕಡುಕೆಯ್ಯುತಿರಲೊಡಮಾವೇಳೆಗತ್ತಲ್ ವರುಣಲೋಕಕ್ಕೆ ಪೋದ ವಾಲ್ಮೀಕಿ ಬಾಲಕರಿರವಂ ನಾರದನತ್ತಣಿನಱಿದು ಮಾಣದೆ ತನ್ನಾಶ್ರಮಕ್ಕೆ ಬರೆ ಅಲ್ಲಿ ಮಕ್ಕಳ ಬಟ್ಟೆಯನೆ ನಿಟ್ಟಿಸುತೆ ಹಂಬಲಿಸಿ ಬೆಬ್ಬಳೆವೋಪ ಸೀತೆ ಮುನಿಯುಂ ಕಂಡೆಱಗಿ ಲವನನರಿಗಳ್ ಹಯದ ನೆವದಿಂ ಬಂದಿಗೊಂಡುದಂ ಮೇಣಾತನಂ ಮಗುಳ್ಚುವೊಡೆಂದು ಕುಶಂ ನಿಶಿತವಿಶಿಖವಿಸರವಿಲಾಸಿ ಬೆಂಗೊಂಡುದನಿನ್ನುಂ ಬಾರದೆ ತಡೆದುದಂ ಬಿನ್ನಯಿಸಿದಳ್. ಅದರ್ಕಾಮುನಿಪಂ ಸೀತೆಯುಂ ಸೈತಿಟ್ಟು ಮಕ್ಕಳಂ ಕೂಡಿವರ್ಪೆನೆಂದು ಪೊಱಮಟ್ಟು ಬರುತುಮಿರ್ದಂ.

ಇಂತು ಬರುವರುತುಮಿರಲೊಡಂ ಎನಸುಂ ದೂರದೊಳ್ ಮುಱಿದಟ್ಟೆಯು, ಸುರಿದ ಕರುಳ, ಒಱೆದ ಬಸೆಯು, ಕೊಱೆದ ಸುಂಟಿಗೆಯು, ಪರಿದ ಕೆನ್ನೀರ ಪೆಣನ ಬಣಂಬೆ ಜವನುಂಡು ಕಾಱಿದ ಮಾೞ್ಕೆಯಿಂ ಕಾಣಿಸಿದತ್ತು. ಕೆನ್ನೀರ ಮುನ್ನೀರ ಸೇತುವಿಂಗಿಂತು ಕಿಱುವೆಟ್ಟುಗಳಂ ಪೊಸತೆನೆ ಪರಪಿದರೆನೆ ಏಱುಗೊಂಡು ಮಡಿದಾನೆವಿಂಡೆಸೆದತ್ತು. ಇಂತೊಪ್ಪುವ ರಣರಂಗಮುಂ ಕಂಡು ಕೊಂಕಿ ಸಂಕಿಸಿ ಬರ್ಪ ಮುನಿಪಂಗೆ ರಣವಿಕ್ರಮಮೂರ್ತಿಗಳಂತೆ ಕೋಡದೆ ಬಾಡದೆ ಸಾಹಸಮಲ್ಲರೊಳ್ ಪೊಣರ್ವ ಕುಶಲವರಂ ಕಂಡು ತಲೆದೂಗಿ ಸನಿಯಂ ಸಾರ್ದು—ಓ ಓ ! ಮಾಣ್ಮಾಣಿಮೆಂದು ನುಡಿದುಂ ತಡೆದುಂ ಮಕ್ಕಳಂ ತಳ್ಕೈಸಿ ರಾಮಲಕ್ಷ್ಮಣರ್ಗೆ ಕಾಣಿಸಿಕೊಂಡಂ.

ಮುದ್ದಣಂ—(ಮನೋರಮೆಗೆ) ಏನೆಲಗೆ ! ಕಡೆಗೆ ಹುಂಗುಟ್ಟದೆ ಗುಱುಗುಮ್ಮನಿರ್ಪಯ್ ?

ಮನೋರಮೆ—ಮಕ್ಕಳ ಸೆರಗಿಲ್ಲದ ಸಾಸಕ್ಕೆ ಬೆಱಗುವಟ್ಟು ಇನಿಪೊೞ್ತುಂ ಕೆಮ್ಮನಿರ್ದೆಂ.

ಮುದ್ದಣಂ—ನೀನೊರ್ವಳೆ ಅಲ್ತು ; ಬಾನೊಳ್ ಬರ್ದಿಲವೆಂಡಿರುಂ ಕಂಡು ಬೆಱಗುಗೊಂಡು ಬೆಂಡಾದರ್. ಅಂತಿರೆ ತಳ್ವದಾಗಳಿರ್ವರುಂ ಮುನಿಗೆ ಮಣಿವುದುಂ ವಾಲ್ಮೀಕಿ ಮುಗುಳ್ನಗೆಯಿಂ ರಾಘವಂಗೆ—ಓ ಓ! ಇನಿತೊಂದು ಜಗಕೆ ಪೊಸತೆನೆ ತಂದೆಮಕ್ಕಳ್ ನಿಮಗೆ ಸಂಗರಂ ಕಡಿದಾಯ್ತೇಂ! ಇಂತುಮೊಳವೆ! ಕಾದುವರುಂಟು ದಾಯಿಗರ್, ಪಗೆಗಳಗ್ರಜಾನುಜರ್. ತಂತಮ್ಮೊಳಿನ್ನೆಬರಂ ಕಂಡೆನಿಲ್ಲಂ ಕೇಳ್ದಿನಿಲ್ಲೀತೆಱನ ದೊರೆವೆತ್ತ ಸೆಣಸಂ. ಅಂತಲ್ಲದೊಂದು ನಿಮಗಮೇಂ ಜಗದ ಮಾಯದ ಜವನಿಕೆಯು ಬೆಗಡೊ! ನಿನ್ನ ಬಣ್ಣದ ರೂಪು ನಿನ್ನ ತಿಣ್ಣದ ಬಲ್ಪು ಪಣ್ಣಿದ ಪೊಣರ್ಕೆಯೊಳ್ ನಿನ್ನನೆಟ್ಟಿಱಿಸದೆ ಪೋದುವೆ! ನೀಂ ನಾಡೊಡೆಯನೆಂಬೊಂದುರ್ಕಿಂ ಸೊರ್ಕಿಂ ಕೆಯ್ವಿಡಿದ ಮಡದಿಯುಂ ಬಗೆಯದ ನಿನಗೀಬಾಲರ ಕುಱುಪೆಂತುಟಕ್ಕುಮೆನಲೊಡಂ ; ರಾಮಂ—ಲಕ್ಷ್ಮಣನ ಮೊಗಮಂ ದಿಟ್ಟಿಸೆ;—ಜೀಯ! ಮುನಿಪಂ ಪೇಳ್ದಿಂತಾಗದಂದು ಕಾಡಾಡಿ ಮಕ್ಕಳ್ಗೀವಗೆಯು ತೋಳ್ವಲಮುಂಟಪ್ಪುದೆ? ನೋೞ್ಪೊಡೆ ನಿನ್ನಂ ಪೋಲ್ವರೆಂದಂ. ಅದರ್ಕಾರಾಮಚಂದ್ರಮಂ ಸೀತೆಯ ವಾರ್ತೆಯೇನೆಂಬುದುಂ ; ಅನುಜಂ ಕೂಡಿಪೋದುದಂ ಕಾಡೊೞಿಪಿವಂದುದನಾಡಿ ತೋಱುಪುದುಂ ; ಮುನಿಪಂ ಸಮನಂತರದೊಳ್ ತನ್ನಾಶ್ರಮಕ್ಕುಯ್ದಾರಯ್ದುದಂ ಮೊದಲ್ಗೆಯ್ದು ಅಮಳರೊಗೆವಂ ಬಿಲ್ಗಾಱಿಕೆಯ ಬಿನ್ನಣಮಂ ನಾನಾಬಿಜ್ಜೆಯಱಿವಂ ನಿರವಿಸಿ ಮುಗಿಸಿದಂ. ಆಗಳ್ಗಾಗಸದತ್ತಣಿಂ—ಇವರೀಬಾಲಕರಪ್ರತಿಮವೀರರ್. ನಿನಗೆ ಸೀತೆಯೊಳ್ ಪುಟ್ಟಿದರಿವರನೊಪ್ಪುಗೊಳ್ಳೆಂದು ಮಱನುಡಿ ಪುಟ್ಟಲೊಡಂ ಸುರರ್ ಪೂಮಱೆಗಱೆದರ್.

ಮತ್ತಂ ರಾಘವಂ ಸಿಗ್ಗಿಂ ಕೆಮ್ಮನಿರ್ಪುದುಂ ವಾಲ್ಮೀಕಿ ಮಕ್ಕಳನಯ್ಯನಡಿಗೆಱಗಿಸಿ—ಇವರೊಳೇನನ್ನೆಯಂ? ನಿನ್ನಂ ಮೀಱಿದ ತೋರದ ಬಲ್ಪಿನ ಬಾಲರೆಂಬ ಜಸಂ ಜಗಮಱಿಯೆ ಪರ್ಬಿದತ್ತು. ಅಪ್ಪ ಬರ್ಪ ಜಯಪರಾಜಯಂಗಳಂ ನೀನಱಿಯದುಂಟೆ! ನಿನ್ನ ಲೀಲೆಗೇನೆಂಬೆನೊ! ಎಂದಂ. ಆಗಳ್ ಸಂತಸದಾಲಿನೀರ್ ಕಾಟ್ಪುರವಾಗೆ ನವಿರ್ ನಿಗರಮಾಗಿ ಗುಡಿಗಟ್ಟೆ ಮಣಿದ ಮಕ್ಕಳನಿರ್ವರುಮನೆತ್ತಿ ತೊಡೆಯೊಳ್ ಕುಳ್ಳಿರಿಸಿ ತಳ್ಕೈಸಿ ಮುದ್ದಿಸಿ ಮುಂಡಾಡಿ ಶಿರಮನಾಘ್ರಾಣಿಸಿ ಮುಂಗುರುಳಂ ನೇ

ವರಿಸಿ ಮೆಯ್ದಡವಿ ತನಯರ ಮೆಯ್ಯೊಸೋಂಕಿನೊಂದು ಹರವಸದಿಂ ಬಗೆಯುರ್ಬಿದ ರಾಘವಂ—ಎಲೆಲೆ ಬಾಲಕರಿರ ! ನಿಮಗೀಜಾಣ್ಮೆಗಾವುದು ಮೊದಲ್ ಪೇೞಿಮೆಂಬುದುಂ ; ಎಮಗೀ ಅಜ್ಜನುಪದೇಶಿಸಿದ ರಾಮಾಯಣಮೆ ಮೊದಲಾಯ್ತೆಂದರ್. ಆಗಳ್ ವಾಲ್ಮೀಕಿ ತಾನವಿತಾನವಿನಿದಂ ಕೞಿಯೆ, ಕೊರಲುಂ ಬೆರಲುಮೊಂದಾಗಿ ಬೆರೆಯೆ, ಲಯಮನೆಡವದ ತಾಳದ ಮೇಳವದಿಂ ಪತ್ತುಂಬಗೆಯ ಗಮಕಂಗಳೋಜೆಯಿಂ ಶುದ್ಧ ಮಿಶ್ರಸಂಕೀರ್ಣಂಗಳೆಂಬ ಪಲವುಂ ಬಗೆಯ ರಾಗಂಗಳೊಳ್ ಬಾಜಿಪ ಬಾಣಿಯ ಬೀಣೆಯಿಂಚರಕೆ ನೆರವರ್ಪೊಂದು ಭಂಗಿಯಿಂ ಬಾಲಕರಿಂ ರಾಮಾಯಣಮನೊಪ್ಪಿಸಿದಂ. ದೇವರ್ಕಳ್ ಹಿಗ್ಗಿದರ್ ; ದೇವಾಂಗನೆಯರೊಗ್ಗಿದರ್ ; ದೇವಗಾಯಕರ್ ಸಿಗ್ಗಿನೊಳಾದರ್ ; ತುಂಬುರನಾರದರ್ ಮುಗ್ಗುರಿಸಿದರ್. ಅನಿತಱೊಳ್ ಮುನಿಪಂ ತನ್ನ ಕುಂಡಿಕೆಯ ನೀರಂ ತಳಿದು ಮುಚ್ಚಿವೋದರನೆೞ್ಚಱಿಸಿದಂ. ಈಗಳ್ ಸರ್ವರುಂ ಪುರಕೆ ಬಿಜಯಂಗೆಯ್ದರ್.

ಮನೋರಮೆ—ಏಂ ಸೀತೆಯುಮಿನ್ನುಂ ಕೂಡಿ ಪೋಗನೆ ? ಉೞಿದೆಪೋದನೆ ರಾಮಂ ?

ಮುದ್ದ—ಓ ! ಇನ್ನುಮುೞಿವನೆ ಸತಿಯಂ ! ಈಪೊೞ್ತುಂ ತನ್ನ ರಸಿಯ ಉಱುಗಿಲ್ಲದ ನಡೆಗೆ ದೇವರ್ಕಳಂ ಸಾಕ್ಷಿಗೊಟ್ಟು ಆಗಳೆ ತನ್ನತನ್ನೆಯುಮಂ ಮನ್ನಿಸೆಂದು ನನ್ನಿವೇೞ್ದು ಸಂತಮಿಟ್ಟು ಸುದತಿ ಸೀತೆಯುಂ ಪೊನ್ನ ಸಿಬಿಗೆಯೊಳೇಱಿಸಿ ದೇವರ್ಕಳ್ ಪೊಗೞೆ ತಾನುಂ ತನ್ನವರುಂ ಆಶ್ರಮದ ಮುನಿಗಳೊಂದುಗೂಡಿ ಪೋದ—

ಮನೋ—ಓ ! ರಾಮನೊಳ್ಳಿದನಕ್ಕೆ ! ಸೊಗಂಬಾೞ್ಗೆ ! ರಾಮಂಗೆ ಗೆಲವಕ್ಕೆ ! ರಾಮನಂ ಕೊಂಡಾಡುಗೆ ! ಜಸಂ ಪೆರ್ಚಿ ಪರಿಗೆ ! ರಾಮನೊಳ್ ನನ್ನಿ ಸನ್ನಿದಮಾಗಿರ್ಕೆ !

ಮುದ್ದ—ಇಂತು ರಾಮನಂ ನೀಂ ಪರಸುವ ಪರಕೆಯೆ ಸೊಗಸು ! ಬಲ್ಸೊಗಸು !

## — ಕಥೋಪಸಂಹಾರಂ. —

ಮುದ್ದಣಂ—ಎನ್ನ ಪಟ್ಟದ ರಾಣಿ ! ಇನ್ನೆತ್ತಂ ನಿರಾಮಯಂ, ನಿರಾಕುಳಂ, ಸುಭಿಕ್ಷಂ, ಶಾಂತಿ.

ಮನೋರಮೆ—ಏನೆಲೆ ರಮಣ ! ಇಂದಿದೇನೆತ್ತಣ ಶಾಂತಿಗೀಂತಿಗಳ್ ?

ಮುದ್ದ—ರಾಘವನ ಜನ್ನಗುದುರೆ ಬರಿಸಂಬರಂ ಬಿಡದೆ ಚರಿಸಲೊಡಂ ಖುರಪುಟದ ತುೞಿತಕ್ಕೆ ಪಾವನಮಾದ ನಾಡ ಜನರ್ಗೆತ್ತಂ ಮಂಗಳಮೆಂದೆಂ.. ಕಟ್ಟಾಯುಸದ ನಿಚ್ಚವಯಣಮುಂ ಬನ್ನವಟ್ಟೆಯುಬೞಲ್ಕೆಯುಂ ಗಾಳುಗೂೞರೊಳ್ ಪೊಣರ್ವ ಗನ್ನನಿಟ್ಟುರದ ಸೆಣಸಾಟಮುಂ ರಾಮಸೇನೆಗೆ ಮುಡಿದುದು. ಈಗಳ್ ತಂತಮ್ಮ ಬೀಡಿಂಗೆಯ್ದೆವಂದುಂ ಬೀರರೆಲ್ಲರ್ ನೇಹಂ ಮಿಗೆ ತಂತಮ್ಮರಸಿಯರಿನೋಲೈಸಿಕೊಳ್ವರ್.

ಮನೋ—ಅಂತಪ್ಪೊಡೆ ನೀಂ ಪೇೞ್ವ ನಲ್ಗತೆ ಮುಗಿಯೆ ವಂದುದು.

ಮುದ್ದ—ಉಂ ! ಎಂತೆಂತೊ ರಗಳೆಯ ಪಾೞ್ಗತೆ ಕಡೆಗಂಡುದು.

ಮನೋ—ಚೀ ! ಶ್ರೀರಾಮಪುಣ್ಯಚರಿತಮಂ ಪಾೞ್ಗತೆಯೆಂದು ಇೞಕೆಯ್ದು ತೆಗೞ್ವೆ !

ಮುದ್ದ—ಶ್ರೀರಾಮಚರಿತಮನಿೞಸಿ ಕುೞಸಿ ನುಡಿದೆನಿಲ್ಲಂ. ಪುರುಳಿಲ್ಲದ ಸಲ್ಲದ ಪೊಲ್ಲದೆನ್ನ ಬೞವಣ್ಣನೆಯ ಬೇಸಱಕೆಯ ಪಾೞ್ಗಬ್ಬಮಂ ಪೊಳ್ಳೆಂದೆ ನುಡಿದೆಂ.

ಮನೋ—(ಸವಿನಯಂ) ತಮ್ಮೊಡಮೆಯಂ ತಾಮೆ ಪೊಗೞ್ವರೆಬಲ್ಲರ್ ? ಅಲ್ಲದಂದು ನವರಸದ ತನಿರಸಮೊಱಂವ ಬಣ್ಣಗಬ್ಬಮಂ ಪೊಳ್ಳೆಂದೊರೆವ ನಿನಗಮೇಂ ನಿರಹಂಕೃತಿಯೊ ನಿನ್ನಾಣಾಣ್ಮೆಯೊಳ್.

ಮುದ್ದ—ಏನೆನ್ನ ಕಬ್ಬಂ ನಿನಗೆ ಮೆಚ್ಚುಗೆಯಾಯ್ತೆ ?

ಮನೋ—ಎನಗೊರ್ವಳ್ಗೆಂದೊಡೇಂ. ನಾಡೊಳೆಲ್ಲರ್ಗಂ.

ಮುದ್ದ—(ನಕ್ಕು) ಎನ್ನೊಳೊಂದಭಿಮಾನದಿನಿಂತುಸಿರ್ವೆಯಕ್ಕುಂ.

ಮನೋ—ಎನ್ನ ಮುದ್ದಿನರಸ ! ಅಂತಲ್ತು ; ನಿನ್ನ ಪೆಸರಿಂತಂತು ಕಬ್ಬಮುಂ ಮುದ್ದುಮುದ್ದಾಯ್ತು ಜಗಕೆ.

ಮುದ್ದ—ಇಂತೀನುಡಿಯಿನೆನ್ನಂ ನೀನೇಱಿಪಂತಿರಿರ್ಕುಂ.

ಮನೋ—ಉಃ ! ಉಃ ! ಗುಣದೊಳ್ ಪುರುಡುಂಟೆ ? ಸಾಜಂ. ನಿನ್ನೀಜಾಣ್ಮೆಯ ಬಣ್ಣನೆಯ ನಲ್ಗತೆ ಕೇಳ್ವರನೆಂತಪ್ಪರುಮಂ ಬಗೆಯ ನೀರ್ಕುಱಿಗೊಳ್ಗುಂ ; ನಾಡ ಮಾತೇಕೆ ! ಎನಗೆಂತೋ ಮೇಣುಂ ಮೇಣುಂ ಕೇಳ್ವಂ ಕೇಳ್ವೆನೆಂಬೊಂದಾಸೆ ಪುಟ್ಟುಗುಂ.

ಮುದ್ದ—ಎನ್ನಾಣೆ !

ಮನೋ—ನಿನ್ನಾಣೆ ! ತಡೆಯೇಂ ? ಕಮ್ಮಲರ್ ಮುಗಮುಗಿಸದೇಂ ಪೋಕುಂ !

ಮುದ್ದ—ಮುತ್ತಬ್ಬೆಯಾಣೆ !

ಮನೋ—ಮುತ್ತಬ್ಬೆಯಾಣೆ ! ಇಸ್ಸಿ ! ಪುಸಿಯನೇಪೋಱ್ತಿಂಗಮುಸಿರೆಂ. ಈವಗೆಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲಮೊಂದಾಯ್ತು.

ಮುದ್ದ—ಎಂತುಂ ನಿನಗೆ ಸೊಗಸಾಯ್ತಲೇ ! ಇದುವೆ ಪರಮಾನಂದಮೆನಗೆ.

ಮನೋ—ಬಿನ್ನಣದ ಬಣ್ಣನೆಯ ನುಡಿಯಲ್ತು ; ಬಲ್ಸೊಗಸು ಬಲ್ಸೊಗಸು ನೀನೆಂದ ಕತೆ.

ಮುದ್ದ—ಅಂತಪ್ಪೊಡೆ ತಾರೆಲೆ ನೀನೆಂದ ಮೆಚ್ಚಿನುಡುಗೊಱೆಯಂ.

ಮನೋ—(ಕಣ್ಬೆಗಡುಗೊಂಡರಂತೆ ನಟಿಸಿ) ಇನ್ನೇಂ ಜಾಣನೊ ! ನೀನಱಿಯದರಂತೆ ಮಿಣ್ಣನಿರ್ದುಮೆನ್ನಿಂದೆನ್ನಂ ಕಟ್ಟಿಸಿದ ದಿಟ್ಟಂ. ನಿನಗೇನೆಂಬೆನೇನೆಂಬೆನೊ ! ನಿನ್ನಾ ಬಣನಾತಿಗೆ ಮಾಜುವೋದೆಂ (ಎಂದು ವಿಚಾರದಿಂ) ಆಯ್ತಾಯ್ತು ಪೇಳ್ದ ಕತೆಗೆ ಮಂಗಳಮಂ ಮಾಡು ; ಮೆಚ್ಚುಗಿಚ್ಚು ಬಱಿಕ್ಕಮಲ್ತೆ.

ಮುದ್ದ—ಬಱಿದೆ ಮಂಗಳಮುಕ್ಕುಮೆ ! ಹೋಳಿಗೆ ತುಪ್ಪಮಂ ತಿನವಡಿಸವೇಡಾ !

ಮನೋ—ಹೋಳಿಗೆತುಪ್ಪಕ್ಕಿಂದೇಂ ನಿನಗೆ ಶೋಭನಮೆ ?

ಮುದ್ದ—ಇಂದೆನಗೆಂದೊಡೇಂ ? ಎನಗಂ ನಿನಗಂ.

ಮನೋ—ಪೋ ಸಾಲ್ಗುಮೀಬಣ್ಣದ ಕೊಂಕುನುಡಿ. ರಾಘವನ ಯಜ್ಞಮೆಂತು ಪರಿಸಮಾಪ್ತಿಯಾಯ್ತು ಪೇೞ್.

ಮುದ್ದ—ಶೋಭನಾಂಗೀ ! ಅಂತು ರಾಘವಂ ಸತಿಸುತರ್ವೆರಸು ಅಯೋಧ್ಯೆಗೆ ಪೋಪುದುಂ ಕೆಲವಾನುಂ ದಿನಕೆ ಜನ್ನಗುದುರೆಯುಂ ಪೊೞಲ್ಗೆ ಮುಮ್ಮೊಗಮಿಕ್ಕಿ ನಡೆದತ್ತು. ಕಾಪಿನ ಬಲ್ಪಡೆಯುಂ ಬೞಸಾರ್ದುವಂದುದು ; ಶತ್ರುಹಪ್ರಮುಖವೀರವರ್ಗಮುಂ ತೆರಳ್ದುದು. ಓಓ ! ಇದೆತ್ತಣ ಕಪ್ಪಕಾಣ್ಕೆಗಳೊ ! ಪೊನ್ನೇಂ, ಪೊಂದೊಡವೇಂ, ರನ್ನಮೇಂ, ಬಗೆವಗೆಯ ಪಟ್ಟುಡೆಯೇಂ, ಆಣಿಮುತ್ತಿನ ಜಾಳಿಗೆಯೇಂ ! ಕತ್ತುರಿಯ ಪೊೞೆಯೇಂ ! ಕಪ್ಪುರದ ಮುಡಿಯೇಂ ! ಜಾತ್ಯಶ್ವಂಗಳೇಂ ! ಭದ್ರಗಜಂಗಳೇಂ ! ಕಾಣಬಾರದ ವಿನೂತ್ನವಸ್ತುತ್ಕರಂಗಳೇಂ ! ಬೆಂಗೆ ಬೆಂಗೆ ಪೂಡಿದಂತಿರೂರುದ್ದಮಾದ ಓರಣದಿಂ ಬರ್ಪ ಬಂಡಿಗಳೇಂ ! ಆಳವಿಗೞದ ಮಂಡಳಿಕರ ನೆರವಿಯೇಂ ! ಬೞೇದೇಂ ಪಿರಿದೇಂ ರನ್ನೆ ! ನಾಡೊಳುಳ್ಳ ಐಸಿರಿಯೆತ್ತಮೊಂದುಗೂಡಿ ತಮ್ಮಾಣ್ಮರಂ ಮುಂದುಮಾಡಿ ಜನ್ನದ ಪೇರುಕ್ಕೆವಮಂ ಕಾಣ್ಬೊಡೆಂದು ಪೊೞಮಟ್ಟು ಪೋಪಂತಿರಾಯ್ತು. ಇಂತು ಬಂದು ಪೊೞಲ್ಗೆ ಗಾವುದದಳತೆಯೊಳ್ ನಿಂದು ದಿಗ್ವಿಜಯಂಗೆಯ್ದು ಬಂದೊಸಗೆಯಂ ಪೇೞ್ದಟ್ಟಲೊಡಂ, ರಾಜಕಾರ್ಯನಿರತಂ ಭರತಂ ಅವರೆಲ್ಲರಂ ಮನ್ನಿಸುತಟ್ಟೞೆನಿದಿರ್ಗೊಂಡು ರಾಘವಂಗೆ ಕಾಣಿಸಲೊಡಂ ಬೇೞೆವೇೞೆ ಬಂದ ಸಾಮಂತರಂ ಸತ್ಕರಿಸಿ, ಮಂಡಳಿಕರಂ ಕೊಂಡಾಡಿ, ತನ್ನ ಕಿಱುದಮ್ಮನ ಸಾಸಮಂ ಪೊಗೞ್ದು, ಪುಷ್ಕಲನಂ ಮೆಚ್ಚಿ, ಲಕ್ಷ್ಮೀನಿಧಿಯಂ ಮನ್ನಿಸಿ, ಮಿಕ್ಕುೞದ ವೀರರನುಪಚರಿಸಿ, ಸರ್ವರಂ ಬೀಡಾರಕ್ಕೆ ಬೀೞ್ಕೊಟ್ಟಂ.

ಮಱುದಿವಸಂ ಬೇಳ್ವ ಜನ್ನಕ್ಕೆ ಪೂರ್ಣಾಹುತಿಗೆ ಪೊತ್ತಿಡೆಗೆ ಮುನ್ನಮೆ ಸರ್ವಸಂಭಾರಮೇರ್ಪಟ್ಟುದು. ಬಂದ ವಿಪ್ರರ್ಗೊಂದು ಸಭೆ ; ಮುನಿಜನಂಗಳ್ಗೊಂದು ಸಭೆ ; ರಾಜನ್ಯರ್ಗೊಂದು ಸಭೆ ; ಪುರದ ಪುರಂಧ್ರಿಯರ್ಗೊಂದು ಸಭೆ ಯೋಜನದಳತೆಯೊಳಾಯ್ತು. ಈಗಳ್ ಯಾಗ

ಶಾಲೆಯೊಳೆಣ್ದೆಸೆಯೊಳಂ ಬಾಗಿಲೊಳೋರಿರ್ವರ್ ಮುನಿಗಳ್ ರಕ್ಷೋಘ್ನಸೂಕ್ತಮಂ ಪಠಿಸುತ್ತೆ ಕಾವಲರೆಸೆದರ್. ಮತ್ತಮೀರೆಣ್ಬರ್ ಯಾಜಕರೋರೊಂದು ದೆಸೆಯೊಳ್ ಸಾಮಗಾನಮಂ ಪಾಡುತುಮುದ್ಗಾತೃಗಳುಮೊಂದೆಸೆಯೊಳ್ ತಂತ್ರದಧ್ವರ್ಯುಗಳುಮೊರ್ದೆಸೆಯೊಳ್ ಹೋತಾರರುಮೊಪ್ಪಿದರ್. ವೇದಘೋಷಂ, ವಾದ್ಯಘೋಷಂ, ನೃತ್ಯಘೋಷಮೆತ್ತಂ ದಿಕ್ತಟಮಂ ತುಂಬಿದುದು ; ಕೊಂಡದೊಳಿನ್ನೆಬರಮೆಡೆವಿಡದೆ ಚಟಚಟಿಪ ಬೇಳುರಿ ನಾಲಗೆಗಳಂ ನೀಡಿಕೊಂಡಿರ್ದುದು.

ಈಗಳೀಗಳ್ ಮಂಗಳಂ :—ದೆಸೆವಳರ್ ಮೆಯ್ದೋಱಿ ಜನ್ನಕ್ಕೆ ಬಂದು ತಂತಮ್ಮ ಹಸುಗೆಯುಮಂ ಮನಂ ದಣಿಯೆ ಕೆಯ್ಯಾಱಿ ಕೊಂಡರವರ್ಗಂ ಮಂಗಳಂ. ಋತ್ವಿಜರೆಲ್ಲರ್ ಕೊಳಗ ಮತ್ತಮಿರ್ಬಳ್ಳ ರನ್ನಮಂ ಪೊನ್ನ ಹೇಱಂ ಚೆನ್ನಾಕಳಂ ಪ್ರತಿಗ್ರಹಿಸಿ ರಾಮನಂ ಪರಸಿ ಬೀೞ್ಕೊಂಡರವರ್ಗಂ ಮಂಗಳಂ. ಮುನಿಗಳೆಲ್ಲರ್ ನರಲೀಲೆಯ ಪರಬೊಮ್ಮನಂ ಕಣ್ದಣಿಯೆ ಕಂಡೆವೆಂಬೊಂದು ಸಂತಸದಿಂ ನಲಿನಲಿಯುತೆ ತಮ್ಮಾಶ್ರಮಕ್ಕೆ ಪೋದರವರ್ಗಂ ಮಂಗಳಂ. ಮೂಗುದ್ದಮುಂಡುಂಡು ತೇಗಿ ಕೊಟ್ಟ ದಕ್ಷಿಣೆಯುಂ ಪೊತ್ತುಬ್ಬಸಂಬಡುತೆ ನಡೆದರ್ ಪಾರ್ವರವರ್ಗಂ ಮಂಗಳಂ. ಪೌರಪೌರಂಧ್ರಿಯರ್ ಶ್ರೀರಾಮನ ದಿವ್ಯಮೂರ್ತಿಯುಂ ಕಂಡು ಸಂತಸಂದಾಳ್ದಿ ತಾಂ ತಮಗೆ ಮಾತುಗುಟ್ಟುತೆ ಪೋದರವರ್ಗಂ ಮಂಗಳಂ. ಕೊಂಡಾಟದ ಮಾಸಾಮಂತರ್ ತಮಗೆ ದೊರೆವಡೆದ ಗಜರಥತುರಗವಿಭೂಷಣಾದಿಗಳಂ ಕೆಯ್ಕೊಂಡು ರಾಘವಂಗೆಱಗಿ ಆತನಡಿಯಾಣತಿವಡೆದು ಪುರಕೆ ಬಿಜಯಂಗೆಯ್ದರವರ್ಗಂ ಮಂಗಳಂ. ಇಂತು ಶ್ರೀರಾಘವಂ ಸೀತಾಸಮೇತಂ ಜನ್ನಮಂ ಬೇಳ್ದು ತನ್ನೊಂದು ಬೆಳ್ಪಸದಿಂ ದೆಸೆಮೂಲೆಗಳಂ ಬೆಳಗಿಸಿ ಸೋವರರ್ವೆರಸು ಪಲವುಂ ಪಗಲರಸುಗೆಯ್ಯುತ್ತುಮಿರ್ದನವಂಗಂ ಮಂಗಳಂ, ಶುಭಂ ಭದ್ರಂ ಕಲ್ಯಾಣಂ.

(ಅನಿತಱೊಳ್ ಮನೋರಮೆ ಎೞ್ದು ಪೋದಳ್.)

ಮುದ್ದಣಂ—(ಎೞ್ದು ಪೋಪಳನೀೞ್ದು ಮಾಣಿಸಿ) ಬಲ್ಸೆಡಕುಗಾರ್ತಿ ಕಣಾ! ಮುದ್ದಣನುಮಂ ಟಕ್ಕಿಪ ಪೆಂಡಿರೊಳರೆ? ಕೊಂಕುನುಡಿಯೊಂದು ನೆವದಿಂ ಬಿಂಕದಿನೆರ್ದೊಡಾಯ್ತು! ಮೆಚ್ಚನಿತ್ತಲ್ಲದೆ ಪೋಪೊಡೇಂ ಬಿಡುವೆನೆ!

ಮನೋ—ಕತೆಗೆ ಮಂಗಳಮಂ ಮಾಡದೆ ಬಱಿದೆ ಉಡುಗೊಱೆ ತುಡುಗೊಱೆಯೆಂದೊಡೇಂ ?

ಮುದ್ದ—ಕತೆಗೆ ಮಂಗಳಮನಾಗಳೆ ಪೇೞ್ದೆನುೞಿದೆನಿಲ್ಲ. ಈಗ ಉೞಿದುದೊಂದೆ ನಿನ್ನುಡುಗೊಱೆ.

ಮನೋ—ಉಡುಗೊಱೆಯು ಕಾಟಕ್ಕಿನ್ನೆತ್ತ ಪೋಪೆಂ ! ನೀನೇಂ ಬೇಡುವಯ್ ?

ಮುದ್ದ—(ಮುಸಿಮುಸಿನಸಿಂ) ಬೇಡುವೊಡೇಂ ತಿರಿಕನೆ ? ಮನೆಗೆ ಬಂದೆನೆ ? ಮೆಚ್ಚಿತ್ತೊಡದನೆ ಕೈಕೊಳ್ವೆಂ.

ಮನೋ—ಆನೆಂತುಂ ಪರಾಧೀನೆ. ಮೇಣೆನಗೊಡವೆಯಾವುದು ? ಏನನೀವೆನೆಂತೀವೆಂ ?

ಮುದ್ದ—ಮನೋ ! ಎಂತೊ ! ಆಂ ಮೆಚ್ಚುವಂತುಂ, ಕತೆಯ ಪುರುಳ್ಗೋವಂತುಂ ನಾಲ್ವರ್ ತಲೆದೂಗುವಂತುಂ ಉಡುಗೊಱೆಗೆಯ್ದೊಡಾಯ್ತು.

ಮನೋ—ಅಂತಪ್ಪೊಡಿಂತಿದು—.................. ನಿನ್ನ ಕಬ್ಬಮನೋದುವ ಜಾಣರೇವಗೆಯುಮುಡುಗೊಱೆಯನೀಯೆಂಬರಾವಗೆಯು ಮೆಚ್ಚನೀವೆಂ.

ಮುದ್ದ—ಅಂತಾಗುಮಕ್ಕೆ ! ಪೋಪಂ.

ಧರೆಯುಳ್ಳನ್ನೆಗಂ ಜೀವರಾಶಿಗೆ ।
ಸಿರಿಯುಂ ನರನಾದಮಾದನಾತ್ಮಂ ತನ್ನೊಳ್ ॥
ದೊರೆಕೊಂಡಿರ್ಪನಮಂತದು ।
ಪರಿನಿರ್ಮಲಮಾಗೆ ಪರ್ಗೆಯುಮೆರ್ಗೆಯ್ವುದಗುಂ ॥

ಎಂಬಲ್ಲಿಗೆ ಶ್ರೀರಾಮಾಶ್ವಮೇಧದೊಳ್
ಕಥೋಪಸಂಹಾರಂ ಷೋಡಶಾಶ್ವಾಸಂ ಸಂಪೂರ್ಣಂ.

ಶ್ರೀ ರಾ ಮಾ ಶ್ವ ಮೇ ಧಂ
ಸಂ ಪೂ ರ್ಣ ಂ.